
గాంధీజీ



జీవన చరిత్ర

ಗಾಂಧೀಜಿ

ಜೀವನ ಚರಿತ್ರೆ

ಲೇಖಕರು :

ಕೆ. ಎಸ್. ನಾರಾಯಣಸ್ವಾಮಿ

ಪ್ರಕಾಶಕರು :

ಕರ್ನಾಟಕ ಗಾಂಧೀ ಸ್ಮಾರಕ ನಿಧಿ (ರಿ.)

ಕುಮಾರ ಪಾರ್ಕ್ ಪೂರ್ವ, ಬೆಂಗಳೂರು-560 001

ಮೊದಲ ಮುದ್ರಣ 1986 ಬೆಲೆ ರೂ. 9

"G A N D H I J I" A Complete Biography in Kannada
Written by K. S. Narayanaswamy, Secretary
Karnataka Gandhi Smarak Nidhi (Regd.) Bangalore
First Edition : 2000 Copies – 1986

Price : Rs. 9-00 (Student edition) —

Printers
KIRTHI PRINTERS
954, 3rd Main, Vijayanagar, Bangalore-40

Publishers
KARANATAKA GANDHI SMARAK NIDHI (Regd.)
'Gandhi Bhavan' Kumarapark East, Bangalore–560 001

ಮುನ್ನುಡಿ

ನಮ್ಮದು ಭರತಖಂಡ, ಆರ್ಯಾವರ್ತ, ಪುಣ್ಯಭೂಮಿ ಎಂದು ಪ್ರಸಿದ್ಧ ವಾದ ನಾಡು, ಜಗತ್ತಿನ ಅತಿಪ್ರಾಚೀನ ರಾಷ್ಟ್ರಗಳ ಪೈಕಿ ಭಾರತ ಹಿರಿಯದು. ಇದು ಆಕಾರದಲ್ಲಿ ಗಾತ್ರದಲ್ಲಿ ನಾಗರೀಕತೆಯಲ್ಲಿ ಸಾಹಿತ್ಯ ಇತಿಹಾಸ ಪುರಾಣ ಸಂಗೀತ ಲಲಿತಕಲೆಗಳಲ್ಲಿ ಜಗತ್ತಿಗೆ ಹಿರಿಯಣ್ಣ. ಪ್ರಪಂಚದ ಜನಸಂಖ್ಯೆ ಯಲ್ಲಿ ಐದರಲ್ಲಿ ಒಂದು ಭಾಗ. ಜಗತ್ತಿನ ಧರ್ಮಗಳೆಲ್ಲ ಇಲ್ಲಿ ನೆಲೆಸಿ ಬೆಳೆದು ಪ್ರಬಲವಾಗಿವೆ. ಇಂಡಿಯ ಒಂದು ಚಿಕ್ಕ ಪ್ರಪಂಚ, ಲೋಕಾಸ್ಸಮಸ್ತಾ ಸ್ಸುಖಿನೋಭವಂತು ಎಂದು ಪ್ರತಿದಿನವೂ ಹೇಳುತ್ತಿರುವ ರಾಷ್ಟ್ರ ಭಾರತ ವೊಂದೆ. ಇಲ್ಲಿ ಎಲ್ಲರೂ ಬರಬಹುದು. ಮನೆ ಮಠ ಆಸ್ತಿ ಪೂಜಾಗೃಹ ಎಲ್ಲ ವನ್ನೂ ಮಾಡಿಕೊಳ್ಳಬಹುದು. ಜಗತ್ತಿನ ಅರುಣೋದಯ ಕಾಲದಲ್ಲಿ ಮಾನವನಿಂದ ನಿರ್ಮಿತವಾದ ಪ್ರಥಮ ಕಾವ್ಯ – ಉಷಃಕಾಲ ಸೂರ್ಯಚಂದ್ರ ಮಳೆ ಬಿಸಿಲು ಮಂಜು ಗುಡುಗು ಸಮುದ್ರ ಸಿಡಿಲು ಮಿಂಚು ಭೂಕಂಪ ಜ್ವಾಲಾಮುಖಿ ಎಲ್ಲವನ್ನೂ ಕುರಿತು ಹಾಡಿದ ವೇದಗಳು ಜನಿಸಿದುದು ಭಾರತದಲ್ಲಿ,

ಭಾರತದಲ್ಲಿ ಅನೇಕ ಉತ್ತಮ ಚಕ್ರಾಧಿಪತ್ಯಗಳು ದೀರ್ಘಕಾಲ ಅಸ್ತಿತ್ವ ದಲ್ಲಿದ್ದರೂ, ತಕ್ಕಡಿಯನ್ನು ಹಿಡಿದು ವ್ಯಾಪಾರಕ್ಕಾಗಿ ಈ ದೇಶಕ್ಕೆ ಬಂದ ಆಂಗ್ಲರು ಮೋಸ ಕುತಂತ್ರ ಅಧರ್ಮ ಕ್ರೌರ್ಯ ಆಯುಧಗಳ ಮೇಲ್ಮೆ ಇವು ಗಳಿಂದ, ಭಾರತವನ್ನು ಪೂರ್ಣವಾಗಿ ವಶಪಡಿಸಿಕೊಂಡರು.

ಬ್ರಿಟಿಷರು ಭಾರತವನ್ನು ಸ್ವಾಧೀನಪಡಿಸಿಕೊಂಡರೂ ಭಾರತೀಯರ ಸ್ವಾಭಿಮಾನ ಸ್ವಾತಂತ್ರ್ಯಾಭಿಲಾಷೆ ಮರುದಿವಸದಿಂದಲೇ ತಲೆ ಎತ್ತಿತು. ಬ್ರಿಟಿಷರಿಗೆ ನಿತ್ಯಾತಲೆನೋವು. ಎಲ್ಲೆಲ್ಲಿಯೂ ದಂಗೆ ಪಿತೂರಿ ಬ್ರಿಟಿಷ್ ಅಧಿಕಾರಿಗಳ ಕೊಲೆ; ಕ್ರಾಂತಿಕಾರರು ಹಿಂಸಾವಾದಿಗಳು ಆಯುಧಪಾಣಿಗಳಾದ

ಪ್ರತಿಭಟನಕಾರರು, ಬ್ರಿಟಿಷ್ ಅಧಿಕಾರಿಗಳು. ಇಂಗ್ಲೆಂಡಿನ ಪಾರ್ಲಿಮೆಂಟ್‌ನಲ್ಲಿ ಸಹ – ಅಲ್ಲಿಯ ರಾಜಕೀಯ ಕಾರಣಕ್ಕಾಗಿ ಭಾರತದ ಹೆಸರಿನಲ್ಲಿ ಹೋರಾಟ, ಅಮೆರಿಕದ ಸೆನೇಟಿನಲ್ಲಿ ಸಹ ಭಾರತ ಸ್ವಾತಂತ್ರ್ಯದ ಹೆಸರಿನಲ್ಲಿ ವಾಗ್ವಾದ ; ಎಲ್ಲ ನಡೆದರೂ ಕೊನೆಗೆ ಸಿಪಾಯಿದಂಗೆ ಎಂದು ಹೆಸರಾದ ಯುದ್ಧವೇ ನಡೆದರೂ ಆಂಗ್ಲರು ಭಾರತೀಯರಿಗೆ ಎಳ್ಳಷ್ಟೂ ಸ್ವಾತಂತ್ರ್ಯ ಕೊಡಲಿಲ್ಲ. ಕೆಲವು ಭಾರತೀಯರಿಗೆ ಕೆಲವು ದೊಡ್ಡ ಹುದ್ದೆಗಳನ್ನು ಕೊಟ್ಟು ಅವರನ್ನು ಸರ್ಕಾರದ ಭಕ್ತರ ಗುಂಪಿಗೆ ಸೇರಿಸಿಕೊಂಡರು.

ಬ್ರಿಟಿಷರು ಬೇಗ ಭಾರತೀಯರಿಗೆ ಸ್ವಾತಂತ್ರ್ಯವನ್ನು ಕೊಡುತ್ತಾರೆ ಎಂಬ ನಂಬಿಕೆ ಪ್ರಾರಂಭದಲ್ಲಿ ಇತ್ತು. ಆ ನಂಬಿಕೆ ಸುಳ್ಳು ಆಯಿತು. ಬ್ರಿಟಿಷ್ ಸರ್ಕಾರದೊಡನೆ ಶಾಂತಿ ಪ್ರಾರ್ಥನೆ ಸಂಧಾನಗಳ ಮಾರ್ಗದಿಂದ ಸ್ವಾತಂತ್ರ್ಯವನ್ನು ಹೊಂದಬಹುದೆಂಬುದು ಆಂಗ್ಲರ ಮಾತಿನಲ್ಲಿ ಇನ್ನೂ ನಂಬಿಕೆ ಇದ್ದ ಕೆಲವರ ಮಾತು ಆಗಿತ್ತು. ಅವರೆಲ್ಲ ಬ್ರಿಟಿಷ್ ಸರ್ಕಾರವನ್ನು ಪ್ರಾರ್ಥನೆ ನಿರ್ಣಯಗಳ ಮೂಲಕ ಒಲಿಸಲು ಪ್ರಯತ್ನಿಸಿದರು. ಆ ಸಭೆಯನ್ನು ಕಾಂಗ್ರೆಸ್ ಎಂದು ಕರೆದರು. ಅವರು ವರ್ಷಕ್ಕೆ ಒಂದು ಸಲ ಸಭೆ ಸೇರಿ ಇಂಗ್ಲೀಷಿನಲ್ಲಿ ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿ ಸರ್ಕಾರಕ್ಕೆ ಕಳುಹಿಸಿ ತೆಪ್ಪಗಾಗುತ್ತಿದ್ದರು. ಲೋಕಮಾನ್ಯ ಬಾಲಗಂಗಾಧರ ತಿಲಕರು ಕಾಂಗ್ರೆಸ್ಸನ್ನು ಪ್ರವೇಶಿಸಿದಾಗ ಬ್ರಿಟಿಷರು ಭಾರತವನ್ನು ಬಿಟ್ಟು ತೊಲಗಬೇಕು ಎಂಬ ಅಭಿಪ್ರಾಯಕ್ಕೆ ಸ್ಪಷ್ಟರೂಪ ಬಂದಿತು.

ಬಾಲಗಂಗಾಧರ ತಿಲಕರು 1920ರಲ್ಲಿ ದೈವಾಧೀನರಾದರು. ಸ್ವಾಭಾವಿಕವಾಗಿಯೇ ಸ್ವರಾಜ್ಯ ಸಂಗ್ರಾಮದ ನೊಗವು ಮಹಾತ್ಮ ಗಾಂಧಿಯವರ ಹೆಗಲಿಗೆ ಬಿದ್ದಿತು. ಗಾಂಧೀಜಿ ಒಬ್ಬ ಆಧ್ಯಾತ್ಮ ವ್ಯಕ್ತಿ. ಅವರಿಗೆ ರಾಜಕೀಯಕ್ಕಿಂತ ಹೆಚ್ಚಾಗಿ ಜನರಲ್ಲಿ ನೈತಿಕಮೌಲ್ಯ, ದೇಶಸೇವೆ, ಉನ್ನತ ಆದರ್ಶಗಳು, ಜೀವನದಲ್ಲಿ ಸತ್ಯ ಅಹಿಂಸೆ, ಮಾನವರಲ್ಲೆಲ್ಲ ಪ್ರೇಮ, ಕಾಯಕ, ಎಲ್ಲರಿಗೂ ಎಲ್ಲ ಸೌಖ್ಯ, ಮಾನವರಲ್ಲೆಲ್ಲ ಸಮಾನತೆ ಈ ಆದರ್ಶಗಳ ಸಾಧನೆ ಮುಖ್ಯ ಗುರಿಯಾಗಿದ್ದಿತು. ಗಾಂಧೀಜಿ ಭಾರತದ ಸ್ವರಾಜ್ಯಕ್ಕಿಂತ ಅಖಿಲ

ಜಗತ್ತಿನ ಭ್ರಾತೃತ್ವ ಅಖಿಲ ಜಗತ್ತಿನ ಸೌಖ್ಯ ಸರ್ವಸಮಾನತೆ ಸರ್ವೋದಯ ಇವುಗಳಿಗಾಗಿ ಹೊರಾಡಿದವರು. ಅವರು ಒಂದು ಸಂದರ್ಭದಲ್ಲಿ ದೇವರನ್ನು ಪ್ರತ್ಯಕ್ಷವಾಗಿ ನೋಡುವುದೇ ನನ್ನ ಗುರಿ ಎಂದಿದ್ದಾರೆ. ಅವರ ಆದರ್ಶ ಹರಿಶ್ಚಂದ್ರ ಶ್ರೀರಾಮ. ಆದರೆ ಅವರು ತಮ್ಮ ಅದರ್ಶವನ್ನು ಸಾಧಿಸುವುದಕ್ಕಾಗಿಯಾದರೂ ಸ್ವರಾಜ್ಯವನ್ನು ಸಂಪಾದಿಸಬೇಕಾಗಿದ್ದಿತು. ಯಾಕೆಂದರೆ ಅವರೇ ಹೇಳುವಂತೆ ದೇವರನ್ನು ಸಂಧಿಸುವುದಕ್ಕೂ ಸಾಕ್ಷಾತ್ಕರಿಸಿಕೊಳ್ಳುವುದಕ್ಕೂ ಕೂಡ ಸ್ವರಾಜ್ಯಬೇಕು. ಪಾರತಂತ್ರ್ಯದಲ್ಲಿ ಅದೂ ಸಾಧ್ಯವಿಲ್ಲ.

ಗಾಂಧೀ ತಾವು ದೇವರ ಮನುಷ್ಯರಾದುದರಿಂದ ಅವರಿಗೆ ರಾಜಕೀಯದಲ್ಲಿಯೂ ಸತ್ಯ ಅಹಿಂಸೆ ಪ್ರಾಮಾಣಿಕತೆ ಎಲ್ಲದರಲ್ಲಿಯೂ ಧರ್ಮಬುದ್ಧಿ ಶತ್ರುವಿನಲ್ಲಿಯೂ ಪ್ರೇಮ. ಪಾರತಂತ್ರ್ಯವನ್ನು ಅವರು ತೀವ್ರವಾಗಿ ಪ್ರತಿಭಟಿಸಿದರು. ಬ್ರಿಟಿಷ್ ಜನರನ್ನಲ್ಲ ಅವರ ಸಾಮ್ರಾಜ್ಯವಾದೀ ಮನೋಭಾವವನ್ನು ಅವರ ಚಕ್ರಾಧಿಪತ್ಯವನ್ನು ನಿರಾಕರಿಸಿ ಶತ್ರುವನ್ನೂ ಪ್ರೀತಿಸಬೇಕೆಂಬುದು ಅವರ ನಿಯಮವಾಗಿತ್ತು.

ಈ ಬಗೆಯ ಹೋರಾಟಕ್ಕೆ ಸತ್ಯಾಗ್ರಹವೆಂದು ಹೆಸರು, ಪ್ರಹ್ಲಾದನ ಕಥೆಯನ್ನು ನೆನೆಸಿಕೊಳ್ಳಿ. ಹಿರಣ್ಯಕಶಿಪು ಪ್ರಹ್ಲಾದನಿಗೆ ನಾನಾ ವಿಧಗಳಾದ ಶಿಕ್ಷೆಗಳನ್ನು ಕೊಟ್ಟನು. ಪ್ರಹ್ಲಾದನು ಹಿರಿಣ್ಯಕಶಿಪುವಿನೊಂದಿಗೆ ಕೋಪಿಸಿಕೊಳ್ಳಲೂ ಇಲ್ಲ.

ಗಾಂಧೀಜಿ ಸ್ವಾತಂತ್ರ್ಯ ಹೋರಾಟಕ್ಕೆ ಅಹಿಂಸಾತ್ಮಕ ಅಸಹಕಾರ ಮಾರ್ಗವನ್ನು ಅನುಸರಿಸಿ–ರಾಜಕೀಯಕ್ಕೆ ನೀತಿಯ ತಳಹದಿಯನ್ನು ಹಾಕಿದರು. ಸತ್ಯಮಾರ್ಗದಲ್ಲಿ ನಡೆಯಿರಿ ; ದೇಶಸ್ವಾತಂತ್ರ್ಯಕ್ಕಾಗಿ ಸರ್ವತ್ಯಾಗವನ್ನೂ ಮಾಡಿ, ಅಹಿಂಸೆಯೇ ದೇವರು ; ಮಾನವರೆಲ್ಲ ಅಣ್ಣ ತಮ್ಮಂದಿರು ಅಸ್ಪೃಶ್ಯತೆ ಮಹಾಪಾಪ. ಜಾತಿ ದ್ವೇಷವನ್ನು ಬಿಡಿ. ಎಲ್ಲರನ್ನೂ ಸಮಾನರನ್ನಾಗಿ ಕಾಣಿ ಎಂದು ಗಾಂಧೀ ಹೇಳಿದರು ; ಎಲ್ಲರೂ ಹೇಳುತ್ತಾರೆ. ಆದರೆ ಗಾಧೀ ಆಚರಿಸಿ ತೋರಿಸಿದರು.

ಭಾರತದಂತಹ ಬಹು ಧರ್ಮೀಯರ ದೇಶದಲ್ಲಿ ಭಿನ್ನತೆಗಳು ಹೆಚ್ಚಾಗಿವೆ ಆದರೆ ಎಲ್ಲರೂ ಮಾನವರು ದೇವರ ಮಕ್ಕಳು, ಒಬ್ಬರನ್ನು ಒಬ್ಬರು ದ್ವೇಷಿಸಬಾರದು. ಪ್ರೇಮವೇ ಮಾನವಧರ್ಮ.

ಮಹಾತ್ಮರು ದೀರ್ಘಕಾಲ ಆಚರಿಸಿದ ಈ ತತ್ವಗಳನ್ನು ಅನುಷ್ಠಾನಕ್ಕೆ ತರುವುದು ನಮ್ಮೆಲ್ಲರ ಕರ್ತವ್ಯ. ನಮ್ಮ ದುರದೃಷ್ಟದಿಂದ ವಿದ್ಯಾರ್ಥಿಗಳಿಗೆ ಗಾಂಧೀಜಿಯ ಜೀವನ ಪ್ರಯೋಗ ಆಧ್ಯಾತ್ಮಿಕ ಮೌಲ್ಯ ಇವುಗಳನ್ನು ತಿಳಿಸುವ ಗ್ರಂಥಗಳು ಹೆಚ್ಚಾಗಿಲ್ಲ. ಮಕ್ಕಳಿಗಾಗಿಯೇ ಬರೆದ ಗ್ರಂಥಗಳು ತೀರ ವಿರಳ. ಸ್ವತಃ ಗಾಂಧೀ ಅನುಯಾಯಿಗಳೂ, ಅನುಷ್ಠಾನಪರರೂ ಆಗಿರುವ ಶ್ರೀ ಕೆ. ಎಸ್. ನಾರಾಯಣಸ್ವಾಮಿಗಳು, ವಿದ್ಯಾರ್ಥಿಗಳಿಗಾಗಿ ಈ ಪುಸ್ತಕ ಬರೆದಿದ್ದಾರೆ. ಕನ್ನಡ ಸಾಹಿತ್ಯಕ್ಕೆ – ಮುಖ್ಯವಾಗಿ ಎಳೆಯರ ಸಾಹಿತ್ಯಕ್ಕೆ ಇದೊಂದು ಅಮೂಲ್ಯ ಗ್ರಂಥ. ಗಾಂಧೀ ವಿಚಾರವನ್ನೇ ಭಾರತೀಯರಾದ ನಾವು ಮರೆಯುತ್ತಿರುವ ಈ ಕಾಲದಲ್ಲಿ ಆಬಾಲವೃದ್ಧರಾದಿಯಾಗಿ ಎಲ್ಲರಿಗೂ ಈ ಗ್ರಂಥ ಉಪಯುಕ್ತವಾಗಿದೆ. ಎಳೆಯರಿಗೆ ಕಥೆ ಇದೆ. ವಯಸ್ಕರಿಗೆ ಜ್ಞಾನದ ತಿಳಿವು ಇದೆ. ಇದು ಸಾಹಿತ್ಯಕ್ಕೂ ಗಾಂಧೀ ಸಾಹಿತ್ಯ ದರ್ಶನಕ್ಕೂ ಒಂದು ಕನ್ನಡಿಯಾಗಿದೆ. ಇದನ್ನು ರಚಿಸಿದುದಕ್ಕಾಗಿ ನಾನು ಶ್ರೀ ಕೆ. ಎಸ್. ನಾರಾಯಣಸ್ವಾಮಿಗಳನ್ನು ಅಭಿನಂದಿಸುತ್ತೇನೆ.

ಬೆಂಗಳೂರು. **ಗೊರೂರು ರಾಮಸ್ವಾಮಿ ಅಯ್ಯಂಗಾರ್**

24–1–86

ಪರಿವಿಡಿ

ಪ್ರಕಾಶಕರ ನುಡಿ

ಹಲವು ವರ್ಷಗಳಿಂದ ಬೆಂಗಳೂರು ಗಾಂಧೀಭವನದ ಆಶ್ರಯದಲ್ಲಿ ವಿದ್ಯಾರ್ಥಿಗಳಿಗಾಗಿ ಗಾಂಧೀಜಿಯ ಆತ್ಮಕಥೆ ಮತ್ತು ಜೀವನ ಸಂದೇಶಗಳನ್ನು ಕುರಿತು ದೃಶ್ಯಶ್ರವಣ ಶಿಕ್ಷಣ ತರಗತಿಗಳು, ಪ್ರಶಸ್ತಿಪತ್ರ ಪರೀಕ್ಷೆಗಳು, ತತ್ವಾನುಷ್ಠಾನ ಅಭ್ಯಾಸ ಶಿಬಿರಗಳು, ಸಾಹಿತ್ಯ ಮತ್ತು ಚಿತ್ರಮಾಲೆಗಳ ಪ್ರಕಟಣೆ ನಡೆಯುತ್ತಿದೆ.

ಗಾಂಧೀಜಿ ತಮ್ಮ ಆತ್ಮಕಥೆಯನ್ನು 1922ಕ್ಕೆ ನಿಲ್ಲಿಸಿ "ಮುಂದಿನ ನನ್ನ ಬಾಳೆಲ್ಲ ಒಂದು ತೆರೆದ ಪುಸ್ತಕ" ಎಂದು ಬಿಟ್ಟರು. ಆತ್ಮಕಥೆ ಐನೂರು ಪುಟಗಳಿಗೂ ಮೀರಿದ ಬೃಹದ್ಗ್ರಂಥ. ಅವರ ಜೀವನದ ಪೂರ್ವಾರ್ಧವೆಲ್ಲ ಭಾರತದ ಸ್ವಾತಂತ್ರ್ಯ ಸಂಗ್ರಾಮದೊಡನೆ ಹೆಣೆದುಕೊಂಡಿದೆ.

ಗಾಂಧೀ ವಿಚಾರವೇತ್ತರೂ, ಆಜೀವ ರಚನಾತ್ಮಕ ಕಾರ್ಯಕರ್ತರೂ, ಗಾಂಧೀ ಸ್ಮಾರಕ ನಿಧಿಯ ಕಾರ್ಯದರ್ಶಿಗಳೂ, ಆದ ಶ್ರೀ ಕೆ. ಎಸ್. ನಾರಾಣಯಸ್ವಾಮಿಯವರು ಈ ಗ್ರಂಥ ಬರೆದುಕೊಟ್ಟು ಉಪಕಾರ ಮಾಡಿದ್ದಾರೆ. ಆತ್ಮಕಥೆಯ ಭಾಗದ ಎಲ್ಲ ವಿವರಗಳೂ 1922 ರಿಂದ 1948ರವರೆಗಿನ ಗಾಂಧೀಜಿಯ ಜೀವನಚರಿತ್ರೆಯೂ ಸಂಪೂರ್ಣವಾಗಿ ನಿರೂಪಿಸಲ್ಪಟ್ಟಿದೆ. ಒಂದು ಮೌಲ್ಯಾಧಾರಿತ ದೃಷ್ಟಿ ಗ್ರಂಥದುದ್ದಕ್ಕೂ ಪಸರಿಸಿನಿಂತಿದೆ. ಈ ಸರಳ ಜೀವನಚರಿತ್ರೆಯನ್ನು ಕನ್ನಡನಾಡಿನ ವಿದ್ಯಾರ್ಥಿವೃಂದಕ್ಕೆ ಮತ್ತು ಸಹೃದಯ ಓದುಗರಿಗೆ ಸಂತೋಷದಿಂದ ಅರ್ಪಿಸುತ್ತಿದ್ದೇವೆ.

ಸುಪ್ರಸಿದ್ಧ ಗಾಂಧೀವಾದಿ ಸಾಹಿತಿ ಡಾ॥ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ ಮುನ್ನುಡಿಗಾಗಿ ನಾವು ಕೃತಜ್ಞರು. ಅಂದವಾಗಿ ಮುದ್ರಿಸಿಕೊಟ್ಟ ಕೀರ್ತಿ ಮುದ್ರಕರಿಗೆ ವಂದನೆಗಳು.

—ಪ್ರಕಾಶಕರು.

ಉತ್ತುಂಗ ಮಾನವ

ವಿಶ್ವದಲ್ಲೇ ಮಹೋನ್ನತವೆನಿಸಿರುವ ಭವ್ಯ ಹಿಮಾಲಯದ ಅದ್ವಿತೀಯ ಧವಳ ಶಿಖರ ಎವರೆಸ್ಟ್ ಅಥವ ಗೌರಿಶಂಕರ ; ಅಪ್ರತಿಮ ನಿರ್ಮಲ ಪ್ರೇಮ ಶಾಶ್ವತವಾಗಿ ಹೆಪ್ಪುಗಟ್ಟಿ ತಲೆತಲಾಂತರಗಳಿಂದ ಬಳಿಗೆ ಬಂದವರ ಕಣ್ಮನಗಳನ್ನು ತುಂಬುತ್ತ ನಿಂತಿರುವ ಅಮೃತಶಿಲೆಯ ಅಮರಶಿಲ್ಪ ತಾಜಮಹಲು ; ಮಾನವ ಶ್ರೇಷ್ಠರಲ್ಲಿ ಶ್ರೇಷ್ಠರೆನಿಸಿ ಸರ್ವಮಾನವರ ಹೃದಯಾಕಾಂಕ್ಷೆಗಳಾದ ಶಾಂತಿ ಮತ್ತು ಸರ್ವೋದಯಗಳ ಜೀವಂತಮೂರ್ತಿಯಾಗಿರುವ ಉತ್ತುಂಗ ಮಾನವ ಮಹಾತ್ಮಾ ಗಾಂಧಿ ; ಈ ಮೂರು ಅಲಭ್ಯ ರತ್ನತ್ರಯಗಳ ಪವಿತ್ರ ದರ್ಶನಕ್ಕಾಗಿ ಭಾರತಕ್ಕೆ ಬಂದಿದ್ದೇನೆ ಎಂದಿದ್ದರು ಹತ್ತು ವರ್ಷಗಳ ಕೆಳಗೆ ಭಾರತಕ್ಕೆ ಬಂದಿದ್ದ ವಿದೇಶಿ ವಿದ್ವಾಂಸರೊಬ್ಬರು. ಕಾಲ ಉರುಳಿದಂತೆ ಈ ಜಗದ್ವಿಖ್ಯಾತ ಮಹಿಮಾ ವಿಶೇಷಗಳು ಲಕ್ಷಾಂತರ ಮಾನವರ ಮನಸ್ಸನ್ನು ಸೂರೆಗೊಳ್ಳುತ್ತ ಸಾರ್ಥಕಬಾಳಿನ ಸ್ಫೂರ್ತಿ ಚಿಲುಮೆಗಳಾಗಿಯೇ ನಿಂತಿವೆ. ಭಾರತದ ಅಮರ ಸಂಸ್ಕೃತಿಯ ಪರಿಮಳವನ್ನು ಪಸರಿಸುತ್ತಲೇ ಇವೆ.

ಗಾಂಧೀಜಿ ಒಬ್ಬ ಮಹಾನ್ ವ್ಯಕ್ತಿಮಾತ್ರ ಅಲ್ಲ. ಮಾನವಕುಲದ ವಿಕಾಸಕ್ಕಾಗಿ ಅಹಿಂಸಾ ಸಂಸ್ಕೃತಿಯ ಜೀವನ ಮಾರ್ಗವನ್ನು ಶೋಧಿಸಿಕೊಟ್ಟ ಸಂಶೋಧಕ. ನಿರ್ಭಯವಾಗಿ ಸತ್ಯಾನ್ವೇಷಣೆ ಮಾಡುತ್ತ ಶೀಲನಿಷ್ಠೆಯ ತ್ಯಾಗಜೀವನವನ್ನು ಕಲಿಸಿದ ಗುರು. ಈಗಿನ ಭಯಾನಕ ಅಣ್ವಸ್ತ್ರಯುಗದಲ್ಲೂ ಸತ್ಯಪ್ರೇಮ ಕರುಣೆಗಳಿಂದಲೇ ಮಾನವನ ಶ್ರೇಯಸ್ಸು ಸಾಧಿಸೀತು ಎಂದು ಪ್ರಯೋಗಗಳಿಂದ ಸಿದ್ಧಪಡಿಸಿದ ವಿಜ್ಞಾನಿ. ಅಂತೆಯೇ ತಮ್ಮ ಆತ್ಮಕಥೆಗೆ ಅವರಿಟ್ಟ ಹೆಸರು "ನನ್ನ ಸತ್ಯಶೋಧನೆಯ ಕಥೆ" (ದಿ ಸ್ಟೋರಿ ಆಫ್ ಮೈ ಎಕ್ಸ್‌ಪೆರಿಮೆಂಟ್ಸ್ ವಿತ್ ಟ್ರೂತ್)

ಅವರ ಮಾತಿನಲ್ಲೇ ಹೇಳುವುದಾದರೆ

"ನಾನೊಬ್ಬ ಸತ್ಯಶೋಧಕ. ಅದಕ್ಕೊಂದು ಮಾರ್ಗವನ್ನು ಕಂಡುಕೊಂಡಿದ್ದೇನೆ ಎಂದು ನನ್ನ ವಿಶ್ವಾಸ. ಅದರ ಸಿದ್ಧಿಗಾಗಿ ನಾನು ನಿರಂತರ ಪ್ರಯತ್ನಶೀಲನಾಗಿದ್ದೇನೆ. ಪೂರ್ಣವಾಗಿ ಅದು ನನಗೆ ಸಿದ್ಧಿಸಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ನ್ಯೂನತೆಗಳು ಎಷ್ಟೆಂಬುದನ್ನು ನಾನು ವ್ಯಸನದಿಂದ ಅರಿತಿದ್ದೇನೆ ಅದಕ್ಕಾಗಿ ದುಃಖಿಸಿದ್ದೇನೆ. ಈ ಅರಿವೇ ನನ್ನ ಶಕ್ತಿಯ ಸರ್ವ ಮೂಲ ; ಏಕೆಂದರೆ ತನ್ನ ದೌರ್ಬಲ್ಯಗಳ ಅರಿವಾಗುವುದೇ ಮನುಷ್ಯನಿಗೆ ಒಂದು ಅಪೂರ್ವ ಬಲ..."

"ವಿಶ್ವಾತ್ಮಕವೂ ವಿಶ್ವವ್ಯಾಪಿಯೂ ಆದ ಸತ್ಯವನ್ನು ಸಾಕ್ಷಾತ್ತಾಗಿ ಸಂದರ್ಶಿಸಬೇಕಾದರೆ ಸಮಸ್ತ ಜೀವರಾಶಿಯನ್ನು ತನ್ನಂತೆ ಪ್ರೀತಿಸುವುದು ಸಾಧ್ಯವಾಗಲೇಬೇಕು. ಈ ಹಂಬಲವನ್ನು ತುಂಬಿಕೊಂಡವನು ಜೀವನದ ಯಾವ ಕ್ಷೇತ್ರಕ್ಕೂ ವಿಮುಖನಾಗಲು ಸಾಧ್ಯವೇ ಇಲ್ಲ,"

(ಗಾಂಧಿ ಗ್ರಂಥಮಾಲೆ; ನಿವೇದನ)

ಸರ್ವಸಮಾನತೆ, ಸರ್ವಾಂಗೀಣ ಉನ್ನತಿ, ಹಿಂಸಾರಹಿತ ಸಾಮೂಹಿಕ ಬಾಳು-ಬದುಕು, ಇವುಗಳನ್ನು ರೂಪಿಸುವುದೇ ಗಾಂಧೀಜಿ ತೋರಿಸಿದ ಸರ್ವೋದಯ ಮಾರ್ಗ, ವಿಜ್ಞಾನ ಯುಗದ ಸಾಧನೆಗಳೆಲ್ಲವೂ ಮಾನವ ಕಲ್ಯಾಣಕ್ಕಾಗಿ ಬಳಸಲ್ಪಡಬೇಕಾದರೆ ಗಾಂಧೀ ಮಾರ್ಗವೇ ಶ್ರೇಷ್ಠ ಎಂದು ಜಗತ್ತಿನ ಅನೇಕ ವಿಚಾರವೇತ್ತರು ಅಭಿಪ್ರಾಯ ಪಟ್ಟಿದ್ದಾರೆ. ನಮ್ಮ ಕಾಲದ ಮಹಾ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೀನ್ ತಾವು ಸಂಶೋಧಿಸಿದ ಅಣುಶಕ್ತಿ ಮಾನವನ ದುರಂತಕ್ಕೂ ಪ್ರೇರಣೆ ಆದೀತೇ ಎಂಬ ಶಂಕೆ ಅವರ ಜಾಗೃತ ಹೃದಯಕ್ಕೆ ಅರಿವಾಗಿ ಅಳಲು ತುಂಬಿದಾಗ ಗಾಂಧೀಜಿಯ ಅಹಿಂಸಾತ್ಮಕ ಸತ್ಯಾಗ್ರಹ ಜೀವನಕ್ಕೆ ಮಾರು ಹೋದರು. ಇದೇ ಮಾನವನ ಮಾನವೀಯತೆಯನ್ನುಳಿಸಬಲ್ಲ ಏಕೈಕ ಭರವಸೆ; ಗಾಂಧೀಜಿಯಂತಹ ಒಬ್ಬ ಮಹಾ

ಪುರುಷ ನಮ್ಮ ಕಾಲದಲ್ಲೇ ನಮ್ಮೊಡನೆಯೇ ಜೀವಂತವಾಗಿ ಬಾಳಿ ಅಹಿಂಸಾ ಪಥ ಸಾಧಿಸಿಕೊಟ್ಟ ಎಂಬ ಮಾತನ್ನು ಮುಂದಿನ ಪೀಳಿಗೆಯವರು ನಂಬದೇ ಹೋಗಬಹುದು ಎಂದರು. ಐನ್‌ಸ್ಟೀನ್ ಮತ್ತು ಗಾಂಧಿ ಇಬ್ಬರೂ ಜೀವನದ ಎರಡು ಪ್ರಮುಖ ಮೌಲ್ಯಗಳ ಪ್ರತೀಕಗಳು. ಭೌತಶಕ್ತಿ ಮತ್ತು ಆತ್ಮಶಕ್ತಿಗಳ ಅಪ್ರತಿಹತ ಮಹಿಮೆಗಳನ್ನು ದರ್ಶನಮಾಡಿಸಿದ ಯುಗ ಪ್ರವರ್ತಕರು. ವಿಜ್ಞಾನ ಮತ್ತು ಆತ್ಮಜ್ಞಾನ ಒಂದಕ್ಕೆ ಮತ್ತೊಂದು ಪೂರಕ ಎಂದು ಸಾರಿದ ದಾರ್ಶನಿಕರು.

ವಿಶ್ವವಿಖ್ಯಾತ ವೇದಾಂತಿ ಸರ್ವಪಲ್ಲಿ ರಾಧಾಕೃಷ್ಣನ್ ಗಾಂಧೀಜಿಯ ಉನ್ನತ ವ್ಯಕ್ತಿತ್ವ ಪ್ರಭೆಗೆ ಮಾರು ಹೋದರು, ಜಗತ್ತಿನ ಮೂಲೆ ಮೂಲೆಗಳಲ್ಲಿ ತಮ್ಮ ತೇಜೋಪೂರ್ಣ ವಾಣಿಯಿಂದ ಮಹಾತ್ಮರ ಸಂದೇಶವನ್ನು ಸಾಗಿದರು.

> "ಮಾನವ ಸಮಾಜದ ವಿಕಾಸಪಥಕ್ಕೆ ಮೂರು ಮಜಲುಗಳುಂಟು. ಮೊದಲನೆಯದು ಪಶುಬಲದ ಕಾಡುನ್ಯಾಯದ ರಾಜ್ಯ. ಅಲ್ಲಿ ಸ್ವಾರ್ಥ ಮತ್ತು ಹಿಂಸೆ ತುಂಬಿರುತ್ತದೆ. ಎರಡನೆಯದು ಕಾನೂನು ಕಟ್ಟಳೆಗಳ ರಾಜ್ಯ, ಅಲ್ಲಿ ನ್ಯಾಯಾಲಯುಗಳು. ಪೋಲೀಸರು ಸೆರೆಮನೆಗಳು ಎದ್ದು ಕಾಣುತ್ತವೆ. ಮೂರನೆಯದಾದ ನಿಜಮಾನವೀಯ ಸಮಾಜದಲ್ಲಿ ಅಹಿಂಸೆ ಮತ್ತು ನಿಃಸ್ವಾರ್ಥತೆ ಆರಳಿ ಆಳುತ್ತದೆ. ಅಲ್ಲಿ ಪ್ರೇಮವೇ ಸಹಜ ಕಾನೂನು. ಅದೇ ಸುಸಂಸ್ಕೃತ ಮಾನವಕುಲದ ಗುರಿ. ಮಹಾತ್ಮಗಾಂಧಿಯವರ ಜೀವನ ಸಂದೇಶಗಳು ಈ ಗುರಿಯನ್ನು ನಮ್ಮ ಹತ್ತಿರಕ್ಕೆ ತಂದು ಕೊಟ್ಟಿವೆ." ಎಂದಿದ್ದಾರೆ ರಾಧಾಕೃಷ್ಣನ್.

ಸಾಮಾನ್ಯ ಮಾನವನಾಗಿ ಹುಟ್ಟಿ ಬೆಳೆದು ಆತ್ಮವಿಶ್ವಾಸದ ಸ್ವಪ್ರಯತ್ನಗಳಿಂದಲೇ ಮಹಾತ್ಮರೆನಿಸಿಕೊಂಡರು ಗಾಂಧೀಜಿ. ಮಾನವನ ಒಳ್ಳೆಯತನದಲ್ಲಿ ಅವರಿಗೆ ಅಪಾರ ಶ್ರದ್ಧೆ. ಯಾವ ವ್ಯಕ್ತಿಯೇ ಆಗಲಿ ಸಂಪೂರ್ಣವಾಗಿ

ಕೆಟ್ಟವನೂ ಇಲ್ಲ ಒಳ್ಳೆಯವನೂ ಇಲ್ಲ. ಕೆಟ್ಟದನ್ನು ನಿವಾರಿಸಿ ಒಳ್ಳೆಯದನ್ನು ಬೆಳೆಸುವ ಪರಿಸರದಲ್ಲಿ ಎಲ್ಲರೂ ನಿಜವಾದ ಮಾನವರಾಗಿ ಬಾಳಿ ಬದುಕುತ್ತಾರೆ. ಇದಕ್ಕೆ ಮಾರ್ಗದರ್ಶಕರಾದ ಸಾಧುಸಂತರ, ಪ್ರವಾದಿಗಳ ಧರ್ಮಪ್ರವರ್ತಕರ ಸಾರೋದ್ಧಾರ ಪರಂಪರೆ ಎಲ್ಲ ದೇಶಗಳಲ್ಲೂ ಎಲ್ಲಕಾಲಕ್ಕೂ ಉಂಟು, ಸ್ವಾತಂತ್ರ್ಯ, ಸಮತೆ, ಸೌಹಾರ್ದಗಳನ್ನು ಸಾಧಿಸಲು ಅವರೆಲ್ಲರೂ ತೋರಿಸಿಕೊಟ್ಟ ದಾರಿ ಒಂದೇ. ಅದು ಪ್ರೇಮ ಸತ್ಯ ಮತ್ತು ಕರುಣೆಯ ಪೂರ್ಣವಿಕಾಸದ ಪಥ. ದ್ವೇಷ ಅಸತ್ಯ ಮತ್ತು ಕ್ರೌರ್ಯದ ಸಂಪೂರ್ಣ ನಿರಾಕರಣೆ. ಗಾಂಧೀಜಿ ಅವರದೂ ಇದೇ ಮಾರ್ಗ. ಎಲ್ಲವನ್ನೂ ಆವರಿಸಿ ನಿಂತು ನಿಯಂತ್ರಿಸುತ್ತಾ ವಿಕಾಸ ಪಥದಲ್ಲಿ ನಮ್ಮನ್ನು ಮುನ್ನಡೆಸುವುದೇ ಆತ್ಮಶಕ್ತಿ. ಅದೇ ಈಶ್ವರ ಶಕ್ತಿ.

> "ಯಾವ ಮಹಾ ಉದ್ಯಮದಲ್ಲೇ ಆಗಲಿ ನಿರ್ಣಯಕಾರಿಯಾಗುವುದು ಹೋರಾಡುವವರ ಸಂಖ್ಯೆಯಲ್ಲ, ಅವರ ಸತ್ವ. ಜಗತ್ತಿನ ಮಹಾವ್ಯಕ್ತಿಗಳೆಲ್ಲ ಏಕಾಂಗಿಯಾಗಿ ನಿಂತರು. ಯರತುಷ್ಟ್ರ, ಬುದ್ಧ, ಏಸು, ಮಹಮ್ಮದ್ ಮುಂತಾದ ಎಲ್ಲ ಪ್ರವಾದಿಗಳನ್ನೂ ಗಮನಿಸಿ. ಅವರಿಗೆ ತಮ್ಮ ಸತ್ಯನಿಷ್ಠೆಯಲ್ಲೂ ಭಗವಂತನ ಅನುಗ್ರಹದಲ್ಲೂ ಜೀವಂತ ಶ್ರದ್ಧೆಯಿತ್ತು. ಭಗವಂತ ತಮ್ಮ ಪಕ್ಕದಲ್ಲೇ ಇದ್ದಾನೆಂಬ ಪೂರ್ಣವಿಶ್ವಾಸ ಇದ್ದುದರಿಂದ ತಾವು ಏಕಾಕಿಗಳು ಎಂಬ ಭಾವನೆಯೇ ಅವರಿಗೆ ಬರಲಿಲ್ಲ."
> ಎಂದರು ಗಾಂಧೀಜಿ.

ಗಾಂಧೀಜಿಯ ಪ್ರಭಾವ ಸೌರಭ ಭಾರತವನ್ನೆಲ್ಲ ಪಸರಿಸಿತ್ತು. ಜನತೆಯ ಹೃದಯಗಳಲ್ಲಿ ಮಹಾಪೂರವಾಗಿ ಹರಿದು ಅಹಿಂಸಾತ್ಮಕ ಸತ್ಯಾಗ್ರಹದ ನವ್ಯ ಪಥದಲ್ಲಿ ಕೈಹಿಡಿದು ನಡೆಸಿತು. ಮಾನವ ಚರಿತ್ರೆಯಲ್ಲಿ ಪ್ರಪ್ರಥಮವೆನಿಸಿದ ಈ ಅಪೂರ್ವ ಸಂಗ್ರಾಮದ ಹೊಸ ಇತಿಹಾಸ ನಿರ್ಮಾಣವಾಯಿತು. ಜಗತ್ತಿಗೆ ಭವಿಷ್ಯದ ಶಾಂತಿ ಸೌಹಾರ್ದಗಳ ಶುಭೋದಯದ ಹಾದಿ ಬೆಳಗಿತು.

ಕನ್ನಡದ ಕವಿ ಶ್ರೇಷ್ಠರೆಲ್ಲರೂ ಈ ಮಹಾತ್ಮನ ಮಹಾ ಚೈತನ್ಯಕ್ಕೆ ಮಾರು ಹೋಗಿದ್ದಾರೆ. ಹೃದಯತುಂಬಿ ಹಾಡಿದ್ದಾರೆ. "ಮನುಜರಲಿ ದೇವತ್ವದಾಕಾಂಕ್ಷೆ ಅಳಿದಿಲ್ಲ ; ಉಳಿದಿಹುದು, ದಿನದಿನಕೆ ಬೆಳೆಯುತಿದೆ ಎಂಬುದಕೆ ಸಾಕ್ಷಿಯಿದು ;......ಜನ ಕಿಕ್ಕಿರಿದು ನೆರೆದಿಹುದು ಮಾನವ ಮಹಾತ್ಮನಿಗೆ ಗೌರವಾರಾಧನೆಯ ನೈವೇದ್ಯವನು ಸಲಿಸಿ" ಎಂದರು ರಾಷ್ಟ್ರಕವಿ ಕುವೆಂಪು. ಶ್ರೀ ಡಿ.ವಿ.ಜಿ, ಅವರ ಕಾವ್ಯಧಾರೆ ಹರಿಯಿತು. "ಮನುಜಾತ್ಮ ಜ್ಯೋತಿಯಿವಂ । ಮುನಿ, ಋಷಿ, ತಪಸಿ ಪ್ರಸಾದಿತ ಸ್ಫೂರ್ತಿಯಿವಂ ॥ ಜನಹೃದಯ ಮೂರ್ತಿ ಯಿವಂ ॥ ಅನವಧಿ ಜಗದಂತರಾತ್ಮ ವಿಭು ಸಾಕ್ಷಿಯಿವಂ ॥. ಮೈಸೂರು ಮಲ್ಲಿಗೆಯ ಕವಿ ನರಸಿಂಹಸ್ವಾಮಿ "ಸೌಹಾರ್ದ ಸೇತುವೆಯ ಶಾಂತಿ ಬಾವುಟದಂತೆ । ಜೀವಕೋಟಿಯ ಕರೆದ ಲೋಕ ಗುರುವೆ" ಅಂದರು. ರಸ ಋಷಿ ವಿ. ಸೀ. ನಮಿಸಿ ನುಡಿದುದು ಹೀಗೆ "ಬಿಡುಗಡೆಗೆ ನಾಡನ್ನು ನಡೆಸಿ ಹೊಸ ಹಾಡನ್ನು ಹಾಡಿಸಿದಿರಿ । ಮಕ್ಕಳನು ಹೆಣ್ಣಳನು ಕೆಳಗೆ ಬಿದ್ದಾರ್ತರನು ಮೇಲೆತ್ತಿ ಸಂತೈಸಿ ಬದುಕಿಸಿದಿರಿ ।...... ಎಂದೆಂದು ಕೇಳೀತು ನಿಮ್ಮಂದೇ ಈ ಸಾಧು ನುಡಿ...ಬಾಳ ಚರಿತಾರ್ಥತೆಗೆ ಬೇರೆಪಥವೇನುಂಟು ಓ ತಂದೆ, ಗಾಂಧಿ !". ಕಾವ್ಯಾನಂದ ಸಿದ್ದಯ್ಯ ಪುರಾಣಿಕರವಾಣಿ ಕಂಪಿಸಿ ನುಡಿಯಿತು. "ದಿವ್ಯತೆಯೆ ದೇಹವನು ಧರಿಸಿ ಐತಂದಂತೆ। ಮಾನವ ಪ್ರೇಮವೇ ಮೈದಾಳಿ ಬಂದಂತೆ ॥ ನಿಷ್ಕಾಮ ಕರ್ಮವೇ ಸಾಕಾರವಾದಂತೆ । ಬದುಕಿದನು ಭವ್ಯತೆಯ. ಶತೃವನೆ ಪ್ರೀತಿಸುತ । ಸೇವಾಪ್ರದೀಪದಿಂ ನಾಲ್ದೆಸೆಯ ಬೆಳಗಿಸುತ ॥"

ಬರಲಿರುವ ಅಹಿಂಸಾ ಸಂಸ್ಕೃತಿಯ ಮುಂಬೆಳಗಿನ ದಿಕ್ಸೂಚಿ ಗಾಂಧೀ ಜೀವನದ ದಿವ್ಯ ಸಂದೇಶ. ಶತಮಾನಗಳನಂತರವೂ ಈ ಜ್ಯೋತಿ ಬೆಳಗುತ್ತದೆ. ಜವಹರಲಾಲರ ಹೃದಯಸ್ಪರ್ಶಿ ನುಡಿಗಳನ್ನು ಆಲಿಸಿ

> "ಈ ದೇಶದಲ್ಲಿ ಬೆಳಗಿದ ಜ್ಯೋತಿ ಸಾಧಾರಣ ಬೆಳಕಲ್ಲ. ಸಾವಿರಾರು ವರ್ಷಗಳು ಕಳೆದರೂ ಆ ಬೆಳಕು ಭಾರತದಲ್ಲಿ ಇನ್ನೂ ಕಂಡು ಬರುತ್ತದೆ. ಜಗತ್ತು ಅದಕ್ಕೆ ಸಾಕ್ಷಿಯಾಗುತ್ತದೆ.

ಅನೇಕ ತಪ್ತ ಹೃದಯುಗಳ ಸಾಂತ್ವನದ ಅಮೃತಧಾರೆಯಾಗುತ್ತದೆ. ಈ ಬೆಳಕು ಜೀವಂತ ಸತ್ಯದ ರೂಪ. ಈ ಶಾಶ್ವತ ವ್ಯಕ್ತಿ ಆತನ ಶಾಶ್ವತ ಸತ್ಯದೊಡನೆ ನಮ್ಮೊಡನಿದ್ದು ಸರಿಯಾದ ಮಾರ್ಗತೋರಿ ತಪ್ಪುದಾರಿಯಿಂದ ರಕ್ಷಿಸಿ ಈ ಪುರಾತನ ರಾಷ್ಟ್ರದ ಸ್ವಾತಂತ್ರ್ಯಗಳಿಸಿಕೊಟ್ಟರು.”

ಈ ಜೀವನದ ಕಥೆ ತೇಜೋಪೂರ್ಣ ಪಾವನಧಾರೆ. ಭಾರತೀಯುರ ಅಮರ ನಿಧಿ, ಉತ್ತುಂಗ ಮಾನವನೊಬ್ಬನ ಆದರ್ಶ ಬಾಳಿನ ಪವಿತ್ರಗಂಗೆ.

—o—

ಅಧ್ಯಾಯ ೧ - ಬಾಲ್ಯದ ದಿನಗಳು

(i) ತಂದೆ ಕಲಿಸಿದ ಪಾಠ

ಮೋಹನದಾಸನಿಗೆ ಆಗ ಹದಿನೈದು ವರ್ಷ. ಪ್ರೌಢ ಶಾಲೆಯ ವಿದ್ಯಾರ್ಥಿ. ಕೆಟ್ಟ ಸಹವಾಸಕ್ಕೆ ಬಲಿಯಾಗಿ ಹಲವು ದುರಭ್ಯಾಸಗಳನ್ನು ಕಲಿತ. ಮನಸ್ಸಿನಲ್ಲಿ ತಳಮಳವಾಗುತ್ತಿತ್ತು. ಬೀಡಿ, ಇಸ್ಪೀಟು ಮುಂತಾದುದರಲ್ಲಿ ಕೆಟ್ಟ ಗೆಳೆಯರ ಬಾಂಧವ್ಯ ಬೆಳೆಯಿತು. ಮೋಹನನಿಗೆ ಯಾರೋ ಹೇಳಿದರು; ಮಾಂಸಾಹಾರದಿಂದ ಶೂರರಾಗುತ್ತೇವೆ; ಇಂಗ್ಲೀಷರು ಅದರಿಂದಲೇ ನಮ್ಮ ಮೇಲೆ ಆಳುತ್ತಿದ್ದಾರೆ; ನಾವೂ ತಿಂದು ಗಟ್ಟಿಗರಾಗಿ ಅವರನ್ನೋಡಿಸಬೇಕು. ಈ ಮಾತು ನಾಟಿತು. ಕದ್ದು ಮಾಂಸತಿನ್ನುವ ಗೆಳೆಯರ ಗುಂಪು ಸೇರಿತು. ಗಾಂಧೀ ಮನೆತನದವರು ಸಸ್ಯಾಹಾರಿಗಳು. ಶುದ್ಧ ವೈಷ್ಣವರು. ಬೀಡಿಗೆ, ಮಾಂಸಕ್ಕೆ ಹಣಬೇಕಾಯಿತು, ಸಾಲಮಾಡಿದರು. ಮನೆಯಲ್ಲಿ ಅಣ್ಣನ ಚಿನ್ನದ ಬಳೆ ಕಂಡಿತು. ಒಂದು ತುಣುಕು ಕತ್ತರಿಸಿ ಮಾರಿ ಸಾಲತೀರುಸುವ ದುರಾಲೋಚನೆ ಬಂತು. ಹಾಗೆಯೇ ಮಾಡಿದ ಮೋಹನದಾಸ. ಮನಸ್ಸು ಅಲ್ಲೋಲ ಕಲ್ಲೋಲವಾಯಿತು. ಎಲ್ಲೆಲ್ಲೂ ಭಯ ಆವರಿಸಿತು. ಯಾರಿಗೂ ಮುಖ ತೋರಿಸಲು ನಾಚಿಕೆಯಾಗುತ್ತಿತ್ತು. ಈ ತುಮುಲವನ್ನು ಸಹಿಸಲಾರದೆ ಹೋದ. ಕೊನೆಗೊಮ್ಮೆ ತಂದೆಯವರಲ್ಲಿ ಈ ಅಪರಾಧಗಳನ್ನೆಲ್ಲ ಬಿಚ್ಚುಮನಸ್ಸಿನಿಂದ ತಿಳಿಸಿಬಿಡಲು ಸಂಕಲ್ಪಿಸಿದ, ಧೈರ್ಯ ಸಾಲದಾಯಿತು. ಒಂದು ಕಾಗದದಲ್ಲಿ ವಿವರವಾಗಿ ಬರೆದ. ತಪ್ಪನ್ನೆಲ್ಲ ಒಪ್ಪಿಕೊಂಡ; ಶಿಕ್ಷೆಕೊಡಿ ಎಂದು ಬೇಡಿಕೊಂಡ. ಇನ್ನು ಎಂದೂ ಈ ಹೀನ ಕಾರ್ಯಗಳಿಗೆ ಕೈಹಾಕುವುದಿಲ್ಲ ಎಂಬ ಪ್ರತಿಜ್ಞೆಯನ್ನೂ ಬರೆದ.

ತಂದೆ ಕರಮಚಂದರಿಗೆ ಆಗ ತೀವ್ರವಾದ ಖಾಯಿಲೆಯಾಗಿ ಹಾಸಿಗೆ ಹಿಡಿದಿದ್ದರು. ನೋವಿನಿಂದ ಬಳಲುತ್ತಿದ್ದರು. ತೀರನಿಶ್ಶಕ್ತಿ. ಮೋಹನದಾಸ

ಅಳುಕುತ್ತಲೇ ತಂದೆಯ ಮಂಚದಬಳಿ ಹೋಗಿನಿಂತ ನಾಚಿಕೆಯಿಂದ ತಲೆತಗ್ಗಿಸಿ ನಡುಗುತ್ತಿದ್ದ ಕೈಗಳಿಂದ ಕಾಗದಕೊಟ್ಟ. ತಂದೆಯವರಿಗೆ ಅರ್ಥವಾಗಲಿಲ್ಲ. ನಿಧಾನವಾಗಿ ಕಾಗದವನ್ನು ಓದಿದರು. ಮತ್ತೊಮ್ಮೆ ಮಗನ ಮುಖನೋಡಿದರು. ಅವರ ಕಣ್ಣಿನಿಂದ ಧಾರಾಕಾರವಾಗಿ ನೀರು ಸುರಿಯಿತು. ಕಾಗದವೆಲ್ಲ ನೆಂದು ಹೋಯಿತು. ಮಗನಿಗೇಕೆ ಈ ದುರ್ಬುದ್ಧಿ ಬಂತು ಎಂದು ಮರುಗಿದರು. ಒಂದು ಮಾತನ್ನೂ ಆಡಲಿಲ್ಲ, ಮೋಹನನ ಕಡೆಗೊಮ್ಮೆ ತುಂಬು ವಾತ್ಸಲ್ಯದಿಂದ ನೋಡಿದರು ಮಳೆ ಹನಿಯಂತೆ ತಂದೆಯ ಕಣ್ಣಿನಿಂದ ಉದುರುತ್ತಿದ್ದ ತೊಟ್ಟು ತೊಟ್ಟು ಕಣ್ಣೀರೂ ಈ ಬಾಲಕನ ದುಃಖತಪ್ತ ಹೃದಯದಲ್ಲಿ ಪಶ್ಚಾತ್ತಾಪದ ಪಾವನಗಂಗೆಯನ್ನುಕ್ಕಿಸಿತು. ಆತ್ಮಕಥೆಯಲ್ಲಿ ಗಾಂಧೀಜಿ ಬಿಚ್ಚುಮನಸ್ಸಿನಿಂದ ಹೀಗೆ ಬರೆದಿದ್ದಾರೆ

> "ನಾನೂ ಗಳಗಳ ಅತ್ತುಬಿಟ್ಟೆ. ನನ್ನ ತಂದೆಗಾದ ಅಗಾಧ ನೋವು ನನಗರಿವಾಯಿತು. ಇಡೀ ಚಿತ್ರ ಅಚ್ಚಳಿಯದೆ ಇದೆ. ಆ ಪ್ರೇಮದ ಕಣ್ಣೀರು ನನ್ನ ಪಾಪವನ್ನೆಲ್ಲ ತೊಳೆದು ಬಿಟ್ಟಿತು, ತಂದೆಯ ಪ್ರೀತಿಯನ್ನರಿತವರಿಗೆ ಮಾತ್ರ ಇದು ತಿಳಿದೀತು.
>
> ಬಾಣದ ಅಲುಗಿನಂತೆ ಬೇಧಿಸಿಬಂದ ಪಿತೃಪ್ರೇಮ ।
> ಅರಿತವನೆ ಬಲ್ಲ ಅದರ ದುರ್ವಾರಶಕ್ತಿ ॥
>
> ಈ ಘಟನೆಯೇ ನನಗೆ ಅಹಿಂಸೆಯ ಮೊದಲ ಪ್ರತ್ಯಕ್ಷ ಪಾಠ. ಆಗ ನನಗೆ ಅದು ಕೇವಲ ಪ್ರೀತಿ ಎಂದಷ್ಟೇ ಹೊಳೆದಿತ್ತು. ಈಗ ಸ್ಪಷ್ಟವಾಗಿ ಶುದ್ಧವಾದ ಅಹಿಂಸೆ ಎಂದು ತಿಳಿದಿದ್ದೇನೆ. ಸರ್ವವ್ಯಾಪಿಯಾದ ಅಹಿಂಸೆ ಮುಟ್ಟಿದುದನ್ನೆಲ್ಲ ಪರಿವರ್ತಿಸಿ ಬಿಡುತ್ತದೆ. ಅದರ ಶಕ್ತಿಗೆ ಪಾರವೇ ಇಲ್ಲ."
>
> (ಆತ್ಮಕಥೆ)

ತಂದೆ ಬಹಳ ಸಿಟ್ಟಿನವರು. ಚೆನ್ನಾಗಿ ಬಯ್ದು ಹೊಡೆದು ತನ್ನನ್ನು ಶಿಕ್ಷಿಸುತ್ತಾರೆ ಎಂದು ಮೋಹನದಾಸ ತಿಳಿದಿದ್ದ. ಹಣೆ ಹಣೆ ಚಚ್ಚಿಕೊಂಡಾರು

ಎಂದು ನಿರೀಕ್ಷಿಸಿದ್ದ. ಇಂಥ ಅಪರ ಕ್ಷಮಾಗುಣ ಬಾಲಕನಿಗೆ ಅನುಭವವಾಗಿಯೇ ಇರಲಿಲ್ಲ. ತಂದೆ ಅತ್ಯಂತ ಶಾಂತರಾಗಿಯೇ ಇದ್ದರು. ಅಪರಾಧಗಳನ್ನೆಲ್ಲ ಒಪ್ಪಿಕೊಂಡು ಮುಂದೆ ಎಂದೂ ಮಾಡುವುದಿಲ್ಲ ಎಂದು ಬಾಲಕ ಮಾಡಿದ್ದ ಪ್ರಾಮಾಣಿಕ ಪ್ರತಿಜ್ಞೆ ಈ ಪರಿಣಾಮ ಮಾಡಿತ್ತು. ನಮ್ಮ ತಪ್ಪಿಗೆ ಶಿಕ್ಷೆ ಕೊಡುವ ಸಹಜಾಧಿಕಾರ ಯಾರಿಗಿದೆಯೋ ಅವರಲ್ಲಿ ನಿಸ್ಸಂಕೋಚವಾಗಿ ಪ್ರಾಮಾಣಿಕವಾಗಿ ತಪ್ಪನ್ನೊಪ್ಪಿಕೊಂಡಾಗ ಶುದ್ಧವಾದ ಪಶ್ಚಾತ್ತಾಪ ಎರಡು ಹೃದಯಗಳನ್ನೂ ಪರಿಶುದ್ಧಗೊಳಿಸುತ್ತದೆ. ಅಲ್ಲಿಂದಾಚೆ ಮೋಹನದಾಸ ನಿಷ್ಕಳಂಕನಾಗಿ ತಂದೆಯ ಪ್ರೀತಿಪಾತ್ರ ಪುತ್ರನಾದ.

(ii) ಮನೆತನ ಮತ್ತು ಶಿಕ್ಷಣ

ಗಾಂಧಿ ಮನೆತನದ ಮೂಲ ಪುರುಷರು ಕಾಥೇವಾಡಿ ಬನಿಯಾಗಳು, ಗ್ರಂದಿಗೆ ವ್ಯಾಪಾರಿಗಳು. ಗುಜರಾತಿನ ವೈಷ್ಣವ ಸಂಪ್ರದಾಯಕ್ಕೆ ಸೇರಿದವರು. ಅವರಲ್ಲಿ ಹುಟ್ಟಿಬಂದ ಉತ್ತಮಚಂದ್ ಗಾಂಧಿ ಸಾರ್ವಜನಿಕ ಸೇವೆಗೆ ಹೊರಟು ಪುಟ್ಟ ರಾಜ್ಯಗಳಾದ ಪೋರ್‌ಬಂದರ್. ಜುನಗಢಗಳಲ್ಲಿ ದಿವಾನರಾಗಿ ಆಡಳಿತ ನಡೆಸಿದರು. ರಾಜರು ನವಾಬರುಗಳಿಗೆ ಅಚ್ಚುಮೆಚ್ಚಿನವರಾದರು. ತತ್ವನಿಷ್ಠ ದಿಟ್ಟತನಕ್ಕೆ ಹೆಸರಾದವರು. ಅವರ ಆರು ಮಕ್ಕಳಲ್ಲಿ ಕೊನೆಯ ಇಬ್ಬರಾದ ಕರಮಚಂದ್ ಗಾಂಧಿ ಮತ್ತು ತುಲಸಿದಾಸ ಗಾಂಧಿ ಪೋರ್‌ಬಂದರಿನ ದಿವಾನರುಗಳಾಗಿದ್ದರು. ಕರಮಚಂದ್ ಗಾಂಧಿ ನಂತರ ರಾಜಕೋಟೆ ಮತ್ತು ವಾಂಕೆನೇರು ಸಂಸ್ಥಾನಗಳ ದಿವಾನರಾದರು.

ಕರಮಚಂದರ ಮೊದಲ ಮೂವರು ಪತ್ನಿಯರು ಚಿಕ್ಕಂದಿನಲ್ಲೇ ಕಾಲವಾದರು. ನಾಲ್ಕನೆಯ ಪತ್ನಿ ಪುತ್ಲೀಬಾಯಿಯ ಕೊನೆಯ ಮಗನೇ ಮೋಹನದಾಸ ಕರಮಚಂದ್ ಗಾಂಧಿ. ಅವನಿಗೆ ಇಬ್ಬರು ಅಣ್ಣಂದಿರು ಒಬ್ಬ ಅಕ್ಕ ತಕ್ಕಮಟ್ಟಿಗೆ ಶ್ರೀಮಂತ ಮನೆತನ ಇವರದು. ತಂದೆ ಕರಮಚಂದ್ ಗಾಂಧಿ ಹೆಚ್ಚು ಓದಿದವರಲ್ಲ ಆದರೆ ಅನುಭವದ ಅಪಾರಜ್ಞಾನ ಪಡೆದು ಚಾಣಾಕ್ಷ

ಆಡಳಿತಗಾರರೆನಿಸಿಕೊಂಡಿದ್ದರು. ದರ್ಪ ಸ್ವಾಭಿಮಾನ, ಸಿಟ್ಟು, ಶಿಸ್ತು ಅವರಲ್ಲಿ ಮನೆಮಾಡಿದ್ದವು. ಎಲ್ಲರೂ ಅವರ ಮಾತನ್ನು ಗೌರವಿಸುತ್ತಿದ್ದರು.

ಧಾರ್ಮಿಕ ಮನೋವೃತ್ತಿ ಗಾಂಧೀ ಮನೆತನದಲ್ಲಿ ಗಾಢವಾಗಿ ಬೆಳೆದು ಬಂದಿತ್ತು. ಮನೆಯಲ್ಲಿ ರಾಮಾಯಣ ಭಾರತ ಭಾಗವತಗಳ ಪಠಣ ಪ್ರವಚನಗಳು ನಡದೇ ಇರುತ್ತಿದ್ದವು. ಕರಮಚಂದರಿಗೆ ಧಾರ್ಮಿಕ ಜಿಜ್ಞಾಸೆಗಳಲ್ಲಿ ತುಂಬ ಆಸಕ್ತಿ. ತಾಯಿ ಪುತಲಿಬಾಯಿಯಂತೂ ಪರಮ ನಿಷ್ಠಾವಂತ ವೈಷ್ಣವೆ. ಅಗಾಧ ದೈವಭಕ್ತಿ ವ್ರತ ನಿಷ್ಠೆಗಳು ಆಕೆಗೆ ಸಹಜವಾಗಿದ್ದುವು ಮಕ್ಕಳಲ್ಲಿ ಅದೇ ಪ್ರೇರಣೆ ತುಂಬಿದಳು. ಮೋಹನದಾಸ ಹುಟ್ಟಿದ್ದು ಪೋರ್ ಬಂದರಿನಲ್ಲಿ 1869ರ ಅಕ್ಟೋಬರ್ 2 ರಂದು. ಅಕ್ಕ ದಾಲಿಯತ್ ಬಹೆನ್ ಏಳು ವರ್ಷ. ಅಣ್ಣ ಲಕ್ಷ್ಮೀದಾಸ್ ಆರು ವರ್ಷ. ಚಿಕ್ಕಣ್ಣ ಕರಸನ್ ದಾಸ್ ಮೂರು ವರ್ಷ ದೊಡ್ಡವರು. ಪೋರ್ ಬಂದರ್ ಬಿಟ್ಟಾಗ ಮೋಹನದಾಸನಿಗೆ ಏಳು ವರ್ಷ.

ಕರಮಚಂದ್ ಗಾಂಧಿ ರಾಜಕೋಟೆಯ ದಿವಾನರಾಗಿ ಬಂದರು. ಅಲ್ಲಿ ಮೋಹನದಾಸ ಪ್ರಾಥಮಿಕ ಶಾಲೆ ಸೇರಿದ, ಎಲ್ಲರಂತೆ ಸಾಮಾನ್ಯ ವಿದ್ಯಾರ್ಥಿ. ಅತಿ ಜಾಣನೂ ಅಲ್ಲ ದಡ್ಡನೂ ಅಲ್ಲ. ತುಂಬ ನಾಚಿಕೆಯ ಹಿಂಜರಿಕೆಯ ಸ್ವಭಾವ. ಸರಾಗವಾಗಿ ತೇರ್ಗಡೆಯಾಗುತ್ತ ಹನ್ನೆರಡು ವರ್ಷಕ್ಕೆ ಪ್ರೌಢಶಾಲೆಗೆ ಸೇರಿದ. ಆ ವೇಳೆಗೆ ಮನಸ್ಸು ಪ್ರಬುದ್ಧವಾಗುತ್ತಿತ್ತು. ಸತ್ಯನಿಷ್ಠೆಯ ಒಲವು ಹುಟ್ಟುತ್ತಿತ್ತು.

ಒಮ್ಮೆ ಶಾಲೆಗೆ ಇಂಗ್ಲೀಷ್ ಮೇಲ್ವಿಚಾರಕ ಗೈಲ್ಸ್ ಭೇಟಿ ಕೊಟ್ಟರು ವ್ಯಾಕರಣ ಪರೀಕ್ಷೆ ನಡೆಸಿದರು. ಮೋಹನದಾಸ 'ಕೆಟಲ್' ಎಂಬ ಪದದ ಕಾಗುಣಿತ ತಪ್ಪುಮಾಡಿದ್ದ. ತರಗತಿಯ ಮಾಸ್ತರು ಹಿಂದಿನಿಂದ ಚುಚ್ಚಿ ಪಕ್ಕದವನನ್ನು ನೋಡಿ ತಿದ್ದಿಕೋ ಅಂದರು. ಹಾಗೆ ಕಾಪಿ ಮಾಡಲು ಮೋಹನದಾಸ ನಿರಾಕರಿಸಿದ. ತಪ್ಪಿಗೆ ಅಂಕ ಹೋಯಿತು. 'ನೀನೆಂಥ ಮೂರ್ಖ' ಎಂದರು. ಮೋಹನನಿಗೆ ತನ್ನ ವರ್ತನೆಯೇ ಸರಿ ಎಂದು ಮನದಟ್ಟಾಗಿತ್ತು, ಹಾಗೆಯೇ ನಡೆದುಕೊಂಡ.

ಇದೇ ಕಾಲಕ್ಕೆ 'ಶ್ರವಣನ ಪಿತೃಭಕ್ತಿ' ಎಂಬ ಪುಸ್ತಕ ಬಾಲಕ ಗಾಂಧಿಯ ಮನಸ್ಸನ್ನಾಕರ್ಷಿಸಿತು. ಪಠ್ಯಪುಸ್ತಕಗಳನ್ನು ಬಿಟ್ಟು ಹೆಚ್ಚು ಓದುತ್ತಿರಲಿಲ್ಲವಾದರೂ ಈ ಒಂದು ಪುಸ್ತಕ ಗಾಢವಾದ ಅಚ್ಚೊತ್ತಿಬಿಟ್ಟಿತು. ಸಂತೆಗೆ ಬರುವ ಡಬ್ಬದ ಭೂತಗನ್ನಡಿ ಚಿತ್ರ ಪ್ರದರ್ಶನದಲ್ಲಿ ಶ್ರವಣನ ಚಿತ್ರ ನೋಡಿದ. ತೋರಿಸುವವನ ಹಾಡು ಕೇಳಿದ. ಕುರುಡರಾದ ತಂದೆ ತಾಯಿಗಳನ್ನು ಎರಡು ಬುಟ್ಟಿಗಳಲ್ಲಿ ಹೊತ್ತ ಸೇವಾಪರಾಯಣ ಶ್ರವಣಕುಮಾರ ಆದರ್ಶತರುಣ ಎನಿಸಿತು. ಶ್ರವಣ ದಶರಥನ ಬಾಣಕ್ಕೆ ಸಿಕ್ಕಿಸತ್ತ ಸಂದರ್ಭ ಓದಿ ಮೋಹನದಾಸನಿಗೆ ಕರುಳು ಕಿತ್ತುಬಂದಂತಾಯಿತು. ಒಂದು ಶಾಶ್ವತ ಮೌಲ್ಯದ ಪ್ರತೀಕ ಆದ ಶ್ರವಣ.

ಮತ್ತೊಂದು ಬಾರಿ ಹರಿಶ್ಚಂದ್ರ ನಾಟಕಕ್ಕೆ ಹೋಗಿದ್ದ ಮೋಹನದಾಸ. ಆ ಸತ್ಯವ್ರತನ ಪಾತ್ರ ಹೃದಯದಲ್ಲಿ ನಾಟಿನಿಂತಿತು. ಸತ್ಯಕ್ಕಾಗಿ ಯಾವ ತ್ಯಾಗಕ್ಕಾದರೂ ಸಿದ್ಧನಾದ ಹರಿಶ್ಚಂದ್ರ ಎಂಥ ವೀರಪುರುಷ ಎಂದುಕೊಂಡ. ಎಲ್ಲರೂ ಏಕೆ ಸತ್ಯನಿಷ್ಠರಾಗಬಾರದು ಎಂಬ ವಿಚಾರ ಪದೇ ಪದೇ ಪ್ರತಿಧ್ವನಿಸಿತು. ಮತ್ತೆ ಮತ್ತೆ ನಾಟಕ ನೋಡಿದ. ಈ ಆದರ್ಶ ಜೀವನವನ್ನಾವರಿಸಿ ನಿಲ್ಲಬೇಕು ಎನಿಸಿತು. ಮೋಹನನ ಅಂತರ್ಯದಲ್ಲಿ ಎರಡು ಅಮೂಲ್ಯ ಆದರ್ಶಗಳು ನೆಲೆಯಾಗಿ ನಿಂತು ದಾರಿದೀಪಗಳಾದವು. ಮೊದಲನೆಯದು ಸತ್ಯನಿಷ್ಠೆ ಎರಡನೆಯದು ಸೇವಾನಿಷ್ಠೆ.

ಹದಿನಾಲ್ಕು ವರ್ಷದ ಈ ಪ್ರೌಢಶಾಲಾ ವಿದ್ಯಾರ್ಥಿಗೆ ಮದುವೆಯಾಯಿತು ಎಂದರೆ ಆಶ್ಚರ್ಯವೆನಿಸೀತು. ಅದನ್ನು ನೆನೆಸಿಕೊಂಡು ಗಾಂಧೀಜಿಯೇ ಅಯ್ಯೋ ಹೀಗಾಯಿತೇ ಎಂದುಕೊಂಡಿದ್ದಾರೆ ಆತ್ಮಕಥೆಯಲ್ಲಿ. ಆದರೆ ಕಸ್ತೂರಿಬಾ ಅಂಥ ಅನುರೂಪ ಪತಿವ್ರತೆ ದೊರೆತದ್ದು ಒಂದು ಪುಣ್ಯ ಎಂದು ಸಮಾಧಾನ ಪಟ್ಟಿದ್ದಾರೆ. ಪೋರ್‌ಬಂದರಿನ ಗಣ್ಯವರ್ತಕರಾಗಿದ್ದ ಸೇಠ್ ಗೋಕುಲದಾಸ್ ಮಕನ್‌ಜಿ ಅವರ ಮಗಳು ಕಸ್ತೂರಿಬಾ. ಆಕೆಗೂ ಆಗ ಹದಿನಾಲ್ಕು ವರ್ಷ. ಹಿರಿಯರಲ್ಲಿ ಈ ಮೊದಲೇ ಈ ಮದುವೆ ಆಗತಕ್ಕದ್ದೆಂದು ನಿರ್ಣಯವಾಗಿತ್ತು. ಮದುವೆಯ ವಿಜೃಂಭಣೆ ಉತ್ಸವಗಳಲ್ಲಿ ಈ ಕಿರಿಯ

ಮುದುಮಕ್ಕಳು ಸಂತೋಷದಿಂದ ಒಗ್ಗಿ ಹೋದರು. ಹುಡುಗಾಟಗಳಿಗೆ ಸಂಗಾತಿ ಸಿಕ್ಕಿದಳು ಎಂಬ ಖುಷಿಯೇ ತುಂಬಿತ್ತು. ಆ ವಯಸ್ಸಿನಲ್ಲಿ ಗಂಭೀರ ವಿಚಾರಗಳು ಮೊಳೆತಿರಲಿಲ್ಲ. ಹಾಗೆಯೇ ಕಾಲ ಜಾರುತ್ತಿತ್ತು. ಬಾಲ್ಯ ವಿವಾಹದಿಂದ ಅದೆಷ್ಟು ಮನೋವಿಕಾರಗಳು ಕಾಡುತ್ತವೆ, ವಿದ್ಯಾರ್ಥಿದೆಸೆಯಲ್ಲಿ ಎಷ್ಟು ಅನಾಹುತಮಾಡಿಬಿಡುತ್ತದೆ ಎಂದು ವಿವರಿಸುತ್ತಾ ಗಾಂಧೀಜಿ 'ನನ್ನ ಉದಾಹರಣೆ ತರುಣ ಪೀಳಿಗೆಯವರನ್ನು ಎಚ್ಚರಿಸಲಿ' ಎಂದು ಬಯಸಿದ್ದಾರೆ.

ತಂದೆಯ ಕಾಯಿಲೆ ತೀವ್ರವಾಗುತ್ತಲೇ ಸಾಗಿತ್ತು. ಮೋಹನದಾಸ ಅತ್ಯಂತ ನಿಷ್ಠೆಯಿಂದ ಶುಶ್ರೂಷೆಯಲ್ಲಿ ನಿರತನಾಗಿರುತ್ತಿದ್ದ. ತಂದೆಯ ಸೇವೆ ಅವನಿಗೆ ಪ್ರಿಯವಾಗಿತ್ತು. ಶಾಲೆ ಮುಗಿದಕೂಡಲೇ ಓಡಿಬರುತ್ತಿದ್ದ. ಎಷ್ಟೋ ವೇಳೆ ತರಗತಿಗಳು ತಪ್ಪಿಹೋಗುತ್ತಿದ್ದವು. ಮನೆಯಲ್ಲಿ ಮತ್ತೊಂದು ಆಕರ್ಷಣೆ ಕಸ್ತೂರಿಬಾ. ಅವಳೊಡನೆ ಮಾತುಕತೆ ಆಟಪಾಟದ ಸೆಳೆತ ಪ್ರಬಲವಾಗಿತ್ತು. ವಿವೇಚನೆಯಿಲ್ಲದ ಬಾಲಿಷ ಕಾಮನೆಗಳಿಗೆ ಮೋಹನದಾಸನ ಮನಸ್ಸು ಬಲಿಯಾಗುತ್ತಿತ್ತು. ತಂದೆಯ ಶುಶ್ರೂಷೆಗೆ ತಾಯಿಯೋ ಮತ್ಯಾರೋ ಬಂದು ಬಿಡುವು ಸಿಕ್ಕಿದೊಡನೆಯೇ ಹೆಂಡತಿಯೆಡೆಗೆ ಧಾವಿಸಿ ಬಿಡುತ್ತಿದ್ದೆ ಎಂದು ಹೇಳಿಕೊಂಡಿದ್ದಾರೆ ಗಾಂಧೀಜಿ. ಈ ವ್ಯಾಮೋಹ ಕರ್ತವ್ಯಗಳನ್ನೇ ಮರೆಸಿ ಬಿಡುತ್ತಿತ್ತು.

ಒಂದು ಗಂಭೀರ ರಾತ್ರಿ ಬಂತು. ಆ ದಿನ ಅಕಸ್ಮಾತ್ತಾಗಿ ಮೋಹನನ ಚಿಕ್ಕಪ್ಪ ಬಂದಿದ್ದರು. ಅವರಿಗೆ ತಮ್ಮ ಅಣ್ಣನ ಖಾಯಿಲೆ ಅಪಾಯದ ಅಂಚಿಗೆ ಬಂದಿದೆ ಎಂದು ಅರಿವಾಯಿತು. ಇಡೀ ದಿನ ಬಳಿಯಲ್ಲೇ ಕುಳಿತು ಕಾಲುಗಳನ್ನೊತ್ತುತ್ತಾ ಸಂತೈಸುತ್ತಿದ್ದರು. ಆ ರಾತ್ರಿಯೂ ಉಳಿದುಕೊಂಡರು. ಮೋಹನದಾಸನನ್ನು ಕುರಿತು "ನಾನು ಶುಶ್ರೂಷೆ ಮಾಡುತ್ತೇನೆ ನೀನು ಬೇಕಾದರೆ ವಿಶ್ರಮಿಸಿಕೋ" ಎಂದದ್ದೇ ತಡ ತನ್ನ ತಂದೆಯ ಗಂಭೀರ ಸ್ಥಿತಿಯನ್ನೂ ಗಮನಿಸದೆ ಹೆಂಡತಿಯೆಡೆಗೆ ಓಡಿಬಿಟ್ಟ ಮೋಹನದಾಸ. ಹತ್ತು ನಿಮಿಷ ಕಳೆಯುವುದರೊಳಗಾಗಿ ಆಳು ಬಂದು ಬಾಗಿಲು ತಟ್ಟಿದ. ಎರಡೇ

ಮಾತಿನಲ್ಲಿ "ತಂದೆ ಹೋಗಿ ಬಿಟ್ಟರು" ಎಂದ. "ಅಯ್ಯೋ ನಾನೆಂತಹ ಪಾಪಿ ಈ ಕೊನೆಯ ಘಳಿಗೆಯಲ್ಲಿ ತಂದೆಯಬಳಿ ಇದ್ದು ಶುಶ್ರೂಷೆಮಾಡದೆ ಹೋದೆ ನಲ್ಲ ! ಪಶುವಿನಂತೆ ಕಾಮಕ್ಕೆ ಬಲಿಯಾದೆನಲ್ಲ !" ಎಂದು ಹಲುಬಿದ ಮೋಹನದಾಸ. ನೊಂದು ಕುಸಿದುಬಿಟ್ಟ. ಈ ನಾಚಿಕೆಗೇಡಿನ ವರ್ತನೆಯಿಂದ ಹೃದಯ ಹಿಂಡಿದಂತಾಯಿತು. ತಂದೆಯ ಕೊನೆಯ ದಿನಗಳ ನಿರ್ಮಲ ಪ್ರೇಮದ ನೆನಪಾಯಿತು. ಕಲಿಸಿದ ಪಾಠ ಉಬ್ಬಳಿಸಿ ಬಂತು. ಮನಸ್ಸು ಮೊರೆಯುತ್ತಲೇ ಇತ್ತು. ಜೀವನದ ಕೊನೆಯವರೆಗೂ ಈ ಪ್ರಸಂಗ ನೋವಿನ ನೆನಪಾಗಿಯೇ ಉಳಿಯಿತು. ಅಂದೇ ಈ ಧೀರಬಾಲಕ ದೀಕ್ಷೆ ತೊಟ್ಟ. ಇನ್ನು ಈ ಪಶುವರ್ತನೆ ಬಿಟ್ಟು ನಿರ್ಮಲ ಪ್ರೇಮ ಸಾಧನೆ ಮತ್ತು ಸೇವಾನಿಷ್ಠ ಜೀವನ ನಡೆಸಲು ನಿರ್ಧರಿಸಿ ಎಂದೂ ಹಿಂಜರಿಯದೆ ಮುಂದೆ ಸಾಗುತ್ತಲೇ ಹೋದ. ಸತಿ ಕಸ್ತೂರಿಬಾ ಒತ್ತಾಸೆಯಾಗಿನಿಂತು ಸಹಧರ್ಮ ಚಾರಿಣಿಯಾದಳು.

ರಾಜಕೋಟೆಗೆ ಬಂದಮೇಲೆ ಮೋಹನದಾಸ ಪ್ರೌಢಶಾಲೆಯ ಶಿಕ್ಷಣದ ಜೊತೆಯಲ್ಲೇ ಮನೆಯ ಧಾರ್ಮಿಕ ವಾತಾವರಣದಲ್ಲಿ ಮಿಂದು ತನ್ನ ಶೀಲ ವನ್ನೂ ಬೆಳೆಸಿಕೊಂಡ. ದಾದಿ ರಂಭೆ ರಾಮನಾಮ ಪಠನಮಾಡಿಸಿ ನಿರ್ಭಯ ತೆಯನ್ನು ಕಲಿಸಿದ್ದಳು. ಆಕೆಯ ನೆನಪು ಕೊನೆಯವರಿಗೂ ಉಳಿಯಿತು. ಪೋರ್‌ಬಂದರಿನಲ್ಲಿ ತುಳಸಿದಾಸ ರಾಮಾಯಣವನ್ನು ತಂದೆ ಕರಮಚಂದರಿ ಗಾಗಿ ಓದಿ ಹೇಳುತ್ತಿದ್ದ ಪ್ರಸಿದ್ಧ ಪಂಡಿತ ಲಾಢ ಮಹಾರಾಜ್ ಬಾಲಕ ಗಾಂಧಿಯ ಮೇಲೆ ಮಾಡಿದ ಪರಿಣಾಮ ಅಗಾಧ. ಅವರು ಸುಶ್ರಾವ್ಯವಾಗಿ ಹಾಡುತ್ತಿದ್ದ 'ದೋಹಾ ಗಳೂ 'ಚೌಪಾಯಿ ಗಳೂ ಮನಸ್ಸಿನಲ್ಲಿ ಅಚ್ಚೊತ್ತಿ ನಿಲ್ಲುತ್ತಿದ್ದವು. ಆತ ತನ್ನ ಕುಷ್ಠರೋಗವನ್ನು ರಾಮನಾಮ ಭಕ್ತಿಯಿಂದಲೇ ಗುಣಪಡಿಸಿಕೊಂಡಿದ್ದ ಎಂಬ ಪ್ರತೀತಿಯೂ ಇತ್ತು. ರಾಜಕೋಟೆಯ ಮನೆಯಲ್ಲಿ ಮುಂದೆ ಹಾಗೆಯೇ ಭಾಗವತ ಪಠಣ ನಡೆಯಿತು. ಅದೂ ಕಿವಿಯಮೇಲೆ ಬೀಳುತ್ತಿತ್ತು.

ಇತರ ಧರ್ಮಗಳಲ್ಲೂ ಗೌರವ ಹುಟ್ಟಲು ತಂದೆ ತಾಯಿಗಳೇ ಕಾರಣ ರಾದರು. ಅವರು ತಪ್ಪದೆ ಹವೇಲಿಗಳಿಗೆ ಹೋಗುತ್ತಿದ್ದರು. ಜೈನ ಮುನಿ

ಗಳು ಮನೆಗೆ ಬರುತ್ತಿದ್ದರು. ತಂದೆಯವರ ಮುಸಲ್ಮಾನ ಮತ್ತು ಪಾರ್ಸಿ ಗೆಳೆಯರು ಮನೆಯಲ್ಲಿ ಧಾರ್ಮಿಕ ಜಿಜ್ಞಾಸೆಗಳನ್ನು ನಡೆಸುತ್ತಿದ್ದರು. ಯಾರಲ್ಲೂ ಯಾವ ಭೇದಭಾವವೂ ಇರುತ್ತಿರಲಿಲ್ಲ. ಸೌಹಾರ್ದ ಎದ್ದು ಕಾಣುತ್ತಿತ್ತು.

ಒಂದು ಅಂಶ ಮೋಹನದಾಸನಿಗೆ ಮನದಟ್ಟಾಯಿತು. ನೀತಿ ನಡತೆಗಳಿಗೆ ಸುಭದ್ರ ಆಧಾರ ಸತ್ಯನಿಷ್ಠೆ. ಈ ಅರಿವು ಏಕಪ್ರಕಾರವಾಗಿ ಬೆಳೆಯುತ್ತಲೇ ಸಾಗಿತು. ಅದರ ಅರ್ಥವೂ ವಿಶಾಲವಾಗ ತೊಡಗಿತು. ಒಂದು ಗುಜರಾತಿ ಭಕ್ತಿಗೀತೆ ಹೃದಯ ಮನಸ್ಸುಗಳನ್ನು ಪೂರ್ಣವಾಗಿ ಆವರಿಸಿತು. 'ನನ್ನ ಅಂತರ್ಯವನ್ನೇ ಪರಿವರ್ತಿಸಿತು' ಎಂದಿದ್ದಾರೆ ಆತ್ಮಕಥೆಯಲ್ಲಿ. ಅದರ ಕನ್ನಡ ಅನುವಾದ ಹೀಗಿದೆ :—

"ಜೊಗಸೆ ನೀರಿತ್ತವಗೆ ತೃಪ್ತಿಯುಪ್ಪಂತುಣಿಸು
ಒಳ್ಳಿತನು ಬಯಸಿದಗೆ ಭಕುತಿಯಿಂ ಬಾಗು
ಕಿರುಗಾಸ ನಿತ್ತವಗೆ ತಿರುಗಿ ಚಿನ್ನವ ನೀಡು
ಪ್ರಾಣವಂ ಕಾಯ್ದವಗೆ ಪ್ರಾಣದಾನವ ಮಾಡು
ಕಿರು ನೆರವಿಗೂ ಹಿರಿಯ ಸೇವೆಯ ಸಲಿಸು
ಪ್ರಾಜ್ಞರಾದವರ ನುಡಿ ಅಂತೆಯೇ ಅವರ ನಡೆ
ಜ್ಞಾನಿಗಳು ಮಾನವರ ಭೇದಗಳ ನೆನೆಸದೆಯೆ
ಕೇಡಿಗುಂ ಸಂತಸದಿ ಶುಭವನೆಸಗುವರು."

(ಹಿಂದಿಯಿಂದ ಅನುವಾದ)

1887ರಲ್ಲಿ ಪ್ರೌಢಶಾಲೆಯ ಕೊನೆಯ ಪರೀಕ್ಷೆಯಲ್ಲಿ ತೇರ್ಗಡೆಯಾದ ಮೋಹನದಾಸ ಭಾವನಗರದಲ್ಲಿ ಕಾಲೇಜು ಸೇರಿದ. ಪದವಿ ತರಗತಿಗಳ ವ್ಯಾಸಂಗದಲ್ಲಿ ಏನೂ ಆಸಕ್ತಿ ಹುಟ್ಟಲಿಲ್ಲ. ವರ್ಷದ ಮಧ್ಯದಲ್ಲೇ ರಾಜಕೋಟೆಗೆ ಹಿಂತಿರುಗಿಬಿಟ್ಟ. ಲಂಡನ್ನಿಗೆ ಹೋಗಿ ವಕೀಲಿ ಪರೀಕ್ಷೆಗೆ ಕುಳಿತುಕೊಳ್ಳಲು ನಿರ್ಧರಿಸಿದ.

(iii) ಲಂಡನ್ನಿನಲ್ಲಿ ವಿದ್ಯಾರ್ಥಿ

"ಸಮುದ್ರಯಾನ ಮಾಡಿ ವಿದೇಶದಲ್ಲಿ ವಾಸಿಸಿದರೆ ಧರ್ಮಭ್ರಷ್ಟರಾಗುತ್ತಾರಂತೆ. ಹಿರಿಯರು ಒಪ್ಪುತ್ತಾರೆಯೇ ? ಕೂಡದು" ಎಂದರು ತಾಯಿ ಪುತಲಿಬಾಯಿ. ತಾಯಿ ಒಪ್ಪಿದರೆ ಹೋಗು ಎಂದು ಹೇಳಿ ಜಾರಿಕೊಂಡರು ಚಿಕ್ಕಪ್ಪ. ಅಣ್ಣ ಲಕ್ಷ್ಮಿದಾಸ್ ಸಹಾನುಭೂತಿಯಿಂದ ಹೇಗಾದರೂ ಹಣ ಒದಗಿಸಲು ಮುಂದೆ ಬಂದರು. ತಂದೆಯ ಸ್ನೇಹಿತರಾಗಿದ್ದ ಉದಾರಚರಿತ ವೈದಿಕವೃದ್ಧ ಮಾವ್‌ಜಿಧವೆ "ಈ ಕುಟುಂಬದಲ್ಲಿನ ದಿವಾನ್‌ಗಿರಿಯ ಪರಂಪರೆ ಉಳಿಸಲು ಮೋಹನದಾಸ ಮೂರು ವರ್ಷಗಳಲ್ಲೇ ಲಂಡನ್ ಪದವಿ ಪಡೆದು ವಕೀಲನಾಗಿ ಹಿಂತಿರುಗಬೇಕು. ಮಂತ್ರಿಪದವಿ ತಾನಾಗಿ ಬರುತ್ತದೆ" ಎಂದು ವಾದಿಸಿದರು.

ತಾಯಿಗೆ ಮಾತ್ರ ಶಂಕೆ ಪರಿಹಾರವಾಗಿರಲಿಲ್ಲ. ವಿದೇಶದಲ್ಲಿ ಜನ ಕೆಟ್ಟು ಹೋಗುತ್ತಾರೆ: ಮಾಂಸ. ಹೆಂಡ. ವ್ಯಭಿಚಾರಗಳಂತಹ ಅನಾಚಾರಗಳಿಗೆ ಬಲಿಯಾಗಿ ನೀತಿ ಭ್ರಷ್ಟರಾಗುತ್ತಾರೆ ಎಂದು ಆಕೆ ಕೇಳಿದ್ದಳು. ಅಷ್ಟು ದೂರದೇಶದಲ್ಲಿರುವಾಗ ಅಡ್ಡದಾರಿ ಹಿಡಿಯುವುದಿಲ್ಲ ಎಂದು ಹೇಗೆ ನಂಬಲಿ ಎಂದಳು. ಆಕೆ ವಿಶ್ವಾಸವಿಟ್ಟಿದ್ದ ಜೈನಮುನಿ ಬೇಚರ್‌ಜಿಸ್ವಾಮಿ ಮೋಹನದಾಸನ ನೆರವಿಗೆ ಬಂದರು. "ನಿನ್ನ ಮಗನಿಂದ ಮೂರು ಪ್ರತಿಜ್ಞೆಗಳನ್ನು ಮಾಡಿಸುತ್ತೇನೆ. ಅವನಿಗೆ ಹೋಗಲು ಅನುಮತಿ ಕೊಡಿ" ಎಂದರು. ಹೆಂಡ ಕುಡಿಯುವುದಿಲ್ಲ. ಮಾಂಸ ತಿನ್ನುವುದಿಲ್ಲ. ಹೆಣ್ಣಿನ ಸಹವಾಸ ಮಾಡುವುದಿಲ್ಲ ಎಂದು ಆಣೆಯಿಟ್ಟು ತಾಯಿಯ ಮುಂದೆ ಮೋಹನದಾಸ ಪ್ರತಿಜ್ಞೆಮಾಡಿದ. ಮಗನ ಸತ್ಯನಿಷ್ಠೆಯಲ್ಲಿ ಭರವಸೆಯಿದ್ದ ತಾಯಿಗೆ ಸಮಾಧಾನವಾಯಿತು. ಪುತಲಿಬಾಯಿ ಒಪ್ಪಿಗೆಯಿತ್ತಳು. ಆ ಸಮಯಕ್ಕೆ ಹೆಂಡತಿ ಕಸ್ತೂರಿಬಾ ಒಂದು ಗಂಡು ಮಗುವಿನ ತಾಯಿ. ಅವರನ್ನು ತಾಯಿಯ ರಕ್ಷಣೆಯಲ್ಲಿ ಬಿಟ್ಟು ದೃಢಮನಸ್ಸಿನಿಂದ ಲಂಡನ್ನಿಗೆ ಹೊರಡಲು ಬೊಂಬಾಯಿ ತಲುಪಿ ಹಡಗಿನ ಪ್ರಯಾಣಕ್ಕೆ ಸಿದ್ಧಮಾಡಿಕೊಂಡ. ಅಣ್ಣನೂ ಜೊತೆಯಲ್ಲಿದ್ದ.

ಬೊಂಬಾಯಿನಲ್ಲಿ ಮತ್ತೊಂದು ಕುತ್ತುಕಾದಿತ್ತು. ಅವರ ಮೋಢ ಬನಿಯಾ ಜಾತಿಯ ಸಾಂಪ್ರದಾಯಿಕ ಮುಖ್ಯರು ಸೇರಿ ಸಮುದ್ರಯಾನ ಮಾಡುವುದು ತಮ್ಮ ಜಾತಿ ಧರ್ಮದಲ್ಲಿ ನಿಷಿದ್ಧ. ಗಾಂಧಿ ಹೊರಟರೆ ಜಾತಿಯಿಂದ ಬಹಿಷ್ಕಾರ ಹಾಕುತ್ತೇವೆ ಎಂದು ನಿರ್ಣಯಿಸಿ ಬಿಟ್ಟರು. ಬಂಧುಗಳೆಲ್ಲ ಹೆದರಿದ್ದರು. ಬಾಲಕ ಗಾಂಧಿ ದಿಟ್ಟತನದಿಂದ ಈ ಕುರುಡು ನಂಬಿಕೆಯನ್ನು ನಿರಾಕರಿಸಿ 1888ನೇ ಸೆಪ್ಟೆಂಬರ್ ನಾಲ್ಕರಂದು ಲಂಡನ್ನಿಗೆ ಪ್ರಯಾಣಬೆಳೆಸಿದ. ಹಡಗಿನಲ್ಲಿ ಜುನಘಡದ ವಕೀಲ ಮುಜುಂದಾರ್ ಎಂಬ ಗಣ್ಯರ ಸಹವಾಸ ಸಿಕ್ಕಿತು. ಪ್ರಯಾಣದಲ್ಲಿ ಏನೂ ತೊಂದರೆಯಾಗಲಿಲ್ಲ.

ಲಂಡನ್ನಿಗೆ ಸೆಪ್ಟೆಂಬರ್ ಕೊನೆಗೆ ಬಂದು ತಲುಪಿದಾಗ ಮೋಹನದಾಸನಿಗೆ ಸ್ವಲ್ಪಗಾಬರಿ. ಉಡುಪು, ಭಾಷೆ, ಊಟ ಎಲ್ಲವೂ ಸಮಸ್ಯೆಯೆನಿಸಿತು. ಮಜುಮ್‌ದಾರ್ ಸ್ವಲ್ಪಧೈರ್ಯ ತುಂಬಿದರು. ಆ ಕಾಲಕ್ಕೆ ಲಂಡನ್ನಿನಲ್ಲಿ ಪ್ರಸಿದ್ಧ ಭಾರತೀಯರೆನಿಸಿದ್ದ ದಾದಾಭಾಯಿ ನವರೋಜಿ, ರಾಜಕುಮಾರ ರಣಜಿತ್‌ಸಿಂಹಜಿ, ದಲಪತ್‌ರಾಮ್ ಶುಕ್ಲ, ಡಾಕ್ಟರ್ ಪಿ. ಜೆ. ಮೆಹ್ತಾ ಅವರುಗಳಿಗೆ ಪರಿಚಯ ಪತ್ರಗಳನ್ನು ಬರೆಸಿಕೊಂಡು ತಂದಿದ್ದ. ಆದರೆ ಸಲಿಗೆಯಿಂದ ಅವರ ನೆರವು ಬೇಡಲು ನಾಚಿಕೆ. ಮೊದಲು ಮಜುಮ್‌ದಾರರೊಡನೆಯೇ ಒಂದು ಪ್ರಸಿದ್ಧ ಹೋಟಲಿನಲ್ಲಿಳಿದುಕೊಂಡು ದುಬಾರಿ ಖರ್ಚು ನೋಡಿ ಕೂಡಲೇ ಒಂದು ಕೋಣೆ ಬಾಡಿಗೆಗೆ ಪಡೆದು ಬದಲಾಯಿಸಿದ. ಡಾ॥ ಮೆಹ್ತಾ ಅವರ ನೆರವಿನಿಂದ ಒಬ್ಬ ಇಂಗ್ಲೀಷ್ ಸ್ನೇಹಿತನ ಅತಿಥಿಯಾಗಿರಲು ಅನುಮತಿ ಸಿಕ್ಕಿತು. ಗಾಂಧಿಗೆ ತುಂಬ ಸಂತೋಷವಾಯಿತು. ಆತ ಪ್ರೀತಿಯ ಅಣ್ಣನಂತೆ ನಡೆದುಕೊಂಡ. ಇಂಗ್ಲೀಷ್ ಸಮಾಜದ ರೀತಿ ನೀತಿಗಳ ಪರಿಚಯಮಾಡಿಸಿದ. ಊಟದ್ದೇ ಒಂದು ಸಮಸ್ಯೆಯಾಗಿತ್ತು ಮೋಹನದಾಸನಿಗೆ. ಮಾಂಸಬಿಟ್ಟರೆ ಕೇವಲ ಎರಡು ತುಂಡು ಬ್ರೆಡ್ ಸಿಗುತ್ತಿತ್ತು. ಒಮ್ಮೊಮ್ಮೆ ಹಾಲೂ ಇರುತ್ತಿರಲಿಲ್ಲ. ಮನೆಯಾತ ಸಿಟ್ಟು ಮಾಡಿದ. ಪ್ರೀತಿಯಿಂದಲೇ ಹೇಳಿದ "ಇಲ್ಲಿನ ಪರಿಸರವೇ ಗೊತ್ತಿಲ್ಲದ ನಿರಕ್ಷರಸ್ಥಳಾದ ತಾಯಿಗೆ ಕೊಟ್ಟ ವಚನಕ್ಕೆ ಏನು ಬೆಲೆ? ಕಾನೂನು ಕಡತದಲ್ಲಿ ಅದಕ್ಕೆ ಮಾನ್ಯತೆಯೇ ಇಲ್ಲ. ನೀನು ಹಿಂದೆ ಮಾಂಸ ತಿನ್ನುತ್ತಿದ್ದೆ ಎನ್ನುತ್ತಿ ಈಗೇಕೆ



ಲಂಡನ್ನಿನಲ್ಲಿ ವಿದ್ಯಾರ್ಥಿಯಾಗಿ — 1890

ಈ ಹಠ". ದಿನನಿತ್ಯವೂ ವಾದಮಾಡುತ್ತಲೇ ಇದ್ದ. ಮೋಹನದಾಸ ಮಾತ್ರ ವಿಚಲಿತನಾಗಲಿಲ್ಲ. ಭಗವಂತನಲ್ಲಿ ಶ್ರದ್ಧೆಯಿಟ್ಟು ಕೊಟ್ಟವಚನ ಪಾಲಿಸಲು ದೃಢಸಂಕಲ್ಪಮಾಡಿದ್ದ "ನಾನು ನಿನ್ನೊಡನೆ ವಾದಮಾಡಲಾರೆ ಆದರೆ ತಾಯಿಗೆ ಕೊಟ್ಟವಚನ ಮಾತ್ರ ನನಗೆ ಪವಿತ್ರ, ಅದನ್ನು ಮರೆಯಲಾರೆ. ನಿನ್ನ ಪ್ರೀತಿಯನ್ನು ಬಲ್ಲೆ ಆದರೆ ಈ ವಿಷಯದಲ್ಲಿ ಮಾತ್ರ ನಾನು ಮಣಿಯು ಲಾರೆ" ಎಂದು ಗೆಳೆಯನಿಗೆ ತಿಳಿಸಿ ಬಿಟ್ಟ. ಆ ಸದ್ಗೃಹಸ್ತ ಅಲ್ಲಿಂದಾಚೆ ಆ ವಿಷಯ ಎತ್ತುವುದಿಲ್ಲ ಎಂದು ನಿರ್ಣಯಿಸಿದ.

ಅದೃಷ್ಟವಶದಿಂದ ಒಂದು ಪ್ರಸಿದ್ಧ ಸಸ್ಯಾಹಾರಿ ಮಂದಿರ ಸಿಕ್ಕಿತು. ಗಾಂಧಿಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ಸ್ಥಳದಲ್ಲಿ ಒಂದು ಸಸ್ಯಾಹಾರಿಗಳ ಸಂಘವೇ ಇತ್ತು. ಸಸ್ಯಾಹಾರದ ಶ್ರೇಷ್ಠತೆಯನ್ನು ವೈಜ್ಞಾನಿಕವಾಗಿ ಪ್ರತಿಪಾದಿಸುವ ಸಾಹಿತ್ಯ ಗ್ರಂಥಗಳು ಹೇರಳವಾಗಿದ್ದವು. ಆ ದಿನ ಅಲ್ಲಿ ಗಾಂಧಿ ತೃಪ್ತಿಯಾಗುವಂತೆ ಊಟ ಮಾಡಿದ. ಭಗವಂತನೇ ರಕ್ಷಿಸಿದ ಎಂದು ಕೊಂಡ. ಅಲ್ಲಿನ ಮಿ. ಸಾಲ್ಟ್ ಎಂಬುವರ ಗ್ರಂಥ ಬಹುವಾಗಿ ಹಿಡಿಸಿತು. ಇನ್ನೂ ಅಸ್ಪಷ್ಟವಾಗಿದ್ದ ಒಂದು ಆಳವಾದ ಅರಿವು ಮೂಡಿ ಮಾನವ ಸಸ್ಯಾಹಾರಿಯಾಗಿ ಜೀವಿಸುವುದೇ ಸಹಜವಾದ ನೈಸರ್ಗಿಕ ನಿಯಮ, ಅವನ ಆತ್ಮಪುಷ್ಟಿಗೆ ಇದು ಅನಿವಾರ್ಯ ಎಂದು ತಿಳಿದ. ಅಲ್ಲಿಂದಾಚೆ ಈ ಜೀವನ ಮಾರ್ಗದ ಅವಿರತ ಪ್ರಚಾರಕನಾಗಿಬಿಟ್ಟ.

ಸಸ್ಯಾಹಾರದ ಅಭ್ಯಾಸಕ್ಕೆ ಚ್ಯುತಿಬಾರದಂತೆ ಆ ಪಾಶ್ಚಾತ್ಯ ಸಮಾಜದಲ್ಲಿನ ಸಭ್ಯನಡವಳಿಕೆಗಳನ್ನೆಲ್ಲ ಅಭ್ಯಾಸ ಮಾಡಲು ಮೋಹನದಾಸ ತೀರ್ಮಾನಿಸಿದ. ಭಾರತದಲ್ಲಿ ಹೊಲೆದ ಉಡುಪು ಬಿಟ್ಟು ಲಂಡನ್ನಿನ ಪ್ರತಿಷ್ಠಿತ ಅಂಗಡಿಗಳ ಉಡುಪನ್ನೇ ಕೊಂಡ. ಸರಪಣಿಯುಳ್ಳ ಜೇಬುಗಡಿಯಾರ ತುಂಡು ಅಂಗಿಯಮೇಲೆ ಥಳಥಳಿಸಿತು. ಆಧುನಿಕ ಇಂಗ್ಲೀಷ್ ಹ್ಯಾಟು ತಲೆಯೇರಿತು. ತುಂಡು ಕೂದಲಿನ ಬಾಚಿದ ತಲೆ, ಇವಲ್ಲದೆ ಹೊಸ ಕಲಿಕೆಗಳೂ ಬೇಕೆನಿಸಿತು. ಸಾಮೂಹಿಕ ಕೂಟಗಳಲ್ಲಿ ನೃತ್ಯಮಾಡಲು ಕಲಿತ. ಫ್ರೆಂಚ್ ಭಾಷೆ ಸ್ವಲ್ಪ ತಿಳಿದಿರಬೇಕು, ಅಲ್ಲಿನ ಸಂಗೀತ ಬರಬೇಕು, ಭಾಷಣ ಮಾಡುವ ಅಭ್ಯಾಸವಿರ

ಬೇಕು ಎಂದು ಅವುಗಳನ್ನು ಕಲಿಸುವ ತರಗತಿಗಳಿಗೆ ಸೇರಿದ. ಎಲ್ಲ ಸಮಯ ವೂ ಇವಕ್ಕೇ ಹೋಗುತ್ತಿತ್ತು. ಕೃತಕ ಇಂಗ್ಲೀಷ್ ನಾಗರಿಕನ ಪೂರ್ಣಾವ ತಾರನಾಗಬೇಕೆಂಬ ಬಯಕೆ ಬಲವಾಗಿತ್ತು. ಪ್ರೀತಿಯ ಮಿತ್ರನೊಬ್ಬ ಎಚ್ಚ ರಿಸಿದ "ನೀನೇನು ಶಾಶ್ವತವಾಗಿ ಇಲ್ಲಿ ನೆಲೆಸುತ್ತಿದ್ದೀಯಾ ? ಮೂರು ವರ್ಷ ವಿದ್ಯಾರ್ಥಿಯಾಗಿ ಏನು ಕಲಿಯಲು ಬಂದಿದ್ದೀಯೋ ಅದನ್ನು ಶ್ರದ್ಧೆಯಿಂದ ಕಲಿತು ಹಿಂತಿರುಗು, ಮಿಕ್ಕೆಲ್ಲ ಕೇವಲ ಡಂಭಾಚಾರ" ಎಂದ. ಮೋಹನ ದಾಸನಿಗೆ ತನ್ನ ಕರ್ತವ್ಯದ ಬೋಧೆಯಾಯಿತು. ಮೂರೇ ತಿಂಗಳಿನಲ್ಲಿ ತನ್ನ ಮೂರ್ಖತನ ಅರಿವಾಗಿ ಅವುಗಳಲ್ಲೆಲ್ಲ ಆಸಕ್ತಿ ಮಾಯವಾಯಿತು. ತನ್ನ ಸಹಜ ರೀತಿಯ ಭಾರತೀಯ ನಡವಳಿಕೆಯಿಂದ ಏನೂ ಅವಮಾನವಿಲ್ಲ ಎನಿ ಸಿತು. ವೆಚ್ಚವೂ ಕಡಮೆಯಾಯಿತು, "ಅಂತೂ ಆಗ ನಾನು ನಿಜವಾಗಿ ವಿದ್ಯಾರ್ಥಿಯಾದೆ". ಎಂದಿದ್ದಾರೆ ಆತ್ಮಕಥೆಯಲ್ಲಿ

ಜೀವನವನ್ನು ಸರಳಗೊಳಿಸಿ. ವೆಚ್ಚತಗ್ಗಿಸಿ, ಪ್ರೀತಿಯ ಅಣ್ಣನಿಗೆ ಹೊರೆ ಯಾಗದಂತೆ ಎಲ್ಲ ರೀತಿಯ ಪರಿವರ್ತನೆಗಳನ್ನೂ ವಿದ್ಯಾರ್ಥಿಗಾಂಧಿ ಮಾಡಿ ಕೊಂಡ. ಸಣ್ಣ ಕೋಣೆಗೆ ಬದಲಾಯಿಸಿ ತಾನೇ ಅಡಿಗೆಮಾಡಲು ತೊಡಗಿದ. ಎಷ್ಟೋಕಾಲ ಉಳಿತಾಯವಾಯಿತು. ಓದಲು ಸಮಯ ಸಿಕ್ಕಿತು. ಬ್ಯಾರಿ ಸ್ಟರ್ ಪರೀಕ್ಷೆಯಲ್ಲದೆ ಲಂಡನ್ ಮೆಟ್ರಿಕ್ ಪರೀಕ್ಷೆಗೂ ಕುಳಿತ. ಲ್ಯಾಟಿನ್ ಭಾಷೆ ಅಭ್ಯಾಸಮಾಡಿದ. ರೋಮನ್ನರ ಕಾನೂನುಪದ್ಧತಿ ವ್ಯಾಸಂಗಮಾ ಡಲು ಅನುಕೂಲವಾಯಿತು. ಪದೇ ಪದೇ ತನ್ನ ಕುಟುಂಬವರ್ಗದವರು ಅದೆಷ್ಟು ತ್ಯಾಗಮಾಡಿ ತನ್ನ ವೆಚ್ಚಗಳಿಗಾಗಿ ಹಣ ಕಳುಹಿಸುತ್ತಿದ್ದಾರೆ ಎಂದು ಕೃತಜ್ಞತೆಯಿಂದ ಸ್ಮರಿಸಿದ, "ದಿನಕ್ಕೆ ಒಂದು ಷಿಲ್ಲಿಂಗ್ ಮೂರು ಪೆನ್ನಿಗಳಲ್ಲಿ ನನ್ನ ಬೇಡಿಕೆಗಳನ್ನೆಲ್ಲ ಪೂರೈಸಿಕೊಳ್ಳಲು ಸಮರ್ಥನಾದೆ. ಈ ಪರಿವರ್ತನೆ ಯಿಂದ ಯಾವ ರೀತಿಯಲ್ಲೂ ಬಾಳು ನೀರಸವಾಗಲಿಲ್ಲ. ಬದಲಾಗಿ ಆನಂದ ಉತ್ಸಾಹಗಳು ಅಂತರ್ಯದಲ್ಲಿ ತುಂಬಿದವು. ಸತ್ಯನಿಷ್ಠ ಜೀವನದ ಅನುಭವ ವಾಯಿತು" ಎಂದಿದ್ದಾರೆ.

ಕಾಲ ಉರುಳುತ್ತಿತ್ತು, ಮೋಹನನಿಗೆ ತನ್ನ ಜೀವನದಲ್ಲಿ ಅನೇ ಪರಿವರ್ತನೆಗಳನ್ನು ಮಾಡಿಕೊಳ್ಳುವ ಆಕಾಂಕ್ಷೆ ಹೆಚ್ಚುತ್ತಿತ್ತು. ಆಹಾರದಲ್ಲಿ

ಅನೇಕ ಪ್ರಯೋಗಗಳಾದವು. ಕಾಫಿ. ಟೀ, ಪೊಟ್ಟೆ ಮೊದಲಾದುವು ವರ್ಜ್ಯವಾದವು. ತರಕಾರಿ ಹಾಲು ಹೆಚ್ಚಿದವು. ನಾಲಗೆಯ ರುಚಿಗೆ ಸೋಲದೆ ಆರೋಗ್ಯ ನಿಯಮಗಳಿಗನುಗುಣವಾಗಿ ಊಟ, ತಿಂಡಿ ನಿಯಂತ್ರಿಸುವ ಅಮೂಲ್ಯ ಶಿಕ್ಷಣ ದೊರೆಯಿತು. ಮೋಹನನಿಗೆ ಆಗುತ್ತಿದ್ದ ಆನಂದಕ್ಕೆ ಪಾರವೇ ಇರಲಿಲ್ಲ.

ಪಾಶ್ಚಾತ್ಯ ಸಮಾಜದಲ್ಲಿ ಪುರುಷರು ಮಹಿಳೆಯರು ಹೆಚ್ಚು ಸಲಿಗೆಯಿಂದ ನಡೆದುಕೊಳ್ಳುವುದು ರೂಢಿ. ಭಾರತದಲ್ಲಿ ಹಾಗಿಲ್ಲ. ಈ ಸಲಿಗೆಯನ್ನು ಅಪಾರ್ಥಮಾಡಿಕೊಂಡು ಅನೇಕ ಭಾರತೀಯ ವಿದ್ಯಾರ್ಥಿಗಳು ಪೇಚಿಗೆ ಸಿಕ್ಕಿಕೊಳ್ಳುತ್ತಿದ್ದರು. ಆ ದೇಶದವರಿಗೆ ಸಹಜವಾದುದು ನಮ್ಮ ಸಭ್ಯತೆಗೆ ಸಾಧುವಲ್ಲ ಎಂದು ತಿಳಿಯುತ್ತಿರಲಿಲ್ಲ. ಮದುವೆಯಾದವರೂ ಕಾಲು ಜಾರುತ್ತಿದ್ದರು. ಮೋಹನನಿಗೆ ಅನೇಕ ವೇಳೆ ಅವನ ನಾಚಿಕೆಯ ಸ್ವಭಾವವೇ ರಕ್ಷಣೆಯಾಯಿತು. ಮೋಜಿನ ಮಿತ್ರಕೂಟಗಳಿಂದ ದೂರವೇ ಉಳಿದುಬಿಡುತ್ತಿದ್ದ. ಆದರೆ ಒಂದು ಸಂದರ್ಭದಲ್ಲಿ ತನಗೆ ಮದುವೆ ಆಗಿದೆ ಎಂದು ಹೇಳಿಕೊಳ್ಳಲು ನಾಚಿ ಇಕ್ಕಟ್ಟಿನ ಪರಿಸ್ಥಿತಿಗೆ ಸಿಕ್ಕಿಕೊಳ್ಳಬೇಕಾಯಿತು. ಸಹೃದಯ ಹಿರಿಯ ಇಂಗ್ಲೀಷ್ ಮಹಿಳೆಯೊಬ್ಬರು ತಮ್ಮ ಮನೆಗೆ ಆಗಾಗ್ಗೆ ಊಟಕ್ಕೆ ಕರೆಯುತ್ತಿದ್ದರು. ಅವರೂ ಸಸ್ಯಾಹಾರಿಗಳು. ವಿದ್ಯಾರ್ಥಿಗಾಂಧಿ ಅವಿವಾಹಿತನೆಂದು ತಿಳಿದು ಆಕೆ ಅನೇಕ ಕನ್ಯೆಯರ ಪರಿಚಯ ಮಾಡಿಸುತ್ತಿದ್ದರು. ದಿನಕಳೆದಂತೆ ಈ ಸಲಿಗೆ ಹೆಚ್ಚಾಗುತ್ತ ಕೆಲವು ಯುವತಿಯರು ಮದುವೆಯಾಗಲೂ ಬಯಸಿದರು. ಅಷ್ಟರಲ್ಲಿ ಗಾಂಧಿ ಎಚ್ಚರಗೊಂಡು ತನಗೆ ಮದುವೆಯಾಗಿದೆ ಎಂಬುದನ್ನು ನಾಚಿಕೆಯಿಂದ ಮರೆಮಾಚಿದುದು ಸರ್ವಾಪರಾಧವಾಯಿತು ಕ್ಷಮಿಸಬೇಕು. ಇನ್ನು ಮುಂದೆ ಈ ಪ್ರಸ್ತಾಪಬೇಡ ಎಂದು ಆ ಮಹಿಳೆಗೆ ಪತ್ರ ಬರೆದು ತಿಳಿಸಿಬಿಟ್ಟ. ಅವರ ಆದರಾತಿಥ್ಯಕ್ಕೆ ನಿರ್ವ್ಯಾಜ ಪ್ರೀತಿಗೆ ವಂದಿಸಿದ, ಅವರೂ ಅದನ್ನಂಗೀಕರಿಸಿ ಮದುವೆಯ ಪ್ರಸ್ತಾಪ ನಿಲ್ಲಿಸಿ ಎಂದಿನಂತೆ ಗೌರವ ಸ್ನೇಹವನ್ನುಳಿಸಿಕೊಂಡರು. ಸ್ವಚ್ಛ ಹಾರ್ದಿಕ ಗೆಳೆತನದಲ್ಲಿ ಅಸತ್ಯ ನಡವಳಿಕೆ ಸಲ್ಲದು ಎಂದು ಮನವರಿಕೆಯಾಯಿತು.

ಲಂಡನ್ನಿನಲ್ಲಿ ಎರಡನೇ ವರ್ಷದ ಕೊನೆ. ಗಾಂಧಿಯ ಪರಿಚಯ ವಲಯ ವಿಸ್ತಾರವಾಗಿತ್ತು. ಭಾರತದ ಧರ್ಮಪರಂಪರೆಯನ್ನು ಆಳವಾಗಿ ಅಧ್ಯಯನಮಾಡಿ ಮುಂದೆ ಭಾರತೀಯಳೇ ಆಗಿ ನೆಲೆಸಿ ಅಮೋಘ ಸೇವೆಸಲ್ಲಿಸಿದ ತಾಯಿ ಅನಿಬಸೆಂಟ್ ಆ ಕಾಲಕ್ಕೆ ಅಲ್ಲಿದ್ದರು. ಮ್ಯಾಡಮ್ ಬ್ಲ್ಯಾವಟ್ಸ್ಕಿ ಎಂಬ ಮಹಿಳೆ ಪ್ರಾರಂಭಿಸಿದ್ದ ಥಿಯಾಸಫಿ ಪಂಥ ಪ್ರಚಲಿತವಾಗುತ್ತಿತ್ತು. ಸುಪ್ರಸಿದ್ಧ ಇಂಗ್ಲೀಷ್ ಕವಿ ಎಡ್ವಿನ್ ಅರ್ನಾಲ್ಡ್ ಭಗವದ್ಗೀತೆ ಮತ್ತು ಬುದ್ಧ ಚರಿತ್ರೆಗಳನ್ನು ದೀರ್ಘಕಾವ್ಯಗಳನ್ನಾಗಿ ಬರೆದಿದ್ದರು. 'ಸಾಂಗ್‌ಸೆಲೆಸ್ಟಿಯಲ್' ಮತ್ತು 'ಲೈಟ್ ಆಫ್ ಏಷ್ಯಾ' ಎಂಬ ಈ ಗ್ರಂಥಗಳನ್ನು ಗಾಂಧಿ ತನ್ನಿಬ್ಬರು ಥಿಯಾಸಫಿ ಗೆಳೆಯರೊಂದಿಗೆ ಅಭ್ಯಾಸಮಾಡಿದ. ಇಪ್ಪತ್ತು ವರ್ಷದ ಮೋಹನ ಅದುವರಗೆ ಗೀತೆಯನ್ನು ಓದಿಯೇ ಇರಲಿಲ್ಲ. ಆ ಶ್ಲೋಕಗಳು ಅವನ ಮನಸ್ಸನ್ನು ಸೂರಗೊಂಡವು. ಎರಡನೇ ಅಧ್ಯಾಯದ ಒಂದು ಶ್ಲೋಕವಂತೂ ಅಚ್ಚಳಿಯದೆ ನಿಂತುಬಿಟ್ಟಿತು. ಆ ಬಗ್ಗೆ ಆತ್ಮಕಥೆಯಲ್ಲಿ ಹೀಗೆ ಬರೆದಿದ್ದಾರೆ.

> "ಹಗಲೂ ಇರುಳೂ ಕಿವಿಯಲ್ಲಿ ಅದೇ ಧ್ವನಿ. ಆಗ ತಿಳಿಯಿತು. ಭಗವದ್ಗೀತೆ ಎಂಥ ಅಮೂಲ್ಯ ಗ್ರಂಥ ಎಂದು. ಈ ಭಾವನೆ ದಿನೇ ದಿನೇ ಹೆಚ್ಚು ದೃಢವಾಯಿತು ಈಗಂತೂ ತತ್ವಜ್ಞಾನಕ್ಕೆ ಅದೇ ಸರ್ವೋತ್ತಮ ಗ್ರಂಥ ಎಂದು ತಿಳಿದಿದ್ದೇನೆ. ನಿರಾಶೆ ಕವಿದಾಗಲೆಲ್ಲ ಭಗವದ್ಗೀತೆ ನನಗೆ ಅಪಾರ ನೆರವು ನೀಡಿ ಕಾಪಾಡುತ್ತಿದೆ."

ಗಾಂಧಿ ಮೆಚ್ಚಿದ ಈ ಶ್ಲೋಕ ಮುಂದೆ ಆಶ್ರಮ ಪ್ರಾರ್ಥನೆಯ ಅವಿಭಾಜ್ಯ ಭಾಗವಾಯಿತು. ಶ್ಲೋಕ ಹೀಗಿದೆ—

> "ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ।
> ಸಂಗಾತ್ಸಂಜಾಯತೇ ಕಾಮಃ ಕಾಮಾತ್‌ಕ್ರೋಧೋಭಿ
> ಜಾಯತೇ ॥

ಕ್ರೋಧಾದ್ಭವತಿ ಸಂಮೋಹಃ ಸಂಮೋಹಾತ್‌ಸ್ಮೃತಿವಿಭ್ರಮಃ।
ಸ್ಮೃತಿಭ್ರಂಶಾತ್ ಬುದ್ಧಿನಾಶೋ ಬುದ್ಧಿನಾಶಾತ್ ಪ್ರಣಶ್ಯತಿ॥
(ಗೀತೆ ; ಅಧ್ಯಾಯ ೨ ಶ್ಲೋಕ ೬೨)

[ಇಂದ್ರಿಯಾಕರ್ಷಕ ವಿಷಯಗಳನ್ನು ಚಿಂತಿಸುತ್ತಿದ್ದರೆ ಅವುಗಳಲ್ಲಿಯೇ ಆಸಕ್ತಿ. ಅದರಿಂದ ಕಾಮ. ಕಾಮದಿಂದ ಕ್ರೋಧ ಜನಿಸುತ್ತದೆ. ಕ್ರೋಧದಿಂದ ಮೋಹ ಹುಟ್ಟಿ ವಿವೇಚನೆ ನಾಶವಾಗುತ್ತದೆ. ಅದರಿಂದ ಬುದ್ಧಿನಾಶ. ಬುದ್ಧಿನಾಶದಿಂದ ಬಾಳು ಹಾಳಾಗುತ್ತದೆ.]

ಭಾರತದ ಆರ್ಷೇಯ ಧರ್ಮ ಕೆಲವು ಪಾಶ್ಚಾತ್ಯರು ಜರಿಯುವಂತೆ ಕೇವಲ ಮೂಢ ಸಂಪ್ರದಾಯಗಳ ಕಂತೆ ಅಲ್ಲ. ಅದರಲ್ಲಿ ಅಮೂಲ್ಯ ಜ್ಞಾನಾನುಭವದ ನಿಧಿ ಇದೆ ಎಂದು ಅರಿವಾಯಿತು.

ಅದೇ ಕಾಲಕ್ಕೆ ಕೆಲವು ಸಹೃದಯ ಕ್ರೈಸ್ತ ಗೆಳೆಯರ ಸಹಾಯದಿಂದ ಬೈಬಲ್ ಓದಿದ. ಏಸುವಿನ "ಗಿರಿ ಪ್ರವಚನ" (ಸರ್ಮನ್ ಆನ್‌ದಿ ಮೌಂಟ್) ಮೋಹನದಾಸನ ಹೃದಯವನ್ನು ಸೂರೆಗೊಂಡಿತು. ಹೀಗೆ ಧಾರ್ಮಿಕ ಸಾಹಿತ್ಯ ಲೋಕಕ್ಕೆ ಪ್ರವೇಶವಾಯಿತು. ಬ್ಯಾರಿಸ್ಟರ್ ಪರೀಕ್ಷೆಗೆ ಓದುವುದರ ಜೊತೆಗೆ ಸಮಯ ಸಿಕ್ಕಾಗಲೆಲ್ಲ ಸತ್ಸಾಹಿತ್ಯ ವ್ಯಾಸಂಗಮಾಡಿದ. ದಿನವೂ ಹಲ್ಲುಜ್ಜಿ ಸ್ನಾನಮಾಡುವಾಗ ಎದುರಿನ ಗೋಡೆಗೆ ಗೀತಾ ಶ್ಲೋಕಗಳನ್ನು ಅಂಟಿಸಿ ಬಾಯಿಪಾಠ ಮಾಡುತ್ತಿದ್ದನಂತೆ. ಎಲ್ಲ ಧರ್ಮಗಳ ಮುಖ್ಯ ಗ್ರಂಥಗಳನ್ನೋದಿ ತಿಳಿಯಬೇಕು ಎಂಬ ಸಂಕಲ್ಪ ಮೂಡಿತು.

ಲಂಡನ್ನಿನ ಬ್ಯಾರಿಸ್ಟರ್ ಪರೀಕ್ಷೆ. ಅದರ ತರಗತಿಗಳು ಉಪನ್ಯಾಸಗಳು, ಎಲ್ಲವನ್ನೂ ಅಲ್ಲಿನ ವಿದ್ಯಾರ್ಥಿಗಳು ಹಗುರವಾಗಿ ಗಣಿಸುತ್ತಿದ್ದರು. ಶಿಕ್ಷಕರೂ ಶಿಷ್ಯರೂ ವರ್ಷದಲ್ಲಿ ಅನೇಕ ಮೋಜಿನ ಭೋಜನ ಕೂಟಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಾಗಿತ್ತು. ಇದು ಹೇಗೆ ವ್ಯಾಸಂಗಕ್ಕೆ ಅಗತ್ಯವೋ ಯಾರೂ ಪ್ರಶ್ನಿಸುತ್ತಿರಲಿಲ್ಲ. ಬ್ಯಾರಿಸ್ಟರ್ ಪದವಿ ಭೋಜನ ಕೂಟಗಳಲ್ಲಿ

ಸಿಕ್ಕುತ್ತದೆ ಎಂದೇ ಪ್ರತೀತಿ. ಪಠ್ಯಪುಸ್ತಕಗಳನ್ನು ಗಂಭೀರವಾಗಿ ಯಾರೂ ವ್ಯಾಸಂಗ ಮಾಡುತ್ತಿರಲಿಲ್ಲ. ಟಿಪ್ಪಣಿ ಪುಸ್ತಕಗಳೇ ಪರೀಕ್ಷೆಗಳ ಕೈಪಿಡಿ, ಗಾಂಧಿಗೆ ಇದೆಲ್ಲ ಆತ್ಮವಂಚನೆ ಎನಿಸಿತು. ತಾನುಕೊಂಡ ಮೂಲ ಸಾಹಿತ್ಯ ಗ್ರಂಥಗಳನ್ನು ಶ್ರದ್ಧೆಯಿಂದ ಓದಿ ತಿಳಿದುಕೊಂಡ. ರೋಮನ್ ನ್ಯಾಯಶಾಸ್ತ್ರ ಕಲಿಯಲು ಲ್ಯಾಟಿನ್‌ಭಾಷೆ ಅಭ್ಯಾಸಮಾಡಿದ. ವರ್ಷ ವರ್ಷವೂ ಯಶಸ್ವಿ ಯಾಗಿ ತೇರ್ಗಡೆಯಾದ. ಆದರೆ ಭಾರತದಲ್ಲಿ ವಕೀಲನಾಗಲು ಹಿಂದೂ ನ್ಯಾಯಶಾಸ್ತ್ರ, ಮಹಮ್ಮದೀಯ ಕಾನೂನುಗಳು ಮುಂತಾದವುಗಳ ಗಂಧವೇ ಇರಲಿಲ್ಲ. ಕಾರಣ ಇಲ್ಲಿನ ಯಾವ ಕಾನೂನು ವಿದ್ಯಾಲಯದ ಪದ ವಿಗೂ ಅವನು ಕುಳಿತಿರಲಿಲ್ಲ. ಶ್ರೀ ದಾದಾಭಾಯಿ ನವರೋಜಿ ಫಿರೋಜ್ ಷಾ ಮೆಹ್ತಾ ಅಂಥವರು ಮಾರ್ಗದರ್ಶನ ಮಾಡುತ್ತೇವೆಂದರೂ ತನಗೆ ಹೆಚ್ಚು ತಿಳಿಯದು ಎಂಬ ಸಂಕೋಚದಿಂದ ಅವರಲ್ಲಿಗೆ ಹೋಗಲಿಲ್ಲ. ವಿದ್ಯಾರ್ಥಿ ಪ್ರಿಯರಾಗಿದ್ದ ವಕೀಲ ಫ್ರೆಡರಿಕ್ ಪಿನ್‌ಕಟ್ ಮೋಹನದಾಸನಿಗೆ ಧೈರ್ಯ ತುಂಬಿದರು. ಸಾಮಾನ್ಯ ನ್ಯಾಯವಾದಿಯಾಗಲು ನವರೋಜಿ ಮತ್ತು ಮೆಹ್ತಾ ಅಂಥ ಮೇಧಾವಿಗಳೇ ಆಗಬೇಕಾಗಿಲ್ಲ. ಪ್ರಾಮಾಣಿಕತೆ ಮತ್ತು ಶ್ರಮನಿಷ್ಠೆ ಇದ್ದರೆ ಸಾಕು ಎಂದರು. ಮಾನವ ಮನೋಧರ್ಮದ ಅರಿವು ಮತ್ತು ಪ್ರಾಪಂಚಿಕ ಜ್ಞಾನಗಳನ್ನು ಹೆಚ್ಚಿಸಿಕೊಳ್ಳಬೇಕು. ಮುಖ ನೋಡಿ ದೊಡನೆ ಗುಣಗ್ರಹಣ ಮಾಡುವ ಶಕ್ತಿಬೇಕು. ವಕೀಲವೃತ್ತಿಗೆ ಇವು ಮುಖ್ಯ ಎಂದು ಪಿನ್‌ಕಟ್ ಆತ್ಮೀಯತೆಯಿಂದ ಹೇಳಿಕೊಟ್ಟರು. ಗಾಂಧಿಗೆ ಇವು ಅಮೂಲ್ಯ ಸೂಚನೆಗಳಾದವು.

ಬ್ಯಾರಿಸ್ಟರ್ ಎಂ. ಕೆ. ಗಾಂಧಿ ಶ್ರೇಷ್ಠ ನ್ಯಾಯಾಲಯದ ವಕೀಲನಾ ಗಲು ಸನ್ನದು ಪಡೆದು 1891ರ ಜೂನ್‌ನಲ್ಲಿ ಮರಳಿ ಹಿಂದೂಸ್ಥಾನಕ್ಕೆ ಹೊರಟ. ಆಗ ಆತನಿಗೆ ಇಪ್ಪತ್ತೆರಡು ವರ್ಷ.

—o—

ಅಧ್ಯಾಯ ೨ - ದಾಸ್ಯದ ದಳ್ಳುರಿ

(i) "ಕೂಲಿ ಬ್ಯಾರಿಸ್ಟರ್"

ಗಾಂಧೀಜಿಯ ಹಿರಿಯಣ್ಣ ಲಕ್ಷ್ಮೀದಾಸ್ ತನ್ನ ತಮ್ಮ ಪ್ರಸಿದ್ಧ ವಕೀಲನಾಗಬೇಕು, ಧನ ಕೀರ್ತಿ ಪದವಿಗಳ ಏಣಿ ಏರಬೇಕು, ಎಂಬ ಆಸೆಯ ಗೋಪುರವನ್ನೇ ಕಟ್ಟಿಕೊಂಡಿದ್ದರು. ಅವರ ಉದಾರ ಹೃದಯದ ಸ್ಪರ್ಶ ಮೋಹನನಿಗಿತ್ತು, ಅಲ್ಲದೆ ಗಾಂಧಿ ಮನೆತನದ ಪ್ರಭಾವದಿಂದ ಮೊಕದ್ದಮೆಗಳು ಈ ಆಧುನಿಕ ಇಂಗ್ಲೀಷ್ ಕಲಿತ ಬ್ಯಾರಿಸ್ಟರ್ ಬಳಿಗೆ ತಾನಾಗಿ ಬರುತ್ತವೆ; ಇಂಗ್ಲೀಷರಂತೆಯೇ ಸೂಟು, ಬೂಟು, ಹ್ಯಾಟು ಧರಿಸಿ ಠಾಕುಠೀಕಾಗಿ ವರ್ತಿಸುತ್ತಿದ್ದ ಮೋಹನದಾಸ್ ಕ್ಷಿಪ್ರವಾಗಿ ಮೇಲೇರಿ ಬಿಡುತ್ತಾನೆ ಎಂದುಕೊಂಡರು. ಆದರೆ ಭಾರತದಲ್ಲಿ ಗೃಹಸ್ಥಜೀವನ ಪ್ರಾರಂಭಿಸಿದ ತರುಣದಲ್ಲಿ ಗಾಂಧೀಜಿಗೆ ಬಂದ ಹಲವು ವ್ಯಾವಹಾರಿಕ ಆತಂಕಗಳು ಅವರ ಬಾಳಬಟ್ಟೆಯನ್ನೇ ಬದಲಿಸಿಬಿಟ್ಟವು.

ಸಮುದ್ರಯಾನ ಮಾಡಿದವನೆಂದು ಜಾತಿಯಿಂದ ಬಹಿಷ್ಕೃತರಾಗಿದ್ದ ಗಾಂಧೀಜಿಗೆ ಸಂಬಂಧಿಕರ ಸಂಪರ್ಕ ಕಡಮೆಯಾಗಿತ್ತು. ಬಂಧುಗಳ ಮನೆಯಿಂದ ದೂರವಾಗಿಯೇ ಇರುತ್ತಿದ್ದರು. ಅದೃಷ್ಟದಿಂದ ಅಣ್ಣ-ಅತ್ತಿಗೆ, ಹೆಂಡತಿ_ಮಕ್ಕಳುಗಳೊಡನೆ ಯಾವ ವಿರಸವೂ ಉಂಟಾಗಲಿಲ್ಲ. ಯಾರ ಬಗ್ಗೆಯೂ ದ್ವೇಷಭಾವನೆ ತಾಳದೆ ಯಾವ ಪ್ರತೀಕಾರವನ್ನೂ ಯೋಚಿಸದೆ ಇದ್ದ ಮೋಹನದಾಸರ ಬಗ್ಗೆ ಎಲ್ಲರೂ ಗೌರವದಿಂದಲೇ ನಡೆದುಕೊಂಡರು.

ಲಂಡನ್ನಿನಿಂದ ಬಂದೊಡನೆ ಬೊಂಬಾಯಿನಲ್ಲಿ ಗಾಂಧೀಜಿಗೆ ಒಬ್ಬ ಅಪೂರ್ವ ಸ್ನೇಹಿತರ ಗೆಳೆತನ ಲಭಿಸಿತು, ಅವರ ಹೆಸರು ರಾಜಚಂದ್ರ ಅಥವ ರಾಯ್‌ಚಂದ್ ಭಾಯಿ, ಆತ ವಜ್ರ ವೈಢೂರ್ಯಗಳ ವ್ಯಾಪಾರಿ

ಯಾದರೂ ಕವಿ, ದಾರ್ಶನಿಕ, ಶತಾವಧಾನಿ, ಗಾಂಧೀಜಿಯನ್ನು ಪ್ರಬಲ ವಾಗಿ ಸೆಳೆದುದು ಆತನ ಜ್ಞಾನ ಸಂಪತ್ತು, ಸತ್ಯನಿಷ್ಠೆ, ಆಧ್ಯಾತ್ಮಿಕ ಪ್ರವೃತ್ತಿ ಮತ್ತು ಧವಳಶೀಲ. ಇಪ್ಪತ್ತೈದರ ಹರೆಯದಲ್ಲೇ ಈಶ್ವರ ಸಾಕ್ಷಾತ್ಕಾರದ ಹಂಬಲದಿಂದ ಬಾಳನ್ನು ತಪಸ್ವಿಯಂತೆ ನಡೆಸುತ್ತಿದ್ದ ರಾಯಚಂದ್ ಭಾಯಿ ಗಾಂಧೀಜಿಯ ಆಜೀವ ಮಾರ್ಗದರ್ಶಕರಲ್ಲೊಬ್ಬರಾದರು. ಸಮಸ್ಯೆಗಳು ಬಂದಾಗ ಅವರ ನೆರವನ್ನು ಧಾರಾಳವಾಗಿ ಪಡೆಯುತ್ತಿದ್ದರು. ಆತ್ಮಕಥೆ ಯಲ್ಲಿ ಬರೆಯುತ್ತಾ "ಮೂವರು ಆಧುನಿಕರು ನನ್ನ ಬಾಳನ್ನು ತಿದ್ದಿ ನೇರ ಮಾಡಿದ್ದಾರೆ. ಹೃದಯವನ್ನು ಸೂರೆಗೊಂಡಿದ್ದಾರೆ. ತಮ್ಮ ಶುದ್ಧ ಜೀವನದಿಂದ ರಾಯಚಂದ್‌ಭಾಯಿ, " ಈಶ್ವರ ಸಾಮ್ರಾಜ್ಯ ನಿನ್ನ ಹೃದಯ ದಲ್ಲಿದೆ " ಎಂಬ ಕೃತಿಯಿಂದ ಮಹರ್ಷಿ ಟಾಲ್‌ಸ್ಟಾಯ್ ಮತ್ತು "ಕಟ್ಟಕಡೆ ಯವನಿಗೆ" ಎಂಬ ಗ್ರಂಥದಿಂದ ರಸ್ಕಿನ್" ಎಂದಿದ್ದಾರೆ.

ಮೊದಮೊದಲು ಬ್ಯಾರಿಸ್ಟರ್ ಗಾಂಧೀಜಿಗೆ ಮನೆಯನ್ನೂ ಮನೆ ಯವರನ್ನೂ ಇಂಗ್ಲೀಷ್ ರೀತಿ ನೀತಿಗಳಂತೆ ನಡೆಸಿಕೊಳ್ಳಬೇಕು ಎಂಬ ಆಸೆ ಇತ್ತು. ಕಸ್ತೂರಿಬಾ ಅನಕ್ಷರಸ್ಥೆ. ಆಕೆಗೆ ಪಾಠ ಹೇಳಿ ಕಲಿಸಲು ಯತ್ನಿಸಿದರು. ಪೋಷಾಕುಗಳನ್ನು ಬದಲಿಸಲು ಹೇಳುತ್ತಿದ್ದರು. ಅಣ್ಣನಿಗೆ ಭಾರತೀಯತೆಯಲ್ಲಿ ವಿಶ್ವಾಸ. ಹೊಸಸುಧಾರಣೆಗಳಿಂದ ಸಂಸಾರದ ವೆಚ್ಚ ಹೆಚ್ಚಾಯಿತು. ಹೊಸ ಹೊಸ ಪದಾರ್ಥಗಳು ಮನೆಗೆ ಬರತೊಡಗಿದವು. ಸಂಪಾದನೆ ಸಾಲದಾಯ್ತು. ಬೊಂಬಾಯಿಗೆ ಹೋಗಿನೆಲಸಿ ವಕೀಲಿ ವೃತ್ತಿ ಯಲ್ಲಿ ಮೇಲೇರಿ ಉನ್ನತ ನ್ಯಾಯಾಲಯದ ಮೊಕದ್ದಮೆಗಳನ್ನು ನಡೆಸಬೇಕು ಎಂದು ಅಲ್ಲಿಗೆ ಹೋದರು ಗಾಧೀಜಿ. ಅಲ್ಲಿ ನಿರಾಸೆಕಾದಿತ್ತು. ದಳ್ಳಾಳಿಗಳ ನೆರವು ಪಡೆಯಲು ನಿರಾಕರಿಸಿದರು. ಲಂಚನಿರೊಧಿಸಿದರು. ಕಕ್ಷಿದಾರರಿಗೆ ಗೆಲ್ಲು ವುದೊಂದೇ ಮುಖ್ಯವಾಗಿತ್ತು. ಸುಳ್ಳು ಸಾಕ್ಷಿ ತರಲು ಗಾಂಧೀಜಿ ಒಪ್ಪು ತ್ತಿರಲಿಲ್ಲ. ಜಿಗುಪ್ಸೆಯಾಗಿ ಶಾಲೆಯ ಶಿಕ್ಷಕರಾಗಲು ಬಯಸಿದರು. ಇಂಗ್ಲೀಷ್ ಭಾಷೆಯಲ್ಲಿ ಪ್ರಾವೀಣ್ಯತೆ ಇದ್ದರೂ ಸಾಂಪ್ರದಾಯಕ ಪದವೀಧರ ರಲ್ಲದ್ದರಿಂದ ಕೆಲಸ ಸಿಕ್ಕಲಿಲ್ಲ. ಮತ್ತೆ ರಾಜಕೋಟೆಗೆ ಹಿಂತಿರುಗಿದರು.

ಎಲ್ಲಕಡೆಯೂ ಇದೇ ಸ್ಥಿತಿ ಇತ್ತು. ಅಣ್ಣನೂ ಈವೃತ್ತಿಯಲ್ಲಿ ಹೀಗೇ ವ್ಯವಹರಿಸಬೇಕು ಎಂದು ಬುದ್ಧಿವಾದ ಹೇಳಿದರು. ಸಂಪಾದನೆ ಸಾಗಬೇಕಾಗಿತ್ತು. ವಾದಮಾಡುವುದು ಗಾಧೀಜಿಗೆ ಸುಲಭವಾಗಿರಲಿಲ್ಲ, ಬ್ರಿಟಿಷ್ ಅಧಿಕಾರಿಗಳೇ ಆಗ ನ್ಯಾಯಾಧೀಶರು, ಅವರ ದರ್ಪ ದಬ್ಬಾಳಿಕೆಗಳು. ಭಾರತೀಯರಬಗ್ಗೆ ತಿರಸ್ಕಾರ ಗಾಂಧೀಜಿಯನ್ನು ವಿಹ್ವಲಗೊಳಿಸುತ್ತಿದ್ದವು, ದಾಸ್ಯದ ಬೇರೆ ಬೇರೆ ಮುಖಗಳು ಎದುರಾಗುತ್ತಿದ್ದವು. ಹೃದಯ ಬಿರಿಯುತ್ತಿತ್ತು. ಹೇಗೋ ಕಾಲ ಹಾಕಿದರು.

ಈ ಸಮಯಕ್ಕೆ ಒಂದು ಅವಮಾನದ ಘಟನೆ ಆಗಿಹೋಯಿತು. ಪೋರ್ ಬಂದರಿನಲ್ಲಿದ್ದ ಇಂಗ್ಲೀಷ್ ಏಜೆಂಟನನ್ನು ತಮ್ಮ ಅಣ್ಣನ ಪರವಾಗಿ ನೋಡಲು ಹೋದರು. ಅಣ್ಣ ಪೋರ್‌ಬಂದರಿನ ರಾಜರ ಕಾರ್ಯದರ್ಶಿಯಾಗಿ ತಪ್ಪು ದಾರಿಗೆಳೆದ ಎಂದು ಆ ಅಧಿಕಾರಿ ಆರೋಪಿಸಿ ದ್ವೇಷ ಸಾಧಿಸುತ್ತಿದ್ದ. ಇಂಗ್ಲೆಂಡಿನಲ್ಲಿ ಗಾಂಧೀಜಿಗೆ ಈತನ ಪರಿಚಯವಿತ್ತು. ಗೌರವದಿಂದ ಕೇಳಿಯಾನು ಎಂದು ಆತನ ತಪ್ಪು ತಿಳಿವಳಿಕೆಯನ್ನು ತಿದ್ದಲು ಹೋದರು. ಉನ್ನತ ಭಾರತೀಯರನ್ನೂ ಆಗ ಬ್ರಿಟಿಷ್ ಅಧಿಕಾರಿಗಳು ತುಚ್ಛವಾಗಿಯೇ ಕಾಣುತ್ತಿದ್ದರು. ಮಾತು ಪ್ರಾರಂಭಿಸುತ್ತಲೇ ಆ ಅಧಿಕಾರಿ ತಾಳ್ಮೆಗೆಟ್ಟು ಆಕ್ರೋಶದಿಂದ ಸೌಜನ್ಯವನ್ನೂ ಮರೆತು"ಈಬಗ್ಗೆ ನನಗೇನೂ ಹೇಳಬೇಡ ತೊಲಗಾಚೆ" ಎಂದು ಆರ್ಭಟಿಸಿದ. ಗಾಂಧಿ ಆವಾಕ್ಕಾದರು. ಮತ್ತೆ ಹೇಳಲು ಹವಣಿಸಿದಾಗ "ಹೊರಡು ಇಲ್ಲದಿದ್ದರೆ ಆಚೆಗೆ ತಳ್ಳಿಸುತ್ತೇನೆ" ಎಂದವನೇ ಜವಾನನ್ನು ಕರೆದು ದಬ್ಬಿಸಿಬಿಟ್ಟ.

ಈ ದುರ್ನಡತೆಗೆ ನ್ಯಾಯಾಲಯದಲ್ಲಿ ಮಾನನಷ್ಟಮೊಕದ್ದಮೆ ಹೂಡುವುದಾಗಿ ಆ ಅಧಿಕಾರಿಗೆ ಗಾಂಧೀಜಿ ಪತ್ರ ಬರೆದರು. ಆತ ಜಗ್ಗಲಿಲ್ಲ. ಆ ಸಮಯಕ್ಕೆ ಬೊಂಬಾಯಿನ ಪ್ರತಿಷ್ಠಿತ ವಕೀಲ ಫಿರೋಜ್‌ಷಾ ಮೆಹ್ತ ಯಾವುದೋ ಕೆಲಸಕ್ಕಾಗಿ ರಾಜಕೋಟೆಗೆ ಬಂದಿದ್ದರು. ಸ್ನೇಹಿತರಮೂಲಕ ಅವರ ಸಲಹೆ ಕೇಳಿದರು ಗಾಂಧೀಜಿ. "ಗಾಂಧೀ ಬಿಸಿನೆತ್ತರಿನ ತರುಣ, ಈಗತಾನೇ ಇಂಗ್ಲೆಂಡಿನಿಂದ ಬಂದಿದ್ದಾನೆ. ಬ್ರಿಟಿಷರ ಅಧಿಕಾರ ದರ್ಪಗಳ ಮುಂದೆ ನಮ್ಮದೇನೂ

ಸಾಗದು ವ್ಯವಹಾರದಲ್ಲಿ ಸಹಿಸಿಕೊಳ್ಳ ಬೇಕಾದೀತು." ಎಂದರು. ಈಮಾತು ಗಾಂಧೀಜಿಗೆ ನುಂಗಲಾರದ ವಿಷ ಎನಿಸಿತು. ಅಲ್ಲಿಂದಾಚೆ ಯಾರ ಹಂಗಿಗೂ ಕೈ ಒಡ್ಡ ಬಾರದು ಎಂದು ಶಪಥ ತೊಟ್ಟರು. ಭಾರತೀಯರಿಗಾಗುತ್ತಿದ್ದ ಅವಮಾನಗಳ ಸುಳಿಯಲ್ಲಿ ಮನಸ್ಸು ರೋಸಿಹೋಗುತ್ತಿತ್ತು.

ಈ ಅಧಿಕಾರಿಯೇ ನ್ಯಾಯಾಧೀಶನಾಗಿದ್ದ. ಅವನ ಮುಂದೆಯೇ ನ್ಯಾಯಾಲಯದಲ್ಲಿ ನಿಲ್ಲಬೇಕಾಗಿತ್ತು. ಗಾಂಧೀಜಿಗೆ ಇದು ಸರಿದೋರಲಿಲ್ಲ. ದಾಸ್ಯದ ಕಾರಣವಾಗಿ ದೇಶದ ವಾತಾವರಣವೇ ಕಲುಷಿತವಾಗಿದ್ದುದನ್ನು ಗುರ್ತಿಸಿದರು. ನೀತಿನಿಷ್ಠೆಯಿಂದ ಗೌರವಯುತವಾಗಿ ಬಾಳನ್ನು ನಡೆಸುವುದು ಕಷ್ಟ ಎನಿಸಿತು. ಈ ವಿಷವ್ಯೂಹದಿಂದ ಪಾರಾಗಬೇಕು ಎಂದು ಚಿಂತಿಸ ತೊಡಗಿದರು.

ಇದೇ ಸಮಯಕ್ಕೆ ಅಣ್ಣ ಲಕ್ಷ್ಮೀದಾಸರಿಗೆ ದಕ್ಷಿಣ ಆಫ್ರಿಕದ ಒಂದು ಪತ್ರ ಬಂತು. ನಟಾಲಿನಲ್ಲಿದ್ದ ವ್ಯಾಪಾರೀ ಸಂಸ್ಥೆಯೊಂದರ ಮಾಲೀಕ ದಾದಾ ಅಬ್ದುಲ್ಲ ಸೇಠ್ ಬರೆದಿದ್ದರು. ಸಂಸ್ಥೆಗೆ ಸಂಬಂಧಿಸಿದ ನಲವತ್ತು ಸಾವಿರ ಪೌಂಡ್ ಬಗ್ಗೆ ಮೊಕದ್ದಮೆಯೊಂದು ನ್ಯಾಯಾಲಯದಲ್ಲಿ ನಡೆಯುತ್ತಿರುವುದ ರಿಂದ ತಮಗೆ ಒಬ್ಬ ಸಮರ್ಥ ನ್ಯಾಯವಾದಿ ಸಲಹೆಗಾರ ಬೇಕೆಂದು ಕೇಳಿದ್ದರು ಆ ಸಂಸ್ಥೆಯ ಪಾಲುದಾರ ಶೇಠ್ ಅಬ್ದುಲ್ ಕರೀಂ ಝವೇರಿ ಗಾಂಧೀಜಿಯನ್ನು ಭೇಟಿಯಾಗಿ ವಿಚಾರಿಸಿದರು. ದಕ್ಷಿಣ ಆಫ್ರಿಕಕ್ಕೆ ಹೋಗಿಬರಲು ಮೊದಲ ತರಗತಿಯ ಸಮುದ್ರಯಾನ ವೆಚ್ಚ, ಅಲ್ಲಿರುವಾಗ ಜೀವನದ ಎಲ್ಲ ವೆಚ್ಚ ಮತ್ತು ನೂರೈದು ಪೌಂಡುಗಳ ಸಂಭಾವನೆ ನೀಡುವುದಾಗಿ ತಿಳಿಸಿದರು. ಒಂದು ವರ್ಷ ಇರಬೇಕಾದೀತು ಎಂದರು. ಅಣ್ಣ ಲಕ್ಷ್ಮೀದಾಸರಿಗೂ ಇದು ಒಪ್ಪಿಗೆಯಾಯಿತು. ಹೊಸ ದೇಶ, ಹೊಸ ಅನುಭವ. ಹೊಸ ಯಶಸ್ಸುಗಳ ಆಸೆ ಚಿಗುರಿ ಗಾಂಧೀಜಿಯೂ ಒಪ್ಪಿದರು. ಕಸ್ತೂರಿಬಾ ಆಗ ಎರಡು ಗಂಡು ಮಕ್ಕಳ ತಾಯಿ. ಅಣ್ಣನ ಮನೆಯಲ್ಲಿ ಆಕೆಯನ್ನು ಬಿಟ್ಟು ಒಂದು ವರ್ಷದ ಅವಧಿಗಾಗಿ 1893ರ ಏಪ್ರಿಲ್‌ನಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕಕ್ಕೆ ಪ್ರಯಾಣ ಮಾಡಿದರು.

ದಾರಿಯಲ್ಲಿ ವಿಚಿತ್ರ ಅನುಭವಗಳಾದವು. ಅನೇಕ ದ್ವೀಪಗಳಲ್ಲಿ, ಬಂದರುಗಳಲ್ಲಿ ಹಡಗುಗಳು ನಿಂತು ಸಾಗುತ್ತಿದ್ದವು. ಈ ಕೆಲವು ಪಟ್ಟಣಗಳಲ್ಲಿ ಪ್ರಯಾಣಿಕರ ಮತ್ತು ನಾವಿಕರ ಮೋಜಿಗಾಗಿ ಆಟ, ಕುಡಿತ ವ್ಯಭಿಚಾರ ಗೃಹಗಳಿರುತ್ತಿದ್ದವು. ಗಾಂಧೀಜಿ ಹಡಗಿನ ಕಪ್ತಾನನ ಕೋಣೆಯಲ್ಲೇ ಪ್ರಯಾಣ ಮಾಡುತ್ತಿದ್ದರು. ಸ್ನೇಹ ಬೆಳೆದಿತ್ತು. ಸಾನ್‌ಸಿಬಾರ್ ಎಂಬ ರೇವಿನಲ್ಲಿ ಹಡಗು ನಿಂತಾಗ ಕಪ್ತಾನನೇ ಅಂಥ ಒಂದು ವೇಶ್ಯಾಗೃಹಕ್ಕೆ ಕರೆದೊಯ್ದು, ಏನೂ ತಿಳಿಯದೆ ಸಂಗಡ ಹೋದ ಗಾಂಧೀಜಿ ಹೌಹಾರಿ ಜಿಗುಪ್ಸೆ, ಭಯ ಮತ್ತು ನಾಚಿಕೆಗಳಿಂದ ಕುಸಿದು ಅಲ್ಲಿಂದ ಓಡಿ ಪಾರಾದರು. ಜಾರಿಬೀಳುತ್ತಿದ್ದವರು ಹೇಗೋ ರಕ್ಷಿಸಿಕೊಂಡರು. ನೀತಿಗೆಟ್ಟ ಮೋಜಿಗೆ ಈ ಎಳೆಯುಪಕ ಬಲಿಯಾಗದೆ ಶೀಲವನ್ನು ಕಾಪಾಡಿಕೊಂಡರು. ಅಲ್ಲಿಂದಾಚೆ ಮೇ ತಿಂಗಳ ಕೊನೆಗೆ ನಟಾಲನ್ನು ತಲುಪಿದರು. ದಾದಾ ಅಬ್ದುಲ್ಲಾ ಸೇಠರೇ ಗಾಂಧೀಜಿಯನ್ನೆದುರುಗೊಂಡರು. ಇಂಗ್ಲೀಷ್ ಪೋಷಾಕಿನ ಮೇಲೆ ರುಮಾಲು ಧರಿಸುತ್ತಿದ್ದ ಈ ಬ್ಯಾರಿಸ್ಟರ್ ಎಲ್ಲರ ಗಮನ ಸೆಳೆದರು. ಅಲ್ಲಿನ ಯುರೋಪಿಯನ್ನರು ತಾವು ಆಳುವ ವರ್ಗದವರು ಎಂದು ತಿಳಿದು ಭಾರತೀಯರನ್ನು ಕಡೆಗೆಣಿಸುತ್ತಿದ್ದುದನ್ನು ಗಾಂಧೀಜಿ ಸೂಕ್ಷ್ಮವಾಗಿ ಗಮನಿಸಿದರು.

ಅಬ್ದುಲ್ಲಾಸೇಠರ ಮೊಕದ್ದಮೆ ನಡೆಯುತ್ತಿದ್ದುದು ಟ್ರಾನ್ಸ್‌ವಾಲ್ ರಾಜ್ಯದ ಪ್ರಿಟೋರಿಯದಲ್ಲಿ, ಅಲ್ಲಿಗೆ ಕಳುಹಿಸುವ ಮುನ್ನ ಪರಸ್ಪರ ತಿಳಿದುಕೊಳ್ಳಲು ಗಾಂಧೀಜಿಯನ್ನು ನಟಾಲದಲ್ಲೇ ಉಳಿಸಿಕೊಂಡರು. ವ್ಯವಹಾರ ಚತುರರಾಗಿದ್ದ ಅಬ್ದುಲ್ಲಾಸೇಠ್ ದಕ್ಷಿಣ ಆಫ್ರಿಕದ ಜನರನ್ನೂ ಅಲ್ಲಿನ ನ್ಯಾಯಾಲಯಗಳನ್ನೂ ಪರಿಚಯ ಮಾಡಿಸಿಕೊಟ್ಟರು. ಡರ್ಬಾನಿನ ನ್ಯಾಯಾಸ್ಥಾನಕ್ಕೆ ಹೋದಾಗ ನ್ಯಾಯಾಧೀಶ ಗಾಂಧೀಜಿಗೆ ರುಮಾಲನ್ನು ತೆಗೆಯಬೇಕು ಎಂದರು. ಇದು ಅವಮಾನ ಎಂದು ತಿಳಿದು ಗಾಂಧೀಜಿ ಪ್ರತಿಭಟಿಸಿ ಹೊರಗೆ ಬಂದುಬಿಟ್ಟರು. ಇಂಗ್ಲೀಷ್ ಉಡುಪಿನ ಮೇಲೆ ಪೇಟ ಧರಿಸಬಾರದು ಎಂಬ ಭಾವನೆ ಇತ್ತು. ಮುಸಲ್ಮಾನರು ಧರಿಸುತ್ತಿದ್ದರು. ಅವರು ತಮ್ಮನ್ನು ಅರಬ್ಬರೆಂದು ಕರೆದುಕೊಳ್ಳುತ್ತಿದ್ದರು. ಭಾರತದಿಂದ ಬಂದವರು ಕೂಲಿಗಳಾದುದರಿಂದ ಮರ್ಯಾದೆ ಕೊಡುತ್ತಿರಲಿಲ್ಲ. ದಕ್ಷಿಣ

ಆಫ್ರಿಕದಲ್ಲಿದ್ದ ಭಾರತೀಯರ ಅತಿದೊಡ್ಡ ಪಂಗಡ ಕರಾರುಬದ್ಧ ಕೂಲಿಗಳದು ಮತ್ತು ಸ್ವತಂತ್ರ ಕೂಲಿಯಾಳುಗಳದು. ಸಾಧಾರಣವಾಗಿ ಐದು ವರ್ಷ ಮುಡಿಯುವ ಕರಾರಿನ ಮೇಲೆ ಬಂದು, ತಮಿಳು, ತೆಲುಗು, ಗುಜರಾತಿ ಮತ್ತು ಹಿಂದಿ ಜನರಿದ್ದರು. ಇವರನ್ನು 'ಗಿರಿಮಿಟಿಯರು' ಎನ್ನುತ್ತಿದ್ದರು. ಕರಾರು ಅಥವಾ 'ಅಗ್ರಿಮೆಂಟ್' ಪದದ ಅಪಭ್ರಂಶ ಅದು. ವ್ಯಾಪಾರಿಗಳು ಕಾರಕೂನರು ಮತ್ತಿತರ ಭಾರತೀಯರ ಗುಂಪುಗಳೂ ಇದ್ದವು. ಎಲ್ಲರನ್ನೂ 'ಸಾಮಿ' ಅಥವಾ ಕೂಲಿಗಳೆಂದೇ ಕರೆಯುತ್ತಿದ್ದರು. ತಮಿಳರು ತಂದ ಪದ 'ಸಾಮಿ'ಗೆ ಅಲ್ಲಿಯವರು ಕೂಲಿ ಎಂದೇ ಅರ್ಥಮಾಡಿದ್ದರು. ಕೂಲಿವರ್ತಕ ಕೂಲಿಕಾರಕೂನ ಎಂದೇ ಸಂಬೋಧಿಸುತ್ತಿದ್ದರು. ಆದ್ದರಿಂದ ಎಷ್ಟೇ ಪ್ರತಿಷ್ಠಿತರೆನಿಸಿದರೂ ಗಾಂಧೀಜಿ ದಕ್ಷಿಣ ಆಫ್ರಿಕದವರಿಗೆ "ಕೂಲಿ ಬ್ಯಾರಿಸ್ಟರ್" ಆದರು. ಬಿಳಿಯರೆಲ್ಲ ಯಜಮಾನರು, ಕರಿಯ ಜನರೆಲ್ಲ ಕೂಲಿಗಳು ಎಂಬ ವರ್ಣಭೇಧ ಆಳವಾಗಿ ಬೇರೂರಿತ್ತು. ಡರ್ಬಾನ್ ನ್ಯಾಯಾಲಯದಲ್ಲಿ ರುಮಾಲು ತೆಗೆಯಲು ನಿರಾಕರಿಸಿ ಆತ್ಮಗೌರವ ರಕ್ಷಿಸಿಕೊಂಡ ಸುದ್ದಿ ಹರಡಿದಾಗ ಗಾಂಧೀಜಿ ಇತರ ಭಾರತೀಯರಂತೆ ಎಲ್ಲವನ್ನೂ ಸಹಿಸಿಕೊಳ್ಳುವ ವ್ಯಕ್ತಿಯಲ್ಲ ಎಂದು ಇಂಗ್ಲೀಷರು ತಿಳಿದರು. ತಾವು ಬಯಸದ ಆಗಂತುಕ ಒಬ್ಬರು ಬಂದರೆಂದು ಕಸವಿಸಿಗೊಂಡರು.

(ii) ಅವಮಾನಗಳ ಸುಳಿಯಲ್ಲಿ

ಅಬ್ದುಲ್ಲಾ ಸೇಠರ ಮೊಕದ್ದಮೆ ನಡೆಸಲು ಗಾಂಧೀಜಿಗೆ ಪ್ರಿಟೋರಿಯದಿಂದ ಕರೆಬಂತು. ಮೊಕದ್ದಮೆಯ ವಿವರಗಳನ್ನೆಲ್ಲ ಕಷ್ಟಪಟ್ಟು ತಿಳಿದುಕೊಂಡರು, ಪ್ರಿಟೋರಿಯದ ನ್ಯಾಯಾಲಯದಲ್ಲಿ ಮೊಕದ್ದಮೆ ನಡೆಸುತ್ತಿದ್ದ ಸೇಠರ ವಕೀಲ ಮಿ. ಬೇಕರ್ ಅವರಿಗೆ ಸಲಹೆಗಾರರಾಗಿ ಅಲ್ಲಿಗೆ ಹೊರಟರು. ದಾರಿಯಲ್ಲಿ ಭಾರತೀಯರು ಎಂಬ ಕಾರಣದಿಂದ ಅವಮಾನಗಳ ಸರಣಿಯೇ ಕಾದಿತ್ತು. ಅವರ ಜೀವನದ ಅತ್ಯುತ್ಕಟ ಪರೀಕ್ಷಾದಿನಗಳು ಸನ್ನಿಹಿತವಾಗುತ್ತಿದ್ದವು.

ದರ್ಬಾನಿಂದ ಹೊರಟ ರೈಲು ಮಧ್ಯೆ ಮೆರಿಟ್ಸ್‌ಬರ್ಗ್ ನಿಲ್ದಾಣದಲ್ಲಿ ನಿಂತಿತು. ರಾತ್ರಿ ಒಂಭತ್ತುಗಂಟೆ. ಮೊದಲತರಗತಿಯಲ್ಲಿ ಪ್ರಯಾಣಮಾಡುತ್ತಿದ್ದ ಗಾಂಧೀಜಿಯ ಗಾಡಿಗೆ ಬಿಳಿಯ ಪ್ರಯಾಣಿಕ ಒಬ್ಬ ಬಂದ. ಈ ಕರಿಯ ಮನುಷ್ಯನನ್ನು ದುರದುರನೆ ನೋಡಿದ. ಇಳಿದು ಹೋಗಿ ನಿಲ್ದಾಣದ ಅಧಿಕಾರಿಯನ್ನು ಕರೆತಂದ. ಆತ ದರ್ಪ ತಿರಸ್ಕಾರಗಳ ಎತ್ತಿದ ಧ್ವನಿಯಲ್ಲಿ ಗಾಂಧೀಜಿಗೆ ಹೇಳಿದ "ಇಳಿ ಕೆಳಗೆ, ಮೂರನೇ ತರಗತಿಗೆ ಹೋಗು ಇಲ್ಲಿ ನೀನು ಕೂರಬಾರದು." "ನನ್ನಲ್ಲಿ ಮೊದಲನೆ ತರಗತಿಯ ಟಿಕಿಟ್ ಇದೆ. ದರ್ಬಾನಿನಿಂದ ಬರುತ್ತಿದ್ದೇನೆ ಇಲ್ಲಿ ಇಳಿಯುವುದಿಲ್ಲ. ಎಂದು ಗಡುಸಾಗಿಯೇ ಉತ್ತರಿಸಿದರು ಗಾಂಧೀಜಿ." ಕೂಡದು ಇಲ್ಲಿಂದ ಇಳಿಯಲೇಬೇಕು ಇಲ್ಲವಾದರೆ ಪೋಲೀಸರನ್ನು ಕರೆದು ಹೊರಹಾಕಿಸುತ್ತೇನೆ. "ಅಧಿಕಾರಿಯ ಕಣ್ಣು ಕೆಂಪೇರಿತು." ಗಾಂಧೀಜಿ ಅಲ್ಲಾಡಲಿಲ್ಲ. ಪೇದೆ ಬಂದು ಕೈಹಿಡಿದು ಹೊರಕ್ಕೆ ಎಳೆದುಹಾಕಿಬಿಟ್ಟ ಸಾಮಾನುಗಳನ್ನು ಹೊರಗೆಸೆದರು ರೈಲು ಹೊರಟು ಹೋಯಿತು.

ಕಗ್ಗತ್ತಲಿನ ಛಳಿರಾತ್ರಿ. ನೀನೇ ಎನ್ನುವವರಿಲ್ಲ. ಅಧಿಕಾರಿಗಳು ಮತ್ತೆಲ್ಲಿ ಮೇಲೆ ಬೀಳುವರೋ ಎಂಬ ಭಯ. ನಿಲ್ದಾಣದಲ್ಲೇ ನಡುಗುತ್ತಾ ಮೌನವಾಗಿ ಕುಳಿತರು ಗಾಂಧೀಜಿ. ಮನಸ್ಸು ದಿಕ್ಕೆಟ್ಟಿತ್ತು. ಉತ್ಕಟ ವೇದನೆ ಹೃದಯವನ್ನು ಇರಿಯುತ್ತಿತ್ತು ಚಿಂತಿಸತೊಡಗಿದರು. "ಈಗೇನು ಮಾಡಲಿ. ಗೌರವಯುತ ಪ್ರಜೆಯಾಗಿ ಇಲ್ಲಿರಲು ಹಕ್ಕುಗಳಿಗಾಗಿ ಹೊರಾಡಲೇ ಭಾರತಕ್ಕೆ ಹಿಂತಿರುಗಲೇ? ಅವಮಾನಗಳನ್ನು ಮರೆತು ನನ್ನ ಕರ್ತವ್ಯಗಳಲ್ಲಿ ಮಗ್ನನಾಗಲೇ ?" ಹೀಗೆ ಮನಸ್ಸು ಮೊರೆಯುತ್ತಿತ್ತು.

ಹಿಂತಿರುಗುವುದು ಹೇಡಿತನ. ಈ ವರ್ಣದ್ವೇಷ ಇಲ್ಲಿ ಬೇರೂರಿದೆ. ಅದೇ ಮೂಲ ರೋಗ. ಅದನ್ನು ಕಿತ್ತು ಹಾಕದೆ ಯಾರಿಗೂ ನೆಮ್ಮದಿಯಿಲ್ಲ. ಈ ಅನ್ಯಾಯ ತೊಡೆದು ಹಾಕಲು ನಾನು ಪ್ರತಿಭಟಿಸಿ ನಿಲ್ಲಬೇಕು. ಎಂಬ ನಿರ್ಧಾರ ಉಕ್ಕಿತು.

ಅಬ್ದುಲ್ಲಾ ಸೇಠರಿಗೆ ಸುದ್ದಿ ಕಳುಹಿಸಿದರು. ಮೆರಿಟ್ಸ್ ಬರ್ಗ್‌ನಲ್ಲಿದ್ದ ವ್ಯಾಪಾರಿ ಸ್ನೇಹಿತರನ್ನು ನೆರವಿಗಾಗಿ ಗಾಂಧಿಯವರಲ್ಲಿಗೆ ಹೋಗಲು

ಅಬ್ದುಲ್ಲಾ ಸೇಠ್ ತಂತಿ ಕಳುಹಿಸಿದ್ದರು. ಗಾಂಧೀಜಿಯನ್ನು ಕಂಡು ಅವರೆಲ್ಲ ಮರುಗಿ. ಇವೆಲ್ಲ ತಮಗೆ ದಿನವೂ ಸಂಭವಿಸುವ ಕಷ್ಟಗಳು "ಅವನ್ನು ಸಹಿಸಿ ಕೊಂಡೇ ಬಾಳುತ್ತಿದ್ದೇವೆ. ಮೊದಲ ತರಗತಿಗೆ ದುಡ್ಡು ಕೊಟ್ಟರೂ ನಮಗೆ ಬಿಳಿಯರೊಡನೆ ಕೂರಲು ಹಕ್ಕಿಲ್ಲ. ರೈಲು ನೌಕರರೂ ಇತರರೂ ಪ್ರಯಾಣ ಮಾಡಲು ಬಿಡುವುದೇ ಇಲ್ಲ." ಎಂದರು.

ಮಾರನೆಯ ಬೆಳಿಗ್ಗೆ ಬೇರೆ ರೈಲಿನಲ್ಲಿ ಗಾಂಧೀಜಿ ಮುಂದಕ್ಕೆ ಪ್ರಯಾಣ ಬೆಳಸಿದರು. ರೈಲು ಚಾರ್ಲ್ಸ್‌ಟೌನ್ ಸೇರಿತು. ಅಲ್ಲಿಂದ ಜೊಹಾನ್ಸ್ ಬರ್ಗಿಗೆ ಕುದುರೆ ಗಾಡಿಯ ಪ್ರಯಾಣ. ಅಂಚೆ ಸಾಗಿಸಲು ಬಿಳಿಯರೇ ಅವನ್ನು ನಡೆಸುತ್ತಿದ್ದರು. ಅದಕ್ಕೂ ಮುಂಗಡ ಟಿಕೆಟ್ ಗಾಂಧೀಜಿಯಲ್ಲಿತ್ತು. ಗಾಡಿಯ ಮೇಲ್ವಿಚಾರಕನಿಗೆ ಈ 'ಕೂಲಿ' ಪ್ರಯಾಣಿಕನನ್ನು ಬಿಳಿಯರ ಜೊತೆ ಒಳಗೆ ಕೂರಿಸಲು ಇಚ್ಛೆಯಿರಲಿಲ್ಲ. ಗಾಡಿ ಹೊಡೆಯುವವನ ಪಕ್ಕ ದಲ್ಲಿ ಕೂರಿಸಿ ತಾನೂ ಒಳಗೆ ಕುಳಿತ. ಪ್ರತಿಭಟಿಸಿದರೆ ಮತ್ತಲ್ಲಿ ಒಂದೆ ನಿಲ್ಲಬೇಕಾಗುವುದೋ ಎಂದು ಗಾಂಧಿ ಸಹಿಸಿಕೊಂಡರು. ಮಧ್ಯೆದಾರಿಯಲ್ಲಿ ಆ ಮೇಲ್ವಿಚಾರಕನಿಗೆ ಹೊಗೆಸೇದಬೇಕೆನಿಸಿತು. ಹೊರಗೆ ಬಂದು ಗಾಂಧೀಜಿಗೆ "ಏ" ಸಾಮಿ (ಅಂದರೆ ಕೂಲಿ) ನೀನು ಈ ಕಾಲಿಡುವ ಕೆಳಮೆಟ್ಟಿಲಲ್ಲಿ ಕೂತುಕೋ ನಾನು ನಿನ್ನ ಜಾಗದಲ್ಲಿ ಕೂರಬೇಕು'' ಎಂದು ಅಜ್ಞಾಪಿಸಿದ, ಗಾಂಧೀಜಿಗೆ ಸಹಿಸಲಾಗಲಿಲ್ಲ. 'ಆಗುವುದಿಲ್ಲ' ಎಂದು ದಿಟ್ಟತನದಿಂದ ಹೇಳಿದರು. ಆತನಿಗೆ ರೇಗಿಹೋಯಿತು. ಕೈಹಿಡಿದೆಳೆಯುತ್ತಾ ಚೆನ್ನಾಗಿ ಥಳಿಸಿಬಿಟ್ಟ. ಪೀಠದ ಹಿತ್ತಾಳೆ ಕಂಬಿಗಳನ್ನು ಭದ್ರವಾಗಿ ಹಿಡಿದು ಏಟು ಗಳನ್ನು ತಿನ್ನುತ್ತಾ ಪ್ರತಿಭಟಿಸುತ್ತಾ ಬಡಪಾಯಿ ಗಾಂಧೀ ಹಾಗೇ ಕುಳಿತಿದ್ದರು. ಒಳಗಡೆ ಪ್ರಯಾಣಿಕರಿಗೆ ಅಯ್ಯೋ ಎನಿಸಿತು. ಅವರೂ ಸಿಟ್ಟಿಗೆದ್ದು ಗಾಂಧೀಜಿಯನ್ನು ಒಳಗೆ ಕೂರಿಸು ಎಂದು ಆಗ್ರಹಮಾಡಿದರು. ಮೇಲ್ವಿ ಚಾರಕನಿಗೆ ಮುಖಭಂಗವಾಯಿತು. ಬೈಯುತ್ತಾ ಗೊಣಗುತ್ತಾ ತಾನೇ ಬೇರೆ ಪಕ್ಕಕ್ಕೆ ಹೋಗಿ ಕುಳಿತ. ಗಾಡಿ ಮುಂದೆ ಸಾಗಿತು.

ನೌಕರನ ಅಸಭ್ಯವರ್ತನೆ ಪ್ರತಿಭಟಿಸಿ ಕುದರೆ ಗಾಡಿ ನಡೆಸುವ ಸಂಸ್ಥೆಗೆ ಗಾಂಧೀಜಿ ಪತ್ರ ಬರೆದರು. ಸ್ಟಾಂಡರ್‌ಟನ್ ಊರಿನಿಂದ ಬೇರೊಂದು

ದೊಡ್ಡಗಾಡಿಯಲ್ಲಿ ಪ್ರಯಾಣ ಮಾಡಬಹುದೆಂದೂ ಅಲ್ಲಿ ಆ ನೌಕರ ಇರುವುದಿಲ್ಲವೆಂದೂ ಉತ್ತರ ಬಂತು. ಯಾರೂ ಕ್ಷಮೆ ಬೇಡಲಿಲ್ಲ. ಆ ರಾತ್ರಿ ಜೊಹಾನ್ಸ್ ಬರ್ಗ್ ಸೇರಿದರು.

ಅಲ್ಲಿ ಹೋಟಲೊಂದರಲ್ಲಿ ತಂಗಲು ಹೋದರು. ಕರಿಯ ಗಿರಾಕಿಗೆ ಸ್ಥಳ ಕೊಡಲು ಅವರು ನಿರಾಕರಿಸಿದರು. ಜೊಹಾನ್ಸ್‌ಬರ್ಗ್‌ನಲ್ಲಿ ಭೇಟಿಯಾಗಬೇಕಾಗಿದ್ದ ಘನಿಸೇಠ್‌ರೆಂಬ ಪ್ರತಿಷ್ಠಿತ ವ್ಯಾಪರಿಗಳ ಮನೆಗೆ ಹೋಗಿ ತಂಗಿದರು. ಅವರೊಡನೆ ಮಾತನಾಡಿದಾಗ "ನಿಮಗಿನ್ನೂ ಈ ದೇಶದ ವಿಷಯ ತಿಳಿಯದು. ಹಣ ಗಳಿಸುವ ಒಂದೇ ಉದ್ದೇಶದಿಂದ ಬಂದ ನನ್ನಂಥವರು ಈ ಅವಮಾನಗಳನ್ನೆಲ್ಲ ದಿನವೂ ನುಂಗಿಕೊಂಡು ಕಾಲಹಾಕುತ್ತೇವೆ. ಎಂದರು" ಗಾಂಧೀಜಿಗೆ ತುಂಬ ವ್ಯಸನವಾಯಿತು.

ಮಾರನೆಯ ದಿನ ಅಬ್ದುಲ್ಲಾ ಸೇಠ್‌ರ ವಕೀಲ ಎ. ಡಬ್ಲ್ಯು. ಬೇಕರರ ಭೇಟಿಯಾಯಿತು. ಆತ ತುಂಬಾ ವಿಶ್ವಾಸದಿಂದ ಕಂಡ. ಮೊಕದ್ದಮೆಯಲ್ಲಿ ಗಾಂಧೀಜಿಯ ಪೂರ್ಣ ಸಹಕಾರ ಕೋರಿದ. ಇವರು ಇಳಿದುಕೊಳ್ಳಲು ಒಂದು ಸಭ್ಯ ಸಸ್ಯಾಹಾರಿ ಅತಿಥಿ ಗೃಹವನ್ನೂ ಗೊತ್ತುಮಾಡಿ ಕೊಟ್ಟ. ಅದರಿಂದ ಎಷ್ಟೋ ಸಮಾಧಾನವಾಯಿತು.

ವಕೀಲ ಬೇಕರ್ ಒಬ್ಬ ಶ್ರದ್ಧಾವಂತ ಕ್ರಿಶ್ಚಯನ್ ಪಾದ್ರಿಯೂ ಆಗಿದ್ದ. ಪ್ರಾರ್ಥನಾ ಸಭೆಗಳಿಗೆ ಗಾಂಧೀಜಿಯನ್ನು ಕರೆದೊಯ್ಯುತ್ತಿದ್ದ ಧರ್ಮಬೋಧೆಗಾಗಿ ಹೇರಳವಾದ ಪುಸ್ತಕಗಳನ್ನೊದಗಿಸಿದ. ಆತನ ಶ್ರದ್ಧೆಯನ್ನು ನೋಡಿ ಗಾಂಧೀಜಿಗೆ ತಮ್ಮ ಹಿಂದೂಧರ್ಮವನ್ನು ತಿಳಿಯಲು ತಾವು ಪ್ರಯತ್ನಿಸಲಿಲ್ಲವಲ್ಲ ಎಂದು ಖೇದವಾಯಿತು. ಧಾರ್ಮಿಕ ಗ್ರಂಥಗಳಲ್ಲಿ ಆಳವಾದ ಆಸಕ್ತಿ ಮೂಡಲು ಈ ಕ್ರೈಸ್ತ ಗೆಳೆಯರಿಂದ ಬಹಳ ಉಪಕಾರವಾಯಿತು. ಎಂದಿದ್ದಾರೆ ಅತ್ಮಕಥೆಯಲ್ಲಿ.

ಕ್ವೇರ್ ಗುಂಪಿಗೆ ಸೇರಿದ ಕೊಟ್ಸ್ ಎಂಬ ಸದ್ಗೃಹಸ್ಥನ ಸ್ನೇಹವಾಯಿತು ಪ್ರತಿ ಭಾನುವಾರ ಅವರ ಮನೆಗೆ ಹೋಗಿ ಇಬ್ಬರೂ ಧರ್ಮಜಿಜ್ಞಾಸೆಯಲ್ಲಿ

ತೊಡಗುತ್ತಿದ್ದರು. ಒಮ್ಮೆ ಗಾಂಧೀಜಿಯ ಕೊರಳಿನಲ್ಲಿದ್ದ ತುಳಸಿಮಣಿ ಹಾರ ಕೋಟ್ಸರ ಕಣ್ಣಿಗೆ ಬಿತ್ತು. ಇದು ಮೂಢನಂಬಿಕೆ ಅದನ್ನು ತೆಗೆದುಹಾಕಿ ಎಂದರು. "ಇದು ನಮ್ಮ ತಾಯಿ ಕೊಟ್ಟ ಪವಿತ್ರ ವಸ್ತು. ಅದರ ಗೂಢಾರ್ಥ ನನಗೆ ತಿಳಿಯದು, ಆದರೆ ನನ್ನ ಕ್ಷೇಮ ಸಾಧಿಸುವ ನಂಬಿಕೆಯಿಂದಲೂ ಗಾಢ ಪ್ರೇಮದಿಂದಲೂ ತಾಯಿ ನನಗೆ ಧರಿಸಿದ ಈ ಮಣಿಹಾರವನ್ನು ತೆಗೆಯಲಾರೆ" ಗಾಂಧೀಜಿ ಉತ್ತರಿಸಿದರು. ಪ್ರತಿವ್ಯಕ್ತಿಗೂ ತನ್ನದೇ ಆದ ಪವಿತ್ರಸಂಕೇತಗಳು ಅವರವರ ಸಹಜ ಪರಿಸರದಲ್ಲಿ ಬೆಳೆದು ಬರುತ್ತದೆ. ಅದು ಹೃದಯವಂತಿಕೆಯ ಲಕ್ಷಣ. ಅದರಲ್ಲಿ ನಂಬಿಕೆ ಶ್ರದ್ಧೆ ವಯಕ್ತಿಕವಾದುದು. ಅವರ ಬೆಲೆ ಕಟ್ಟಲು ಇತರರಿಗೆ ಅಸಾಧ್ಯ.

ಕೋಟ್ಸರ ವಾದಗಳನ್ನು ಗಾಂಧೀಜಿ ಒಪ್ಪಲಿಲ್ಲ. ಕ್ರೈಸ್ತಮತವೊಂದೇ ಮೋಕ್ಷಕ್ಕೆ ದಾರಿ ಎನ್ನುವ ಅವರ ಮಾತು ಹಿಡಿಸಲಿಲ್ಲ. ಮತಾಂತರದ ಸಿದ್ಧಾಂತವನ್ನು ಅವರೆಂದೂ ಅಂಗೀಕರಿಸಲಿಲ್ಲ,

ಪ್ರಿಟೋರಿಯದಲ್ಲಿನ ಭಾರತೀಯರ ಪರಿಚಯವೂ ಗಾಂಧೀಜಿಗೆ ಆಯಿತು. ಅಲ್ಲಿದ್ದ ಬಹುಮಂದಿ ಮೆಮನ್ ಪಂಗಡದ ವ್ಯಾಪಾರಿಗಳು, ಕೆಲವರು ಹಿಂದೂಗಳು. ಟ್ರಾನ್ಸ್‌ವಾಲ್ ರಾಜ್ಯದಲ್ಲಿ ಭಾರತೀಯರ ಸ್ಥಿತಿಗತಿಗಳನ್ನು ಚರ್ಚಿಸಲು ಗಾಂಧೀಜಿ ಒಂದು ಸಭೆ ಕೂಡಿಸಿದರು. ಸೇಠ್ ಹಾಜಿಜು ಸಾಬ್ ರವರ ಮನೆಯಲ್ಲಿ ಸೇರಿದ್ದ ಸಭೆಯಲ್ಲಿ ಗಾಂಧೀಜಿ ತಮ್ಮ ಜೀವನದ ಪ್ರಥಮ ಸಾರ್ವಜನಿಕ ಭಾಷಣ ಮಾಡಿದರು. ವ್ಯಾಪಾರದಲ್ಲಾಗಲಿ ವ್ಯವಹಾರ ದಲ್ಲಾಗಲೀ ಸತ್ಯನಿಷ್ಠರಾಗಿರುವುದು ಅತ್ಯಗತ್ಯ ಎಂದು ವಾದಿಸಿದರು. ಸಾಧ್ಯ ವಾದಷ್ಟು ಸತ್ಯನಡತೆ ಎಂಬ ಮಾತಿಗೆ ಹುರುಳೇ ಇಲ್ಲ ಎಂದರು, ಪರದೇಶ ದಲ್ಲಿ ನಮ್ಮ ದೇಶದ ಯೋಗ್ಯತೆಯನ್ನು ನಮ್ಮ ನಡತೆಯಿಂದ ನಿರ್ಣಯಿಸುತ್ತಾರೆ. ಆದ್ದರಿಂದ ಎಚ್ಚರಿಕೆಯಿಂದ ಜನಾಂಗ ಗೌರವ ಕಾಪಾಡಿಕೊಳ್ಳಬೇಕು ಎಂದರು. ಒಂದು ಸಂಘ ಸ್ಥಾಪಿಸಿಕೊಂಡು ಪ್ರಗತಿ ಸಾಧಿಸಿ ಎಂದು ಸಲಹೆ ಯಿತ್ತರು. ಬಿಡುವಿದ್ದಾಗಲೆಲ್ಲ ತಾವು ಸೇವೆಗೆ ಸಿದ್ಧ ಎಂದು ಭರವಸೆ ಕೊಟ್ಟರು. ಅಷ್ಟೇ ಅಲ್ಲ ಟ್ರಾನ್ಸ್‌ವಾಲ್ ಮತ್ತು ಆರೆಂಜ್ ಫ್ರೀಸ್ಟೇಟ್

ಗಳಲ್ಲಿನ ಭಾರತೀಯರ ಸಾಮಾಜಿಕ ಆರ್ಥಿಕ ಮತ್ತು ರಾಜಕೀಯ ಸ್ಥಿತಿಗತಿಗಳನ್ನು ಕುರಿತು ಆಳವಾದ ಅಧ್ಯಯನಕ್ಕೆ ತೊಡಗಿದರು.

ಭಾರತೀಯರಿಗೆ ಹೆಜ್ಜೆ ಹೆಜ್ಜೆಗೂ ಆಗುತ್ತಿದ್ದ ಇಂಥ ಅವಮಾನದ ಪ್ರಸಂಗಗಳು ಅವರ ಆತ್ಮಗೌರವಕ್ಕೆ ಸವಾಲುಗಳಾಗಿದ್ದವು. ಹೇಗೆ ನಿವಾರಿಸುವುದು ಎಂಬ ಪ್ರಶ್ನೆ ಯುವಕ ಬ್ಯಾರಿಸ್ಟರ್ ಗಾಂಧೀ ಅವರ ಮನಸ್ಸಿನಲ್ಲಿ ಕೊರೆಯುತ್ತಿತ್ತು. ಮೊದಲು ತಾವು ಬಂದ ಕರ್ತವ್ಯ ಮಾಡಿ ಮುಗಿಸಬೇಕು ಎಂದು ಸುಮ್ಮನಾದರು.

ದಾದಾಅಬ್ದುಲ್ಲಾ ಅವರ ಮೊಕದ್ದಮೆ ನ್ಯಾಯಾಲಯದಲ್ಲಿ ಸಾಗುತ್ತಿತ್ತು. ವಕೀಲ ವೃತ್ತಿಯಲ್ಲಿ ಗಾಂಧೀಜಿಗೆ ತೀವ್ರಾಸಕ್ತಿ ಬೆಳೆದುದು ಈ ಸಮಯದಲ್ಲೇ, ಅನುಭವದಿಂದ, ಅಧ್ಯಯನದಿಂದ, ಸೇವಾಕಾಂಕ್ಷೆಯಿಂದ ಯೋಗ್ಯತೆಗಳನ್ನು ಸಂಪಾದಿಸಿದರು. ಸಾರ್ವಜನಿಕ ಜೀವನಕ್ಕೂ ಅದು ನೆರವಾಯಿತು. ವಕೀಲನಾಗಿ ನೆಮ್ಮದಿಯಿಂದ ಜೀವನ ನಡೆಸಬಹುದು ಎಂಬ ಆತ್ಮವಿಶ್ವಾಸ ದೃಢವಾಯಿತು.

ವಾದ ವಿವಾದಗಳ ಸಮರದಲ್ಲಿ ಉತ್ಸಾಹದಿಂದ ತಲ್ಲೀನರಾದ ಗಾಂಧೀಜಿಗೆ ಅನೇಕ ಸತ್ಯ ಸಂಗತಿಗಳು ಗೋಚರವಾದುವು. ಅಬ್ದುಲ್ಲಾ ಸೇಠರಿಗೆ ಅನ್ಯಾಯವಾಗಿರುವುದು ಖಚಿತವಾಯಿತು. ಕಾನೂನು ಅವರ ಪರವಾಗಿಯೇ ಇತ್ತು. ಪ್ರತಿವಾದಿ ಇವರ ಬಂಧು ಎಂದು ತಿಳಿದ ಗಾಂಧೀಜಿ ಈ ವಿವಾದವನ್ನು ನ್ಯಾಯಾಲಯದಿಂದ ಹೊರಗೆ ಪರಸ್ಪರ ಚರ್ಚೆಯಿಂದ ತೀರ್ಮಾನಿಸುವುದು ಒಳ್ಳೆಯದು ಎಂದು ಸಲಹೆ ನೀಡಿದರು. ಎರಡು ಪಕ್ಷಗಳೂ ಮೊಕದ್ದಮೆ ನಡೆಸಲು ತೆರುತ್ತಿದ್ದ ಹಣ ವಿಪರೀತವಾಗಿತ್ತು, ಗಾಂಧೀಜಿಗೆ ಇದು ಅನ್ಯಾಯ ವೆಚ್ಚ ಎನಿಸಿತು. ಇಬ್ಬರಿಗೂ ಒಪ್ಪಿಗೆಯಾದ ಪಂಚಾಯಿತಿದಾರರನ್ನು ನೇಮಕಮಾಡಿ ಅವರಲ್ಲಿ ಎಲ್ಲ ಸಾಕ್ಷ್ಯಗಳನ್ನೂ ಇಟ್ಟರು. ದಾದಾ ಅಬ್ದುಲ್ಲಾ ಅವರ ಪರವಾಗಿ ತೀರ್ಪಾಯಿತು. ಅವರಿಗೆ ಬರಬೇಕಾದ ಮೂವತ್ತೈದು ಸಾವಿರ ಪೌಂಡುಗಳನ್ನು ಪ್ರತಿವಾದಿ ತಯಾಬ್ ಸೇಠರು ಒಂದೇ ಸಾರಿ ತೀರಿಸಲು ಅಸಮರ್ಥರಾಗಿದ್ದರು. ಹೀಗೆ ಸೋತವರು

ದಿವಾಳಿಯಾಗಬಾರದು ಎಂದು ಈ ಬಂಧುಗಳ ಮಧ್ಯೆ ಪ್ರವೇಶಿಸಿ, ಗಾಂಧೀಜಿ ಒಂದು ಒಪ್ಪಂದ ಕುದುರಿಸಿದರು. ಕೊಡಬೇಕಾದ ಹಣವನ್ನು ಕಂತುಗಳಲ್ಲಿ ಸ್ವೀಕರಿಸಲು ಅಬ್ದುಲ್ಲಾ ಸೇಠರು ಒಪ್ಪಿದರು. ಬಂಧುಗಳಲ್ಲಿ ವಿರಸ ಮಾಯವಾಗಿ ಮತ್ತೆ ಸ್ನೇಹ ಮೂಡಿತು. ಇಬ್ಬರಿಗೂ ಸಂತೋಷವಾಯಿತು. ವಿವಾದಕ್ಕೊಳಗಾದ ಪಕ್ಷಗಳನ್ನು ನ್ಯಾಯಸಮ್ಮತವಾಗಿ ಒಂದುಗೂಡಿಸುವುದೇ ವಕೀಲನ ಪವಿತ್ರಕರ್ತವ್ಯ ಎಂದು ಗಾಂಧೀಜಿಗೆ ಭಾಸವಾಯಿತು. ಮುಂದೆ ಈ ಮನೋಧರ್ಮದಿಂದಲೇ ತಮ್ಮ ವೃತ್ತಿ ಪ್ರವೇಶಿಸಿದರು. ಕಕ್ಷಿಗಾರರಿಗೆ ಆತ್ಮೀಯ ಸ್ನೇಹಿತರಂತೆ ನಡೆದುಕೊಂಡು ನ್ಯಾಯ ವಿತರಣೆ ಮಾಡುವ ಕಲೆ ಅವರಿಗೆ ಕರಗತವಾಯಿತು. ಯಶಸ್ವೀ ವಕೀಲರಾಗಿ ತಮ್ಮ ವೃತ್ತಿಯನ್ನು ಬೆಳೆಸಿಕೊಂಡರು. ಮುಂದೆ ಇಪ್ಪತ್ತು ವರ್ಷ ದಕ್ಷಿಣ ಆಫ್ರಿಕದಲ್ಲಿ ಅವರ ವರ್ಚಸ್ಸು ಬೆಳೆದು ನಿಲ್ಲಲು ಈ ಗುಣ ತುಂಬ ನೆರವಾಯಿತು.

(iii) ದಕ್ಷಿಣ ಆಫ್ರಿಕದ ಅಗ್ನಿಕುಂಡ

ಮೊಕದ್ದಮೆ ಮುಗಿದಿತ್ತು. ಗಾಂಧೀಜಿ ಭಾರತಕ್ಕೆ ಹಿಂತಿರುಗುತ್ತೇನೆ ಎಂದರು. ಅವರ ಗೌರವಾರ್ಥ ಅಬ್ದುಲ್ಲಾ ಸೇಠರು ಔತಣ ಏರ್ಪಡಿಸಿದರು. ಅದೇ ಸಮಯಕ್ಕೆ ನಟಾಲ್ ಶಾಸನ ಸಭೆ ಭಾರತೀಯರಿಗೆ ಸಂಬಂಧಿಸಿದ ಒಂದು ಮುಖ್ಯ ಮುಸೂದೆಯನ್ನು ಚರ್ಚಿಸುತ್ತಿತ್ತು. ಮತದಾನದ ಹಕ್ಕನ್ನು ಮೊಟಕು ಮಾಡುವ ಕಾನೂನನ್ನು ತರಬಯಸಿದ್ದರು. ಈ ಮಸೂದೆ ಜಾರಿಗೆ ಬಂದರೆ ಭಾರತೀಯರು ಆತ್ಮಗೌರವದಿಂದ ಇಲ್ಲಿ ನಾಗರೀಕರಾಗಿ ಬಾಳುವುದೇ ಕಷ್ಟವಾದೀತು ಎಂದು ಗಾಂಧೀಜಿ ಅಲ್ಲಿನ ಮಿತ್ರರಿಗೆ ವಿವರಿಸಿದರು. ಆರೆಂಜ್ ಫ್ರೀಸ್ಟೇಟಿನಲ್ಲಿ ಇಂಥ ಶಾಸನಗಳ ಕಾರಣವಾಗಿ ತಮ್ಮ ವ್ಯಾಪಾರ ವ್ಯವಹಾರಗಳಿಗೆಲ್ಲ ತೊಂದರೆಯಾಗಿ ಹೇಗೆ ಕಷ್ಟವಾಯಿತೆಂದು ಆ ವ್ಯಾಪಾರಿಗಳೂ ಹೇಳಿದರು. ಅವರೆಲ್ಲ ಹೆಚ್ಚು ವಿದ್ಯಾವಂತರಲ್ಲ. ನಾಗರಿಕ ಜೀವನದ ಶಾಸನಗಳು ಅವರಿಗೆ ಅರ್ಥವಾಗುತ್ತಿರಲಿಲ್ಲ. ವಿದ್ಯಾವಂತರಾದ ಕೆಲವು ಭಾರತೀಯರು ಕ್ರೈಸ್ತಮತಕ್ಕೆ ಸೇರಿ ಅಲ್ಲಿನ ಪಾದ್ರಿಗಳ. ಬಿಳಿಯ ಆಧಿಕಾರಿಗಳ ಅಧೀ

ನದಲ್ಲಿದ್ದರು. ಯಾರೂ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಸಿದ್ಧರಿರಲಿಲ್ಲ. ಈ ಪರಿಸ್ಥಿತಿಯಲ್ಲಿ ಸೇತರೂ ಅವರ ಮಿತ್ರರೂ ಗಾಂಧೀಜಿಯ ಸಹಾಯ ಬೇಡಿದರು. ಇನ್ನೊಂದು ತಿಂಗಳಾದರೂ ಇದ್ದು ಮಾರ್ಗದರ್ಶನಮಾಡಿ ಎಂದು ಕೇಳಿಕೊಂಡರು. ಗಾಂಧೀಜಿ ತಮ್ಮ ಪ್ರಯಾಣವನ್ನು ಮುಂದಕ್ಕೆ ಹಾಕಿದರು.

> ನಟಾಲಿನ ಗಣ್ಯರು "ನಿಮಗೆ ಈವರೆಗೆ ಸಲ್ಲುತ್ತಿದ್ದ ಸಂಭಾವನೆಯನ್ನು ನಾವು ಕೂಡಿಸಿ ಕೊಡುತ್ತೇವೆ" ಎಂದರು. ಗಾಂಧೀಜಿ ನಿರಾಕರಿಸಿ ಹೀಗೆಂದರು "ಸಾರ್ವಜನಿಕ ಸೇವಾ ಕಾರ್ಯಕ್ಕೆ ನನಗೆ ಯಾವ ಸಂಭಾವನೆಯನ್ನೂ ಕೊಡಬೇಕಾಗಿಲ್ಲ. ನಾನು ಇಲ್ಲಿ ನಿಲ್ಲುವುದಾದರೆ ಇದೊಂದು ಪವಿತ್ರ ಕರ್ತವ್ಯ ಎಂದು ಇಲ್ಲಿ ಒಂದು ತಿಂಗಳು ನಿಲ್ಲಲು ಸಿದ್ಧ. ಸಂಘಟನೆಗೆ ಬೇಕಾಗುವ ಹಣವನ್ನು ನಾವೆಲ್ಲ ಒಟ್ಟಾಗಿ ಕೂಡಿಸಬೇಕು," ಈ ಮಾತು ಕೇಳಿ ಅವರಿಗೆಲ್ಲ ಅಪರಿಮಿತ ಆನಂದವಾಯಿತು. "ಅಲ್ಲಾ ದೊಡ್ಡವನು ; ದಯಾಶಾಲಿ ; ಹಣ ಮತ್ತು ಜನ ಒದಗುತ್ತಾರೆ ನೀವು ನಿಲ್ಲಲು ಸಮ್ಮತಿಸಿ" ಎಂದರು.

ಮುಂದೆ ದಕ್ಷಿಣ ಆಫ್ರಿಕದಲ್ಲಿ ಬಹುಕಾಲ ನಿಲ್ಲಬೇಕಾದ ತಳಹದಿಯನ್ನು ದೇವರೇ ಹಾಕಿದ. ಆತ್ಮ ಗೌರವದ ಸಮರಕ್ಕೆ ಬೀಜಾಂಕುರವೂ ಆಯಿತು. ಗಾಂಧೀಜಿ ತಡಮಾಡದೆ ಕಾರ್ಯೋನ್ಮುಖರಾಗಿ ಜನತೆಯನ್ನು ಒಗ್ಗೂಡಿಸುವ ಹೆಜ್ಜೆಯಿಟ್ಟರು.

ಮಸೂದೆ ಶಾಸನವಾಗುವ ಅಂತಿಮಘಟ್ಟದಲ್ಲಿತ್ತು. ಈ ಬಗ್ಗೆ ಯಾವ ವಿರೋಧವೂ ವ್ಯಕ್ತವಾಗಲಿಲ್ಲ ; ಭಾರತೀಯರಿಗೆ ಮತಾಧಿಕಾರದಲ್ಲಿ ಆಸಕ್ತಿಯಿಲ್ಲ, ಅವರು ಅದಕ್ಕೆ ಅನರ್ಹರು, ಎಂದು ಯೂರೋಪಿನ ಆಳರಸರು ಒತ್ತಿ ಹೇಳುತ್ತಿದ್ದರು. ಗಾಂಧೀಜಿ ತಮ್ಮ ಅನುಯಾಯಿಗಳಿಗೆ ಎಲ್ಲವನ್ನೂ ವಿವರಿಸಿದರು. ಮಸೂದೆಯ ಚರ್ಚೆಯನ್ನು ಮುಂದೆ ಹಾಕಿ ನಮ್ಮ ಅಹವಾ

ಲನ್ನು ಕೇಳಿ ಎಂದು ಆ ಬೃಹದ್ ಸಭೆಯು ಪರವಾಗಿ ನಟಾಲಿನ ಶಾಸನ ಸಭಾಧ್ಯಕ್ಷರಿಗೆ ತಂತಿ ಕಳುಹಿಸಿದರು. ಪ್ರಧಾನ ಮಂತ್ರಿ ಸರ್‌ಜಾನ್ ರಾಬಿನ್ಸನರಿಗೂ ಅಟಾರ್ನಿಜನರಲ್ ಎಸ್ಕೊಂಬರಿಗೂ ಬರೆದು ತಿಳಿಸಿದರು. ಚರ್ಚೆಯನ್ನು ಮುಂದಕ್ಕೆ ಹಾಕಿ ಪುನರ್ವಿಮರ್ಶಿಸಲು ಸಭಾಧ್ಯಕ್ಷರು ಎರಡು ದಿನ ಸಮಯ ಘೋಷಿಸಿದರು. ಈ ಪರಿಣಾಮದಿಂದ ಭಾರತೀಯರ ಆತ್ಮವಿಶ್ವಾಸ ಮತ್ತಷ್ಟು ದೃಢವಾಯಿತು.

ಶಾಸನ ಸಭೆಗೆ ಒಪ್ಪಿಸುವ ಅರ್ಜಿ ಸಿದ್ಧಮಾಡಿದರು. ಪತ್ರಿಕೆಗಳಲ್ಲಿ ಪ್ರಕಟವಾಯಿತು. ಸಾರ್ವಜನಿಕ ಪ್ರಚಾರ ಸಿಕ್ಕಿತು. ಶಾಸಕರು ಸ್ವಲ್ಪ ಒಪ್ಪಿಕೊಟ್ಟಿದರು. ಆದರೂ ಅರ್ಜಿಗೆ ಒಂದು ಹುರುಳಿಲ್ಲದ ಅಧಿಕೃತ ಉತ್ತರ ಕೊಟ್ಟು ಶಾಸನ ಸಭೆ ಮಸೂದೆಯನ್ನಂಗೀಕರಿಸಿತು.

ಹೋರಾಟದ ನಿಶ್ಚಯ ಭಾರತೀಯರಲ್ಲಿ ದೃಢವಾಯಿತು. ತಮ್ಮ ಹಕ್ಕುಗಳನ್ನು ಸಾಮೂಹಿಕ ಬಲದಿಂದ ಸಂಪಾದಿಸಬೇಕು ಎಂದು ನಿರ್ಧಾರ ಮಾಡಿದರು. ಈ ಮಸೂದೆ ಬ್ರಿಟಿಷ್ ಸಾರ್ವಭೌಮದ ಸರ್ಕಾರದ ಅಂಗೀಕಾರ ಪಡೆಯಬೇಕಾಗಿತ್ತು. ಆಗಿನ ವಸಾಹತು ಶಾಖಾ ಕಾರ್ಯದರ್ಶಿ ಲಾರ್ಡ್‌ರಿಪನ್ ಅವರಿಗೆ ದೀರ್ಘ ಅರ್ಜಿ ಕಳುಹಿಸಿದರು. ಗಾಂಧೀಜಿ ತರ್ಕಬದ್ಧವಾಗಿ ವಿಚಾರ ಮಂಡಿಸಿ ಅಲ್ಪಸಂಖ್ಯಾತ ನಾಗರೀಕರಾದ ಭಾರತೀಯರ ಮತದಾನ ಹಕ್ಕನ್ನು ಕಸಿದುಕೊಳ್ಳುವುದು ಅನ್ಯಾಯ ಎಂದು ವಾದಿಸಿದ್ದರು. ಆ ಅರ್ಜಿಗೆ ಹದಿನೈದು ದಿನಗಳಲ್ಲಿ ಹತ್ತುಸಾವಿರ ಜನರ ಸಹಿ ಪಡೆದರು.

ಹೋರಾಟ ಪ್ರಾರಂಭಿಸಿದ ಮೇಲೆ ಗಾಂಧೀಜಿ ಅದನ್ನು ನೆಲೆಮುಟ್ಟಿಸುವುದು ತಮ್ಮ ಕರ್ತವ್ಯ ಎಂದು ತಿಳಿದರು. ನಟಾಲಿನಲ್ಲಿ ಇನ್ನೂ ಕೆಲವು ತಿಂಗಳು ನಿಲ್ಲಬೇಕಾಯಿತು. ಜೀವನ ವೆಚ್ಚವನ್ನು ಭರಿಸಲು ವಕೀಲಿ ವೃತ್ತಿಯನ್ನೇ ಅವಲಂಬಿಸಲು ನಿಶ್ಚಯಿಸಿದರು. ಇಪ್ಪತ್ತು ವರ್ತಕರು ತಮ್ಮ ನ್ಯಾಯಾಲಯ ವ್ಯವಹಾರಗಳನ್ನು ಒಂದು ವರ್ಷಕಾಲ ಗಾಂಧೀಜಿಗೆ ವಹಿಸಲು ಒಪ್ಪಿದರು. ಸಾರ್ವಜನಿಕ ಸೇವೆಗಾಗಿ ತಾವು ಸಂಭಾವನೆ ಪಡೆಯುವುದಿಲ್ಲ

ವೆಂದು ಗಾಂಧೀಜಿ ತಿಳಿಸಿದ್ದರು. ದಕ್ಷಿಣ ಆಫ್ರಿಕದ ನಟಾಲಿನಲ್ಲಿ ಬ್ಯಾರಿಸ್ಟರ್ ಎಂ. ಕೆ. ಗಾಂಧಿ ಅವರ ಕಾರ್ಯಾಲಯ ವಿದ್ಯುಕ್ತವಾಗಿ 1894ರಲ್ಲಿ ಆರಂಭವಾಯಿತು.

ನಟಾಲಿನ ಶ್ರೇಷ್ಠ ನ್ಯಾಯಾಲಯದ ವಕೀಲರಾಗಿ ಸನ್ನದು ಪಡೆಯಲು ಅರ್ಜಿ ಸಲ್ಲಿಸಿದರು. ಇಬ್ಬರು ಯೂರೋಪಿಯನ್ ವ್ಯಾಪಾರಿಗಳ ಬೆಂಬಲ ಪತ್ರದೊಡನೆ ಮಿ. ಎಸ್ಕೊಂಬರೇ ನ್ಯಾಯಾಲಕ್ಕೆ ಕೊಟ್ಟರು, ಈ ಕಪ್ಪು ಮನುಷ್ಯ ಬ್ಯಾರಿಸ್ಟರ್ ಆಗಿ ಅಲ್ಲಿ ನೆಲಸುವುದು ಅನೇಕ ಬಿಳಿಯರಿಗೆ ಅಸಮಾಧಾನವಾಯಿತು.

ನಟಾಲ್ ಇಂಡಿಯನ್ ಕಾಂಗ್ರೆಸ್ 1894ರ ಮೇ 22 ರಂದು ಸ್ಥಾಪಿತವಾಯಿತು, ವಕೀಲ ವೃತ್ತಿಯಿಂದ ಜೀವನ ಸಾಗಿಸಿದ್ದ ಗಾಂಧೀಜಿ ತಮ್ಮ ಹಣದ ಆವಶ್ಯಕತೆಗಳನ್ನು ಕಡಮೆಮಾಡಿಕೊಂಡು ಆದಷ್ಟು ಹೆಚ್ಚು ವೇಳೆಯನ್ನು ಸಾರ್ವಜನಿಕ ಕೆಲಸಕ್ಕೆ ಮೀಸಲಾಗಿಟ್ಟರು. ಭಾರತೀಯರ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಲು ಒಂದು ಶಾಶ್ವತ ಸಂಸ್ಥೆ ಅಗತ್ಯವಾಗಿತ್ತು. ಭಾರತದ ರಾಷ್ಟ್ರೀಯ ಕಾಂಗ್ರೆಸ್ ಆ ವೇಳೆಗೆ ಭಾರತದ ವಿಮೋಚನೆಗಾಗಿ ಕೆಲಸ ಮಾಡುತ್ತಿತ್ತು. ನಟಾಲಿನಲ್ಲಿಯೂ ಒಂದು ಕಾಂಗ್ರೆಸ್ಸನ್ನೇ ಸ್ಥಾಪಿಸ ಬಯಸಿದರು. ಬ್ರಿಟಿಷ್ ಆಳರಸರಿಗೆ ಅಪ್ರಿಯವಾದರೂ ಅದೇ ಹೆಸರು ಇರಬೇಕೆಂದು ತೀರ್ಮಾನವಾಯಿತು. ಸಂಸ್ಥೆಗೆ ಒಂದು ಸಂವಿಧಾನವನ್ನು ಗಾಂದೀಜಿಯೇ ರಚಿಸಿಕೊಟ್ಟರು. ಅವರೇ ಅದರ ಪ್ರಥಮ ಕಾರ್ಯದರ್ಶಿಯಾದರು.

ಆಫ್ರಿಕದಲ್ಲೇ ಹುಟ್ಟಿ ಬೆಳೆದ ಭಾರತೀಯರಿಗಾಗಿ ಪ್ರತ್ಯೇಕ ವಿದ್ಯಾಸಂಸ್ಥೆ ಕಾಂಗ್ರೆಸ್ಸಿನ ಆಶ್ರಯದಲ್ಲಿ ಪ್ರಾರಂಭವಾಯಿತು ಅವರ ಆವಶ್ಯಕತೆಗಳನ್ನು ಪ್ರಕಟಮಾಡುವುದು, ಅವರಲ್ಲಿ ವಿಚಾರಶಕ್ತಿಯನ್ನು ಬೆಳೆಸುವುದು, ವ್ಯಾಪಾರಿಗಳೊಡನೆ ಸಂಪರ್ಕ ಹೆಚ್ಚಿಸುವುದು ಮತ್ತು ಸೇವಾವಕಾಶಗಳನ್ನು ಕಲ್ಪಿಸುವುದು ಮುಖ್ಯ ಉದ್ದೇಶವಾಯಿತು. ಈ ಸಂಘದಲ್ಲಿ ಸಭೆಗಳು ಚರ್ಚೆಗಳು

ಅಧ್ಯಯನಗಳು ನಡೆಯುತ್ತಿದ್ದವು. ಒಂದು ಪುಸ್ತಕ ಭಂಡಾರವನ್ನೂ ತೆರೆಯಲಾಯಿತು.

ಕಾಂಗ್ರೆಸ್ಸಿನ ಮತ್ತೊಂದು ಕಾರ್ಯ ಪ್ರಚಾರ. ದಕ್ಷಿಣ ಆಫ್ರಿಕದಲ್ಲಿನ ಸ್ಥಿತಿಗತಿಗಳ ಬಗ್ಗೆ ವಿವರಣೆ ಕೊಡುವುದು. ಇದಕ್ಕಾಗಿ ಗಾಂಧೀಜಿಯೇ ಎರಡು ಹೊತ್ತಿಗೆಗಳನ್ನು ಬರೆದು ಪ್ರಕಟಿಸಿದರು. "ದಕ್ಷಿಣ ಆಫ್ರಿಕದ ಪ್ರತಿಯೊಬ್ಬ ಆಂಗ್ಲೇಯನಿಗೂ ಮನವಿ" ಮತ್ತು "ಭಾರತೀಯರ ಮತಾಧಿಕಾರ, ಒಂದು ಬಿನ್ನಹ." ಇದಕ್ಕಾಗಿ ವಿಶೇಷ ವ್ಯಾಸಂಗಮಾಡಿ ಅಂಕಿ ಅಂಶಗಳೊಡನೆ ಭಾರತೀಯರ ಸಮಾನ ಹಕ್ಕುಗಳಿಗಾಗಿ ಮನವಿ ಮಾಡಿದ್ದರು. ಭಾರತದಲ್ಲೂ ಇಂಗ್ಲೆಂಡಿನಲ್ಲೂ ಈ ಪ್ರಚಾರ ಸಾಗಿತ್ತು. ಸಹಾನುಭೂತಿಯುಳ್ಳ ಅನೇಕ ಮಿತ್ರರು ದೊರೆತರು. ಸಂಘಟನೆಯಿಂದ ಸಾಧಿಸಬೇಕಾದ ಕಾರ್ಯ ಸ್ವರೂಪ ಸ್ಪಷ್ಟವಾಯಿತು.

ನಟಾಲ್ ಇಂಡಿಯನ್ ಕಾಂಗ್ರೆಸ್ ಮೊದಮೊದಲು ಮೇಲ್ವರ್ಗದವರಿಗೆ ಸೀಮಿತವಾಗಿತ್ತು. ಸಾಮಾನ್ಯ ದುಡಿಮೆಗಾರರೂ ಕರಾರುಬದ್ಧ ಕೂಲಿಗಳೂ ದೂರವಾಗಿಯೇ ಇದ್ದರು. ಗಾಂಧೀಜಿಯೂ ಆ ಬಗ್ಗೆ ಚಿಂತಿಸುತ್ತಿದ್ದರು.

ಒಮ್ಮೆ ಇವರ ವಕೀಲಿ ಕಾರ್ಯಾಲಯಕ್ಕೆ ಹಠಾತ್ತನೆ ಒಬ್ಬ ತಮಿಳು ನಾಡಿನ ಕೂಲಿ ಬಂದ. ಹೆಸರು ಬಾಲಸುಂದರಮ್. ಮೈಮೇಲೆಲ್ಲಾ ಹೊಡೆತದ ಘಾಯಗಳು. ಹಲ್ಲು ಮುರಿದು ರಕ್ತಬರುತ್ತಿತ್ತು. ಚಿಂದಿಬಟ್ಟೆ. ಬಂದವನೇ ತಲೆಯಮೇಲಿನ ರುಮಾಲು ತೆಗೆದುನಿಂತ. ಐರೋಪ್ಯ ಧಣಿಗಳ ಮುಂದೆ ಭಾರತೀಯರು ರುಮಾಲನ್ನು ತೆಗೆಯಲೇಬೇಕು ಎಂಬ ಅವಮಾನದ ಪದ್ಧತಿ ಇತ್ತು. ಅವನೊಬ್ಬ ಕರಾರುಬದ್ಧ ಕೂಲಿ. ಐರೋಪ್ಯ ಯಜಮಾನ ತಾಳ್ಮೆಗೆಟ್ಟು ಎಚ್ಚರತಪ್ಪಿ ಬಲವಾಗಿ ಹೊಡೆದುಬಿಟ್ಟಿದ್ದ. ಗಾಂಧೀಜಿಗೆ ಕನಿಕರವಾಯಿತು. ವೈದ್ಯರಿಂದ ಒಂದು ಪ್ರಮಾಣಪತ್ರ ಮಾಡಿಸಿದರು. ಆತನನ್ನು ನ್ಯಾಯಾಧೀಶರಲ್ಲಿಗೆ ಕರೆದೊಯ್ದು ದೂರು ಕೊಡಿಸಿದರು. ನ್ಯಾಯಾಧೀಶರಿಗೆ ಮನದಟ್ಟಾಯಿತು. ಕೂಡಲೇ ಯಜಮಾನನಿಗೆ ಸಮನ್ಸ್ ಕಳುಹಿ

ಸಿದರು. ಅವನು ಶಿಕ್ಷಾರ್ಹ ಎಂದರು. ಶಿಕ್ಷೆ ವಿಧಿಸುವುದಕ್ಕಿಂತ ಆ ಯಜಮಾನನ ಸೆರೆಯಿಂದ ಬಾಲಸುಂದರಮ್‌ನನ್ನು ಬಿಡುಗಡೆಮಾಡಿಸಲು ಗಾಂಧೀಜಿ ಇಚ್ಛಿಸಿದರು. ಕರಾರುಕೂಲಿ ತಾನೇ ಕೆಲಸಬಿಟ್ಟರೆ ಸೆರೆಮನೆಗೆ ಹೋಗಬೇಕಾಗಿತ್ತು. ಗಾಂಧೀಜಿ ಆ ಯಜಮಾನನಲ್ಲಿಗೆ ಹೋಗಿ ವಿವರಿಸಿದರು. "ಈ ಬಡಪಾಯಿಯನ್ನು ಹೊಡೆದ ಅಪರಾಧಕ್ಕಾಗಿ ಶಿಕ್ಷೆಮಾಡಿಸುವುದು ನನ್ನ ಉದ್ದೇಶವಲ್ಲ. ನೀನೇ ಪಶ್ಚಾತ್ತಾಪ ಪಡಬೇಕು. ಆತನ ಕರಾರನ್ನು ಮತ್ತೊಬ್ಬ ಯಜಮಾನನಿಗೆ ಬದಲಾಯಿಸು" ಎಂದರು. ಆತನೂ ಒಪ್ಪಿಕೊಂಡ. ಮತ್ತೊಬ್ಬ ಒಳ್ಳೆಯ ಐರೋಪ್ಯ ಸ್ನೇಹಿತರಲ್ಲಿ ಬೇಡಿ ಬಾಲಸುಂದರಮ್‌ನನ್ನು ಸೇರಿಸಿದರು.

ಈ ಘಟನೆಯ ಸುದ್ದಿ ಹರಡಿಬಿಟ್ಟಿತು. ಬಡ ಕೂಲಿಗಾರರು ತಮ್ಮ ಹಿತಬಯಸುವ ಒಬ್ಬ ಪ್ರತಿಷ್ಠಿತ ವ್ಯಕ್ತಿ ಇದ್ದಾರೆ ಎಂಬ ಆಶ್ಚರ್ಯಭರಿತ ಆನಂದದಿಂದ ಇವರಲ್ಲಿಗೆ ಬರಹತ್ತಿದರು. ಕುಂದುಕೊರತೆಗಳನ್ನು ತೋಡಿಕೊಂಡರು. ಆ ಬಡವರನ್ನು ಅಗೌರವದಿಂದ ಹೀಯಾಳಿಸಿ ಕೋಪಿಸುತ್ತಿದ್ದ ಐರೋಪ್ಯರ ಕ್ರೂರ ವರ್ತನೆಗಳನ್ನು ಕೇಳಿ ಗಾಂಧೀಜಿ ದುಃಖಿತರಾದರು. ದಾಸ್ಯಕೂಪದ ದಳ್ಳುರಿಯಲ್ಲಿ ತಮ್ಮ ಜನ ನುಚ್ಚು ನೂರಾಗುತ್ತಿದ್ದಾರೆ ಎಂಬ ಸ್ಪಷ್ಟಚಿತ್ರ ಗೋಚರವಾಯಿತು.

ಅದೇ ವರ್ಷ ಅಂದರೆ 1894ರಲ್ಲಿ ನಟಾಲ್ ಸರ್ಕಾರ ಕರಾರು ಕೂಲಿಗಳ ಮೇಲೆ ವರ್ಷಕ್ಕೆ 24 ಪೌಂಡುಗಳ ತೆರಿಗೆ ವಿಧಿಸಲು ಆಲೋಚಿಸಿತು. ಗಾಂಧೀಜಿ ದಿಗ್ಭ್ರಾಂತರಾದರು. ಈ ಅಸಹನೀಯ ಅನ್ಯಾಯ ಕುರಿತು ಕಾಂಗ್ರೆಸ್ ಸದಸ್ಯರಿಗೆ ವಿವರಿಸಿದರು.

ಈ ತೆರಿಗೆ ಹಾಕಲು ಭಾರತದ ವೈಸ್‌ರಾಯರ ಅಪ್ಪಣೆ ಆಗತ್ಯವಾಗಿತ್ತು. ದಕ್ಷಿಣ ಆಫ್ರಿಕದಲ್ಲಿನ ಭಾರತೀಯರ ತೀವ್ರ ಪ್ರತಿಭಟನೆ, ಪ್ರಚಾರ ಮತ್ತು ಚಳುವಳಿಗಳನ್ನು ಗಮನಿಸಿ ವೈಸರಾಯ್ ಲಾರ್ಡ್ ಎಲ್ಗಿನ್ ತೆರಿಗೆಯನ್ನು ಮೂರು ಪೌಂಡಿಗೆ ಇಳಿಸಿದರು. ಭಾರತ ಸರ್ಕಾರ ಈ ಅನ್ಯಾಯವನ್ನು

ಪ್ರತಿಭಟಿಸಿ ಭಾರತೀಯರನ್ನು ರಕ್ಷಿಸುವ ಬದಲು ಈ ಮೂರು ಪೌಂಡ್ ತೆರಿಗೆಗೆ ಒಪ್ಪಿದುದು ವಿಶ್ವಾಸಘಾತಕ ಪ್ರವೃತ್ತಿ ಎಂದರು ಗಾಂಧೀಜಿ. ಈ ತೆರಿಗೆಯನ್ನು ಪೂರ್ಣವಾಗಿ ತೆಗೆಸಿಹಾಕಬೇಕು ಎಂಬ ಸಂಕಲ್ಪ ಕಾಂಗ್ರೆಸ್ಸಿನ ಸದಸ್ಯರಲ್ಲಿ ಬೇರೂರಿತು. ಆದರೆ ಈ ಕಳಂಕ ನಿವಾರಿಸಲು ಮುಂದೆ ಹಲವಾರು ವರ್ಷಗಳ ಹೋರಾಟ ವಾಗಬೇಕಾಯಿತು. ಅದರ ಕಥೆ ಮುಂದೆ ಬರುತ್ತದೆ,

ಜನಸೇವೆಯೇ ಪರಮಧರ್ಮ ಎನ್ನುತ್ತಿದ್ದರು ಗಾಂಧೀ. ಅದೇ ಅವರಿಗೆ ಈಶ್ವರ ಸಾಕ್ಷಾತ್ಕಾರಕ್ಕೆ ಸಾಧನ ಎನಿಸಿತು. ಎಲ್ಲ ಧರ್ಮಗಳಲ್ಲೂ ಅದನ್ನೇ ಕಂಡರು. ಕ್ರೈಸ್ತ ಸ್ನೇಹಿತರೊಡನೆ ಚರ್ಚೆಯಿಂದ ಕ್ರಿಸ್ತನಬೋಧೆ, ಎಡ್ವಿನ್ ಅರ್ನಾಲ್ಡರ 'ಲೈಟ್ ಆಫ್ ಏಷಿಯಾ' (ಏಷಿಯಾದ ಜ್ಯೋತಿ) ಗ್ರಂಥದ ಅಧ್ಯಯನದಿಂದ ಬುದ್ಧನ ಕರುಣಾದೃಷ್ಟಿ, ಟಾಲ್‌ಸ್ಟಾಯ್ ಅವರ ಗ್ರಂಥಗಳ ಮೂಲಕ ವಿಶ್ವಪ್ರೇಮದ ದುರ್ವಾರ ಶಕ್ತಿ, ಹಿಂದೂ ಯೋಗ ಶಾಸ್ತ್ರದಿಂದ ನಿಯಮಬದ್ಧ ಜೀವನ ತತ್ವಗಳನ್ನು ಅರ್ಥಮಾಡಿಕೊಂಡರು. ಯಾವುದೇ ತತ್ವಕ್ಕೆ ಬೆಲೆ ಬರುವುದು ಅದರ ಆಚರಣೆಯಲ್ಲಿ. ವ್ಯಾವಹಾರಿಕ ಜೀವನಕ್ಕೆ ಅನ್ವಯವಾಗದ ಧರ್ಮದಿಂದ ಏನು ಪ್ರಯೋಜನ ? ಎನ್ನುವುದು ಗಾಂಧಿಯವರ ನಿಶ್ಚಿತ ಅಭಿಪ್ರಾಯ. ಎಲ್ಲ ಧರ್ಮಾನುಯಾಯಿಗಳೊಂದಿಗೂ ಈ ದೃಷ್ಟಿಯನ್ನು ಪ್ರತಿಪಾದಿಸುತ್ತಿದ್ದರು. ತಮ್ಮ ತಮ್ಮ ಧರ್ಮದಲ್ಲಿ ಉಳಿದು ಅದರ ತಿರುಳನ್ನು ಅರ್ಥಮಾಡಿಕೊಂಡು ಬಾಳಿನಲ್ಲಿ ಆಚರಿಸುವುದು ಶ್ರೇಷ್ಠ ಮಾರ್ಗ ಎಂದರು. ಧರ್ಮ ಮತ್ತು ನೀತಿ ಒಂದೇ ನಾಣ್ಯ ಎಂದವರ ಮತ.

ಗಾಂಧೀಜಿ ನಿಧಾನವಾಗಿ ನಟಾಲಿನಲ್ಲಿ ಮನೆಮಾಡಿ ನೆಲೆಸಿದರು. ಬ್ಯಾರಿಸ್ಟರರ ಘನತೆಗೆ ಪಾಶ್ಚಾತ್ಯ ಜೀವನ ಶೈಲಿಯೇ ಸರಿ ಎಂದು ಆಗ ಅವರದೃಷ್ಟಿ. ಶುದ್ಧ ಸಸ್ಯಾಹಾರದ ಅಭ್ಯಾಸವೊಂದನ್ನು ಬಿಟ್ಟರೆ ಮಿಕ್ಕಹಾಗೆ ವೇಷ ಭೂಷಣಗಳಲ್ಲಿ ದಿನಚರಿಯಲ್ಲಿ ಆಳುಕಾಳುಗಳನ್ನಿಟ್ಟು ಕೊಳ್ಳುವುದರಲ್ಲಿ ಇಂಗ್ಲೀಷ್ ನಾಗರೀಕರಂತೆಯೇ ಇದ್ದರು. ಅದು ಪ್ರತಿಷ್ಠಿತ ವರ್ಗದ ಸಂಕೇತ, ಹಾಗಿದ್ದರೇ ಸಮಾಜದಲ್ಲಿ ಮರ್ಯಾದೆ ಎಂದುಕೊಂಡರು.

ದಕ್ಷಿಣ ಆಫ್ರಿಕದಲ್ಲಿ ಹೀಗೆ ಮೂರು ವರ್ಷ ಕಳೆಯಿತು. 1896ರ ಹೊತ್ತಿಗೆ ಅಲ್ಲಿನ ಪ್ರಮುಖ ವಕೀಲಗಣಕ್ಕೆ ಸೇರಿಹೋಗಿದ್ದರು ಗಾಂಧೀಜಿ. ಭಾರತೀಯರ ಮುಖಂಡರು ಎನಿಸಿಕೊಂಡರು. ಇದೇ ವೃತ್ತಿಯಲ್ಲಿ ಅಲ್ಲಿಯೇ ಮುಂದುವರಿಯಲು ಸಂಕಲ್ಪಿಸಿದರು. ಮನೆಯವರನ್ನೆಲ್ಲ ಕರೆತರಲು ಅದೇ ವರ್ಷ ಮಧ್ಯಭಾಗದಲ್ಲಿ ಭಾರತಕ್ಕೆ ಬಂದರು. ಆರು ತಿಂಗಳಿನಲ್ಲಿ ಹಿಂತಿರುಗುವುದಾಗಿ ನಟಾಲಿನ ಮಿತ್ರರಿಗೆ ಭರವಸೆಯಿತ್ತಿದ್ದರು.

ಭಾರತಕ್ಕೆ ಬಂದೊಡನೆ ದಕ್ಷಿಣ ಆಫ್ರಿಕದ ಭಾರತೀಯರ ಶೋಚನೀಯ ಸ್ಥಿತಿ ಕುರಿತು ಪ್ರಚಾರ ಕೈಗೊಂಡರು. ಪತ್ರಿಕೆಗಳಿಗೆ ಲೇಖನಗಳನ್ನು ಬರೆದರು. ಸಂಪಾದಕರನ್ನು ಭೇಟಿಮಾಡಿ ವಿವರಿಸಿದರು. ಟೀಕೆಗಳನ್ನು ಬರೆಯಲು ಪ್ರಾರ್ಥಿಸಿದರು, ಅನೇಕ ಪತ್ರಿಕೆಗಳು ಅಗ್ರಲೇಖನಗಳನ್ನು ಬರೆದವು. ರಾಜಕೋಟೆ ಸೇರಿದಮೇಲೆ ಒಂದು ಸಣ್ಣ ಪುಸ್ತಕ ಬರೆದು ದಕ್ಷಿಣ ಆಫ್ರಿಕದ ಸ್ಥಿತಿಗಳನ್ನು ಬಣ್ಣಿಸಿದರು. ಹಸಿರು ಹೊದಿಕೆಯೊಡನೆ ಪ್ರಕಟವಾದ 'ಹಸಿರು ಪುಸ್ತಕ' ಎಂದು ಪ್ರಸಿದ್ಧವಾಯಿತು. ಹತ್ತುಸಾವಿರ ಪ್ರತಿಗಳು ಹಂಚಿ ಹೋದವು.

ಅದೇ ಸಮಯಕ್ಕೆ ಇಂಗ್ಲೆಂಡಿನ ರಾಣಿ ವಿಕ್ಟೋರಿಯಳ ಆಳ್ವಿಕೆಯ ವಜ್ರಮಹೋತ್ಸವ ಬಂತು. ಸಾಮ್ರಾಜ್ಯದ ಆಳ್ವಿಕೆಯಲ್ಲಿ ಗಾಂಧೀಜಿಗೆ ಇನ್ನೂ ರಾಜನಿಷ್ಠೆಯಿತ್ತು. ಮಕ್ಕಳಿಗೆ ಬ್ರಿಟಿಷ್ ರಾಷ್ಟ್ರಗೀತೆ "ಗಾಡ್ ಸೇವ್ ದಿಕಿಂಗ್" ಹೇಳಿಕೊಟ್ಟು ಕಲಿಸಿದರು. ವಜ್ರಮಹೋತ್ಸವದಲ್ಲಿ ಸಂತೋಷದಿಂದ ಪಾಲ್ಗೊಂಡರು.

ಭಾರತದಲ್ಲಿ ಉಳಿದಷ್ಟು ದಿನ ದಕ್ಷಿಣ ಆಫ್ರಿಕದ ವಸಾಹತು ಸಮಸ್ಯೆಗಳ ಬಗ್ಗೆ ಸಾರ್ವಜನಿಕಾಭಿಪ್ರಾಯ ರೂಢಿಸುವುದರಲ್ಲಿ ಗಾಂಧೀಜಿ ತಲ್ಲೀನರಾದರು. ಬೊಂಬಾಯಿನಲ್ಲಿ ನ್ಯಾಯಮೂರ್ತಿಗಳಾಗಿದ್ದ ರಾನಡೆ, ಅಬ್ಬಾಸ್ ತಯಾಬ್ಜಿ ಅವರನ್ನು ಕಂಡು ಮಾತನಾಡಿದರು. ಅಂದಿನ ಪ್ರಥಮ ಪಂಕ್ತಿ ನಾಯಕರಲ್ಲೊಬ್ಬರಾಗಿದ್ದ ಸರ್ ಫಿರೋಜ್‌ಷಾ ಮೆಹ್ತ ಅವರನ್ನು ಒಲಿಸಿ ಒಂದು

ಸಾರ್ವಜನಿಕ ಬೃಹದ್‌ಸಭೆ ಏರ್ಪಡಿಸಿದರು. ಭಾರತದಲ್ಲಿ ಗಾಂಧೀಜಿ ತಮ್ಮ ಪ್ರಥಮ ಭಾಷಣ ಮಾಡಿದರು. ಮೆಹ್ತ ಅವರ ಸೂಚನೆಯಂತೆ ಬರೆದು ತಂದಿದ್ದರು. ಆದರೂ ಸಭಾಕಂಪನದಿಂದ ಓದಲಾಗಲಿಲ್ಲ. ಬೊಂಬಾಯಿನ ಮತ್ತೊಬ್ಬ ಪ್ರಮುಖರಾಗಿದ್ದ ಡಿ. ಇ. ವಾಚಾ ಅವರು ಓದಿದರು. ಅದರ ಕಡೆಯ ಭಾಗ ಹೀಗಿತ್ತು.

> "ನಾವು ದಕ್ಷಿಣ ಆಫ್ರಿಕದಲ್ಲಿ ಎಲ್ಲಕಡೆಯೂ ಬಂಧಿತರಾಗಿದ್ದೇವೆ. ದೇಶಬಾಂಧವರಲ್ಲಿ ಮನವಿಮಾಡಿಕೊಳ್ಳುವ ಹಕ್ಕು ನಮಗಿದೆ. ಈ ದಬ್ಬಾಳಿಕೆಯು ಹೊರೆ ಇಳಿಯಬೇಕು. ಅದರ ಹೊಣೆ ನಿಮ್ಮಮೇಲೂ ಇದೆ, ದಾಸ್ಯದ ಭಾರದಿಂದ ನಾವು ರೋದಿಸು ಸುತ್ತಿದ್ದೇವೆ. ಹಿರಿಯರೂ ಹೆಚ್ಚು ಸ್ವತಂತ್ರರೂ ಆದ ನೀವು ಇದನ್ನು ಹೋಗಲಾಡಿಸಬೇಕು. ನಮ್ಮ ರೋದನ ನಿಷ್ಫಲವಾ ಗದೆಂದು ನಂಬಿದ್ದೇನೆ."

ಆ ಭಾರಿ ಸಭೆ ಬೆಂಬಲನೀಡಿತು. ಅಧಿಕಾರ ಪೀಠಗಳಲ್ಲಿ ಅದು ಪ್ರತಿ ಧ್ವನಿಸಿತು. ಮುಂದೆ ಪುಣೆಗೆ ಹೋಗಿ ಲೋಕಮಾನ್ಯ ತಿಲಕರನ್ನೂ ಗೋಪಾ ಲಕೃಷ್ಣ ಗೋಖಲೆಯವರನ್ನೂ ಗಾಂಧೀಜಿ ಪರಿಚಯ ಮಾಡಿಕೊಂಡರು. ಅವರ ಮೇರುಸದೃಶ ವ್ಯಕ್ತಿತ್ವಕ್ಕೆ ಮಾರುಹೋದರು. ಗಾಂಧೀಜಿಗೆ ಫಿರೋ ಜ್‌ಷಾ ಮೆಹ್ತ ಹಿಮಾಲಯದಂತೆ, ತಿಲಕರು ಸಾಗರದಂತೆ ಕಂಡರೆ ಗೋಖಲೆ ಯವರು ಸಲಿಲ ಗಂಗಾಪ್ರವಾಹದಂತೆ ಕಂಡರು, ಆತ್ಮೀಯವಾಗಿ ಎಲ್ಲವನ್ನೂ ಕೇಳಿ ತಿಳಿದರು. ಮೊದಲ ಭೇಟಿಯಲ್ಲೇ ಇವರೆಲ್ಲರ ವಿಶ್ವಾಸಗಳಿಸಿ ತಮ್ಮ ಕಾರ್ಯಕ್ಕೆ ಬೆಂಬಲಗಳಿಸಿಕೊಂಡರು ಗಾಂಧೀಜಿ. ಅಲ್ಲಿಂದ ಮದ್ರಾಸಿಗೆ ಬಂದರು. ಹಸಿರು ಪುಸ್ತಕ ಅನೇಕರ ಕೈಸೇರಿತ್ತು. ಹಿಂದೂ ಪತ್ರಿಕೆಯ ಜಿ. ಸುಬ್ರಹ್ಮಣ್ಯ ಅಯ್ಯರ್ ಮತ್ತು ಮಾಡರ್ನ್ ಸ್ಟಾಂಡರ್ಡ್ ಪತ್ರಿಕೆಯ ಪರಮೇಶ್ವರನ್ ಪಿಳ್ಳೆ ಇವರ ಸಹಕಾರ ಸಹಾನುಭೂತಿಗಳು ದೊರೆತವು, ಕಲ್ಕತ್ತೆಯಲ್ಲಿ ಅಪ್ರತಿಮ ನಾಯಕ ಸುರೇಂದ್ರನಾಥ ಬ್ಯಾನರ್ಜಿ ಅವರನ್ನು ಕಂಡು ಸಹಾಯ ಕೋರಿದರು ಅಲ್ಲಿ ಸಭೆ ಸೇರಿಸುವ ಮುನ್ನ ಡರ್ಬಾನಿನಿಂದ ತುರ್ತು ಕರೆಯತಂತಿ ಬಂತು.

"ಜನವರಿಯಲ್ಲಿ ಸಂಸತ್ ಆರಂಭವಾಗುತ್ತಿದೆ ಕೂಡಲೇ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗಿ" ಎಂದು ದಾದಾ ಅಬ್ದುಲ್ಲಾ ಕೋರಿದ್ದರು. ತಕ್ಷಣ ಗಾಂಧೀಜಿ ಹೊರಡಲನುವಾಗಿ ರಾಜಕೋಟೆಗೆ ಬಂದರು.

1890ರ ನವೆಂಬರ್ 26 ಬೊಂಬಾಯಿನಿಂದ ಎರಡು ಹಡಗುಗಳು ಡರ್ಬಾನಿಗೆ ಹೊರಟಿದ್ದವು. ಅಬ್ದುಲಾ ಸೇಠರ ಹಡಗು 'ಕೂರ್‌ಲ್ಯಾಂಡ್' ನಲ್ಲಿ ಗಾಂಧೀಜಿ ಕಸ್ತೂರಿಬಾ, ಮಕ್ಕಳು ಹಿರಾಲಾಲ್ ಮತ್ತು ಮಣಿಲಾಲ್, ಜೊತೆಗೆ ಅಕ್ಕನ ಮಗ ಮಗನಲಾಲನನ್ನು ಕರೆದುಕೊಂಡು ಹೊರಟರು. ಭಾರತದ ಶ್ರೇಷ್ಠ ನಾಯಕರೆಲ್ಲರ ಬೆಂಬಲಪಡೆದು ನ್ಯಾಯುವಾದ ಹಕ್ಕುಗಳಿಗಾಗಿ ದಕ್ಷಿಣ ಆಫ್ರಿಕದಲ್ಲಿ ಹೋರಾಡಲು ಅಮಿತೋತ್ಸಾಹದಿಂದ ಪ್ರಯಾಣ ಮಾಡಿದರು. ಆ ಹಡಗುಗಳಲ್ಲಿ ಇತರ ಎಂಟುನೂರು ಭಾರತೀಯರು ವಿವಿಧ ಕೆಲಸಗಳಿಗಾಗಿ ಹೊರಟಿದ್ದರು. ಡರ್ಬಾನ್ ತಲುಪಿದೊಡನೆ ಗಾಂಧೀಜಿಯು ಜೀವನದ ಪ್ರಮುಖ ಅಧ್ಯಾಯವೊಂದು ಆರಂಭವಾಗಲು ಅನುವಾಗಿತ್ತು.

(iv) ಜೀವನದ ತಿರುವು

ಸಮುದ್ರಯಾನದ ಮಧ್ಯೆ ಒಂದು ಪ್ರಬಲ ಬಿರುಗಾಳಿ ಎದ್ದು ಹಡಗು ತಲ್ಲಣಿಸಿತ್ತು. ಪಾರಾದುದು ದೈವ ಕೃಪೆ ಎಂದುಕೊಂಡರು. ಡರ್ಬಾನ್ ರೇವನ್ನು ಹಡಗು ಬಂದುಸೇರಿದಾಗ ಗಾಂಧೀಜಿಗೆ ಮತ್ತೊಂದು ಅನಿರೀಕ್ಷಿತ ಆಘಾತ ಕಾದಿತ್ತು, ನಟಾಲಿನ ಐರೋಪ್ಯ ಜನಾಂಗ ಅವರ ಮೇಲೆ ಧಾಳಿ ಮಾಡಿತು. ದೊಡ್ಡ ಭಾರತೀಯರ ತಂಡವನ್ನು ಕರೆತಂದಿರುವ ಈ ಗಾಂಧಿ ತಮ್ಮ ಪರಮಶತ್ರು ಎಂದು ಭ್ರಮಿಸಿದರು. ಭಾರತದಲ್ಲಿದ್ದಾಗ ತಮ್ಮ ಬಗೆಗೆ ಅಪಪ್ರಚಾರ ಮಾಡಿದ್ದಾರೆ ಎಂದು ಕುಪಿತಗೊಂಡಿದ್ದರು. ರೇವಿನಲ್ಲಿ ಪ್ರಚಂಡ ವಿರೋಧ ಪ್ರದರ್ಶನ ನಡೆಸಿದರು. ಹಡಗಿನಲ್ಲಿರುವವರು ಇಳಿಯದೆ ಕೂಡಲೇ ತಮ್ಮ ದೇಶಕ್ಕೆ ಹಿಂತಿರುಗಬೇಕು ಎಂದು ಆಗ್ರಹಪಡಿಸಿದ್ದರು. ಅಲ್ಲಿನ ಆರೋಗ್ಯಾಧಿಕಾರಿ ಅಂಟುರೋಗದ ನೆಪಹೂಡಿ ಹಡಗುಗಳನ್ನು ರೇವಿಗೆ ಬಿಡದೆ

ತಡೆಹಿಡಿದ. ಆದರೆ ಪ್ರಯಾಣಿಕರು ಹಿಂತಿರುಗುವುದಿಲ್ಲ ಎಂದರು. ಗಾಂಧೀಜಿ ಅವರಲ್ಲಿ ಧೈರ್ಯ ತುಂಬಿದ್ದರು. ಇಪ್ಪತ್ತೈದುದಿನ ಸೆಣಸಾಟ ನಡೆದು ಕೊನೆಗೆ ಅಟಾರ್ನಿ ಜನರಲ್ ಹ್ಯಾರಿ ಎಸ್ಕೊಂಬ್ ಹೀಗೆ ಬ್ರಿಟಿಷ್ ಸಾಮ್ರಾಜ್ಯದ ಪ್ರಜೆಗಳನ್ನು ತಡೆಹಿಡಿಯಲಾಗದು, ಒಳಕ್ಕೆಬಿಡಿ, ಎಂದು ಆಜ್ಞೆಮಾಡಿದರು. ನಟಾಲಿನ ಭಾರತೀಯರ ಪ್ರಶ್ನೆ ಇಂಗ್ಲೆಂಡಿನ ಸಂಸತ್ತಿನಲ್ಲಿ ಚರ್ಚಿಸಲಾಗುತ್ತಿದೆ ಎಂದು ಪ್ರದರ್ಶನಕಾರರನ್ನು ಚದುರಿಸಿದರು. ಪ್ರಯಾಣಿಕರು ದಡವ ಮೇಲಿಳಿದರು.

ಕಸ್ತೂರಿಬಾ ಮತ್ತು ಮಕ್ಕಳನ್ನು ಸುರಕ್ಷಿತವಾಗಿ ರುಸ್ತುಂಜಿ ಅವರ ಮನೆಗೆ ಕಳುಹಿಸಲಾಯಿತು. ಗಾಂಧೀ ಮಾತ್ರ ರಾತ್ರಿ ಇಳಿದು ಹೋಗಲಿ ಎಂದು ಸಲಹೆಮಾಡಿದರು. ನ್ಯಾಯವಾದಿ ಸ್ನೇಹಿತ ಲಾಫ್ಟನ್ ಗಾಂಧೀಜಿಗೆ ರಾತ್ರಿ ಕಳ್ಳನಹಾಗೆ ಹೋಗುವುದು ಬೇಡ ಈಗಲೇ ಹೊರಟು ಪ್ರತಿಭಟನಕಾರರನ್ನು ಧೈರ್ಯವಾಗಿ ಇದಿರಿಸೋಣ ಎಂದು ಸೂಚಿಸಿದರು. ಗಾಂಧೀಜಿಗೂ ಅದು ಸರಿ ಎನಿಸಿತು. ದಾರಿಯಲ್ಲಿ ನಡೆದು ಹೊರಟರು. ಕೆಲವು ಹುಡುಗರು ಇವರನ್ನು ಗುರುತಿಸಿ "ಗಾಂಧೀ ! ಗಾಂಧೀ !" ಎಂದು ಕೂಗಿದರು. ಸಿಟ್ಟಿಗೆದ್ದಿದ್ದ ಬಿಳಿಯರ ಗುಂಪು ಹಠಾತ್ತನೆ ಮತ್ತೆ ಸೇರಿಬಿಟ್ಟಿತು. ಹೊಡೆಯಿರಿ ! ಬಡಿಯಿರಿ ! ಆ ಗಾಂಧಿಯನ್ನು ಚಚ್ಚಿಹಾಕಿ ! ಎಂದು ಕಿರುಚಿದರು. ತುಮುಲ ಎದ್ದಿತು. ಯಾರೋ ಅವರ ರುಮಾಲನ್ನು ಕಿತ್ತೆಸೆದರು. ಹತ್ತಾರುಜನ ಥಳಿಸಿದರು. ಹೊಡತದ ಸುರಿಮಳೆ ತಡೆಯಲಾರದೆ ಗಾಂಧೀಜಿ ಪಕ್ಕಕ್ಕೆ ಸರಿದು ಕುಸಿದರು. ಜನ ಮೇಲೆ ಬೀಳುತ್ತಲೇ ಇದ್ದರು. ವಿಪರೀತ ನೋವಾಗಿತ್ತು. ಆ ವೇಳೆಗೆ ಆ ದಾರಿಯಲ್ಲಿ ಆಕಸ್ಮಿಕವಾಗಿ ಶ್ರೀಮತಿ ಅಲೆಕ್ಸಾಂಡರ್ ಬಂದರು. ನೋಡಿ ದಿಗ್ಭ್ರಮೆಗೊಂಡರು. ಆಕೆ ಪೋಲೀಸ್ ಮುಖ್ಯಾಧಿಕಾರಿಯ ಹೆಂಡತಿ. ಗಾಂಧೀಜಿಯನ್ನು ಬಲ್ಲವರು. ತಕ್ಷಣ ತಮ್ಮ ಕೊಡೆಯನ್ನು ಬಿಚ್ಚಿ ಗುಂಪಿನಮಧ್ಯೆ ನುಗ್ಗಿ ಗಾಂಧಿಯವರ ಪಕ್ಕದಲ್ಲಿ ನಿಂತರು. ಗುಂಪು ಗಾಬರಿಯಿಂದ ಹಿಮ್ಮೆಟ್ಟಿತು. ಆ ವೇಳೆಗೆ ಪೋಲೀಸರಿಗೂ ದೂರು ತಲುಪಿ ಓಡಿ ಬಂದರು. ರುಸ್ತುಮ್‌ಜಿ ಅವರ ಮನೆಗೆ ತಲುಪಿಸಿದರು.

ರಾತ್ರಿ ಮತ್ತೆ ಬಿಳಿಯರ ಗುಂಪು ರುಸ್ತುಮ್‌ಜಿ ಅವರ ಮನೆಗೆ ಧಾಳಿ ಯಿಟ್ಟಿತು. 'ಗಾಂಧಿಯನ್ನು ನಮಗೆ ಒಪ್ಪಿಸಿ' ಎಂದು ಬೊಬ್ಬೆಯಿಟ್ಟು ಕೂಗಾಡಿದರು. ಪೋಲೀಸ್ ಮುಖ್ಯಾಧಿಕಾರಿ ಅಲೆಕ್ಸಾಂಡರ್ ಅಲ್ಲಿಗೆ ಬಂದರು. ಪರಿಸ್ಥಿತಿ ವಿಕೋಪಕ್ಕೆ ಹೋಗುತ್ತಿತ್ತು. ಗಾಂಧೀಜಿಗೆ ಒಳದಾರಿಯಲ್ಲಿ ವೇಷ ಮರೆಸಿಕೊಂಡು ಪೋಲೀಸ್ ಠಾಣೆಗೆ ಹೋಗಿ ರಕ್ಷಣೆ ಪಡೆಯಿರಿ ಇಲ್ಲದಿದ್ದರೆ ಗುಂಪು ಮನೆಗೂ ಹೆಂಗಸರು ಮಕ್ಕಳಿಗೂ ತೊಂದರೆಮಾಡೀತು ಎಂದು ಹೇಳಿ ಕಳುಹಿಸಿದರು. ಪೋಲೀಸ್ ಪ್ಯಾದೆಯ ಸಮವಸ್ತ್ರಧರಿಸಿ ಗಾಂಧೀಜಿ ಹಿಂಬಾಗಿಲಿನಿಂದ ಹೊರಟು ಪಾರಾದರು. ಅಲ್ಲಿಯತನಕ ಅಲೆಕ್ಸಾಂಡರ್ ಗುಂಪನ್ನು ತಡದು ವಿನೋದಮಾಡುತ್ತಾ "ಗಾಂಧಿಯನ್ನು ನೆಲ್ಲಿಗಿಡಕ್ಕೆ ನೇಣು ಹಾಕಿ" ಎಂದು ರಾಗವಾಗಿ ಹಾಡಿಸುತ್ತಿದ್ದರು. ಆನಂತರ ಗಾಂಧೀ ಅಲ್ಲಿಂದ ತಪ್ಪಿಸಿಕೊಂಡು ಹೋಗಿದ್ದಾರೆ ಎಂದು ತಿಳಿವಾಗ ಗುಂಪು ಬೆಪ್ಪಾಗಿ ಅಲ್ಲಿಂದ ಚದುರಿತು.

ಈ ಘಟನೆಯಿಂದ ನಟಾಲಿನ ಸಜ್ಜನ ಸಮೂಹಕ್ಕೆ ತುಂಬ ನೋವಾಯಿತು. ಕಾನೂನಿನ ಪ್ರಕಾರ ಧಾಳಿಕಾರರನ್ನು ವಿಚಾರಣೆಗೆ ಗುರಿಮಾಡಿ ಎಂದು ಬ್ರಿಟನ್ನಿನ ವಸಾಹತು ಕಾರ್ಯದರ್ಶಿ ಜೊಸೆಫ್ ಚೇಂಬರ್‌ಲೇನ್ ಸೂಚಿಸಿದರು. ಗಾಂಧೀಜಿ ಶಾಂತಚಿತ್ತರಾಗಿ

"ಕಾನೂನಿನ ಮರೆಹೊಕ್ಕು ಕ್ರಮಜರುಗಿಸಲು ನಾನು ಇಚ್ಛಿಸುವುದಿಲ್ಲ. ಆಕ್ರಮಣಕಾರರದಲ್ಲ ತಪ್ಪು. ಅವರ ಹಿಂದೆ ಇದ್ದ ಮುಖಂಡರೇ ಹೊಣೆ. ಯಾರಮೇಲೂ ತಪ್ಪು ಹೊರಿಸಲಾರೆ. ಸತ್ಯಾಂಶ ತಿಳಿದಮೇಲೆ ತಮ್ಮ ನಡತೆಗೆ ತಾವೇ ಪಶ್ಚಾತ್ತಾಪ ಪಡುತ್ತಾರೆ ಎಂದು ನನ್ನ ವಿಶ್ವಾಸ"ಎಂದು ತಿಳಿಸಿದರು. ನಟಾಲ್ ಸರ್ಕಾರಕ್ಕೆ ಆಶ್ಚರ್ಯವಾಯಿತು. ಬಿರುಗಾಳಿ ಬಂದಂತೆಯೇ ಇಳಿದು ಹೋಯಿತು. ಗಾಂಧೀಜಿ ನಿರಪರಾಧಿ ಎಂದು ಪತ್ರಿಕೆಗಳು ಬರೆದವು. ಪ್ರದರ್ಶನಕಾರರೆನ್ನು ಖಂಡಿಸಿದರು. ಗಾಂಧೀಜಿಯ ವರ್ಚಸ್ಸು ನೂರ್ಮಡಿ ಹೆಚ್ಚಿತು.

ಡರ್ಬಾನಿನಲ್ಲಿದ್ದಾಗ ಬ್ಯಾರಿಸ್ಟರ್ ಗಾಂಧಿ ಅವರ ಬಂಗಲೆ ಅತಿಥಿಗಳಿಂದ ತುಂಬಿರುತ್ತಿತ್ತು, ಅವರ ಕಚೇರಿಯ ಸಿಬ್ಬಂದಿಯಲ್ಲಿ ಅನೇಕರಿಗೆ ಅಲ್ಲೇ ವಸತಿ, ಹಿಂದೂ ಮುಸಲ್ಮಾನ ಕ್ರೈಸ್ತ ಬಂಧುಗಳೆಲ್ಲ ನಿಸ್ಸಂಕೋಚವಾಗಿ ಗಾಂಧಿ ಮನೆತನದವರೊಡನೆ ಬೆರೆತು ಹೋಗಿದ್ದರು. ತಮಿಳು. ಗುಜರಾತಿ, ಇಂಗ್ಲೀಷ್ ಮಾತನಾಡುವವರೆಲ್ಲ ಇರುತ್ತಿದ್ದರು. ಮನೆಯೊಡತಿ ಕಸ್ತೂರಿಬಾ ಅನಕ್ಷರಸ್ಥೆಯಾದರೂ ಜಾಣಾಕ್ಷಿ. ಎಲ್ಲವನ್ನೂ ಶಾಂತವಾಗಿ ಸರಿತೂಗಿಸುತ್ತಿದ್ದರು. ಭಾಷೆಗಳನ್ನು ಮಾತನಾಡಲು ಕಲಿತರು. ಆದರೆ ಆಕೆ ತನ್ನಮಟ್ಟಿಗೆ ಸಂಪ್ರದಾಯಸ್ಥ ಮಹಿಳೆ.

ಒಮ್ಮೆ ಕ್ರೈಸ್ತ ಗುಮಾಸ್ತನೊಬ್ಬ ಬಂದು ಸೇರಿದ ಆತ ಹುಟ್ಟಿನಿಂದ ಪಂಚಮ ಜಾತಿಯವನು. ಭಾರತದಲ್ಲಿ ಅವರು ಅಸ್ಪೃಶ್ಯರು. ಗಾಂಧೀಜಿಯ ಮನೆಯಲ್ಲಿ ಇಂಗ್ಲೀಷರಂತೆ ಕೋಣೆಯೊಳಗೇ ಕಕ್ಕಸುಗಳು. ದಿನವೂ ಸ್ವಚ್ಛ ಮಾಡುವ ಕೆಲಸ ಅವರವರದು. ಹೊಸಬರುಬಂದಾಗ ಗಾಂಧೀಜಿಯೋ ಕಸ್ತೂರಿಬಾ ಅವರೋ ಸಂತೋಷದಿಂದ ಈ ಕೆಲಸ ಕೈಗೊಳ್ಳುತ್ತಿದ್ದರು, ಇದಕ್ಕಾಗಿ ಪ್ರತ್ಯೇಕ ಆಳುಗಳಿರಲಿಲ್ಲ. ಆದರೆ ಈ ಅಸ್ಪೃಶ್ಯನ ಕೋಣೆಯ ಕಕ್ಕಸು ಸ್ವಚ್ಛಮಾಡಲು ಕಸ್ತೂರಿಬಾ ಹಿಂಜರಿದು ಬಿಟ್ಟರು. ನೀವೂ ಮುಟ್ಟಲಾಗದು ಎಂದರು. ಗಾಂಧೀಜಿಗೆ ವಿಪರೀತಕೋಪ ಬಂತು. ಕಣ್ಣೀರಿಡುತ್ತ ಶಪಿಸುತ್ತ ತಮ್ಮ ಪತ್ನಿ ಕೆಲಸಮಾಡುವುದು ಅಸಹನೀಯವಾಯಿತು.

"ನನ್ನ ಮನೆಯಲ್ಲಿ ಈ ನಡತೆ ಸಹಿಸಲಾಗದು!" ಎಂದು ಅಧಿಕಾರವಾಣಿಯಿಂದ ಘರ್ಜಿಸಿದರು. ಆಕೆಯ ರಟ್ಟೆಹಿಡಿದು ದರದರನೆ ಗೇಟಿನಬಳಿಗೆ ಎಳೆದು ತಂದು 'ಆಚೆಗೆ ನಡಿ!' ಎಂದು ಸಿಟ್ಟಿನಿಂದ ನುಡಿದು ಹೊರಗೆತಳ್ಳಲು ಉದ್ಯುಕ್ತರಾದರು. ಕಸ್ತೂರಿಬಾ ಹಠಾತ್ತನೆ ಚೇತರಿಸಿಕೊಂಡು "ಏನು ನಿಮಗೆ ನಾಚಿಕೆಯಾಗುವುದಿಲ್ಲವೆ? ಈ ಕಂಡರಿಯದ ನಾಡಿನಲ್ಲಿ ನಾನೆಲ್ಲಿ ಹೋಗಲಿ? ಯಾರಿದ್ದಾರೆ ನನ್ನವರು! ಹೆಂಡತಿಯಾದ ಮಾತ್ರಕ್ಕೆ ಈ ದುರ್ವರ್ತನೆಯನ್ನೆಲ್ಲ ಸಹಿಸಬೇಕೆ? ನಿಮಗೇನು ಬುದ್ಧಿ ಕೆಟ್ಟಿದೆಯೇ? ಸಂಸಾರದ ಜಗಳವನ್ನು ಬೀದಿಗೆಳೆದು ರಂಪಮಾಡುವುದೇ?" ಎಂದು ಪ್ರತಿಭಟಿಸಿ ನಿಂತರು. ಕಣ್ಣೀರು ಧಾರೆಯಾಗಿ ಹರಿದಿತ್ತು.

ಆಕ್ಷಣದಲ್ಲಿ ಗಾಂಧೀಜಿಗೆ ಜ್ಞಾನೋದಯವಾಯಿತು. ಅವರಿಗೂ ಕಸ್ತೂರಿಬಾ ಬಿಟ್ಟರೆ ಆಸರೆಯಾರು ? ಯಾವ ಶಾಲಾ ಶಿಕ್ಷಣದ ಹಿನ್ನೆಲೆಯಿಲ್ಲದಿದ್ದರೂ ಈ ಭಾರತೀಯ ಮಹಿಳೆಯ ಶೀಲ ಸಹನೆಗಳ ಶಕ್ತಿ ಅಪರಿಮಿತವಾಗಿತ್ತು. ಪಶ್ಚಾತ್ತಾಪದಿಂದ ಗಾಂಧೀಜಿ ಕರಿಗಿಹೋದರು.

ಈ ನೆನಪನ್ನು ಹೇಳುತ್ತಾ ಆತ್ಮಕಥೆಯಲ್ಲಿ "ನಾನೀಗ ಅಂತಹ ಮದಾಂಧ ದರ್ಪದ ಪತಿಯಲ್ಲ. ನಾವಿಬ್ಬರೂ ಸಮಾನ ಸಂಗಾತಿಗಳು. ಸಮಾನ ಆದರ್ಶವಾದಿಗಳು. ಒಬ್ಬರು ಇನ್ನೊಬ್ಬರ ಮೇಲೆ ಆಕ್ರಮಣ ಮಾಡಲಾರೆವು. ಆಕೆಯ ನಿಃಸ್ವಾರ್ಥಸೇವೆ ಅತ್ಯಮೋಘವಾದುದು" ಎಂದಿದ್ದಾರೆ.

ಸೇವೈವ ಪರಮೋ ಧರ್ಮಃ

ಗಾಂಧೀಜಿಯ ವಕೀಲಿವೃತ್ತಿ ವೃದ್ಧಿಯಾಗುತ್ತಿತ್ತು, ದರ್ಬಾನಿನ ಪ್ರತಿಷ್ಠಿತ ಯೂರೋಪಿಯನ್ನರ ಮಧ್ಯೆ ಆತ್ಮವಿಶ್ವಾಸದಿಂದ ಸರಿಸಮಾನರಾಗಿ ನಿಂತರು. ಕಸ್ತೂರಿಬಾಗೆ ಆಧುನಿಕ ಜೀವನದ ರೀತಿ ನೀತಿಗಳನ್ನು ಕಲಿಸಿದರು. ಓದುಬರಹದ ಶಿಕ್ಷಣ ಕೊಟ್ಟರು. ಅವರ ಮೂರು ಮತ್ತು ನಾಲ್ಕನೇ ಮಕ್ಕಳು ರಾಮದಾಸ್ ದೇವದಾಸ್ ದಕ್ಷಿಣ ಆಫ್ರಿಕದಲ್ಲೇ ಜನಿಸಿದರು. ಶ್ರೀಮಂತ ವರ್ಗದವರಂತೆ ಇಂಗ್ಲೀಷ್ ಶಾಲೆಗಳಿಗೆ ಮಕ್ಕಳನ್ನು ಕಳುಹಿಸಲು ನಿರಾಕರಿಸಿದರು. ಗುಜರಾತಿ ಶಾಲೆಗಳಿರಲಿಲ್ಲ. ಇದ್ದ ತಮಿಳು. ಹಿಂದಿ ಪ್ರಾಥಮಿಕ ಶಾಲೆಗಳು ಹೀನಸ್ಥಿತಿಯಲ್ಲಿದ್ದವು. ತಾವೇ ಮನೆಯಲ್ಲಿ ಶಿಕ್ಷಣ ಪ್ರಾರಂಭಿಸಿದರು. ಅಲ್ಲಿಂದಲೇ ಗಾಂಧೀಜಿಯ ಜೀವನ ಶಿಕ್ಷಣ ಪ್ರಯೋಗ ಮೊದಲಾಯಿತು. ಸ್ವಾತಂತ್ರ್ಯಪ್ರಿಯತೆ. ಅನುಭವಜ್ಞಾನ. ಉತ್ತಮ ಶೀಲ ಮತ್ತು ಸೇವಾಕಾಂಕ್ಷೆ ಇವೇ ಶಿಕ್ಷಣದ ಮುಖ್ಯ ಅಂಶಗಳು. ಪುಸ್ತಕ ಜ್ಞಾನ ಗೌಣ ಎಂದರು. ಮುಂದೆ ಭಾರತದಲ್ಲಿ ಗಾಂಧೀಜಿ "ಗುಲಾಮಗಿರಿಯ ಕೋಟೆಗಳಾಗಿರುವ ಇಂಗ್ಲೀಷರ ಶಾಲಾ ಕಾಲೇಜುಗಳನ್ನು ಬಿಟ್ಟು ಬನ್ನಿ. ದಾಸ್ಯದ ಸಂಕೋಲೆಗಳೊಡನೆ ವಿದ್ಯೆ ಪಡೆಯುವುದರ ಬದಲು

ಸ್ವಾತಂತ್ರ್ಯಕ್ಕಾಗಿ ಸಾಮಾನ್ಯ ಕಲ್ಲು ಕುಟಿಕನಾಗಿ ಜೀವಿಸುವುದು ಲೇಸು" ಎಂದಾಗ ಇದೇ ವಿಚಾರ ಅವರ ಮನಸ್ಸಿನಲ್ಲಿತ್ತು.

ಸೇವಾ ಪ್ರಧಾನ ಬಾಳಿನ ಆದರ್ಶಗಳು ಸ್ಪಷ್ಟವಾಗಿ ಬೇರೂರಿದ್ದ ಈ ಸಮಯಕ್ಕೆ ಗಾಂಧೀಜಿ ಮತ್ತು ಕಸ್ತೂರಿಬಾ ಒಮ್ಮತದಿಂದ ಬ್ರಹ್ಮಚರ್ಯದ ಸಂಕಲ್ಪಮಾಡಿದರು. ಆಗ ಅವರಿಗೆ ಮೂವತ್ತೇಳು ವರ್ಷ. ಸಮಾಜ ಸೇವೆಗಾಗಿ ಸಂಪೂರ್ಣ ಸಮರ್ಪಿತ ಬಾಳಿಗೆ ಹೀಗೆ ಸತಿಪತಿಯರು ಕಾಮವಾಸನೆ ತೊರೆದು ತಪಸ್ವಿಗಳಾಗಬೇಕೆಂದೇ ಅವರ ಆದರ್ಶ. ಅವರ ಗುರು ಶ್ರೀ ರಾಯ ಚಂದಭಾಯಿ ಹೀಗೆ ಬೋಧಿಸಿದ್ದರು. ಅವರೂ ವಿವಾಹಿತರು. ವ್ಯಾವಹಾರಿಕ ವ್ಯಾಪಾರಿ ವೃತ್ತಿಯಲ್ಲಿ ತೊಡಗಿದ್ದರೂ ಜ್ಞಾನನಿಧಿಯಾಗಿ ತಪಸ್ವಿಗಳಂತೆ ಬಾಳಿದವರು. ಅವರ ಸಂಸರ್ಗದಲ್ಲಿ ಗಾಂಧೀಜಿಯ ಅಂತಃಶಕ್ತಿ ಜಾಗೃತವಾಯಿತು. ಅವರೊಡನೆ ದೀರ್ಘ ಪತ್ರವ್ಯವಹಾರ ನಡೆಸುತ್ತಿದ್ದರು. ವೈರಾಗ್ಯವಿಲ್ಲದ ತ್ಯಾಗ ಫಲಿಸದು. ತ್ಯಾಗಬುದ್ಧಿ ಸಹಜವೂ ಸ್ವಾಭಾವಿಕವೂ ಆಗಬೇಕು. ತ್ಯಾಗಮಾಡಿದುದರಿಂದ ನಮಗೆಂದೂ ವ್ಯಥೆಯಾಗಬಾರದು. ಈ ಆದರ್ಶವೇ ಮುಂದೆ ಗಾಂಧೀಜಿಯ ಆಶ್ರಮ ಜೀವನದ ಏಕಾದಶ ವ್ರತಗಳನ್ನು ಕೈಗೊಳ್ಳಲು ಸ್ಫೂರ್ತಿನೀಡಿತು. ಅವರ ದಿನಚರಿಯೇ ಒಂದು ಅಖಂಡ ಸಾಧನಾಪಥವಾಯಿತು. ಊಟ ಉಡಿಗೆ ಮನರಂಜನೆ ಆಟಪಾಠ ಸ್ನೇಹ ಬಾಂಧವ್ಯ ಎಲ್ಲವೂ ಈ ವ್ರತಗಳ ಆಧಾರದಮೇಲೆ ನಿಲ್ಲಬೇಕು ಎಂದು ಹಠ ತೊಟ್ಟು ಸಾಧಿಸಿ ಗಾಂಧೀಜಿ ಮಹಾತ್ಮರೆನಿಸಿಕೊಂಡರು. ಭಗವದ್ಗೀತೆಯ ಒಂದು ಶ್ಲೋಕ ಅವರ ಮನಸ್ಸನ್ನು ಸೆರೆಹಿಡಿದಿತ್ತು.

ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।

ರಸವರ್ಜಂ ರಸೋಽಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ ॥

(ನಿರಾಹಾರದಿಂದ ವಿಷಯಾಸಕ್ತಿಗಳು ಕಡಮೆಯಾಗುತ್ತವೆ ಆದರೆ ಅವುಗಳಲ್ಲಿ ಆಸೆಬಿಡಲು ಈಶ್ವರ ಸಾಕ್ಷಾತ್ಕಾರವಾಗಬೇಕು.)

ಹೀಗೆ ವಿಚಾರ ಆಚಾರಗಳು ಸಹಜವಾಗಿ ಸಮ್ಮಿಳಿತವಾದಹಾಗೆ ಗಾಂಧೀಜಿಗೆ ಭೋಗಜೀವನ ಬೇಸರವಾಯಿತು. ಸರಳತೆ ಸಾದಾ ಜೀವನದ ಕಡೆ ಮನಸ್ಸು ಹರಿಯಿತು. ತಾವೇ ತಮ್ಮ ಬಟ್ಟೆ ಒಗೆದು ಇಸ್ತ್ರಿಮಾಡಿ ಕೊಳ್ಳುತ್ತಿದ್ದರು. ತಾವೇ ತಮ್ಮ ಕ್ಷೌರಿಕರಾದರು. ಆತ್ಮಗೌರವದ ಬಾಳಿಗೆ ಸ್ವಾವಲಂಬನೆ ಸ್ವಾಭಿಮಾನ ಅಗತ್ಯ ಎಂಬ ದೃಢವಿಶ್ವಾಸದಿಂದ ಇತರರ ಟೀಕೆಗಳಿಗೆ ಹೆದರದೆ ನಡೆದರು. ಆಡಿಕೊಂಡವರು ಮುಂದೆ ಅವಾಕ್ಕಾದರು. ಎಲ್ಲ ಕೆಲಸದಲ್ಲೂ ಪ್ರವೀಣರೆನಿಸಿಕೊಂಡರು. ಗೋಖಲೆಯವರು ದಕ್ಷಿಣ ಆಫ್ರಿಕಕ್ಕೆ ಬಂದಾಗ ಅವರ ಬೆಲೆಯುಳ್ಳ ಅಂಗವಸ್ತ್ರವನ್ನು ಗಾಂಧೀಜಿಯೇ ಇಸ್ತ್ರಿಮಾಡಿಕೊಟ್ಟು ಮೆಚ್ಚಿಗೆ ಪಡೆದುದನ್ನು ಮುಂದೆ ಯಾವಾಗಲೂ ಜ್ಞಾಪಿಸಿಕೊಳ್ಳುತ್ತಿದ್ದರು.

1897-99ರಲ್ಲಿ ದಕ್ಷಿಣ ಆಫ್ರಿಕದ ಮೂಲವಾಸಿಗಳಾದ ಬೋಯರ್ ಜನಾಂಗದವರು ಇಂಗ್ಲೀಷ್ ಆಡಳಿತಗಾರರ ವಿರುದ್ಧ ದಂಗೆಯೆದ್ದರು. ಈ ಬೋಯರ್ ಯುದ್ಧದಲ್ಲಿ ಘಾಯಗೊಂಡವರಿಗೆ ಶುಶ್ರೂಷಾ ದಳವೊಂದನ್ನು ಗಾಂಧೀಜಿ ಸಂಘಟಿಸಿದರು. ಒಂದು ಸಾವಿರಕ್ಕೂ ಮೀರಿ ಭಾರತೀಯರು ಸೇರಿದರು. ಅಪಾಯ ಲೆಕ್ಕಿಸದೆ ಗಾಯಗೊಂಡವರನ್ನು ಯುದ್ಧ ಭೂಮಿಯಿಂದ ಹೊತ್ತುತಂದು ಚಿಕಿತ್ಸೆ ನೀಡುತ್ತಿದ್ದರು. ಬ್ರಿಟಿಷರೊಡನೆ ತಮ್ಮ ಹಕ್ಕುಗಳಿಗಾಗಿ ಶಾಂತಿಯುತ ಸಮರ ನಡೆಸಿದ್ದರೂ ಅವರ ಸಂಕಟಸಮಯದಲ್ಲಿ ರಾಜನಿಷ್ಠೆಯಿಂದ ಭಾರತೀಯರು ಸಹಾಯಕ್ಕೆ ಬಂದದು ಅಲ್ಲಿನ ಆಳರಸರಲ್ಲಿ ಸದ್ಭಾವನೆ ಮೂಡಿಸಿತು. ಭಾರತೀಯರ ಸಂಘಟನೆಯೂ ಉತ್ತಮವಾಯಿತು. ಕಷ್ಟಗಳೊದಗಿದಾಗ ಮನುಷ್ಯಸ್ವಭಾವ ತನ್ನ ಉತ್ಕೃಷ್ಟ ಗುಣಗಳನ್ನು ಹೇಗೆ ತೋರಿಸುತ್ತದೆ ಎಂಬ ಮಧುರ ನೆನಪನ್ನು ಗಾಂಧೀಜಿ ಸ್ಮರಿಸಿದ್ದಾರೆ.

ಮತ್ತೊಮ್ಮೆ ಡರ್ಬಾನಿನಲ್ಲಿ ಪ್ಲೇಗು ರೋಗ ಹರಿಡಿತು. ಅನೇಕರು ಬಲಿಯಾದರು. ಪರಿಸರ ನೈರ್ಮಲ್ಯದ ಕಡೆ ಭಾರತೀಯರು ಗಮನಕೊಡುವುದಿಲ್ಲ ಎಂಬ ಆಕ್ಷೇಪಣೆ ಇತ್ತು. ಗಾಂಧೀಜಿಯೂ ಈ ಬಗ್ಗೆ ತನ್ನವರನ್ನು

ಎಚ್ಚರಿಸಿ ಸ್ಥಳೀಯ ಅಧಿಕಾರಿಗಳ ಜೊತೆ ಸೇರಿ ತಾವೇ ಕೊಳಕು ಆವರಣಗ ಳನ್ನು ಸ್ವಚ್ಛವಾಡತೊಡಗಿದರು, ಸೇವಾಕಾರ್ಯದಲ್ಲಿ ಸಹವಾಸಿಗಳನ್ನೆಲ್ಲ ತೊ ಡಗಿಸಿದರು. ಒಂದು ಹೊಸ ಜಾಗೃತಿ ತಂದುಕೊಟ್ಟರು.

ಈ ವೇಳೆಗೆ ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿ ಆರೇಳು ವರ್ಷಗಳು ಕಳೆದಿ ದ್ದರು. ಅವರಿಗೆ ಸಂಪಾದನೆ ಮುಖ್ಯವಾಗಿರಲಿಲ್ಲವಾಗಿ ತಾವು ಭಾರತಕ್ಕೆ ಹಿಂದಿರುಗಲು ಬಯಸಿದರು. ತಾಯ್ನಾಡಿನ ಕರೆಯೂ ಪ್ರಬಲವಾಗಿತ್ತು. ನಟಾಲ್ ಇಂಡಿಯನ್ ಕಾಂಗ್ರೆಸ್ಸಿನ ಕೆಲಸ ಸುಸಂಘಟಿತವಾಗಿತ್ತು.

ದಕ್ಷಿಣ ಆಫ್ರಿಕದ ಭಾರತೀಯರಿಗೆ ಅವಶ್ಯಕವೆನಿಸಿದರೆ ಗಾಂಧೀಜಿ ಮತ್ತೆ ಹಿಂತಿರುಗಿ ಬಂದು ಮಾರ್ಗದರ್ಶನಮಾಡಬೇಕು ಎಂಬ ಷರತ್ತಿನ ಮೇಲೆ ಅಲ್ಲಿನ ಜನ ಬೀಳ್ಕೊಟ್ಟರು, ಬೀಳ್ಕೊಡಿಗೆ ತುಂಬ ಹೃದಯಸ್ಪರ್ಶಿಯಾ ಗಿತ್ತು. ಸಾವಿರಾರು ರೂಪಾಯಿ ಬೆಲೆಬಾಳುವ ವಸ್ತು ಒಡವೆಗಳನ್ನು ಉಡುಗೊರೆಯಾಗಿ ಕೊಟ್ಟರು. ಕಸ್ತೂರಿಬಾಗೆ ಒಂದು ಬೆಲೆಯುಳ್ಳ ಚಿನ್ನದ ಹಾರ ನೀಡಿದರು, ಇದನ್ನೆಲ್ಲಾ ಸ್ವೀಕರಿಸಿದ ಗಾಂಧೀಜಿಗೆ ಆ ರಾತ್ರಿ ನಿದ್ದೆ ಬರಲಿಲ್ಲ. ತುಂಬ ಅಶಾಂತರಾದರು. ಸ್ವಯಂಪ್ರೇರಿತ ಸಾರ್ವಜನಿಕ ಸೇವೆ ಗಾಗಿ ಈ ಭಾರಿ ಮೊತ್ತದ ಉಡುಗೊರೆಗಳನ್ನು ಸ್ವೀಕರಿಸುವುದು ಪಾಪ ಎನಿ ಸಿತು. ಸ್ವಂತಕ್ಕಾಗಿ ಇದನ್ನು ಸ್ವೀಕರಿಸಬಾರದು ಎಂದು ಸಂಕಲ್ಪಿಸಿ ಮಕ್ಕ ಳನ್ನೂ ಒಪ್ಪಿಸಿದರು. ಕಸ್ತೂರಿಬಾ ಒಪ್ಪಲಿಲ್ಲ. ತಮಗೆ ಬೇಡದಿದ್ದರೂ ಮುಂದೆ ಬರುವ ಸೊಸೆಯರಿಗಾಗಿ ಆಭರಣಗಳನ್ನು ಇಟ್ಟುಕೊಳ್ಳುತ್ತೇನೆ ಎಂದರು. ಗಾಂಧೀಜಿಗೆ ಅದು ಹಿಡಿಸಲಿಲ್ಲ, ಪತ್ನಿಯ ಕಣ್ಣೀರಾಗಲಿ ಸ್ನೇಹಿ ತರ ಒತ್ತಾಯವಾಗಲಿ ಅವರ ನಿರ್ಧಾರವನ್ನು ಬದಲಿಸಲಿಲ್ಲ. ಸೇವೆಗೆ ಎಂದೂ ಬೆಲೆ ಕಟ್ಟಬಾರದು ಪ್ರತಿಫಲ ನಿರೀಕ್ಷಿಸಬಾರದು. ಸೇವೆಯ ಆನಂ ದವೇ ಆದರ ಪ್ರತಿಫಲ. ಈ ಸ್ವತ್ತು ಸಾರ್ವಜನಿಕ ಸೇವೆಗಾಗಿಯೇ ಮೀಸ ಲಾಗಬೇಕು ಎಂದು ಹಠತೊಟ್ಟರು. 1896ರಲ್ಲಿ ಮತ್ತು 1901ರಲ್ಲಿ ಬಂದ ಅಮೂಲ್ಯ ಒಡವೆ ವಸ್ತುಗಳನ್ನೆಲ್ಲ ಬ್ಯಾಂಕಿನಲ್ಲಿಟ್ಟು ಒಂದು ಟ್ರಸ್ಟ್ ಸ್ಥಾಪಿಸಿದರು. ದಕ್ಷಿಣ ಆಫ್ರಿಕದ ಭಾರತೀಯರ ಸೇವೆಗಾಗಿಯೇ ಉಪಯೋ

ಗಿಸುವ ನಿಯಮಮಾಡಿದರು. ನಟಾಲಿನ ಗಣ್ಯ ಸ್ನೇಹಿತರಿಗೆ ಜವಾಬ್ದಾರಿ ವಹಿಸಿದರು. ಈ ತ್ಯಾಗದಿಂದ ಅವರ ಮನಸ್ಸು ಪ್ರಫುಲ್ಲಿತವಾಯಿತು. ದೊಡ್ಡ ಹೊರೆ ಕೆಳಗಿಳಿಸಿದಂತಾಗಿತ್ತು. ಯಾವ ಸ್ವಯಂಪ್ರೇರಿತ ಸಾಮಾಜಿಕ ಸೇವಾಕರ್ತನೂ ತನಗಾಗಿ ಬಹುಮಾನಗಳನ್ನು ಸ್ವೀಕರಿಸುವುದು ತಪ್ಪು ಎಂದು ಕೊನೆಯವರೆವಿಗೂ ಗಾಂಧೀಜಿ ತಮ್ಮ ಸಹ ಕಾರ್ಯಕರ್ತರಿಗೆ ಎಚ್ಚರಿಕೆ ನೀಡುತ್ತಿದ್ದರು, ದಕ್ಷಿಣ ಆಫ್ರಿಕದ ಎಲ್ಲರ ಪ್ರೀತಿವಾತ್ಸಲ್ಯಗಳನ್ನು ಗಳಿಸಿ 1901 ರಲ್ಲಿ ಗಾಂಧೀಜಿ ಭಾರತಕ್ಕೆ ಬಂದರು. ಆದರೆ ಅವರು ಭಾರತದಲ್ಲಿ ನಿಂತುದು ಒಂದೇ ವರ್ಷ. ಮತ್ತೆ 1902ರ ನವೆಂಬರಿನಲ್ಲಿ ದಕ್ಷಿಣ ಆಫ್ರಿಕದ ಭಾರತೀಯರ ನಾಗರಿಕ ಹಕ್ಕುಗಳ ಬಗ್ಗೆ ದೊಡ್ಡ ಪ್ರಶ್ನೆ ಎದ್ದಿತು. ಅಲ್ಲಿನವರ ಕರೆ ಬಂದು ಗಾಂಧೀಜಿ ದರ್ಬಾನಿಗೆ ಹಿಂತಿರುಗಿದರು,

ಭಾರತದಲ್ಲಿ ಗಾಂಧೀಜಿಗೆ ಗೋಖಲೆಯವರ ಅಮೂಲ್ಯ ಸಹವಾಸ ಸಿಕ್ಕಿತು. ಅವರ ವ್ಯಕ್ತಿತ್ವದ ವಿಕಾಸಕ್ಕೆ ಗೋಖಲೆಯವರ ಪ್ರಭಾವ ಸ್ಫೂರ್ತಿ ನೀಡಿತು. 1901ರಲ್ಲಿ ಕಲ್ಕತ್ತೆಯಲ್ಲಿ ನಡೆದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧಿವೇಶನಕ್ಕೆ ಗಾಂಧೀಜಿ ಹೋದರು. ಸರ್‌ದಿನ್‌ಷಾ ವಾಚಾ ಆ ಸಭೆಯ ಅಧ್ಯಕ್ಷರು. 1885ರಲ್ಲಿ ಪ್ರಾರಂಭವಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹದಿನಾರು ವರ್ಷಗಳಲ್ಲಿ ಒಂದು ಪ್ರಬಲ ರಾಜಕೀಯ ಸಂಸ್ಥೆಯಾಗಿ ಸ್ವಾತಂತ್ರ್ಯದ ಬೇಡಿಕೆಯನ್ನು ಪ್ರಚಾರಗೊಳಿಸುತ್ತಿತ್ತು. ಅಂದಿನ ರಾಷ್ಟ್ರನಾಯಕರಾಗಿದ್ದ ಲೋಕಮಾನ್ಯ ತಿಲಕ್, ಸರ್‌ಫಿರೋಜ್‌ಷಾ ಮೆಹ್ತ, ಸುರೇಂದ್ರನಾಥ ಬ್ಯಾನರ್ಜಿ, ಗೋಪಾಲಕೃಷ್ಣ ಗೋಖಲೆ ಮುಂತಾದವರ ನಿಕಟ ಪರಿಚಯ ಗಾಂಧೀಜಿಗೆ ಸ್ಫೂರ್ತಿನೀಡಿತು. ದಕ್ಷಿಣ ಆಫ್ರಿಕದ ಭಾರತೀಯರ ಭವಣೆಯ ಬಗ್ಗೆ ಕಾಂಗ್ರೆಸ್ಸಿನಲ್ಲಿ ಒಂದು ನಿರ್ಣಯ ಮಂಡಿಸಲು ಗೋಖಲೆ ನೆರವಾದರು. ಐದು ನಿಮಿಷ ಗಾಂಧೀಜಿ ಭಾಷಣ ಮಾಡಿದರು. ಎಲ್ಲರೂ ಬೆಂಬಲಿಸಿದರು.

ಅದೇ ಕಾಲಕ್ಕೆ ಕಲ್ಕತ್ತೆಯಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಪ್ರತಿನಿಧಿ ಲಾರ್ಡ್ ಕರ್ಜನ್ನನ ದರ್ಬಾರು ನಡೆಯಿತು. ಇಡೀ ರಾಷ್ಟ್ರದ ದಾಸ್ಯ ಪ್ರತಿ

ಬಿಂಬಿತವಾದಂತೆ ರಾಜ ಮಹಾರಾಜರುಗಳೆಲ್ಲ ಬ್ರಿಟಿಷ್ ಆಳರಸರ ಅಲಂಕೃತ ಭೃತ್ಯರಂತೆ ನೆರೆದಿದ್ದರು. ದೇಶದ ಗೌರವವನ್ನೂ ಮರೆತು ವೈಸ್‌ರಾಯರ ಆಣತಿಗಾಗಿ ಕೈಜೋಡಿಸಿ ನಿಂತುದನ್ನು ಕಂಡು ಗಾಂಧೀಜಿ ಮುಮ್ಮಲ ಮರುಗಿ ದರು, ಹಣ ಅಧಿಕಾರ ಮತ್ತು ಒಣ ಪ್ರತಿಷ್ಠೆಗಳಿಗಾಗಿ ಮಾನವ ಅದೆಷ್ಟು ಹೀನನಾಗಬಲ್ಲ ಎಂದು ಚಿಂತಿಸಿದರು.

ಗೋಖಲೆಯವರ ಅತಿಥಿಯಾಗಿ ಕಲ್ಕತ್ತೆಯಲ್ಲಿ ಒಂದು ತಿಂಗಳು ನಿಂತರು. ಬಂಗಾಳದ ವಿಜ್ಞಾನಿ ಸರ್ ಪ್ರಫುಲ್ಲಚಂದ್ರ ರೇ, ಕಾಲಿಚರಣ ಬ್ಯಾನರ್ಜಿ ಮುಂತಾದ ಪ್ರಮುಖ ರಾಷ್ಟ್ರೀಯವಾದಿಗಳನ್ನು ಭೇಟಿಯಾದರು. ಬ್ರಹ್ಮ ಸಮಾಜದ ಮುಖಂಡರನ್ನು ಕಂಡರು. ಸ್ವಾಮಿ ವಿವೇಕಾನಂದರ ದರ್ಶನಮಾಡಲು ಪ್ರಸಿದ್ಧ ಬೇಲೂರು ಮಠಕ್ಕೆ ಹೋದಾಗ ಸ್ವಾಮಿಗಳು ತೀವ್ರ ಖಾಯಿಲೆಯಿಂದಿದ್ದು ಬೇರೆಕಡೆ ವಾಸಿಸುತ್ತಾ ಯಾರನ್ನೂ ಭೇಟಿಯಾ ಗುವುದಿಲ್ಲ ಎಂದು ತಿಳಿಯಿತು. ಈ ಮಹಾ ಪುರುಷನನ್ನು ಕಾಣಲಾಗಲಿಲ್ಲ ವಲ್ಲ ಎಂದು ಗಾಂಧೀಜಿ ನಿರಾಶೆಗೊಂಡರು. ಕಲ್ಕತ್ತೆಯ ಕಾಳಿದೇವಾಲಯ ದಲ್ಲಿ ನಡೆಯುತ್ತಿದ್ದ ಪ್ರಾಣಿಬಲಿ, ನೆತ್ತರಸೇವೆ, ಭೀಭತ್ಸ ಪೂಜೆಗಳನ್ನೂ ಮುಗ್ಧ ಜನಕೋಟಿಯ ಮೌಢ್ಯವನ್ನೂ ಕಂಡು ಜಿಗುಪ್ಸೆಯಾಯಿತು. ಶಕ್ತಿ ದೇವಿಯಾದ ಮಾತೆ ಹೀಗೆ ನಿರಪರಾಧಿ ಪ್ರಾಣಿಗಳ ಕೊಲೆ ಬೇಡುವಳೇ ಎಂದು ಮರುಗಿದರು. ಬುದ್ಧದೇವನ ನೆನಪಾಯಿತು. ಈ ದೇಶ ಅಹಿಂಸೆಯ ಪಥ ಹಿಡಿಯುವುದು ಹೇಗೆ ಎಂದು ಚಿಂತಿಸಿದರು. ಈ ರಾಕ್ಷಸ ಪದ್ಧತಿಗ ಳನ್ನು ನಿವಾರಿಸಿ ದೇವಾಲಯಗಳನ್ನು ಶುಚಿಗೊಳಿಸುವುದು ಹೇಗೆ ಎಂದು ಬುದ್ಧಿಜೀವಿಗಳೊಡನೆ ಚರ್ಚಿಸಿದರು.

ಮುಂದೆ ಬರ್ಮಾದೇಶಕ್ಕೆ ಕೊಂಚಕಾಲ ಹೋಗಿ ಬಂದರು. ಅಲ್ಲೂ ಬ್ರಿಟಿಷರ ದಬ್ಬಾಳಿಕೆ ಕಂಡರು. ಹಿಂತಿರುಗಿದನಂತರ ವಾರಣಾಸಿಗೆ ಹೊರಟರು ಶ್ರೀಮತಿ ಅನಿಬಸೆಂಟರನ್ನು ಕಂಡು ಗೌರವ ಸಲ್ಲಿಸಿದರು. ಕಲ್ಕತ್ತೆಯಲ್ಲಿ ರಾಮಕೃಷ್ಣ ಪಂಥದ ಸೋದರಿ ನಿವೇದಿತರ ಪರಿಚಯವೂ ಆಗಿತ್ತು. ಈ ಉದಾತ್ತ ವಿದೇಶೀ ಮಹಿಳೆಯರ ವಿಚಾರಧಾರೆ ಅವರನ್ನು ಚಕಿತಗೊಳಿಸಿತು.

ವಾರಣಾಸಿಯ ಪ್ರಸಿದ್ಧ ವಿಶ್ವೇಶ್ವರನ ದರ್ಶನ ಮಾಡಿದರು. ಆದರೆ ಆವರಣದಲ್ಲಿನ ಕೊಳಕು, ಧೂಳು, ನೊಣ, ಸಂತೆ ವ್ಯಾಪಾರ. ಪಂಡಾಗಳ ಪಿಡುಗು, ಎಲ್ಲವೂ ಬೇಸರ ತರುವಂತಿತ್ತು, "ಈಶ್ವರನ ಆರಾಧನೆಗೆಂದು ತೊಡಗಿ ಎಂಥ ಅಪಚಾರಗಳನ್ನು ಮಾಡುತ್ತೇವಲ್ಲ! ಭಗವಂತ ಅಖಂಡ ತಾಳ್ಮೆ ಅಪಾರ ಕರುಣೆಯಿಂದ ನಮ್ಮನ್ನು ಕ್ಷಮಿಸಿದರೂ ನಮ್ಮ ಪಾಪ ಕರ್ಮ ಗಳು ಅನಿಷ್ಟ ಫಲಗಳನ್ನೇ ಕೊಟ್ಟಾವು. ನಿಸರ್ಗದೇವತೆಯ ನಿಷ್ಠುರ ನಿಯ ಮಗಳಿಂದ ನಾವು ಪಾರಾಗಲಾರೆವು" ಎಂದಿದ್ದಾರೆ,

ಗೋಖಲೆಯವರ ಕಾರ್ಯವಿಧಾನ, ಅವರ ಸರಳತೆ, ಸ್ಪಷ್ಟವಿಚಾರ, ಆಳವಾದ ಅಧ್ಯಯನ. ಪ್ರಾಮಾಣಿಕತೆ, ಮೃದುಭಾಷೆ ಎಲ್ಲವೂ ಗಾಂಧೀಜಿಗೆ ಅಮೋಘ ಮೇಲ್ಪಂಕ್ತಿಗಳನ್ನು ಹಾಕಿಕೊಟ್ಟವು, ಅವರ ಸಹಕಾರದಿಂದ ಬೊಂಬಾಯಿನಲ್ಲಿ ಮತ್ತೆ ಬ್ಯಾರಿಸ್ಟರಾಗಿ ನೆಲಸಲು ಶೀರ್ಮಾನಿಸಿ ಸಂಸಾರ ಹೂಡಿದರು. ವಕೀಲರಾಗಿ ವೃತ್ತಿ ಪ್ರಾರಂಭಿಸಿ ಬಹುಬೇಗ ಜನಪ್ರಿಯರಾ ಗುತ್ತಿದ್ದರು. ನ್ಯಾಯಾಲಯಗಳಲ್ಲೂ ನಿಜವಾದ ನ್ಯಾಯಕ್ಕಾಗಿ ಹೋರಾಡ ಬೇಕು. ಹಣಕ್ಕಾಗಿ ಅಪರಾಧಿಗಳಿಗೆ ರಕ್ಷಣೆ ಕೊಡುವುದು ಸರಿಯಲ್ಲ ಎಂದು ಸಂಕಲ್ಪಿಸಿದ್ದರು,

ಬೊಂಬಾಯಿನಲ್ಲಿದ್ದಾಗ ಗಾಂಧೀಜಿಯ ಮಗ ಮಣಿಲಾಲನಿಗೆ ವಿಷಮ ಶೀತಜ್ವರ ಬಂತು. ಬರಬರುತ್ತ ತೀವ್ರವಾಯಿತು. ಪಾರಸಿ ವೈದ್ಯರು ಚಿಕಿತ್ಸೆ ನಡೆಸುತ್ತಿದ್ದರು, ನಿಶ್ಶಕ್ತಿ ವಿಪರೀತವಾದಾಗ ವೈದ್ಯರು ಮೊಟ್ಟೆ ಮತ್ತು ಮಾಂಸದ ಸಾರ ತೆಗೆದು ಕುಡಿಸಿ ಎಂದರು. ಗಾಂಧೀಜಿ ಒಪ್ಪಲಿಲ್ಲ. ತಮ್ಮ ವ್ರತಭಂಗಮಾಡಲು ಮಣಿಲಾಲನೂ ಕಸ್ತೂರಿಬಾ ಅವರೂ ಸಮ್ಮತಿಸ ಲಿಲ್ಲ. ವೈದ್ಯರು ಬರುವುದನ್ನು ನಿಲ್ಲಿಸಿಬಿಟ್ಟರು. ಜ್ವರ ಏರುತ್ತಲೇ ಇತ್ತು. ದೇವರ ಮೇಲೆ ಭಾರಹಾಕಿ ಗಾಂಧೀಜಿ ತಮಗೆ ತಿಳಿದಿದ್ದ ನಿಸರ್ಗ ಚಿಕಿತ್ಸೆಮಾ ಡತೊಡಗಿದರು. ತಮ್ಮ ಸಂಕಲ್ಪ ಶಕ್ತಿಯನ್ನು ಭಗವಂತ ಪರೀಕ್ಷಿಸುತ್ತಿದ್ದಾನೆ ಎನಿಸಿತು, ಹುಡುಗ ವಿಪರೀತ ಸಂಕಟಪಡುತ್ತಿದ್ದ. ವಿಚಲಿತರಾಗದ ಗಾಂ ಧೀಜಿ ದಪ್ಪವಾದ ಒದ್ದೆ ಬಟ್ಟೆಮಾಡಿ ಮೈಗೆಲ್ಲಸುತ್ತಿದರು. ಮೇಲೆ ಕಂಬಳಿ

ಗಳನ್ನು ಹೊದಿಸಿ ತಲೆಗೊಂದು ಒದ್ದೆ ಟವಲು ಕಟ್ಟಿದರು. ರೋಗಿಯ ದೇಹ ಕೆಂಡದಂತೆ ಕಾಯುತ್ತಿತ್ತು, ಸ್ವಲ್ಪಕಾದು ನೋಡಿದರು. ರಾಮ ನಾಮ ಜಪಿಸಿದರು. ಏನೂ ತೋಚದೆ ಸ್ವಲ್ಪಹೊರಗೆ ಹೊರಟು ಸಮುದ್ರ ತೀರದಲ್ಲಿ ನಿರ್ವಿಣ್ಣರಾಗಿ ತಿರುಗಾಡಿದರು. ಮಧ್ಯರಾತ್ರಿ 'ದೇವರೇ ಕಾಪಾಡು' ಎಂದು ಮೌನವಾಗಿ ಮೊರೆಯಿಡುತ್ತಾ ಮನೆಗೆ ಬಂದರು. ಮಣಿಲಾಲ ಒದ್ದಾಡುತ್ತಲೇ ಇದ್ದ. "ಬಾಪೂ ಬಂದೆಯಾ ! ಈ ಹೊದಿಕೆ ತೆಗೆದುಬಿಡು ಬೆಂದು ಹೋಗುತ್ತಿದ್ದೇನೆ" ಎಂದು ನರಳಿದ. ಸ್ವಲ್ಪ ತಾಳಿಕೋ ಎಂದರು ಬಾಪು. ಹಣೆಯ ಮೇಲೆ ಬೆವರು ಹನಿ ಕಾಣಿಸಿಕೊಂಡಿತು. ಸ್ವಲ್ಪಹೊತ್ತು ಬಿಟ್ಟು ಬಟ್ಟೆಗಳನ್ನು ತೆಗೆದರು. ಮಗ ವಿಪರೀತ ಬೆವರುತ್ತಿದ್ದ. ಬೆಳಗಿನ ವೇಳೆಗೆ ಸ್ವಲ್ಪ ಸ್ವಲ್ಪವಾಗಿ ಜ್ವರ ಇಳಿಯಿತು. ತಂದೆ ಮಕ್ಕಳಿಬ್ಬರೂ ಆಯಾ ಸದಿಂದ ನಿದ್ದೆ ಹೋದರು. ಮಣಿಲಾಲ ಅಪಾಯದಿಂದ ಪಾರಾಗಿದ್ದ. ಮುಂದೆ ನಲವತ್ತುದಿನ ಸಸ್ಯಾಹಾರದಿಂದಲೇ ಶುಶ್ರೂಷೆ ನಡೆಯಿತು. ಸಂ ಪೂರ್ಣ ಗುಣವೂ ಆಯಿತು. ಇದು ನನ್ನ ಸಂಕಲ್ಪಶಕ್ತಿಗೆ ಭಗವಂತನ ಆಶೀ ರ್ವಾದ ಎಂದರು ಗಾಂಧೀಜಿ.

ಗಾಂಧೀಜಿ ವಕೀಲರಾಗಿ ಪ್ರವರ್ಧಮಾನರಾಗುತ್ತಿದ್ದರು. ಸ್ವಾನುಭವ ದಿಂದ ದಕ್ಷತೆ ಕಲಿತು ಮೇಲೇರಿದರು. ಗೋಖಲೆಯವರ ಮೆಚ್ಚಿಗೆ ಗಳಿಸಿ ದ್ದರು. ಅಷ್ಟರಲ್ಲಿ ದಕ್ಷಿಣ ಆಫ್ರಿಕದಿಂದ ತುರ್ತು ತಂತಿ ಬಂತು. "ಬ್ರಿಟಿಷ್ ಸರ್ಕಾರದ ಪರ ಸರ್ ಚೇಂಬರ್ಲೇನರು ಇಲ್ಲಿಗೆ ಬರುತ್ತಿದ್ದಾರೆ. ಭಾರತೀ ಯರ ಹಕ್ಕುಗಳನ್ನು ಸ್ಥಾಪಿಸಿಕೊಳ್ಳಬೇಕಾಗಿದೆ. ಕೂಡಲೇ ಹೊರಟು ಬನ್ನಿ" ಎಂದು ತಿಳಿಸಿದ್ದರು. ತಾವು ಹಿಂದೆ ಈ ಸ್ನೇಹಿತರಿಗೆ ವಾಗ್ದಾನ ಮಾಡಿದಂತೆ ದಕ್ಷಿಣ ಆಫ್ರಿಕಕ್ಕೆ ಹೊರಡಲು ಗಾಂಧೀಜಿ ನಿಶ್ಚಯಿಸಿದರು. ಎಷ್ಟು ದಿನ ಇರಬೇಕಾದೀತೆಂಬ ಕಲ್ಪನೆಯೇ ಇರಲಿಲ್ಲ, ಹೆಂಡತಿ ಮಕ್ಕಳನ್ನು ಬೊಂಬಾಯಿ ನಲ್ಲಿ ಇರಲು ವ್ಯವಸ್ಥೆಮಾಡಿದರು. ತಮ್ಮ ಜೊತೆಯಲ್ಲಿ ಸೇವಾನಿಷ್ಠರಾದ ಕೆಲವು ತರುಣರನ್ನು ಸೇರಿಸಿಕೊಂಡು 1902ರ ನವೆಂಬರಿನಲ್ಲಿ ಟ್ರಾನ್ಸ್‌ವಾಲಿಗೆ ಪ್ರಯಾಣ ಮಾಡಿದರು.

ಅದೃಷ್ಟದ ಪಥವನ್ನು ಊಹಿಸುವವರಾರು ! ಒಂದು ವ್ಯವಸ್ಥೆಗೆ ಬಂದಿದ್ದ ಗಾಂಧೀಜಿಯ ಜೀವನ ಮತ್ತೆ ಅನಿಶ್ಚಿತತೆಯ ದಾರಿ ಹಿಡಿದು ದಕ್ಷಿಣ ಆಫ್ರಿಕದ ಜನತಾ ಸೇವೆಗೆ ಕರೆದೊಯ್ದು ಬಿಟ್ಟಿತು. "ಭಗವಂತನ ಸಂಕಲ್ಪ" ಎಂದು ಕೊಂಡರು. "ಸತ್ಯಾನ್ವೇಷಣೆಯ ಬಾಳಿನಲ್ಲಿ ಎಲ್ಲಿಂದ ಹೇಗೆ ಕರೆ ಬರುತ್ತದೆಯೋ ಯಾವ ಅಗ್ನಿಪಥ ಯಾವ ಬೆಳಕಿನೆಡೆಗೆ ಕೊಂಡೊಯ್ಯುವುದೋ ಬಲ್ಲವರಾರು" ಎಂದಿದ್ದಾರೆ ತಮ್ಮ ಆತ್ಮ ಕಥೆಯಲ್ಲಿ ಗಾಂಧೀಜಿ.

—o—

ಅಧ್ಯಾಯ ೩ : ಸತ್ಯಾಗ್ರಹದ ಅನ್ವೇಷಣೆ

(i) ಮುಂಬೆಳಗು

ದರ್ಬಾನಿನಲ್ಲಿ ಚೇಂಬರ್ಲೇನರ ಬಳಿಗೆ ನಿಯೋಗ ಹೊರಡಲು ಸಿದ್ಧತೆಯಾಯಿತು, ದಕ್ಷಿಣ ಆಫ್ರಿಕ ವಸಾಹತಿನಿಂದ ಮೂವತ್ತೈದು ದಶಲಕ್ಷ ಪೌಂಡುಗಳ ವಂತಿಗೆ ವಸೂಲು ಮಾಡಲು ಮತ್ತು ಅಲ್ಲಿನ ಆಂಗ್ಲೇಯರ ಹಾಗೂ ಬೋಯರ್ ಜನಾಂಗದವರನ್ನು ಒಲಿಸಿಕೊಳ್ಳಲು ಚೇಂಬರ್ ಲೇನ್ ಬಂದಿದ್ದರು. ಭಾರತೀಯರ ಮನವಿ ಅವರ ಕಿವಿಗೆ ಬೀಳಲೇ ಇಲ್ಲ. ಎಲ್ಲವೂ ಸ್ಥಳೀಯ ಆಂಗ್ಲೇಯರಿಗೆ ಸೇರಿದುದು ಅಂದುಬಿಟ್ಟರು. "ಪ್ರಬಲರು ಮಾಡಿದ್ದೇ ಸರಿ. ಕತ್ತಿಹಿಡಿದವನೇ ನ್ಯಾಯ ನಿರ್ಣಾಯಕ" ಎಂಬ ವಸಾಹತುಶಾಹೀ ನಿಲುವನ್ನು ಸೂಕ್ಷ್ಮವಾಗಿ ಭಾರತೀಯರಿಗೆ ಸೂಚಿಸಿದಂತಾಗಿತ್ತು. ಗಾಂಧೀಜಿಯ ಅನುಯಾಯಿಗಳ ಬಳಿ ಕತ್ತಿಯೂ ಇರಲಿಲ್ಲ, ಅಧಿಕಾರ ಬಲವೂ ಇರಲಿಲ್ಲ. ನ್ಯಾಯಕ್ಕಾಗಿ ನೈತಿಕ ಧೈರ್ಯದಿಂದ ದಮನಕಾರಿಗಳೆದುರು ನಿಂತು ಅವರ ದಬ್ಬಾಳಿಕೆಗೆ ಮಣಿಯದೆ ವಾದಮಾಡುವುದೊಂದೇ ಮಾರ್ಗ ಎನಿಸಿತು.

ಬರುಬರುತ್ತಾ ಪರಿಸ್ಥಿತಿ ಹದಗೆಟ್ಟು ಭಾರತೀಯರ ಗುಲಾಮಗಿರಿ ಹೆಚ್ಚಾಗುತ್ತಲೇ ಸಾಗುತ್ತದೆ ಎನಿಸಿತು. ಗಾಂಧೀಜಿ ಮನಸ್ಸಿನಲ್ಲೇ ಸಂಕಲ್ಪಿಸಿದರು. "ಈ ಪರಿಸ್ಥಿತಿಯನ್ನೆದುರಿಸಿ ಭಾರತೀಯರು ಇಲ್ಲಿ ಆತ್ಮಗೌರವದಿಂದ ಬಾಳುವಂತೆ ಪರಿವರ್ತಿಸಬೇಕು. ಅದಕ್ಕಾಗಿ ನನ್ನ ಜೀವನವನ್ನೇ ಮುಡಿಪಾಗಿಡಲು ಸಿದ್ಧವಾಗಬೇಕು."

ಹಿಂದೆ ನಟಾಲಿನಲ್ಲಿದ್ದ ತಮ್ಮ ವಕೀಲಿ ಕಾರ್ಯಾಲಯವನ್ನು 1903 ರಲ್ಲಿ ಟ್ರಾನ್ಸ್‌ವಾಲಿನ ಜೊಹಾನ್ಸ್‌ಬರ್ಗ್‌ಗೆ ಬದಲಾಯಿಸಿದರು. ಅಲ್ಲಿನ

ಶ್ರೇಷ್ಠ ನ್ಯಾಯಾಲಯದ ನ್ಯಾಯವಾದಿಯಾಗಿ ಸನ್ನದು ಪಡೆದು ವೃತ್ತಿಯನ್ನು ಮತ್ತೆ ಆರಂಭಿಸಿದರು. ಅತ್ಯಂತ ಸಮರ್ಪಣ ಮನೋಧರ್ಮದಿಂದ ಸಾರ್ವಜನಿಕ ಸೇವೆಗೆ ತೊಡಗಿ ಅತಿ ಸರಳ ಜೀವನ ನಡೆಸುತ್ತಾ ದೊಡ್ಡ ಆದರ್ಶಗಳೆಡೆಗೆ ಸಾಗಬೇಕು ಎನ್ನುವುದೇ ಅವರ ಧ್ಯೇಯವಾಗಿತ್ತು.

ದಕ್ಷಿಣ ಆಫ್ರಿಕದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ್ದ ಬಿಳಿಯ ಜನಾಂಗದವರಿಗೆ ಭಾರತೀಯರು ಅಲ್ಲಿ ನೆಲೆನಿಂತು ಉನ್ನತಿಗೇರುವುದು ತಮಗೆ ಅಪಾಯ ಎಂಬ ಭಯವಿತ್ತು. ಕೇವಲ ದುಡಿಮೆಗಾರರಾಗಿ ಬಂದು ಗುಲಾಮರಂತೆ ಜೀವಿಸಿ ಕರಾರು ಅವಧಿಮುಗಿದೊಡನೆ ಹಿಂತಿರುಗಬೇಕು ಎಂದೇ ಅವರ ಇಚ್ಛೆ. ವ್ಯಾಪಾರ, ವಕೀಲಿ, ವ್ಯವಸಾಯ ಮತ್ತಿತರ ಉದ್ಯೋಗಗಳಲ್ಲಿ ಇತರರಂತೆ ತೊಡಗಿ ಸರಿಸಮಾನ ಪ್ರಜೆಗಳಾಗಿ ಸಾಮಾಜಿಕ ಮೇಲ್ವರ್ಗಕ್ಕೆ ಸೇರುವುದನ್ನು ಬಿಳಿಯರು ವಿರೋಧಿಸುತ್ತಿದ್ದರು. ವರ್ಣದ್ವೇಷದ ವಿಷಬೀಜವನ್ನು ಬೇರೂರಿಸುತ್ತಿದ್ದರು. ಪಾಶ್ಚಾತ್ಯ ಪೌರ್ವಾತ್ಯ ಸಂಸ್ಕೃತಿಗಳೇ ಬೇರೆ ; ಬಿಳಿಯ ಜನಾಂಗದವರದೇ ಶ್ರೇಷ್ಠ ನಾಗರೀಕತೆ ಮಿಕ್ಕವರೆಲ್ಲ ಬರ್ಬರರು. ಆಫ್ರಿಕದ ಜನ ತಮ್ಮ ನೆರಳಿನಲ್ಲೇ ಬದುಕಬೇಕು ಎಂದು ಅವರು ವಾದಿಸುತ್ತಿದ್ದರು. ನೌಕರಿಗಾಗಿ ಹೋಗಿದ್ದ ಹಲವು ವಿದ್ಯಾವಂತ ವಿಷ್ಯನರೂ ದಾಸರಾಗಿ ಅವರ ಆಶ್ರಯದಲ್ಲಿ ಆತ್ಮಗೌರವವನ್ನೂ ಮರೆತು ಹಣಕ್ಕಾಗಿ ಹಾತೊರೆಯುತ್ತಿದ್ದರು ಇದನ್ನೆಲ್ಲ ಗಾಂಧೀಜಿ ಸೂಕ್ಷ್ಮವಾಗಿ ಗ್ರಹಿಸಿದ್ದರು. ತಮ್ಮ ಸ್ವಾರ್ಥದ ಏಳಿಗೆಗಾಗಿ ಬಿಳಿಯರು ಹೀಗೆ ತರ್ಕಿಸುವುದು ಸಹಜ ಎಂದರು. ಅವರ ತಪ್ಪು ಕಲ್ಪನೆಗಳನ್ನು ತೊಲಗಿಸಿ ಮಾನವ ಸಮಾಜದ ಸಮಾನ ಮೌಲ್ಯಗಳನ್ನು ಅರಿಯುವಂತೆ ಮಾಡಬೇಕು. ಆದಕ್ಕಾಗಿ ಅಹಿಂಸಾತ್ಮಕ ಪ್ರತಿಭಟನೆಯ ಸುಸಂಸ್ಕೃತ ಮಾರ್ಗದಿಂದ ಅವರ ದುರ್ನಡತೆಗಳಿಗೆ ಕನ್ನಡಿ ಹಿಡದರೆ ಅವರೇ ಪರಿವರ್ತಿತರಾಗುತ್ತಾರೆ ಎಂದು ಗಾಂಧೀಜಿ ನಂಬಿದ್ದರು. ಮುಂದೆ 1924ರಲ್ಲಿ ತಾವೇ ಬರೆದ 'ದಕ್ಷಿಣ ಆಫ್ರಿಕದಲ್ಲಿ ಸತ್ಯಾಗ್ರಹ' ಎಂಬ ಗ್ರಂಥದ ಪ್ರಾರಂಭದಲ್ಲೇ ಹೀಗೆ ಬರೆದಿದ್ದಾರೆ.

> "ನಾನು ದಕ್ಷಿಣ ಆಫ್ರಿಕದ ಚರಿತ್ರೆಯನ್ನು ಬರೆಯುತ್ತಿಲ್ಲ. ಯಾವ ಸತ್ಯಾಗ್ರಹಕ್ಕಾಗಿ ಜೀವಿಸುತ್ತಿದ್ದೇನೆಯೋ, ಯಾವುದಕ್ಕಾಗಿ

ಬಲಿದಾನ ಮಾಡಬಯಸುತ್ತೇನೋ ಆ ಸತ್ಯಾಗ್ರಹ ಪ್ರಾರಂಭ ವಾದ ಬಗೆ, ದೊಡ್ಡ ಪ್ರಮಾಣದಲ್ಲಿ ಅದನ್ನನುಸರಿಸಿದ ರೀತಿ– ಇದನ್ನು ಜನ ತಿಳಿಯಲೆಂದೂ ಅರ್ಥಮಾಡಿಕೊಂಡು ಅದರಂತೆ ನಡೆಯುವ ಪ್ರಯತ್ನಮಾಡಲೆಂದೂ ಈ ಪುಸ್ತಕ ಬರೆಯುತ್ತಿದ್ದೇನೆ."

ಟ್ರಾನ್ಸ್‌ವಾಲಿನಲ್ಲಿ ಬ್ರಿಟಿಷ್ ಆಡಳಿತ ಏರ್ಪಟ್ಟ ಮೇಲೆ ಅಲ್ಲಿ ನೆಲೆಸಿದ್ದ ಭಾರತೀಯರು ಪ್ರತಿಯೊಬ್ಬರೂ ಅಧಿಕೃತ ರಹದಾರಿ ಪತ್ರ ಪಡೆಯಬೇಕಾಗಿತ್ತು. ಅದಕ್ಕಾಗಿ ಅವರ ಸಹಿಯನ್ನೋ ಹೆಬ್ಬೆಟ್ಟಿನ ಗುರುತನ್ನೋ ಪಡೆಯುತ್ತಿದ್ದರು, ಮುಂದೆ ಒಂದು ಸಾರಿ ಭಾವಚಿತ್ರ ಕೊಡಬೇಕು ಎಂದು ಅಧಿಕಾರಿಗಳೇ ನಿರ್ಣಯಿಸಿದರು. ಶಾಂತಿ ರಕ್ಷಣಾ ಕಾನೂನಿನ ನೆಪದಲ್ಲಿ ಈ ಆಜ್ಞೆಗಳು ಜಾರಿಯಾಗುತ್ತಿದ್ದವು. ಭಾರತೀಯರು ವಿರೋಧಮಾಡಿ ಈ ಬಗ್ಗೆ ಮನವಿ ಸಲ್ಲಿಸಿದರು. ನಿಯೋಗ ಹೋಗಿ ಕೇಳಿಕೊಂಡರು. ಶಾಂತಿ ಪಾಲನೆಗೆ ತಾವೂ ಬದ್ಧರೆಂದೂ ಇಂಥ ಅವಮಾನಕರ ಕಾನೂನು ಕಟ್ಟಳೆಗಳನ್ನು ತರಬಾರದೆಂದೂ ವಾದಿಸಿದರು. ಹಳೆಯ ರಹದಾರಿ ಬದಲು ಮತ್ತೆ ಬೇಕಾದರೆ ಹೊಸ ರಹದಾರಿ ಪಡೆಯಲೂ ಒಪ್ಪಿದರು, ಹೊಸ ವಲಸೆಗಾರರನ್ನು ತಂದು ತುಂಬುವುದೇ ತಮ್ಮ ಉದ್ದೇಶವಲ್ಲ ಎಂದು ತಿಳಿಸಿದರು. ಶಾಂತಿ ರಕ್ಷಣೆಯ ಹೆಸರಿನಲ್ಲಿ ಹೊಸದಾಗಿ ಬಂದವರಿಗೆಲ್ಲ ತೊಂದರೆ ಕೊಡುವುದು ತರವಲ್ಲ ಎಂದರು. ತಾವೇ ಮುಂದೆ ಬಂದು ಹೊಸ ರಹದಾರಿಗಳನ್ನು ರಿಜಿಸ್ಟರ್ ಮಾಡಿಸಿದರು. ಭಾರತೀಯರ ಈ ಸತ್ಯಶೀಲತೆ, ಉದಾರ ಮನಸ್ಸು, ಸತ್ಪ್ರಜೆಗಳಾಗಿ ಬಾಳುವ ಮನೋಧರ್ಮ ವ್ಯಕ್ತವಾದರೂ ಬ್ರಿಟಿಷ್ ಸರ್ಕಾರ ಪ್ರತಿಕ್ರಿಯಿಸಿದ ರೀತಿ ಅಸಭ್ಯವಾಗಿಯೇ ಇತ್ತು.

ಹೀಗೆ ಏಷ್ಯಾಟಿಕ್ ಇಲಾಖೆಯವರ ಆಕ್ರಮಣಗಳನ್ನು ತಡೆಗಟ್ಟುವುದರಲ್ಲಿ ಎರಡು ವರ್ಷಗಳೇ ಕಳೆದವು. ಬ್ರಿಟಿಷ್ ಅಧಿಕಾರಿಗಳು ಮಣಿಯಲಿಲ್ಲ. ಟ್ರಾನ್ಸ್‌ವಾಲಿನ ಶಾಸನ ಸಭೆಯಲ್ಲಿ ಏಷ್ಯದ ಜನರ ಹಕ್ಕುಗಳನ್ನು ಮೊಟಕು ಮಾಡುವ ಮಸೂದೆ ಒಂದನ್ನು ಚರ್ಚೆಗೆ ತಂದರು. ಈ ಕರಡು ಮಸೂದೆ

ಅಲ್ಲಿನ ಗೆಜೆಟ್ಟಿನಲ್ಲಿ ಪ್ರಕಟವಾಯಿತು. ವಿರುದ್ಧವಾಗಿ ಹೋರಾಡಲು ಭಾರತೀಯರು ನಿಶ್ಚಯಿಸಿದರು,

ಇದೇ ಕಾಲಕ್ಕೆ ನಟಾಲಿನಲ್ಲಿ ಮೂಲವಾಸಿಗಳಾದ ಜೂಲು ಜನಾಂಗ ತಮ್ಮ ಅಸ್ತಿತ್ವಕ್ಕಾಗಿ ಹೋರಾಡಲು ದಂಗೆ ಎದ್ದರು. ಅಂತರ್ಯುದ್ಧ ಪ್ರಾರಂಭವಾಯಿತು. ಗಾಂಧೀಜಿ ಮತ್ತೆ ಸ್ವಯಂಸೇವಕ ಪಡೆ ಸಂಘಟಿಸಿದರು. ಗಾಯಾಳುಗಳ ಶುಶ್ರೂಷೆ ಮಾಡಿದರು, ಅವರನ್ನು ಚಿಕಿತ್ಸೆಗಾಗಿ ಯುದ್ಧರಂಗದಿಂದ ಸಾಗಿಸುತ್ತಿದ್ದರು. ತಾವೇ ಅಪಾಯಗಳನ್ನೆದುರಿಸಿ ದೂರ ದೂರ ನಡೆದು ಹೋಗಿ ಅವರನ್ನು ಹೊತ್ತುತರುತ್ತಿದ್ದರು. ಎರಡು ಕಡೆಯವರಿಗೂ ಶ್ರದ್ಧೆಯಿಂದ ಸೇವೆ ಮಾಡಿದರು, ಬಿಳಿಯ ಜನಾಂಗದವರು ಚಕಿತರಾಗಿ ಮೆಚ್ಚಿಗೆಯ ಪ್ರಶಂಸೆಮಾಡಿದರು. ಅನೇಕರ ಗಾಢಸ್ನೇಹ ಸಂಪಾದಿಸಿದರು ಗಾಂಧೀಜಿ, ಮತ್ತೆ ಟ್ರಾನ್ಸ್‌ವಾಲಿಗೆ ಹಿಂತಿರುಗಿದರು.

ಏಷ್ಯನ್ ಪ್ರಜೆಗಳ ಬಗ್ಗೆ ಯೋಚಿಸಿದ್ದ ಮಸೂದೆ ಅತ್ಯಂತ ಅವಮಾನಕರ ಅಂಶಗಳನ್ನೊಳಗೊಂಡಿತ್ತು, ಅವು ಹೀಗಿದ್ದವು.

> ಎಂಟು ವರ್ಷಕ್ಕೆ ಮೀರಿದ ಭಾರತೀಯ ನಿವಾಸಿಗಳೆಲ್ಲ ರಿಜಿಸ್ಟರಾದ ರಹದಾರಿ ಪತ್ರ ಪಡೆಯಬೇಕು. ರಿಜಿಸ್ಟ್ರಾರರ ಮುಂದೆ ಖೈದಿಗಳಂತೆ ಹೆಬ್ಬೆರಳ ಗುರುತು ಕೊಡಬೇಕು. ಇದಕ್ಕಾಗಿ ಗೊತ್ತಾದ ಅವಧಿಯಲ್ಲಿ ಅರ್ಜಿಸಲ್ಲಿಸದಿದ್ದರೆ ಜುಲ್ಮಾನೆ ಅಥವ ಗಡೀಪಾರು ಶಿಕ್ಷೆ. ಪೋಲೀಸರು ಎಲ್ಲಿ ಕೇಳಿದರಲ್ಲಿ ಈ ರಹದಾರಿ ತೋರಿಸಬೇಕು. ಇಲ್ಲದಿದ್ದರೆ ಜುಲ್ಮಾನೆ ಅಥವ ಸಜ. ಯಾರ ಮನೆಗೆ ಬೇಕಾದರೂ ಪೋಲೀಸರು ಅಪ್ಪಣೆಯಿಲ್ಲದೆ ನುಗ್ಗಿ ರಹದಾರಿಗಳನ್ನು ಶೋಧಿಸಬಹುದಾಗಿತ್ತು. ಈ ಶಾಸನಕ್ಕೆ ಯಾರೂ ಹೊರತಾಗಿರಲಿಲ್ಲ. ವ್ಯಾಪಾರಿಗಳು, ಕಸುಬುದಾರರು, ಇತರ ವೃತ್ತಿಗಳಲ್ಲಿದ್ದ ಸಜ್ಜನರು ಯಾರನ್ನು ಬೇಕಾದರೂ ಈ ಶಾಸನದ ಬಲದಿದ ಟ್ರಾನ್ಸ್‌ವಾಲಿನಿಂದ ಹೊರದೂಡಿ ಅವರ ಆಸ್ತಿಪಾಸ್ತಿಗಳನ್ನು ಕಸಿದುಕೊಳ್ಳಬಹುದಾಗಿತ್ತು.

ಪರಿಸ್ಥಿತಿ ಗಂಭೀರವಾಗುತ್ತಿತ್ತು. 1906ರ ಸೆಪ್ಟೆಂಬರ್ 6 ರಂದು ಜೊಹಾನ್ಸ್‌ಬರ್ಗಿನ ನಾಟಕ ಮಂದಿರ ಒಂದರಲ್ಲಿ ಭಾರತೀಯರ ದೊಡ್ಡ ಸಭೆ ಸೇರಿತು. ಹಿರಿಯ ಗಣ್ಯ ವರ್ತಕ ಅಬ್ದುಲ್ ಘನಿ ಅಧ್ಯಕ್ಷತೆ ವಹಿಸಿದರು. ಮೂರು ನಾಲ್ಕು ಸಹಸ್ರ ಭಾರತೀಯ ಪ್ರಜೆಗಳು ಸೇರಿದ್ದರು. ಒಕ್ಕೊರೊಲಿನ ತೀರ್ಮಾನ ಮೊಳೆಯಿತಂ.

"ಇಂತಹ ಅವಮಾನಕರ ಶಾಸನಕ್ಕೆ ನಾವು ಹೇಡಿಗಳಂತೆ ತಲೆತಗ್ಗಿಸಬಾರದು. ಉಗ್ರವಾಗಿ ವಿರೋಧಿಸೋಣ. ಆಗಲೂ ಶಾಸನವಾದರೆ ಶಾಸನ ಭಂಗಮಾಡಿ ಎಲ್ಲರೂ ಶಿಕ್ಷೆ ಅನುಭವಿಸೋಣ, ದೇವರ ಸಾಕ್ಷಿಯಾಗಿ ಪ್ರಮಾಣ ಮಾಡೋಣ. ಪ್ರಾಮಾಣಿಕವಾಗಿ ನಡೆದು ಕೊಳ್ಳೋಣ."

ಗಾಂಧೀಜಿಗೆ ರೋಮಾಂಚನವಾಯಿತು. ಎಂಥ ಬಲಿದಾನಕ್ಕೂ ಈ ಸರಳ ಸ್ವಭಾವದ ಜನ ಸಿದ್ಧರಾಗಿದ್ದರು. ಎಲ್ಲರೂ ಎದ್ದು ನಿಂತು ಕೈಯೆತ್ತಿ ಒಕ್ಕೊರೊಲಿನಿಂದ ಘೋಷಿಸಿದ ಆ ದೃಶ್ಯ ಗಾಂಧೀಜಿಯ ಹೃದಯ ಮನಸ್ಸುಗಳನ್ನು ತುಂಬಿ ನಿಂತಿತು. ಆತ್ಮಶಕ್ತಿಯ ಹಿಮಾಲಯವನ್ನೇ ಅನಾವರಣ ಮಾಡಿತು. ಜನರ ಧೈರ್ಯ ಮತ್ತು ನಂಬಿಕೆ ಮುಗಿಲೇರಿ ನಿಂತಿತ್ತು.

ಅವರ ಸಂಕಲ್ಪವನ್ನು ದೃಢಪಡಿಸಲು ಗಾಂಧೀಜಿ ಈ ಹೋರಾಟದ ಹೆಜ್ಜೆಗಳನ್ನೂ ಅದಕ್ಕಾಗಿ ಬೇಕಾದ ಮಾನಸಿಕ ಸಿದ್ಧತೆಯನ್ನೂ ಹೃದಯ ಮುಟ್ಟುವಂತೆ ಬಣ್ಣಿಸಿದರು.

"ಪ್ರತಿಯೊಬ್ಬರೂ ಹೃದಯ ಶೋಧಿಸಿಕೊಳ್ಳಿ ; ಸಾಕಷ್ಟು ಶಕ್ತಿ ಇದೆ ಎಂದು ಅಂತರಾತ್ಮನ ಪ್ರೇರಣೆಯಾದರೆ ಮಾತ್ರ ವಚನ ಕೊಡಿ. ಸಹಸ್ರಾರು ಭಾರತೀಯರು ಸತ್ಸಂಕಲ್ಪದಿಂದ ದೃಢವಾಗಿ ನಿಂತರೆ ಈ ಶಾಸನ ರದ್ದಾದೀತು. ಹೋರಾಟ ಮುಂದುವರಿದರೆ ಏನಾಗಬಹುದು ಎಂಬ ಕಲ್ಪನೆಯೂ ನಿಮಗಿರಬೇಕು.

ನಮ್ಮವರೇ ಅಪಹಾಸ್ಯ ಮಾಡಬಹುದು. ಜೊತೆಯವರು ಹೆದರಿ ಹಿಮ್ಮೆಟ್ಟಬಹುದು. ನಮ್ಮನ್ನು ಸೆರೆ ಹಾಕಿ ಅವಮಾನ ಗೊಳಿಸಬಹುದು. ಕಠಿಣ ಶಿಕ್ಷೆ ಕೊಟ್ಟು ದುಡಿಸಿಯಾರು. ಕ್ರೌರ್ಯದಿಂದ ಹೊಡೆದಾರು, ಜುಲ್ಮಾನೆಗಳನ್ನು ಹಾಕಿಯಾರು. ಆಸ್ತಿಗಳು ಜಫ್ತಿಯಾಗಬಹುದು. ಉಪವಾಸ ಸತ್ಯಾಗ್ರಹ ಮಾಡಿ ಸಾವಿಗೂ ಸಿದ್ಧರಾಗಬೇಕಾದೀತು. ಇವೆಲ್ಲ ಆಗುವ ಸಂಭವವುಂಟು. ಆದ್ದರಿಂದ ದೃಢತೆ ಇರಬೇಕು. ಅಂಥವರು ಎಷ್ಟೇ ಕಡಮೆ ಜನ ಇದ್ದರೂ ನಮಗೆ ಜಯ ಸಿದ್ಧ ಎಂದು ನಿರ್ಧಾರವಾಗಿ ನಿರ್ಭಯನಾಗಿ ಹೇಳಬಲ್ಲೆ.

ನನ್ನ ಜವಾಬ್ದಾರಿ ನನಗೆ ಗೊತ್ತು, ಸತ್ವ ಪರೀಕ್ಷೆಯ ಸಮಯ ಬಂದರೆ ನಾನೊಬ್ಬನೇ ಉಳಿದರೂ ಶಾಸನಕ್ಕೆ ತಲೆಬಾಗುವ ಬದಲು ಪ್ರಾಣವನ್ನೇ ಪಣವಿಟ್ಟು ಹೋರಾಡುತ್ತೇನೆ, ಜಂಭ ದಿಂದ ಹೇಳುತ್ತಿಲ್ಲ. ಅಪಾರ್ಥಮಾಡಬೇಡಿ, ಸಾಮೂಹಿಕ ಪ್ರತಿಜ್ಞೆ ಮಾಡಿದಾಗ ಪ್ರತಿವ್ಯಕ್ತಿಯ ಜವಾಬ್ದಾರಿ ಇದ್ದೇ ಇರುತ್ತದೆ. ಇತರರು ಏನೇ ಮಾಡಿದರೂ ನಾನು ಪ್ರತಿಜ್ಞಾ ಭಂಗಮಾಡುವುದಿಲ್ಲ ಎಂದು ನಿಲ್ಲಬೇಕು" ಎಂದರು.

ಈ ಚಳುವಳಿಗೆ ಏನು ಹೆಸರು ಕೊಡಬೇಕು ಎಂಬ ಪ್ರಶ್ನೆ ಬಂತು. ಪಾಶ್ಚಾತ್ಯರು ಅನುಸರಿಸುತ್ತಿದ್ದ ನಿಶ್ಶಸ್ತ್ರ ಸಾತ್ವಿಕ ಪ್ರತಿಭಟನೆ (ಪ್ಯಾಸಿವ್ ರೆಸಿಸ್ಟೆನ್ಸ್) ಎನ್ನಲು ಗಾಂಧೀಜಿಗೆ ಸಮಾಧಾನವಾಗಲಿಲ್ಲ. ಅದು ದುರ್ಬಲರ ಅಸಹಕಾರ ಮಾತ್ರ ಎನಿಸಿತು. ಈ ಹೋರಾಟದಲ್ಲಿ ಆತ್ಮೋನ್ನತಿಯ ವಿಶೇಷ ಶಕ್ತಿ ಅಡಗಿದೆ, ಒಂದು ಹೊಸತತ್ವ ಜನಿಸಿದೆ ಎನಿಸಿತು. ಮಗನ ಲಾಲ ಗಾಂಧಿ 'ಸದಾಗ್ರಹ' ಎಂದು ಸೂಚಿಸಿದರು. ಒಪ್ಪಿಗೆಯಾದರೂ ಪೂರ್ಣ ಅರ್ಥ ಬರುವುದಿಲ್ಲ ಎನಿಸಿತು. ಗಾಂಧೀಜಿಯ ಮನಸ್ಸಿಗೇ ಹೆಸರು ಮಿಂಚಿತು 'ಸತ್ಯಾಗ್ರಹ' ಎಂದು ತಿದ್ದುಪಡಿ ಮಾಡಿದರು.

ಸತ್ಯ ಮತ್ತು ಪ್ರೇಮ ಅಥವ ಕ್ರಿಯಾತ್ಮಕ ಅಹಿಂಸಾ ಶಕ್ತಿ ಎಂದು ವಿವರಣೆ ಇತ್ತರು. ಈ ಮಹಾಮಂತ್ರ ಪ್ರಚಲಿತವಾಗಿ ವಿಶ್ವಕ್ಕೆ ಒಂದು

ಪ್ರಜ್ವಲಿತ ಶಾಶ್ವತ ಜೀವನವಿಧಾನ ಗಾಂಧೀಜಿಯ ಪ್ರಯೋಗಗಳಿಂದ ಬೆಳಗಿ ನಿಂತಿತು.

(ii) ಸತ್ಯಾಗ್ರಹಿಯಾಗಿ

ಟ್ರಾನ್ಸ್‌ವಾಲ್ ಸರ್ಕಾರ ಹಠತೊಟ್ಟು ಏಷ್ಯನರ ಹಕ್ಕುಗಳನ್ನು ಮೊಟಕು ಮಾಡುವ ಶಾಸನವನ್ನೇ ಅನುಮೋದಿಸಿತು. ಜಾರಿ ಮಾಡಲು ಬ್ರಿಟಿಷ್ ಸಾರ್ವಭೌಮ ಸರ್ಕಾರದ ಅನುಮತಿ ಬೇಕಾಗಿತ್ತು, ಏಷ್ಯನ್ನರ ಪರವಾಗಿ ಗಾಂಧೀಜಿ ಮತ್ತು ಟ್ರಾನ್ಸ್‌ವಾಲ್ ಬ್ರಿಟಿಷ್ ಇಂಡಿಯನ್ ಅಸೋಸಿಯೇಷನ್ನಿನ ಪ್ರಮುಖ ಹೆಚ್. ಓ. ಆಲಿ ಇಂಗ್ಲೆಂಡಿಗೆ ನಿಯೋಗ ಹೋಗಿ ಅಲ್ಲಿನ ಸರ್ಕಾರಕ್ಕೆ ಮನವಿಮಾಡಲು ತೀರ್ಮಾನಿಸಿದರು,

ಶ್ರೀ ದಾದಾಭಾಯಿ ನವರೋಜಿ ಆಗ ಲಂಡನ್ನಿನಲ್ಲಿದ್ದರು, ಅವರ ಸಹಕಾರದಿಂದ ವಲಸೆ ರಾಷ್ಟ್ರಗಳ ಕಾರ್ಯದರ್ಶಿ ಲಾರ್ಡ್ ಎಲ್ಗಿನ್ನರನ್ನು ನಿಯೋಗ ಭೇಟಿಮಾಡಿತು. ಭಾರತ ಕಾರ್ಯದರ್ಶಿ ಲಾರ್ಡ್‌ಮಾರ್ಲೆ, ಕಾಮನ್ಸ್ ಸಭೆಯ ಸರ್ ವಿಲಿಯಂ ವೆಡರ್‌ಬರ್ನ್ ಇವರುಗಳ ಸಹಾನುಭೂತಿಯೂ ದೊರೆಯಿತು. ಗಾಂಧೀಜಿ ಮತ್ತು ಆಲಿ ಒಂದು ತಿಂಗಳಕಾಲ ಅಲ್ಲಿದ್ದು ಸಾರ್ವಜನಿಕಾಭಿಪ್ರಾಯ ರೂಪಿಸಿದರು. ಲಾರ್ಡ್ ಎಲ್ಗಿನ್ ಈ ಕರಾಳ ಶಾಸನವನ್ನು ಪುನರ್ವಿಮರ್ಶೆಗೆ ಕಳುಹಿಸುವರೆಂದು ಗಾಂಧೀಜಿಗೆ ಅಲ್ಲಿನ ಮಿತ್ರರು ತಿಳಿಸಿದರು. ಗೆಲುವಿನ ಗುಂಗಿನಲ್ಲೇ ನಿಯೋಗ ಹಿಂತಿರುಗಿತು.

ಆದರೆ ಈ ಭರವಸೆ ಪೊಳ್ಳಾಯಿತು. 1907ರಲ್ಲಿ ಸ್ವಾಯತ್ತ ಸರ್ಕಾರ ರಚಿಸಿಕೊಂಡ ಟ್ರಾನ್ಸ್‌ವಾಲ್ ಈ ಶಾಸನವನ್ನು ತಾನೇ ಜಾರಿಮಾಡುವ ಹಕ್ಕುಗಳಿಸಿತು. ಲಾರ್ಡ್ ಎಲ್ಗಿನ್ ತಮ್ಮದೇನೂ ಅಧಿಕಾರವಿಲ್ಲ ಎಂದು ಬಿಟ್ಟರು. ಈ ವಕ್ರನೀತಿಯನ್ನು ಗಾಂಧೀಜಿ ಕಟುವಾಗಿ ಟೀಕಿಸಿದರು. ಟ್ರಾನ್ಸ್‌ವಾಲಿನ ಬಿಳಿಯ ಜನಾಂಗದವರು ಇದನ್ನು ನಾಯಿಗೆ ಕೊರಳಪಟ್ಟಿ ಹಾಕುವ ಶಾಸನ ಎಂದು ಅಟ್ಟಹಾಸದಿಂದ ವರ್ಣಿಸಿದರು. ಹೊಸ ಸರ್ಕಾರದ

ಸೂತ್ರಗಳನ್ನು ಓಡಿದ ಜನರಲ್ ಸ್ಮಾಟ್ಸ್ ಶಾಸನವನ್ನು ಜಾರಿಮಾಡಿ ಟ್ರಾನ್ಸ್‌ವಾಲಿನ ಭಾರತೀಯರೆಲ್ಲ ರಹದಾರಿ ಪಡೆಯಬೇಕು ಎಂದು ಆಜ್ಞಾಪಿಸಿದರು.

ಹೋರಾಟ ಎರಡನೆ ಮಜಲು ಮುಟ್ಟಿತು. ಈ ಅಪಮಾನದ ಶಾಸನ ಅಲ್ಲಿನ ಹದಿಮೂರು ಸಾವಿರ ಭಾರತೀಯರನ್ನು ಎಚ್ಚರಗೊಳಿಸಿತು. ದೃಢ ವಿಶ್ವಾಸದಿಂದ ಮತ್ತೆ ಪ್ರತಿಜ್ಞೆ ತೊಟ್ಟು ಗಾಂಧೀಜಿಯ ನಾಯಕತ್ವದಲ್ಲಿ ಸತ್ಯಾಗ್ರಹಕ್ಕೆ ಸಿದ್ಧರಾದರು. ಅಧಿಕಾರ ಶಾಹಿಗೆ ಪ್ರತಿನುಡಿದು "ಟ್ರಾನ್ಸ್‌ವಾಲ್ ಸರ್ಕಾರದ ಶಕ್ತಿ ಎಷ್ಟು ಎಂದು ನಮಗೆ ಗೊತ್ತಿದೆ. ಆದರೆ ಈ ಕಾನೂನಿಗೆ ನಾವೆಂದೂ ತಲೆಬಾಗುವುದಿಲ್ಲ. ಶಿಕ್ಷೆಗಳನ್ನು ಅನುಭವಿಸುತ್ತೇವೆ" ಎಂದರು.

ರಹದಾರಿ ನೀಡುವ ಕಛೇರಿಗಳು ಜುಲೈ ಒಂದರಂದು ಪ್ರಾರಂಭವಾದವು. ಅಂದಿನಿಂದಲೇ ಸ್ವಯಂಸೇವಕರು ಬಹಿರಂಗವಾಗಿ ಕಾವಲು ನಿಂತರು. ಯಾರಾದರೂ ರಹದಾರಿ ಪಡೆಯುತ್ತೇವೆಂದರೆ ಅವರಿಗೆ ತಿಳಿಯಹೇಳಿ ಆದರೆ ಓಯಾಳಿಸಬೇಡಿ ಬಲಾತ್ಕರಿಸಬೇಡಿ ಒರಟುತನ ತೋರಬೇಡಿ. ಇದು ಸತ್ಯಾಗ್ರಹದ ಮೊದಲ ನಿಯಮ ಎಂದು ಗಾಂಧೀಜಿ ಕಟ್ಟಾಜ್ಞೆಮಾಡಿದರು. ಪೋಲೀಸರು ದಸ್ತಗಿರಿಮಾಡಿದರೆ ವಿನಯದಿಂದ ಜೈಲಿಗೆ ಹೋಗಿ, ಬೈದರೆ ಹೊಡೆದರೆ ತಾಳ್ಮೆಯಿಂದ ಸಹಿಸಿ. ಪ್ರಮಾದ ನಡೆಯಲು ಎಡೆಗೊಡಬೇಡಿ ಎಂದು ಬೋಧಿಸಿದರು. ಪ್ರತಿಯೊಂದು ಸ್ವಯಂಸೇವಕರ ಪಡೆಗೂ ಒಬ್ಬ ನಾಯಕ. ಎಲ್ಲರೂ ತರುಣರು. ಹೆಚ್ಚು ಓದಿದವರಲ್ಲ, ಆದರೆ ಅವರ ಸಂಯಮ ಧೈರ್ಯ, ಆತ್ಮವಿಶ್ವಾಸ, ಅಮೋಘವಾಗಿತ್ತು,

ಕೆಲವರ ದಸ್ತಗಿರಿಯಾಯಿತು. ನ್ಯಾಯಾಲಯದಲ್ಲಿ ನಿಲ್ಲಿಸಿದರು. ನ್ಯಾಯಾಧೀಶರು ಅವರನ್ನು ನಿರಪರಾಧಿಗಳು ಎಂದು ಬಿಡುಗಡೆಮಾಡಿದರು. ಉತ್ಸಾಹ ಹೆಚ್ಚಿ ಹೋರಾಟಕ್ಕೆ ಕಾವು ಬಂತು. ಹಿಂಸೆಯ ಬೆದರಿಕೆಗೆ ಯಾರೂ ಮಣಿಯಲಿಲ್ಲ. ಕಾನೂನು ಮುರಿದು ಹಲವರು ಸೆರೆಮನೆ ಸೇರಿದರು. ರಹದಾರಿ ಪಡೆಯಬೇಕಾಗಿದ್ದ ಅವಧಿ ಮುಗಿದಿತ್ತು. ಆಳ್ವಿದೆಯಿಂದ ಹೆದರಿ

ರಹದಾರಿ ಪಡೆದವರ ಸಂಖ್ಯೆ ಐನೂರಕ್ಕೆ ಮೀರಲಿಲ್ಲ. ಅಧಿಕಾರಶಾಹಿ ಸಿಟ್ಟಿಗೆದ್ದಿತು. ಮುಖಂಡರನ್ನೆಲ್ಲ ಹಿಡಿದು ಜೈಲಿಗೆ ಹಾಕಿದರು. ಮಿಕ್ಕವರನ್ನು ಟ್ರಾನ್ಸ್‌ವಾಲ್ ಬಿಟ್ಟು ಹೊರಡಿ ಎಂದರು, ಯಾರೂ ಕದಲಲಿಲ್ಲ. ಗಾಂಧೀಜಿಯ ಮೇಲೆ ಕಟ್ಟಳೆ ಜರುಗಿಸಿದರು. ಯಾವ ನ್ಯಾಯಾಲಯದಲ್ಲಿ ವಕೀಲರಾಗಿದ್ದರೋ ಅಲ್ಲೇ ಅಪರಾಧಿಯಾಗಿ ನಿಂತರು. ಅವರ ಹೇಳಿಕೆ, ನ್ಯಾಯಕ್ಕಾಗಿ ಅವರು ತೊಟ್ಟಪಣ, ಅಹಿಂಸೆಯ ಪ್ರತಿಜ್ಞೆ ಎಲ್ಲವೂ ಅವರ ಸಹೋದ್ಯೋಗಿಗಳನ್ನು ಚಕಿತಗೊಳಿಸಿತು. ಯೂರೋಪಿನವರಾದ ಅನೇಕ ಮಿತ್ರರು ಜೊತೆಗೂಡಿದರು. ಕಾನೂನುಭಂಗಕ್ಕಾಗಿ ಗಾಂಧೀಜಿಗೆ ಎರಡು ತಿಂಗಳ ಸಾದಾಶಿಕ್ಷೆ ವಿಧಿಸಿದರು. ಅವರ ಹಿಂದೆಯೇ ನೂರಾರು ಸತ್ಯಾಗ್ರಹಿಗಳು ಶಾಂತರೀತಿಯಲ್ಲಿ ಕಾನೂನು ಮುರಿದು ಶಿಕ್ಷೆಗೆಮುಂದಾಗಿ ಸೆರೆಮನೆ ಸೇರಿದರು. ಯಾರೂ ಹೇಡಿಗಳಾಗಿ ಹಿಮ್ಮೆಟ್ಟಲಿಲ್ಲ. ಜೈಲಿನ ಕಷ್ಟಕರ ಜೀವನಕ್ಕೆ ಹೆದರಲಿಲ್ಲ, ಬದಲಾಗಿ ಸೆರೆಮನೆಯೇ ಒಂದು ಶಿಸ್ತು ಶಿಕ್ಷಣದ ಶಾಲೆಯಾಯಿತು. ಸಾಮೂಹಿಕ ಜೀವನ, ಉಪಯುಕ್ತ ದುಡಿಮೆ, ವ್ಯಾಯಾಮ. ಪ್ರಾರ್ಥನೆ ಮುಂತಾದುವು ದಿನಚರಿಯಲ್ಲಿ ಸೇರಿದವು. ಪಠಾಣ ತರುಣನೊಬ್ಬ ಜೈಲಿನ ಸಿಪಾಯಿಗಳನ್ನನುಕರಿಸಿ ಇತರರಿಗೆ ಕವಾಯಿತು ಕಲಿಸಿದ. ತನ್ನದೇ ಇಂಗ್ಲೀಷ್‌ಪದಗಳನ್ನು ಪ್ರಯೋಗಿಸಿದ,"ಸ್ಟಾಂಡ್ ಅಟ್ ಈಸ್"ಅನ್ನಲು "ಸಂಡೀಸ್" ಎಂದು ದೊಡ್ಡ ಕಂಠದಿಂದ ಆಜ್ಞೆಮಾಡುತ್ತಿದುದನ್ನು ಗಾಂಧೀಜಿ ನಕ್ಕು ನೆನೆದಿದ್ದಾರೆ.

ಎಂದೂ ಕಾಣದ ಇಂಥ ವಿಚಿತ್ರ ಸಮರವನ್ನೆದುರಿಸಲು ಜನರಲ್ ಸ್ಮಟ್ಸರಿಗೆ ತೋರದಾಯಿತು. ಹಲವು ಪತ್ರಿಕೆಗಳು ಭಾರತೀಯರನ್ನು ಬೆಂಬಲಿಸಿದವು. ಇಂಗ್ಲೆಂಡಿನಲ್ಲೂ ಭಾರತದಲ್ಲೂ ಸುದ್ದಿಗಳು ಪ್ರಕಟವಾದವು. ಬ್ರಿಟಿಷ್ ಪ್ರಜೆಗಳಾದ ಭಾರತೀಯರಿಗೆ ಅನ್ಯಾಯವಾಗಬಾರದು ಎಂದು ಇಂಗ್ಲೆಂಡಿನ ಸಜ್ಜನರನೇಕರು ಬರೆದರು, ಸಾರ್ವಜನಿಕಾಭಿಪ್ರಾಯದ ಒತ್ತಡ ಹೆಚ್ಚುತ್ತಿತ್ತು. ಸಾತ್ವಿಕ ಪ್ರತಿಭಟನೆಮಾಡಿ ದಿನವೂ ಸತ್ಯಾಗ್ರಹಿಗಳು ಸೆರೆಯಾಗುತ್ತಿದ್ದರು. ಕೊನೆಗೆ ಸ್ಮಟ್ಸರು ತಮ್ಮ ಸ್ನೇಹಿತರೂ "ಟ್ರಾನ್ಸ್‌ವಾಲ್ ಲೀಡರ್" ಪತ್ರಿಕೆ ಸಂಪಾದಕರೂ ಆಗಿದ್ದ ಆಲ್ಬರ್ಟ್ ಕಾರ್ಟ್‌ರೈಟ್

ರನ್ನು ರಾಜಿಮಾಡಿಸಲು ಕೇಳಿದರು. ಶಾಸನದ ಬಲಾತ್ಕಾರ ತ್ಯಜಿಸುವುದಾಗಿಯೂ ಸ್ವಂತ ಇಚ್ಛೆಯಿಂದ ತಾವೇ ರಹದಾರಿ ಪಡೆಯುವುದಾದರೆ ಶಾಸನವನ್ನು ರದ್ದುಮಾಡುವುದಾಗಿಯೂ ಗಾಂಧೀಜಿಗೆ ಹೇಳಿಕಳುಹಿಸಿದರು. ಬಿಳಿಯರ ಕ್ರೋಧವೂ ಇದರಿಂದ ಶಮನವಾದೀತೆಂದು ವಾದಿಸಿದರು.

ಭಾರತೀಯರ ಪರವಾಗಿ ಗಾಂಧೀಜಿಯನ್ನು ಸ್ಮಟ್ಸ್ ಮೊದಲಬಾರಿಗೆ ತಮ್ಮ ಭೇಟಿಗಾಗಿ ಆಹ್ವಾನಿಸಿದರು. ಆತ್ಮಗೌರವಕ್ಕೆ ಕುಂದುಬಾರದಂತೆ ಅಧಿಕಾರಿಗಳು ತಮ್ಮನ್ನು ಕಂಡು ಸ್ವಯಂಪ್ರೇರಿತರಾಗಿ ಕೊಡುವ ರಹದಾರಿಗಳನ್ನು ಅಂಗೀಕರಿಸಬೇಕೆಂದೂ ಅನಂತರ ಈ ಕರಾಳ ಶಾಸನವನ್ನು ರದ್ದುಮಾಡಬೇಕೆಂದೂ ಗಾಂಧೀಜಿ ಸ್ಮಟ್ಸ್‌ರನ್ನು ಕೇಳಿದರು. ಕಾರ್ಟ್‌ರೈಟರೆದುರಿಗೆ ಸ್ಮಟ್ಸ್ ಅದೇ ರೀತಿ ವಚನಕೊಟ್ಟರು.

ಸ್ಮಟ್ಸರ ಕಛೇರಿಯಲ್ಲೇ 'ನಿಮ್ಮ ಬಿಡುಗಡೆಯಾಗಿದೆ' ಎಂದು ಗಾಂಧೀಜಿಗೆ ತಿಳಿಸಿದರು. ಜೊಹಾನ್ಸ್‌ಬರ್ಗ್‌ಗೆ ಹೋಗಿ ತಮ್ಮವರನ್ನು ಭೇಟಿಯಾಗಲು ಅವರಬಳಿ ಒಂದು ಬಿಡಿಕಾಸೂ ಇರಲಿಲ್ಲ. ಸ್ಮಟ್ಸ್‌ರ ಕಾರ್ಯದರ್ಶಿ ಸಂತೋಷದಿಂದ ಆ ವೆಚ್ಚಕ್ಕಾಗಿ ತಾನು ಹಣಕೊಟ್ಟ. ಪ್ರೇಮದ ಪರಿಸರ ಸತ್ಯಾಗ್ರಹದಲ್ಲಿ ಹೇಗೆ ನಿರ್ಮಿತವಾಗುತ್ತದೆ ಎಂಬ ಅನುಭವವಾಯಿತು ಗಾಂಧೀಜಿಗೆ.

ಒಪ್ಪಂದವನ್ನು ಒಂದು ಸಭೆಯಲ್ಲಿ ಗಾಂಧೀಜಿ ವಿವರಿಸಿದರು, ಸ್ಮಟ್ಸರ ವಚನ ನಂಬಿ ನಾವೇ ರಹದಾರಿ ಪಡೆಯೋಣ ಶಾಸನ ಖಂಡಿತ ರದ್ದಾಗುವುದು ಎಂದರು. ನಮ್ಮ ನಮ್ರತೆ, ನ್ಯಾಯಪರತೆ ಮತ್ತು ರಾಜೀಮನೋಭಾವ ಎದುರಾಳಿಗಳನ್ನು ಗೆಲ್ಲುತ್ತದೆ ಎಂದು ತಿಳಿಸಿದರು. ಆದರೆ ಎಲ್ಲರೂ ಒಪ್ಪಲಿಲ್ಲ. ಪಠಾಣ ತರುಣ ಮೀರ್‌ಆಲಮ್ ನೇರವಾಗಿ ವಿರೋಧಿಸಿದ. "ಯಾರಾದರೂ ರಹದಾರಿ ಪಡೆಯಲು ಹೋದರೆ ಕೊಂದು ಬಿಡುತ್ತೇನೆ" ಎಂದು ಆವೇಶದಿಂದ ಹೇಳಿದ, ಬೆರಳು ಗುರುತು ಕೊಡುವುದು ಅವಮಾನ ಎಂದ. 'ನಮ್ಮನ್ನು ವಂಚಿಸಲು ಸ್ಮಟ್ಸರಿಂದ ನೀವು ಲಂಚ ಪಡೆದಿದ್ದೀರಿ'

ಎಂದು ಮೂದಲಿಸಿದ. ಆದರೆ ಬಹುಪಾಲಿನ ಜನ ಗಾಂಧೀಜಿಯನ್ನು ಸಮರ್ಥಿಸಿದರು.

ರಹದಾರಿ ಪಡೆಯಲು ಗೊತ್ತಾದ ದಿನ ಗಾಂಧೀಜಿಯ ಕಾರ್ಯಾಲಯದಲ್ಲಿ ಅಗಾಧ ಜಗಸಂದಣಿ, ಮೀರ್ಆಲಮ್‌ನೂ ಬಂದಿದ್ದ. ಕೋಪದಿಂದ ಬೆಂಕಿಯಾಗಿದ್ದ, ಗಾಂಧೀಜಿ ಸಂಕಲ್ಪಬದ್ಧರಾಗಿ ರಹದಾರಿ ಕೊಡಲು ಹೊರಟರು. ಹಿಂದೆಯೇ ಬಂದ ಆಲಮ್ ದೊಡ್ಡದೊಣ್ಣೆಯಿಂದ ಬಲವಾಗಿ ಗಾಂಧೀಜಿಯ ತಲೆಗೆ ಹೊಡೆದುಬಿಟ್ಟ. 'ಹೇರಾಮ್' ಎಂದು ಅವರು ಕೆಳಗೆ ಬಿದ್ದರು. ರಕ್ತ ಹರಿಯಿತು. ಆಲಮ್‌ನ ಗೆಳೆಯರು ಒದ್ದು ನೂಕಿದರು. ಗಾಂಧೀಜಿಗೆ ಪ್ರಜ್ಞೆ ತಪ್ಪಿತು. ಜನ ಓಡಿ ಬಂದರು. ಪೋಲೀಸರು ಆಲಮ್‌ನನ್ನು ಹಿಡಿದರು. ಗಾಂಧೀಜಿಗೆ ರಕ್ಷಣೆ ಕೊಟ್ಟರು. ಮಿತ್ರರಾದ ರೆವೆರೆಂಡ್‌ಡೋಕ್ ಎಂಬ ಪಾದ್ರಿ ಗಾಂಧಿಯವರನ್ನು ತಮ್ಮ ಮನೆಗೆ ಕರೆದೊಯ್ದು ಶುಶ್ರೂಷೆ ಮಾಡಿದರು.

ಪ್ರಜ್ಞೆ ಬಂದೊಡನೆ "ಮೀರ್ ಆಲಮ್ ಎಲ್ಲಿದ್ದಾನೆ" ಎಂದರು ಗಾಂಧೀಜಿ. ಬಂಧಿಸಿದ್ದಾರೆಂದು ತಿಳಿದು "ಅವನನ್ನು ಬಿಡುಗಡೆಮಾಡಿ. ತಪ್ಪು ತಿಳವಳಿಕೆಯಿಂದ ಕೋಪಗೊಂಡಿದ್ದಾನೆ" ಎಂದರು. ಆ ಕೂಡಲೇ ಜ್ಞಾಪಿಸಿಕೊಂಡು "ನಾನು ಮೊಟ್ಟಮೊದಲು ರಹದಾರಿ ಪಡೆಯಬೇಕು. ದಯಿಮಾಡಿ ಅಧಿಕಾರಿಗಳನ್ನು ಇಲ್ಲಿಗೇ ಬರಮಾಡಿ" ಎಂದು ತಿಳಿಸಿದರು. ಉನ್ನತಾಧಿಕಾರಿ ಚಾಮ್ನೆ ಅವರಿಗೆ ಇದು ತಿಳಿದು ಅವರು ವಿಸ್ಮಿತರಾದರು. ಕೂಡಲೇ ಪತ್ರಗಳನ್ನು ಗಾಂಧೀಜಿ ಬಳಿಗೆ ತಾವೇ ತಂದು ಸಹಿ ಪಡೆದರು. ಅವರ ಅಂತಃಕರಣ ನೀರಾಗಿತ್ತು.

ಈ ಘಟನೆ ಬಗ್ಗೆ ಸಾರ್ವಜನಿಕ ಹೇಳಿಕೆ ಕೊಟ್ಟರು ಗಾಂಧೀಜಿ :

> "ಈ ಕೃತ್ಯಮಾಡಿದವರು ನನ್ನ ದಾರಿ ತಪ್ಪು ಎಂದು ಪ್ರಾಮಾಣಿಕವಾಗಿ ತಿಳಿದಿದ್ದರು. ಆದ್ದರಿಂದ ಸೇಡು ತೀರಿಸಿಕೊಂಡರು. ಯಾರೂ ಅವರ ಮೇಲೆ ಕೈಮಾಡಬಾರದು. ಈಗ ಚೆಲ್ಲಿದ

ರಕ್ತದಿಂದ ಹಿಂದೂ ಮುಸಲ್ಮಾನರ ಸಖ್ಯ ಗಾಢವಾಗಬೇಕೆಂದು ಹಾರೈಸುತ್ತೇನೆ. ರಹದಾರಿ ಬಗ್ಗೆ ನನ್ನ ನಿಲುವು ಬದಲಾಗಿಲ್ಲ. ಯಾರೂ ಹೆದರಿ ಹಿಂದೆಗೆಯಬಾರದು. ಸರ್ಕಾರ ಈ ಶಾಸನ ವನ್ನು ರದ್ದುಮಾಡಲು ವಚನಬದ್ಧವಾಗಿದೆ."

ಮೀರ್ ಆಲಮ್‌ಗೆ ನ್ಯಾಯಾಲಯದಲ್ಲಿ ಮೂರು ತಿಂಗಳು ಶಿಕ್ಷೆಯಾ ಯಿತು. ಕೇಳಿ ಗಾಂಧೀಜಿ ದುಃಖಿಸಿದರು. ಅವನ ಬಗ್ಗೆ ತಮಗೆ ಏನೂ ಕ್ರೋಧವಿಲ್ಲ ಎಂದರು. ರೆವರೆಂಡ್ ಡೋಕರ ಮನೆಯಲ್ಲಿ ಅವರ ಪತ್ನಿ ಮತ್ತು ಮಗಳು ಅತ್ಯಂತ ಪ್ರೀತಿಯಿಂದ ಶುಶ್ರೂಷೆಮಾಡಿದರು. ಬಂದ ಯೂರೋಪಿಯನ್ ಸ್ನೇಹಿತರು ಸತ್ಯಾಗ್ರಹದ ಉದಾತ್ತರೀತಿ ಕಂಡು ವಿಸ್ಮಿತ ರಾದರು, ರೆವೆರೆಂಡ್‌ಡೋಕರ ಪರಿಚಯ ಗಾಂಧೀಜಿಗೆ ಆಗತಾನೇ ಆಗಿತ್ತು. ಅವರ ಸಹೃದಯತೆ ದೈವ ಭಕ್ತಿ ಗಳಿಗೆ ಮಾರುಹೋಗಿದ್ದರು. ಗಾಂಧೀಜಿಯ ಪ್ರೇಮಮಾರ್ಗ ಏಸುವಿನ ಬೋಧೆಗಳಿಗೆ ಪ್ರತ್ಯಕ್ಷ ಜೀವನದಲ್ಲಿ ರೂಪುಕೊಡುವ ಅಮೋಘಸಾಧನೆ ಎಂದು ಡೋಕರು ಗೌರವತಾಳಿದರು. ಭಾರತೀಯರ ಬೆಂಬಲಕ್ಕೆ ನಿಂತರು. ಚರ್ಚಿನವರು ಕುಪಿತರಾದರೆಂದು ಹೆದ ರಲಿಲ್ಲ. 1909ರಲ್ಲೇ ಗಾಂಧೀಜಿಯ ಮೊದಲ ಜೀವನ ಚರಿತ್ರೆ ಬರೆದರು ರೆವರೆಂಡ್ ಡೋಕ್. ಅದನ್ನು ಮಹರ್ಷಿ ಟಾಲ್‌ಸ್ಟಾಯ್ ಓದಿ ಮೆಚ್ಚಿ ಗಾಂಧೀಜಿಯ ಅಹಿಂಸಾತ್ಮಕ ಹೋರಾಟಕ್ಕೆ ಮುಕ್ತಕಂಠದಿಂದ ಆಶೀರ್ವಾದ ನೀಡಿದ್ದರು,

ಇಂಡಿಯನ್ ಒಪನಿಯನ್ ಪತ್ರಿಕೆ ನಡೆಸಲು ನೆರವಾದ ಆಲ್ಬರ್ಟ್ ವೆಸ್ಟ್ ಆಫ್ರಿಕದ ಬ್ರಿಟಿಷ್ ಭಾರತೀಯ ಸಂಘ ನಡೆಸುತ್ತಿದ್ದ ಡಬ್ಲ್ಯು. ರಿಚ್. ಪತ್ರಿಕೋದ್ಯಮಿ ಹೆನ್ರಿಪೋಲಕ್ ಮುಂತಾದವರು ಹೋರಾಟದಲ್ಲಿ ತಾವೇ ಧುಮುಕಿದರು. ಜರ್ಮನಿಯ ಶ್ರೀಮಂತ ಇಂಜನಿಯರ್ ಹೆನ್ರಿಕಾಲೆನ್ ಬಾಕ್ ಆತ್ಮೀಯ ಗೆಳೆಯರಾಗಿಬಿಟ್ಟರು. ತಮ್ಮ ಸರ್ವಸ್ವವನ್ನೂ ಗಾಂಧೀಜಿ ಯ ಪ್ರಯೋಗಗಳಿಗೆ ಅರ್ಪಿಸಿದರು, ಸತ್ಯಾಗ್ರಹದ ಪ್ರಭೆ ಹೃದಯಗಳನ್ನು ಗೆಲ್ಲುತ್ತಲೇ ಸಾಗಿತು.

ಕುಟಿಲ ರಾಜಕಾರಣ ಸಾಮ್ರಾಜ್ಯಶಾಹಿಗಳ ಹುಟ್ಟುಗುಣವಾಗಿತ್ತು. ಜನರಲ್ ಸ್ಮಟ್ಸ್ ಶಾಸನ ರದ್ದುಮಾಡಲಿಲ್ಲ. ಬದಲಾಗಿ ಎಲ್ಲ ಏಷ್ಯನ್ ವಲಸೆಗಾರರ ಬಗ್ಗೆ ಹೊಸ ಶಾಸನ ಮಂಡಿಸಿದ. ಈ ವಚನಭಂಗದಿಂದ ಗಾಂಧೀಜಿ ಮಾಡಿಕೊಂಡ ಒಪ್ಪಂದ ಗಾಳಿಗೆ ತೂರಿಹೋಯಿತು.

ವಂಚಿತರಾದ ಗಾಂಧಿ ಮತ್ತೆ ಸತ್ಯಾಗ್ರಹಿಗಳೊಡನೆ ಸಮರಕ್ಕೆ ಧುಮುಕಿದರು. ಕೊಟ್ಟ ಮಾತನ್ನು ಸ್ಮಟ್ಸ್ ಉಳಿಸಿಕೊಳ್ಳಲಿಲ್ಲ, ನಾನು ನಂಬಿ ಮೋಸಹೋದೆ ಎಂದು ಬಹಿರಂಗವಾಗಿ ಒಪ್ಪಿಕೊಂಡರು. ಎಲ್ಲರೂ ಪಡೆದಿದ್ದ ರಹದಾರಿಗಳನ್ನು ಒಂದು ಗೊತ್ತಾದ ದಿನ ರಾಶಿಹಾಕಿ ಬಹಿರಂಗವಾಗಿ ಸುಟ್ಟು ಹಾಕಬೇಕು. ಅದರಿಂದ ಬರುವ ಶಿಕ್ಷೆಗಳನ್ನೆಲ್ಲ ಅನುಭವಿಸಿ ನಿರ್ಭಯವಾಗಿ ಹೋರಾಡಬೇಕು ಎಂದು ಸಮಸ್ತ ಭಾರತೀಯರು ಘೋಷಿಸಿದರು.

ಆಗಸ್ಟ್ 16 ರಂದು ಈ ಹೋಳಿ ಮಾಡುತ್ತೇವೆ ಎಂದು ಅಧಿಕಾರಿಗಳಿಗೆ ಮುನ್ನೆಚ್ಚರಿಕೆ ಕೊಟ್ಟರು. ಈ ಕರಾಳ ಶಾಸನಕ್ಕೆ ತಲೆಬಾಗುವುದಿಲ್ಲ ಎಂಬ ಪ್ರತಿಜ್ಞೆ ಮೊಳಗಿತು, ಪಠಾಣ ಮೀರ್ ಆಲಮ್ ಮೊದಲ ಸಾಲಿನಲ್ಲಿ ನಿಂತ. ಹೊಡೆದುದಕ್ಕಾಗಿ ಗಾಂಧೀಜಿಯ ಕ್ಷಮೆಬೇಡಿದ. ಅವನ ಬಗ್ಗೆ ಗಾಂಧೀಜಿ ಅದೇ ಪ್ರೇಮದಿಂದ ನಡೆದುಕೊಂಡರು. ಆತ ಆ ಸ್ಪಂದನಕ್ಕೆ ಮಾರುಹೋದ. ಸ್ಮಟ್ಸ್ ಸರ್ಕಾರ ಕೂಡಲೇ ಸಶಸ್ತ್ರ ದಬ್ಬಾಳಿಕೆಗೆ ಸಿದ್ಧವಾಯಿತು. ಆ ದಿನ ಜೊಹಾನ್ಸ್ ಬರ್ಗನಲ್ಲಿ ಸಾವಿರಾರು ಭಾರತೀಯರು ತಮ್ಮ ರಹದಾರಿ ಚೀಟಿಗಳನ್ನು ದೊಡ್ಡರಾಶಿಹಾಕಿ ಜೈಕಾರಗಳೊಡನೆ ಸುಟ್ಟುಬಿಟ್ಟರು. ಪೋಲೀಸಲು ಹೊಡೆದರು ಬಡಿದರು ಕಟ್ಟಿ ಹಾಕಿದರು. ಭಯೋತ್ಪಾದನೆ ಮಾಡಿದರು ಮನೆಗಳಿಗೆ ನುಗ್ಗಿ ಬೆದರಿಸಿದರು, ಯಾರೂ ಯಾವುದಕ್ಕೂ ಮಣಿಯಲಿಲ್ಲ. ಗಾಂಧೀಜಿಗೂ ಹಲವಾರು ಕಡೆ ಹೊಡೆತ ಬಿದ್ದಿತು. ಸಹಿಸಿಕೊಂಡು ಮುಂದೆ ನುಗ್ಗಿ ರಹದಾರಿ ಪ್ರಕರಣವನ್ನು ಮುಗಿಸಿಬಿಟ್ಟರು.

ಇಷ್ಟಾದರೂ ಜನರನ್ನು ದಸ್ತಗಿರಿಮಾಡಿರಲಿಲ್ಲ. ಮೊದಲು ನಟಾಲಿನಿಂದ ಬಂದು ವಲಸೆಗಾರ ಕಾನೂನು ಮುರಿದನೆಂದು ಸೋರಾಬ್ಜಿ ಎಂಬ

ಯುವಕನ ದಸ್ತಗಿರಿಯಾಯಿತು. ಒಂದು ತಿಂಗಳ ಶಿಕ್ಷೆ ಕೊಟ್ಟರು. ಕೂಡಲೇ ನೂರಾರು ಸತ್ಯಾಗ್ರಹಿಗಳು ವಲಸೆ ಕಾನೂನು ಭಂಗಮಾಡಿ ಸೆರೆಮನೆ ಸೇರಿದರು. ಗಡೀಫಾರಾದರು, ಗಾಂಧೀಜಿಯನ್ನು ಪ್ರಿಟೋರಿಯ ಸೆರೆಮನೆಯಲ್ಲಿಟ್ಟರು, ಹಲವರನ್ನು ಹಡಗಿನಲ್ಲಿ ಭಾರತಕ್ಕೇ ಗಡೀಫಾರುಮಾಡಿದರು. ಸತ್ಯನಿಷ್ಠೆ, ಸಂಯಮನಡತೆ, ತ್ಯಾಗಶೀಲತೆಗಳಿಂದ ಸತ್ಯಾಗ್ರಹ ಅಜೇಯವಾಗುತ್ತಿತ್ತು.

ಗಾಂಧೀಜಿ ಸೆರೆಮನೆಯಲ್ಲಿದ್ದಾಗ ಕಸ್ತೂರಿಬಾಗೆ ತೀವ್ರ ಖಾಯಿಲೆಯಾಯಿತು. ನೋಡುವವರಿರಲಿಲ್ಲ, ಜೈಲಿನಿಂದ ಗಾಂಧಿ ಬರೆದರು "ಸತ್ಯಾಗ್ರಹ ಸಮರದಲ್ಲಿ ಸರ್ವತ್ಯಾಗಕ್ಕೂ ಸಿದ್ಧರಾಗಬೇಕು. ಇದೊಂದು ಧರ್ಮಯುದ್ಧ, ಕೇವಲ ರಾಜಕೀಯವಲ್ಲ. ಪೂರ್ಣಪರಿಶುದ್ಧ, ಸಾವು ಬದುಕುಗಳ ಬೇಧವಿಲ್ಲ. ನೀನೂ ತಿಳಿದು ಧೈರ್ಯ ಸಂತೋಷಗಳಿಂದ ಬಂದುದನ್ನೆಲ್ಲ ಅನುಭವಿಸುತ್ತೀ ಎಂದು ನನ್ನ ಭರವಸೆ. ಅದೇ ನನ್ನ ಆಂತರ್ಯದ ಬಲ."

ಸತ್ಯಾಗ್ರಹಿಗಳಿಗೆ ಸೆರೆಯಲ್ಲಿ ಕ್ರೂರಶಿಕ್ಷೆ ಕೊಟ್ಟರು. ಕೆಲವರು ಸತ್ತರು. ಉಪವಾಸ ಮುಷ್ಕರಗಳಾದವು. ಪಲವರ ಆಸ್ತಿಪಾಸ್ತಿಗಳು ಜಫ್ತಾದವು. ಎರಡು ತಿಂಗಳ ಶಿಕ್ಷೆ ಅನುಭವಿಸಿ ಗಾಂಧೀಜಿ ಹೊರಬಂದರು, ಕೂಡಲೇ ಕಸ್ತೂರಿಬಾ ಅವರೆಡೆಗೆ ಧಾವಿಸಿದರು. ತಾವೇ ಶುಶ್ರೂಷೆ ಮಾಡಿದರು.

ಪ್ರಕೃತಿ ಚಿಕಿತ್ಸೆಮಾಡುತ್ತ ಪತ್ನಿಗೆ "ಉಪ್ಪು ಬೇಳೆಗಳನ್ನು ಬಿಟ್ಟುಬಿಡು" ಎಂದರು, 'ನನ್ನಿಂದಾಗದು , ಎಂದರು ಕಸ್ತೂರಿಬಾ 'ಎಲ್ಲಿ ನೀವು ಬಿಡಿ' ಎಂದು ಮೂದಲಿಸಿದರು. ಕೂಡಲೇ ಬಂತು ಗಾಂಧೀಜಿಯ ದೃಢ ನಿರ್ಧಾರ "ಇಂದಿನಿಂದಲೇ ಉಪ್ಪು ಬೇಳೆ ಬಿಟ್ಟುಬಿಡುವ ವ್ರತಕೈಕೊಂಡೆ." ಕಸ್ತೂರಿಬಾಗೆ ಆಘಾತವಾಯಿತು. "ನಿಮ್ಮ ದಮ್ಮಯ್ಯ ಹಾಗೆ ಮಾಡಬೇಡಿ, ನಾನು ಪಥ್ಯ ಮಾಡುತ್ತೇನೆ. ಮಾತಿಗೆ ತಪ್ಪುವುದಿಲ್ಲ" ಎಂದರು. "ಇದೊಂದು ಪ್ರೀತಿಯ ಸವಾಲು ನಾನೂ ನಿನ್ನೊಡನೆ ಒಂದು ವರ್ಷ ಬಿಡುತ್ತೇನೆ. ಅದರಿಂದ ನನಗೂ ಸಂಕಲ್ಪಶಕ್ತಿ ಬಂತು, ನಿನಗೂ ನೈತಿಕ ಬೆಂಬಲ ಸಿಕ್ಕಿತು

ಅಲ್ಲವೇ ?" ಈ ದಾಂಪತ್ಯ ಮಾಧುರ್ಯ ಅವರ ಜೀವಗಳನ್ನು ಅಬೇಧ್ಯವಾಗಿ ಹೆಣೆದಿತ್ತು.

ಸತ್ಯಾಗ್ರಹಿಗಳ ಕುಟುಂಬ ರಕ್ಷಣೆಗಾಗಿ ಬಂದ ಸಾರ್ವಜನಿಕ ನಿಧಿಯನ್ನು ಎಚ್ಚರವಾಗಿ ಬಳಸುತ್ತಿದ್ದರು. ಭಾರತದಿಂದ ಜವಾಹರಿತಾತ ಇಪ್ಪತ್ತೈದು ಸಾವಿರ ರೂಪಾಯಿ ಸಹಾಯ ಕಳುಹಿಸಿದ್ದರು. ಪ್ರತಿಕಾಸಿಗೂ ಗಾಂಧೀಜಿ ಲೆಕ್ಕ ಇಡುತ್ತಿದ್ದರು. ಇತರರಿಗೂ ಅದೇನಿಯಮ. ಬೇರೆ ಬೇರೆಯಾಗಿ ಇರುವ ಬದಲು ಎಲ್ಲರೂ ಒಟ್ಟಿಗೆ ವಾಸಮಾಡಿದರೆ ವೆಚ್ಚ ತಗ್ಗುವುದು ಎಂದುಕೊಂಡರು. ಕೂಡಿಬಾಳಿದರೆ ಭೇದಭಾವಗಳು ಅಸಮಾನತೆಗಳು ಹೋಗುವುವು ಎಂದು ಜೊಹಾನ್ಸ್ ಬರ್ಗ್‌ಗೆ ಇಪ್ಪತ್ತೆರಡು ಮೈಲಿಗಳ ದೂರದಲ್ಲಿ ಒಂದು ವಸತಿ ವ್ಯವಸಾಯ ಕ್ಷೇತ್ರ ನಿರ್ಮಿಸಿದರು. ಜರ್ಮನ್ ಶ್ರೀಮಂತ ಗೆಳೆಯ ಕಾಲೆನ್‌ಬಾಕ್ ನೂರಾರು ಹಣ್ಣಿನಗಿಡಗಳಿದ್ದ ಸಾವಿರದನೂರು ಎಕರೆ ಜಮೀನನ್ನು ದಾನಮಾಡಿ ತಾನೂ ಸತ್ಯಾಗ್ರಹಿಗಳೊಡನೆ ವಾಸಮಾಡಲು ನಿಶ್ಚಯಿಸಿದರು. ಎಲ್ಲರೂ ಅನ್ನಕಾಯಕ (ಬ್ರೆಡ್‌ಲೇಬರ್) ಆಚರಿಸಿ ಅನ್ನಬೆಳೆದು ಜೀವಿಸುವ ನಿಯಮ ಇತ್ತು. ಇದೇ ಪ್ರಸಿದ್ಧವಾದ "ಟಾಲ್‌ಸ್ಟಾಯ್ ಫಾರಮ್,"

(iii) ಹಿಂದ್ ಸ್ವರಾಜ್ಯ

1908ರಲ್ಲಿ ಮತ್ತೆ ಬ್ರಿಟಿಷ್ ಸರ್ಕಾರದೊಡನೆ ಸಂಧಾನಕ್ಕೆಂದು ಭಾರತೀಯರ ಪರವಾಗಿ ಗಾಂಧೀಜಿ ಮತ್ತು ಸೇಠ್‌ಹಾಜಿ ಹಬೀಬರು ಇಂಗ್ಲೆಂಡಿಗೆ ಹೋದರು. ಸಂಧಾನ ವಿಫಲವಾಯಿತು. ವರ್ಣಬೇಧ ಧೋರಣೆಯನ್ನೂ ಸ್ಮಟ್ಸರ ದಮನನೀತಿಯನ್ನೂ ಬ್ರಿಟಿಷರು ಬೆಂಬಲಿಸಿದರು. ಆದರೆ ಅನೇಕ ಸಹೃದಯ ಇಂಗ್ಲೀಷ್ ಪ್ರಮುಖರು ಗಾಂಧೀಜಿಗೆ ಬೆಂಬಲವಿತ್ತರು. ಸತ್ಯಾಗ್ರಹಿಗಳ ನೆರವಿಗೆ ಧನಸಹಾಯಮಾಡಿದರು.

ಹಿಂತಿರುಗಿ ದಕ್ಷಿಣ ಆಫ್ರಿಕಕ್ಕೆ ಹಡಗಿನಲ್ಲಿ ಪ್ರಯಾಣ ಮಾಡುತ್ತಾ ಗಾಂಧೀಜಿ ಭಾರತದ ದಾಸ್ಯಸ್ಥಿತಿಯನ್ನು ಕುರಿತು ಆಳವಾಗಿ ಚಿಂತಿಸತೊಡಗಿದರು. ತಮ್ಮ ಖಚಿತ ಆಲೋಚನೆಗಳನ್ನು ಬರೆದಿಟ್ಟರು. ಲಂಡನ್ನಿನಲ್ಲಿ ಭಾರತದ ಅನೇಕ ಉಗ್ರಗಾಮೀ ಕ್ರಾಂತಿಕಾರ ಯುವಕರು ಸಶಸ್ತ್ರದಂಗೆಯಿಂದ ಸ್ವಾತಂತ್ರ್ಯ ಸಾಧಿಸಲು ಪ್ರಯತ್ನಿಸುತ್ತಿದ್ದುದು ತಿಳಿಯಿತು. ಮದನಲಾಲ್ ಡಿಂಗ್ರಾ ಮುಂತಾದ ಕೆಚ್ಚೆದೆಯ ಯುವಕ ದೇಶಭಕ್ತರು ಪ್ರಾಣವನ್ನೇ ಪಣವಾಗಿಟ್ಟು ಬ್ರಿಟಿಷ್ ಅಧಿಕಾರಿಗಳ ಕೊಲೆಗೆ ಸಿದ್ಧರಾಗಿದ್ದರು. ಗಾಂಧೀಜಿ ಈ ಮಾರ್ಗವನ್ನು ಒಪ್ಪಲಿಲ್ಲ. ಇದಕ್ಕೆ ಉತ್ತರವಾಗಿ ಸಂಭಾಷಣೆಯ ರೂಪದಲ್ಲಿ ಬರೆದ ಲೇಖನಮಾಲೆಯನ್ನು ಗಾಂಧೀಜಿ "ಹಿಂದ್ ಸ್ವರಾಜ್ಯ" ಎಂಬ ಪ್ರಸಿದ್ಧ ಪುಸ್ತಕವಾಗಿ ಪ್ರಕಟಿಸಿದರು. ಉಗ್ರಗಾಮೀ ಯುವಕರನೇಕರ ಪರಿಚಯ ಮಾಡಿಕೊಂಡರು. ಗುರಿಯಷ್ಟೇ ಸಾಧನವೂ ಪವಿತ್ರವಾಗದೇ ಹೋದಲ್ಲಿ ಉದ್ದೇಶಿತ ಗುರಿಮುಟ್ಟಲಾರೆವು ಎಂದು ಮನದಟ್ಟುಮಾಡಲು ಪ್ರಯತ್ನಿಸಿದರು. ಆ ಯುವಕರ ನಿಸ್ಸೀಮ ನಿಷ್ಕಲಂಕ ದೇಶಭಕ್ತಿ ಮೆಚ್ಚಿದರು. ಹಿಂಸೆಯ ಜಾಲದಲ್ಲಿ ಸಿಕ್ಕವರು ಅದರಿಂದಲೇ ನಾಶವಾಗಿಬಿಡುತ್ತಾರೆ ಎಂದು ಎಚ್ಚರಿಸಿದರು.

ಹಿಂದ್ ಸ್ವರಾಜ್ಯ ಅಥವ ಇಂಡಿಯನ್ ಹೋಂರೂಲ್ ಪುಸ್ತಕದ ಪ್ರಮುಖ ಅಂಶಗಳು ಹೀಗಿವೆ.

> "ಪೂರ್ವ ಪಶ್ಚಿಮ ಎಂಬ ಭೇಧ ತಪ್ಪು. ಭೌತ ಪ್ರಧಾನ ಆಧುನಿಕ ನಾಗರಿಕತೆ ಯೂರೋಪನ್ನು ಆವರಿಸಿದೆ. ಇದು ಯಂತ್ರಯುಗದ ಪರಿಣಾಮ. ಮನುಷ್ಯತ್ವವನ್ನು ನಾಶಮಾಡಲಾಗುತ್ತಿದೆ. ಭಾರತವನ್ನು ಬಂಧಿಸಿರುವುದು ಈ ಆಧುನಿಕತೆಯ ವ್ಯಾಮೋಹ. ತಾಂತ್ರಿಕ ಸೌಲಭ್ಯಗಳಾದ ರೈಲು, ತಂತಿ, ಗಿರಣಿಗಳು ಮುಂತಾದ ಕುಟಿಲಜಾಲಗಳಿಂದ ಬ್ರಿಟಿಷರು ಭಾರತವನ್ನು ಸುಲಭವಾಗಿ ಬಂಧಿಸಿದ್ದಾರೆ. ದೊಡ್ಡ ನಗರಗಳು ಅವರ ಶೋಷಣೆಯ ಕೇಂದ್ರಗಳು. ಗ್ರಾಮ ಭಾರತಕ್ಕೆ ಇವು ಮಾರಕ

ವಾಗಿವೆ. ನಾಳೆ ಬ್ರಿಟಿಷರು ಹೋದಮೇಲೆ ಭಾರತವೂ ಅದೇ ನಾಗರೀಕತೆಯನ್ನನುಕರಿಸಿದರೆ ನಾಲ್ಕು ಐದನೇ ದರ್ಜೆಯ ಕನಿಷ್ಠ ರಾಷ್ಟ್ರವಾದೀತು. ಈ ವಿನಾಶಕಾರೀ ಆಧುನಿಕ ನಾಗರೀಕತೆಯನ್ನು ಯೂರೋಪು ಅಮೇರಿಕಗಳೂ ಮಾನವ ಕ್ಷೇಮಕ್ಕಾಗಿ ನಿರಾಕರಿಸಬೇಕು. ಈಗಿನ ವೈದ್ಯರು, ವಕೀಲರು, ವ್ಯಾಪಾರಿಗಳು, ತಂತ್ರಜ್ಞರು, ಉದ್ಯೋಗಪತಿಗಳು ಎಲ್ಲರೂ ದೋಷಿಗಳೇ, ಆ ವೃತ್ತಿಗಳು ಬದಲಾಗಬೇಕು. ರೈತನ ಸರಳ ಶ್ರಮನಿಷ್ಠ ಬಾಳನ್ನು ಸರ್ವರೂ ಅಂಗೀಕರಿಸಬೇಕು. ಅದು ಜೀವದಾಯಕ. ಬಾಳಿನ ಗುಣಮಟ್ಟ ಹೆಚ್ಚಿಸಿ ಮಾನವನನ್ನು ಮಾನವೀಯ ಮೌಲ್ಯಗಳ ವಿಕಾಸಮಾರ್ಗಕ್ಕೆ ಕರೆದೊಯ್ಯುತ್ತದೆ, ಭಾರತದ ಪ್ರಾಚೀನ ಚಿಂತಕರು ಮಾನವನ ಭೌತಿಕ ಸೌಲಭ್ಯಗಳಿಗೆ ಒಂದು ಮಿತಿಹಾಕಿದರು. ವಿವೇಕಿಗಳಾಗಿ ಬಾಳಿನ ಉತ್ಥಾನ ಸಾಧಿಸಲು ಸರಳ ಮತ್ತು ಪ್ರಕೃತಿಯೊಡನೆ ಸಮರಸ ಜೀವನ ಶೈಲಿ ಕಲಿಸಿದರು. ಈಗಲೂ ಸರ್ವಸಮಾನತೆಯ ಸರ್ವೋದಯಕ್ಕೆ ಇದೇ ರಾಜಮಾರ್ಗ. ಇಡೀ ಮಾನವಲೋಕ ಹಿಂಸೆಯನ್ನು ವರ್ಜಿಸಿ ಸಾಮಾಜಿಕ ನ್ಯಾಯ, ಸರ್ವರನೆಮ್ಮದಿ ಮತ್ತು ವ್ಯಕ್ತಿವಿಕಾಸಕ್ಕಾಗಿ ಶ್ರಮನಿಷ್ಠೆಯ ಆಧಾರದಮೇಲೆ ಭವಿಷ್ಯವನ್ನು ಕಟ್ಟಬೇಕಾಗುತ್ತದೆ."

ಗಾಂಧೀಜಿ ಜೊಹಾನ್ಸ್‌ಬರ್ಗ್‌ಗೆ ಹಿಂತಿರುಗಿ ಹೋರಾಟದಲ್ಲಿ ಮಗ್ನರಾದರು. ಅಲ್ಲಲ್ಲಿ ಸತ್ಯಾಗ್ರಹಿಗಳ ಬಂಧನವಾಗುತ್ತಿತ್ತು. ಆಶ್ರಮಜೀವನ ಸತ್ಯಾಗ್ರಹಕ್ಕೆ ಸಿದ್ಧತೆಯ ಶಿಕ್ಷಣವಾಗಿತ್ತು, ಎಲ್ಲವೂ ಹೊಸ ಅನುಭವ. ಯಾರೂ ಧೃತಿಗಡಲಿಲ್ಲ, ದೈವವನ್ನು ನಂಬಿ ಗಾಂಧೀಜಿ ಅವರಿಗೆಲ್ಲ ಶಕ್ತಿತುಂಬುತ್ತಿದ್ದರು. ತಾವೇ ಹೀಗೆ ಹೇಳಿದ್ದಾರೆ.

"ನೀತಿ ಧರ್ಮಮೀರಿ ಸತ್ಯಾಗ್ರಹಿ ನಡೆದುಕೊಳ್ಳಬಾರದು. ಈ ಶಾಂತಿ, ಆತ್ಮಸಂಯಮ ಆತನ ಸಮರ ಸನ್ನದ್ಧತೆ. ಅವನಿಗೆ

> ದೈವ ಸಹಾಯ ಒದಗೇ ತೀರುತ್ತದೆ. ಇಲ್ಲಿಯೂ ಅಂತ್ಯದಲ್ಲಿ ಅನಿರೀಕ್ಷಿತ ಸನ್ನಿವೇಶಗಳೊದಗಿದವು ದೇವರೇ ಕಾಪಾಡಿದ. ಅನಿರೀಕ್ಷಿತ ಸಹಾಯವೂ ಒದಗಿತು, ಹಠಾತ್ತನೆ ಸತ್ವಪರೀಕ್ಷೆಯ ಸಮಯವೂ ಬಂತು. ಕಟ್ಟಕಡೆಗೆ ವಿಜಯವೂ ಲಭಿಸಿತು. ಯಜ್ಞಕುಂಡದಲ್ಲಿ ಧುಮುಕಿದವರಿಗೆಲ್ಲ ಆ ವಿಜಯದ ಮಹತ್ವ ಅರಿವಾಯಿತು."

ಸತ್ಯಾಗ್ರಹ ಅವ್ಯಾಹತವಾಗಿ ನಡೆದಿತ್ತು. ನೇರ ಘರ್ಷಣೆಗಳು ಮಾತ್ರ ಕಡಮೆಯಾದವು. ಆ ಸಮಾಯಕ್ಕೆ ಗೋಪಾಲಕೃಷ್ಣ ಗೋಖಲೆ ದಕ್ಷಿಣ ಆಫ್ರಿಕಕ್ಕೆ ಬಂದರು. ಅಲ್ಲಿನ ಸಮಸ್ಯೆಗಳನ್ನು ಆಳವಾಗಿ ತಿಳಿದಿದ್ದ ಸುಪ್ರಸಿದ್ಧ ಉನ್ನತವ್ಯಕ್ತಿ ಆಗಮಿಸಿದುದು ಸತ್ಯಾಗ್ರಹಿಗಳಿಗೆಲ್ಲ ಮಿಂಚು ಸಂಚಾರವಾದಂತಾಯಿತು. ಬ್ರಿಟಿಷ್ ಭಾರತ ಸರ್ಕಾರ ಈ ಭೇಟಿಗೆ ಬೆಂಬಲವಿತ್ತು ಗೋಖಲೆಯವರ ವರದಿಯನ್ನು ಗೌರವಿಸುವುದಾಗಿ ತಿಳಿಸಿತು. ಗಾಂಧೀಜಿಯೇ ಪ್ರವಾಸದ ವ್ಯವಸ್ಥಾಪಕರು. ಗೋಖಲೆಯವರ ಔನ್ನತ್ಯವನ್ನರಿತು ಗೌರವದಿಂದ ಆದರಿಸಬೇಕೆಂದು ಸ್ಮಟ್ಸ್ ಸರ್ಕಾರಕ್ಕೆ ಭಾರತ ಸರ್ಕಾರ ಸೂಚಿಸಿತ್ತು. ಎಲ್ಲ ಕಡೆ ಅದ್ಭುತ ಸ್ವಾಗತದೊರೆಯಿತು. ಸಾರ್ವಜನಿಕ ಸಭೆಗಳಾದವು. ಭಾರತೀಯರ ನ್ಯಾಯಬದ್ಧ ಬೇಡಿಕೆಗಳನ್ನು ಗೋಖಲೆ ತಮ್ಮದೇ ಆದ ಪ್ರತಿಭಾನ್ವಿತ ಪ್ರತಿಪಾದನೆಯಿಂದ ಅಲ್ಲಿನ ಬಿಳಿಯ ಜನಾಂಗಕ್ಕೂ ಸರ್ಕಾರಕ್ಕೂ ಮನದಟ್ಟುಮಾಡಿದರು. ಜೊತೆಗೆ ದಕ್ಷಿಣ ಆಫ್ರಿಕದಲ್ಲಿ ಹಿಂದಿನಿಂದಲೂ ಕರಿಯಜನರ ಮೇಲೆ ಹೇರಿದ್ದ ಮೂರು ಪೌಂಡಿನ ತಲೆಗಂದಾಯ ರದ್ದುಮಾಡಿ ಎಂದರು. ಈ ಅಂಶ ಸತ್ಯಾಗ್ರಹಿಗಳ ಬೇಡಿಕೆಗಳಲ್ಲಿ ಹೊಸದಾಗಿ ಸೇರಿತು. ಗೋಖಲೆ ಸುಪ್ರಸಿದ್ಧ ಇಂಗ್ಲೀಷ್ ವಾಗ್ಮಿಗಳು. ಆದರೂ ಗಾಂಧೀಜಿಯ ಆಗ್ರಹದಂತೆ ಅನೇಕ ಕಡೆ ತಮ್ಮ ಮಾತೃ ಭಾಷೆಯ ಮರಾಠಿಯಲ್ಲಿ ಮಾತನಾಡಿದರು. ಗಾಂಧೀಜಿ ಹಿಂದಿಗೆ ಅನುವಾದ ಮಾಡಿದರು, ಈ ಸ್ವಾಭಿಮಾನ ಭಾರತೀಯರಿಗೆ ಉತ್ಸಾಹ ತುಂಬಿತು,

ಸ್ಮಟ್ಸ್ ಸರ್ಕಾರದ ಉನ್ನತಾಧಿಕಾರಿಗಳೊಡನೆ ಸಂಧಾನಗಳನ್ನು ನಡೆಸಿ ಹೊರಡುವ ಮುನ್ನ ಗೋಖಲೆ ಗಾಂಧೀಜಿಗೆ ಹೀಗೆ ಹೇಳಿದರು.

> "ಇನ್ನು ಒಂದು ವರ್ಷದಲ್ಲಿ ನೀನು ಭಾರತಕ್ಕೆ ಹಿಂದಿರುಗಬೇಕು. ಎಲ್ಲವೂ ತೀರ್ಮಾನವಾಗಿದೆ. ಕರಾಳ ಶಾಸನ ರದ್ದಾಗುತ್ತದೆ. ವಲಸೆಗಾರರ ಶಾಸನಗಳ ವರ್ಣಬೇಧ ತೆಗೆದು ಬಿಡುತ್ತಾರೆ. ಮೂರು ಪೌಂಡ್ ತಲೆಗಂದಾಯವೂ ಹೋಗುತ್ತದೆ. ನೀನು ಹಿಂತಿರುಗಲು ಯಾವ ನೆಪವನ್ನೂ ಒಡ್ಡಬೇಡ."

ಗೋಖಲೆಯವರ ಅಪಾರ ಪ್ರೇಮಕ್ಕಾಗಿ ಗಾಂಧೀಜಿ ಕೃತಜ್ಞರಾದರು. ಆದರೆ "ಸ್ಮಟ್ಸ್ ಸರ್ಕಾರದ ಪ್ರಾಮಾಣಿಕತೆಯ ಬಗ್ಗೆ ನನಗೆ ಬಲವಾದ ಅನುಮಾನವಿದೆ" ಎಂದು ತಿಳಿಸಿದರು.

ಹಡಗಿನಲ್ಲಿ ಜಾಂಜಿಬಾರ್‌ವರೆಗೆ ಗಾಂಧೀಜಿ ಮತ್ತು ಕಾಲೆನ್‌ಬಾಕ್ ಗೋಖಲೆಯವರೊಡನೆ ಹೋಗಿ ಬೀಳ್ಕೊಟ್ಟರು. ದಾರಿಯಲ್ಲಿ ವಿರಾಮವಾಗಿ ಸಂಭಾಷಣೆ ನಡೆಯಿತು. ಭಾರತದ ಸ್ಥಿತಿಗತಿಗಳನ್ನು ಗಾಂಧೀಜಿಗೆ ವಿವರಿಸಿದರು. ಭವಿಷ್ಯದ ಹೋರಾಟದ ಬಗ್ಗೆ ತಿಳಿಸಿದರು. ಇದನ್ನು ಆತ್ಮಕಥೆಯಲ್ಲಿ ಬರೆಯುತ್ತಾ ಗಾಂಧೀಜಿ

> "ಸಂಭಾಷಣೆಗಳಿಂದ ನನ್ನನ್ನು ಗೋಖಲೆಯವರು ಭಾರತದ ಸೇವೆಗೆ ಅಣಿಮಾಡಿದರು. ಎಲ್ಲ ಪ್ರಮುಖ ವ್ಯಕ್ತಿಗಳ ಸೂಕ್ಷ್ಮಪರಿಚಯ ಮಾಡಿಕೊಟ್ಟರು. ಅವರ ಖಚಿತ ಅಭಿಪ್ರಾಯಗಳು ನನ್ನಲ್ಲಿ ಈಗಲೂ ನೆಲೆಯೂರಿ ನಿಂತಿವೆ" ಎಂದಿದ್ದಾರೆ.

ಆದರೆ ದಕ್ಷಿಣ ಆಫ್ರಿಕದ ಹೋರಾಟ ಒಂದು ವರ್ಷದಲ್ಲಿ ಮುಗಿಯುವುದಿಲ್ಲ ಎಂದು ಮುಂದಿನ ಘಟನೆಗಳು ತೀರ್ಮಾನಿಸಿದುವು.

(iv) ವಿಜಯ ಯಾತ್ರೆ

ಸತ್ಯಾಗ್ರಹ ಋಜುಮಾರ್ಗದಲ್ಲೇ ಸಾಗುತ್ತಿತ್ತು. ಆದರೆ ಹಿಂದಿನಂತೆಯೇ ಜನರಲ್ ಸ್ಮಟ್ಸ್ ಮತ್ತೆ ವಂಚಿಸಿದ. ಗೋಖಲೆಯವರಿಗೆ ಕೊಟ್ಟ ಮಾತಿಗೆ ತಪ್ಪಿದ. ನಟಾಲಿನ ಯೂರೋಪಿಯನ್ನರು ವಿರೋಧಿಸಿದರು ಎಂದು ನೆಪಹೂಡಿ ಯಾವ ಶಾಸನವನ್ನೂ ಹಿಂತೆಗೆದುಕೊಳ್ಳಲಿಲ್ಲ. ಭಾರತೀಯರಿಗೆ ಈ ಆಘಾತ ಅಸಹನೀಯವಾಯಿತು, ಗೌರವಾನ್ವಿತ ಗೋಖಲೆಯವರಿಗೂ ತಮ್ಮ ತಾಯ್ನಾಡಿಗೂ ಇದು ಅವಹೇಳನ ಎಂದು ಬಗೆದರು. ಗಣಿಕೂಲಿಗಾರರೂ ಸೇರಿದಂತೆ ಅಸಂಖ್ಯ ಭಾರತೀಯ ಸಮುದಾಯ ಖತಿಗೊಂಡು ಗಾಂಧೀಜಿಯ ಜೊತೆಯಲ್ಲಿ ಸತ್ಯಾಗ್ರಹಕ್ಕೆ ಸನ್ನದ್ಧವಾಯಿತು.

ಕೇಪ್ ಪಟ್ಟಣದ ಶ್ರೇಷ್ಠ ನ್ಯಾಯಾಲಯ ಈ ಸಮಯಕ್ಕೆ ಭಾರತೀಯರ ಸಂಸಾರಜೀವನಕ್ಕೇ ಕೊಡಲಿಪೆಟ್ಟಾಗುವ ಒಂದು ತೀರ್ಪಿತ್ತಿತು. ಕ್ರಿಶ್ಚಿಯನ್ ರೀತಿಯಲ್ಲಿ ರಿಜಿಸ್ಟ್ರೇಷನ್ ಆಗದ ಯಾವುದೇ ಧಾರ್ಮಿಕ ವಿಧಿಯ ವಿವಾಹ ಇಲ್ಲಿ ಊರ್ಜಿತವಲ್ಲ, ಅದು ಕಾನೂನುಬಾಹಿರ ಎಂದಿತು, ಧರ್ಮಪತ್ನಿಯರೆಲ್ಲ ಪದಚ್ಯುತರಾಗಿ ಅವರ ಮಕ್ಕಳಿಗೆ ಮನೆತನದ ಆಸ್ತಿಗಳ ಹಕ್ಕಿಲ್ಲದಾಯಿತು. ದೊಡ್ಡ ಸಿಡಿಲೆರಗಿದಂತಾಯಿತು. ಭಾರತೀಯ ಮಹಿಳೆಯರು ಈ ಅವಮಾನ ಸಹಿಸದೆ ಸತ್ಯಾಗ್ರಹದ ಕಣಕ್ಕಿಳಿದರು. ಸತ್ಯಾಗ್ರಹ ಪ್ರವಾಹಕ್ಕೆ ಒಂದು ಮಿಂಚಿನ ತಿರುವು ಉಂಟಾಯಿತು, ದೇವರೇ ವಿಜಯದ ದಾರಿಯನ್ನು ಸುಗಮಮಾಡಿದ ಎಂದರು ಗಾಂಧೀಜಿ.

ಟಾಲ್‌ಸ್ಟಾಯ್ ಫಾರಮ್ಮಿನ ಮಹಿಳೆಯರೆಲ್ಲ ಮುಂದಾಗಿ ಬಂದರು. ತಮಿಳುನಾಡಿನವರೇ ಹೆಚ್ಚು. ಫಿನಿಕ್ಸ್ ಆಶ್ರಮದ ಸಮಸ್ತರೂ ಟ್ರಾನ್ಸ್‌ವಾಲ್ ಗಡಿದಾಟಿ ಕಾನೂನುಭಂಗಮಾಡಿದರು. ಅಧಿಕಾರಿಗಳಿಗೆ ಮೊದಲೇ ತಿಳಿಸಿದ್ದರು. ಟ್ರಾನ್ಸ್‌ವಾಲಿನವರು ನಟಾಲ್ ಪ್ರವೇಶಿಸಿ ನ್ಯೂಕಾಸಲ್ ಗಣಿಗಳನ್ನು ತಲುಪಿದರು. ಅಲ್ಲಿನ ಭಾರಿ ಕಲ್ಲಿದ್ದಲು ಗಣಿಗಳ ಸಾವಿರಾರು ಕಾರ್ಮಿ

ಕರು ಮುಷ್ಕರ ಹೂಡಿ ಹೊರನಡೆದರು. ಸ್ತ್ರೀಯರೇ ಮುಂಚೂಣಿಯಲ್ಲಿದ್ದರು.

"ಕಷ್ಟ, ದಬ್ಬಾಳಿಕೆ, ದೂಷಣೆ, ಆಸ್ತಿನಷ್ಟ ಅನುಭವಿಸಬೇಕಾದೀತು ಆವೇಶದಿಂದ ನುಗ್ಗಬೇಡಿ ಚೆನ್ನಾಗಿ ಯೋಚಿಸಿ" ಎಂದು ಗಾಂಧೀಜಿ ಆ ಮಹಿಳೆಯರಿಗೆ ತಿಳಿಸಿದರು. ಆ ಅನಕ್ಷರಸ್ಥ ಬಡ ಜನ ತೋರಿಸಿದ ಧೃತಿ ಅವರ ಸಂಕಲ್ಪಶಕ್ತಿ ಅಮೋಘವಾಗಿತ್ತು. ಆವರೆಗೆ ಹೊಸಿಲುದಾಟದೆ ಇದ್ದ ಸತಿ ಕಸ್ತೂರಿಬಾ "ನನ್ನನ್ನೇಕೆ ಕರೆಯಲಿಲ್ಲ, ನೀವೆಲ್ಲ ಅನುಭವಿಸುವುದಾದರೆ ನನಗೆ ಕಷ್ಟವೆ ? ನಾನೂ ಹೊರಟೆ" ಎಂದರು. "ನನ್ನ ಬಲತ್ಕಾರಕ್ಕೆ ಸೇರಬೇಡ. ನಿನ್ನ ಧೈರ್ಯವೇ ಮುಖ್ಯ. ಸೆರೆಮನೆಯ ಶಿಕ್ಷೆಯಾದರೆ ಕ್ಷಮಾಯಾಚನೆ ಕೇಳಬಾರದು" ಎಂದರು ಗಾಂಧೀಜಿ. ಎಲ್ಲೆಲ್ಲೂ ಸಮರೋತ್ಸಾಹ ತುಂಬಿ ತುಳುಕಿತು.

ಕೂಲಿಗಾರರು ಮಹಿಳೆಯರು ಹೊಸದಾಗಿ ಸೇರಿ ಕಾನೂನು ಭಂಗಕ್ಕಾಗಿ ದಸ್ತಗಿರಿಯಾಗುವವರ ಸಂಖ್ಯೆ ನೂರ್ಮಡಿಯಾಯಿತು. ಹಲವರಿಗೆ ಮೂರು ತಿಂಗಳ ಶಿಕ್ಷೆ ನೀಡಿದರು. ಅನೇಕರನ್ನು ಕಠಿಣ ಶಿಕ್ಷೆಗೆ ಗುರಿಮಾಡಿದರು. ತಂಡ ತಂಡವಾಗಿ ಸೆರೆಯಾಳುಗಳನ್ನು ಜೈಲಿನಲ್ಲಿ ತುಂಬುತ್ತಲೇ ಹೋಯಿತು ಸರ್ಕಾರ. ಹೆಂಗಸರು ಮಕ್ಕಳೆನ್ನದೆ ಕ್ರೂರವಾಗಿ ವರ್ತಿಸಿತು.

ಈ ಸುದ್ದಿಗಳೆಲ್ಲ ಭಾರತವನ್ನು ಮುಟ್ಟಿ ಕೋಲಾಹಲವೆದ್ದಿತು. ಗೋಖಲೆ, ವೈಸ್‌ರಾಯ್ ಹಾರ್ಡಿಂಜರು, ಫಿರೋಜ್‌ಷಾ ಮೆಹ್ತ ಮುಂತಾದವರು ದಕ್ಷಿಣ ಆಫ್ರಿಕ ಸರ್ಕಾರ ಭಾರತೀಯರನ್ನು ನಡೆಸಿಕೊಂಡ ರೀತಿಗಾಗಿ ಖಂಡಿಸಿದರು. ಕರಾಳ ಶಾಸನಗಳನ್ನು ರದ್ದುಮಾಡಲು ಒತ್ತಾಯಿಸಿದರು.

ಗೋಖಲೆಯವರು ರೆವರೆಂಡ್ ಆಂಡ್ರೂಸರನ್ನು ದಕ್ಷಿಣ ಆಫ್ರಿಕಕ್ಕೆ ಕಳುಹಿಸಿದರು. ಅವರು ಗಾಂಧೀಜಿಯ ನಿಕಟವರ್ತಿಗಳಾದರು. ಒಮ್ಮೆ

ಅಲ್ಲಿನ ಒಂದು ಚರ್ಚಿನಲ್ಲಿ ಈ ಪಾದ್ರಿ ಮುಖ್ಯ ಭಾಷಣಮಾಡುತ್ತ ಕ್ರೈಸ್ತನ ಬೋಧೆಯಂತೆ ನಡೆಯುತ್ತಿರುವ ಸತ್ಯನಿಷ್ಠ ಉದಾತ್ತಸಂತ ಗಾಂಧಿ ಎಂದು ಹೊಗಳಿದರು. ಬಿಳಿಯರಿಗೆ ಸಹಿಸದೆ ಒಬ್ಬೊಬ್ಬರಾಗಿ ಎದ್ದು ಹೊರಟರು. ಆಂಡ್ರೂಸರ ಭಾಷಣ ಕೇಳಲು ಸ್ವಲ್ಪತಡವಾಗಿ ಬಂದ ಗಾಂಧೀಜಿಯನ್ನೇ ಕರಿಯನೆಂದು ಹೊರಗೆ ತಳ್ಳಿದರು. ಅನಂತರ ಮನೆಗೆಬಂದ ಆಂಡ್ರೂಸರು "ಯಾರ ವಿಷಯ ಮಾತನಾಡಿದೆನೋ ಅವರಿಗೇ ಚರ್ಚಿನೊಳಗೆ ಪ್ರವೇಶವಿಲ್ಲವಾಯಿತೇ" ಎಂದು ಮರುಗಿದರು,

ಸ್ತ್ರೀ ಸತ್ಯಾಗ್ರಹಿಗಳು ಅಪ್ರತಿಮ ಧೈರ್ಯದಿಂದ ಎಲ್ಲ ತ್ಯಾಗಕ್ಕೂ ಸಿದ್ಧರಾದರು. ಮ್ಯಾರಿಟ್ಸ್‌ಬರ್ಗ್ ಸೆರೆಮನೆ ತುಂಬಿಹೋಯಿತು. ಜೈಲಿನಲ್ಲಿಯ ಕಠಿಣ ಬಾಳನ್ನು ಸಹಿಸಿದರು. ಕೆಲವರು ತಾಳಲಾರದೆ ಕುಸಿದರು. ಯಾರೂ ಕ್ಷಮೆಬೇಡಿ ಹೊರಬರಲಿಲ್ಲ. ತಮಿಳುನಾಡಿನ ವೀರ ಮಹಿಳೆ ವಲ್ಲಿಯಮ್ಮನನ್ನು ಕುರಿತು ಗಾಂಧೀಜಿ ಬರೆಯುತ್ತಾ

> "ಸೆರೆಯಿಂದ ಹೊರಬಂದಾಗ ಕೆಟ್ಟಜ್ವರಪೀಡಿತಳಾಗಿ ಕೆಲವೇ ದಿನಗಳಲ್ಲಿ ಸಾವನ್ನಪ್ಪಿದ ಜೋಹಾನ್ಸ್ ಬರ್ಗಿನ ವಲ್ಲಿಯಮ್ಮನನ್ನು ಹೇಗೆ ಮರೆಯಲಿ. ಹದಿನಾರು ವರ್ಷದ ಯುವತಿ ಕೃಷಳಾಗಿ ಹಾಸಿಗೆ ಹಿಡಿದಾಗಲೂ ಧೃತಿಗೆಡದೆ "ಪುನಹ ಬಂಸಿಧಿದರೆ ಜೈಲಿಗೆ ಹೋಗುತ್ತೇನೆ ಮಾತೃಭೂಮಿಗಾಗಿ ಯಾರು ತಾನೇ ಸಾಯ ಬಯಸುವುದಿಲ್ಲ" ಎಂದಳು. ಈ ಅಜ್ಞಾತ ಅನಕ್ಷರಸ್ಥ ತರುಣಿಯಲ್ಲಿ ಅದೆಂತಹ ಅಜೇಯ ಆತ್ಮಶಕ್ತಿ ! ಸತ್ಯಾಗ್ರಹದ ಇತಿಹಾಸದಲ್ಲಿ ಆಕೆಯ ಹೆಸರು ಅಮರ. ಒಬ್ಬ ಶುದ್ಧಾತ್ಮಳ ಭಕ್ತಿ ತ್ಯಾಗ ಸಾಕು. ಅದು ಎಂದೂ ನಿರರ್ಥಕವಾಗದು."
> ಎಂದಿದ್ದಾರೆ.

ಐದುಸಾವಿರ ಜನರ ದೊಡ್ಡ ಸೇನೆಯೇ ಗಾಂಧೀಜಿ ಜೊತೆಗೆ ಸನ್ನದ್ಧವಾಗಿನಿಂತಿತ್ತು. ಅತ್ಯಂತ ಸಂಯಮದಿಂದ ಸತ್ಯಾಗ್ರಹ ವಚನಬದ್ಧರಾಗಿ ವರ್ತಿ

ಸಿದ ಕೂಲಿಗಾರರ ಅಗಾಧ ಸಂಖ್ಯೆಕಂಡು ಅವರ ಹೃದಯತುಂಬಿ ಬಂತು. ಈ ಗುಂಪು ಟ್ರಾನ್ಸ್‌ವಾಲಿಗೆ ದಂಡಯಾತ್ರೆ ಹೊರಟಿತು. ಅಧಿಕಾರಿಗಳು ದಂಡಿಸಿದಾಗ ಪ್ರತಿಹಿಂಸೆಗೆ ಕೈಹಾಕಲಿಲ್ಲ. ಕೇವಲ ಒಂದು ಪೌಂಡ್ ಬ್ರೆಡ್ ಮತ್ತು ಸಕ್ಕರೆಯಲ್ಲಿ ದಿನಕಳೆದು ನಡೆದರು, ಸರ್ಕಾರಕ್ಕೆ ಇದು ದೊಡ್ಡ ಸವಾಲಾಯಿತು. ತಂಡೋಪ ತಂಡವಾಗಿ ಬರುತ್ತಿದ್ದರು.

1913ರ ನವೆಂಬರ್ 6 ರಂದು ಪ್ರಾರ್ಥನೆ ನಡೆಸಿದನಂತರ ಎರಡು ಸಾವಿರ ಗಂಡಸರು ನೂರಿಪ್ಪತ್ತೇಳು ಮಹಿಳೆಯರು ಐವತ್ತೇಳು ಮಕ್ಕಳು ಗಡಿದಾಟಿ ಕಾನೂನು ಭಂಗಮಾಡಿದರು. ಕಾಲೆನ್‌ಬಾಕ್, ಪೋಲಕ್ ಮುಂತಾದ ಗಾಂಧೀಜಿಯ ಯೂರೋಪಿಯನ್ ಗೆಳೆಯರು ಸ್ವಸಂತೋಷದಿಂದ ನೆರವಾದರು. ಮಧ್ಯರಾತ್ರಿ ಗಾಂಧೀಜಿಯ ದಸ್ತಗಿರಿಯಾಯಿತು. ನ್ಯಾಯಾಧೀಷರು ಜಾಮೀನಿನ ಮೇಲೆ ಬಿಡುಗಡೆಮಾಡಿದರು. ಮತ್ತೆ ಬಂಧಿಸಿದರು. ಒಂಭತ್ತು ತಿಂಗಳ ಶಿಕ್ಷೆವಿಧಿಸಿದರು, ಮಿಕ್ಕವರೂ ಸೆರೆಮನೆ ಸೇರುತ್ತಿದ್ದರು. ಸತ್ಯಾಗ್ರಹಿಗಳ ಪ್ರವಾಹ ಬರುತ್ತಲೇ ಇತ್ತು, ಕಾಡ್ಗಿಚ್ಚಿನಂತೆ ಸುದ್ಧಿಹರಡಿ ಮಿಕ್ಕಗಣಿಗಳ ಕೂಲಿಗಾರರೂ ಮುಷ್ಕರ ಹೂಡಿ ಬೆಂಬಲಿಸಿದರು. ಯಾರೂ ಹಿಂಸೆಗೆ ಕೈಹಾಕಲಿಲ್ಲ, ಸುಮಾರು ಅರವತ್ತುಸಾವಿರ ಕೂಲಿಗಾರರು ಅಲ್ಲಲ್ಲಿ ಮುಷ್ಕರ ಹೂಡಿದ್ದರು. ಬಿಳಿಯ ಮಾಲಿಕರು ತಾಳ್ಮೆಗೆಟ್ಟರು. ಸೈನ್ಯದ ನೆರವು ಬೇಡಿದರು, ಜನರಲ್ ಲೂಕನ್ ಕುದರೆ ಹತ್ತಿ ಬಂದೂಕು ಹಿಡಿದು ಬಂದ. ಹದಿನೆಂಟು ವರ್ಷದ ಧೀರ ಸತ್ಯಾಗ್ರಹಿ ಸೊಹರಾಬ್ಜಿ ಕೆಚ್ಚೆದೆಯಿಂದ ಮುಂದೆ ನುಗ್ಗಿ ಕುದುರೆಯ ಕಡಿವಾಣ ಹಿಡಿದುನಿಲ್ಲಿಸಿದ. "ಗುಂಡು ಹಾರಿಸಬೇಡಿ ಕೂಲಿಗಾರರನ್ನು ಸಮಾಧಾನಪಡಿಸಿ ಮುಷ್ಕರ ನಿಲ್ಲಿಸುತ್ತೇನೆ" ಎಂದ. ಸೈನ್ಯಾಧಿಕಾರಿ ವಿಸ್ಮಿತನಾದ. ಕರಾಳಶಾಸನ ರದ್ದಿಗಾಗಿ ನಡೆಯುತ್ತಿರುವ ಹೋರಾಟದಲ್ಲಿ ನಾವೂ ಭಾಗಿಗಳು ಎಂದು ತೋರಿಸಲು ಕಾರ್ಮಿಕರು ಮುಷ್ಕರ ಹೂಡಿದ್ದರು. ಸೊಹರಾಬ್ಜಿ ಅವರಿಗೆ ಶಾಂತವಾಗಿ ಇನ್ನು ಹಿಂತಿರುಗಿ ಎಂದಾಗ ಅವರು ಒಪ್ಪಿ ಕೆಲಸಕ್ಕೆ ಹಿಂತಿರುಗಿದರು. ಆದರೂಕೆಲವೆಡೆ ಪೋಲೀಸರು ಗುಂಡು ಹಾರಿಸಿದರು, ಗಾಂಧೀಜಿ ಪ್ರತಿಭಟಿಸಿ ಅವರ ಅನ್ಯಾಯಗಳನ್ನು

ಬಯಲಿಗೆಳೆದರು. ಮಾರ್ಗ ಪರಿಶುದ್ಧವಾದಲ್ಲಿ ಗುರಿ ತಲುಪುವುದು ಖಂಡಿತ ಎಂಬ ಆತ್ಮವಿಶ್ವಾಸ ಭಾರತೀಯರಲ್ಲಿ ಧೃಡವಾಗಿ ನೆಲೆಸಿತ್ತು.

ಸಾವಿರಾರು ಜನರನ್ನು ಸೆರೆಮನೆಯಲ್ಲಿ ಸಾಕುವುದು ಸ್ಮಟ್ಸ್ ಸರ್ಕಾರಕ್ಕೆ ಅಸಾಧ್ಯವಾಯಿತು, ಸಂಧಾನಕ್ಕೆ ಮೂರು ಜನರ ಸಮಿತಿ ನೇಮಿಸಿ ಗಾಂಧೀಜಿಯವರ ಬಳಿ ಕಳುಹಿಸಿದರು. ಅದೇ ಕಾಲಕ್ಕೆ ಭಾರತದಿಂದ ರೆವೆರೆಂಡ್ ಸಿ. ಎಫ್. ಆಂಡ್ರೂಸ್ ಮತ್ತು ಪಿಯರ್‌ಸನ್ ಎಂಬ ಸಹೃದಯ ಸಮಾಜ ಸೇವಾಸಕ್ತ ಪಾದ್ರಿಗಳನ್ನು ಗೋಖಲೆಯವರು ಟ್ರಾನ್ಸ್‌ವಾಲಿಗೆ ಕಳುಹಿಸಿ ಕೊಟ್ಟಿದ್ದರು. ಜನರಲ್ ಸ್ಮಟ್ಸರನ್ನು ಅವರು ಭೇಟಿಯಾಗಿ ನ್ಯಾಯೋಚಿತ ಸಂಧಾನಕ್ಕೆ ಪ್ರಯತ್ನಿಸಿದರು.

ಈ ಮಧ್ಯೆ ಯೂನಿಯನ್ ರೈಲ್ವೆಗಳ ಯೂರೋಪಿಯನ್ ಕೆಲಸಗಾರರು ತಮ್ಮ ಸೌಲಭ್ಯಗಳನ್ನೂ ಅಧಿಕಾರವನ್ನೂ ಹೆಚ್ಚಿಸಿಕೊಳ್ಳಲು ದೊಡ್ಡ ಮುಷ್ಕರ ಹೂಡಿ ಹಿಂಸಾತ್ಮಕ ಪ್ರದರ್ಶನಗಳಲ್ಲಿ ತೊಡಗಿದರು. ಸರ್ಕಾರಕ್ಕೆ ದಿಕ್ಕು ತೋಚದಾಯಿತು. ಈ ಸಂಕಟ ಸಮಯದ ಲಾಭ ಪಡೆಯುವುದು ನಮ್ಮ ಸತ್ಯಾಗ್ರಹ ಧರ್ಮಕ್ಕೆ ಉಚಿತವಲ್ಲ ಎಂದು ಗಾಂಧೀಜಿ ತಟಸ್ಥರಾದರು. ಚಳುವಳಿಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಸರ್ಕಾರಕ್ಕೆ ನೆರವಾದರು, ಈ ಔದಾರ್ಯ ಕಂಡು ಯೂರೋಪಿಯನ್ ಸಜ್ಜನರು ಕೃತಜ್ಞತೆಯಿಂದ ಕರಗಿ ಹೋದರು, ಸರ್ಕಾರದ ಮನೋಧರ್ಮವೂ ಬದಲಾಯಿತು. ನೈತಿಕ ಶಕ್ತಿಯ ಮಹಾಪ್ರಭಾವಕ್ಕೆ ಶಸ್ತ್ರಶಕ್ತಿ ದಿಗ್ಭ್ರಮೆಗೊಂಡು ಮಣಿಯಿತು.

ಪ್ರಬಲ ವಿರೋಧಿಯಾಗಿದ್ದ ಸ್ಮಟ್ಸರ ಕಾರ್ಯದರ್ಶಿ ಭಾರತೀಯ ಪ್ರಮುಖರನ್ನು ಕುರಿತು ಹೀಗೆಂದ ಎಂದು ಗಾಂಧೀಜಿ ವರ್ಣಿಸಿದ್ದಾರೆ :–

> "ನಿಮ್ಮ ಜನರನ್ನು ಕಂಡರೆ ನನಗಾಗದು, ಸಹಾಯಮಾಡಲೂ ಇಷ್ಟವಿಲ್ಲ. ಆದರೆ ನಾನೇನು ಮಾಡಲಿ ಒಳ್ಳೆಯ ಸಂಕಟಸಮಯಗಳಲ್ಲಿ ನಮಗೆ ಸಹಾಯಮಾಡತ್ತೀರಿ. ಶಾಂತವಾಗಿರುತ್ತೀರಿ ನಿಮ್ಮ ಮೇಲೆ ಕೈಮಾಡುವುದೇ ಕಷ್ಟ, ಯೂರೋಪಿಯನ್

ಮುಷ್ಕರಕಾರರಂತೆ ನೀವೂ ಹಿಂಸೆಗೆ ಕೈಹಾಕಿದ್ದರೆ ಒಂದು ನಿಮಿಷದಲ್ಲಿ ಮಟ್ಟಹಾಕಬಲ್ಲೆವು, ಆದರೆ ನಿಮ್ಮ ವೈರಿಯನ್ನು ಸಹ ನೀವು ಹಿಂಸಿಸುವುದಿಲ್ಲ. ಆತ್ಮ ಬಲಿದಾನದಿಂದ ಗೆಲ್ಲಲು ಹೊರಟಿದ್ದೀರಿ. ನಿಮ್ಮ ಶೌರ್ಯವನ್ನೂ ಗೌರವವನ್ನೂ ಎಂದೂ ಮೀರಿ ನಡೆಯುವುದಿಲ್ಲ, ಇದೇ ನಮ್ಮನ್ನು ಕೇವಲ ನಿಸ್ಸಹಾಯಕರನ್ನಾಗಿ ಮಾಡಿದೆ."

ನಾಲ್ಕಾರು ಬಾರಿ ಆ್ಯಂಡ್ರೂಸರೂ ಗಾಂಧಿಯವರೂ ಸ್ಮಟ್ಸರನ್ನು ಭೇಟಿಯಾದರು. ಸ್ಮಟ್ಸರೂ ತಮ್ಮ ಕಷ್ಟಗಳನ್ನು ತಿಳಿಸಿದರು. ಕೊನೆಗೆ ನ್ಯಾಯಸಮ್ಮತ ಒಪ್ಪಂದಕ್ಕೆ ಶರಣಾದರು. 1914ರ ಜೂನ್‌ನಲ್ಲಿ ಒಪ್ಪಂದವಾಯಿತು. ಮೂರು ಪೌಂಡ್ ತೆರಿಗೆ ರದ್ದಾಯಿತು. ಧಾರ್ಮಿಕ ವಿವಾಹಗಳು ನ್ಯಾಯಬದ್ಧವಾದವು. ಭಾರತೀಯ ವಲಸೆ ನಿರ್ಬಂಧಗಳು ಬಹಳ ಮಟ್ಟಿಗೆ ಸಡಿಲವಾದವು. ಏಷ್ಯನರು ಆತ್ಮಗೌರವದಿಂದ ಸಮಾನ ಪ್ರಜೆಗಳಂತೆ ಬಾಳುವಂತಾಯಿತು. ಈ ಅದ್ಭುತ ವಿಜಯ ಭಾರತದಲ್ಲೂ ಇಂಗ್ಲೆಂಡಿನಲ್ಲೂ ಪ್ರತಿಧ್ವನಿಸಿತು. ಗಾಂಧೀಜಿಯ ಖ್ಯಾತಿ ನೂರ್ಮಡಿಸಿತು.

ಮುಂದೆ ಜನರಲ್ ಸ್ಮಟ್ಸರು ಗಾಂಧೀಜಿಯ ಎಪ್ಪತ್ತನೇ ಜನ್ಮದಿನದ ಉತ್ಸವ ಸಂಪುಟಕ್ಕೆ ಸಂದೇಶ ಕಳುಹಿಸಿ-

"ನನಗೆ ಆಗಲೇ ಗಾಂಧಿಯವರಲ್ಲಿ ಗೌರವವಿತ್ತು. ಅಂಥ ಎದುರಾಳಿ ಸಿಗುವುದೂ ಒಂದು ಅದೃಷ್ಟವೇ. ಸೆರೆಮನೆಯಲ್ಲಿ ಅವರು ನನಗಾಗಿ ಒಂದು ಜೊತೆ ಚಪ್ಪಲಿ ಹೊಲೆದು ಬಹುಮಾನವಾಗಿ ಕೊಟ್ಟಿದ್ದಾರೆ. ಆ ಮಹಾತ್ಮರ ಪಾದರಕ್ಷೆಯಲ್ಲಿ ನಿಲ್ಲಲು ನಾನು ಯೋಗ್ಯನೇ ? ಅದನ್ನು ಅಕ್ಕರೆಯಿಂದ ಇಟ್ಟುಕೊಂಡೆ" ಎಂದಿದ್ದಾರೆ.

ಸತ್ಯಾಗ್ರಹಕ್ಕೆ ಇದೊಂದು ಕೀರ್ತಿಕಲಶ. ಮತ್ತೆ ಮೂವತ್ತು ಮೂರು ವರ್ಷಗಳ ನಂತರ 1947 ರಲ್ಲಿ ಕೊನೆಯ ಬ್ರಿಟಿಷ್ ವೈಸ್‌ರಾಯ್ ಲಾರ್ಡ್ ಮೌಂಟ್ ಬೇಟನ್ ಇದೇ ಗೌರವವನ್ನು ಗಾಂಧೀಜಿಗೆ ಸಮರ್ಪಿಸಿದ್ದಾರೆ.

ಅನಂತರ ಗಾಂಧೀಜಿ ಭಾರತಕ್ಕೆ ಹೊರಡಲನುವಾದರು,

(v) ಆಶ್ರಮ ಜೀವನ

ಸತ್ಯಾಗ್ರಹದ ಸಂಶೋಧನೆಗೆ ಕಾರಣವಾದ ದಕ್ಷಿಣ ಆಫ್ರಿಕದವಾಸ ಗಾಂಧೀಜಿಯ ಜೀವನದಲ್ಲಿ ಹಲವು ಸ್ಥಾಯೀ ಮೌಲ್ಯಗಳ ತಳಹದಿಯಾಯಿತು. ಸಾರ್ಥಕ ಪ್ರಯೋಗಗಳ ಸಾಧನ ಕ್ಷೇತ್ರವಾಯಿತು. 1904ರಲ್ಲಿ ಒಮ್ಮೆ ಅವರು ಜೊಹಾನ್ಸ್‌ಬರ್ಗಿನಿಂದ ನಟಾಲಿಗೆ ರೈಲಿನಲ್ಲಿ ಹೊರಟಾಗ ಗೆಳೆಯ ಹೆನ್ರಿ ಪೋಲಕರು ಅವರ ಕೈಗೆ ಒಂದು ಪುಸ್ತಕ ಕೊಟ್ಟು "ದಾರಿಯಲ್ಲಿ ಓದಿ, ನಿಮಗೆ ತುಂಬ ಪ್ರಿಯವಾದ ವಸ್ತು ಇದರಲ್ಲಿದೆ" ಎಂದರು. ಇಡೀ ದಿವಸ ಪ್ರಯಾಣದಲ್ಲಿ ಗಾಂಧೀಜಿ ಪುಸ್ತಕವನ್ನು ಓದಿ ಮುಗಿಸಿದರು. ಜಾನ್‌ರಸ್ಕಿನ್ನಿನ "ಕಟ್ಟಕಡೆಯವನಿಗೆ" (ಅನ್ ಟು ದಿಸ್ ಲಾಸ್ಟ್) ಎಂಬ ಈ ಪುಸ್ತಕ ಅವರ ಮನಸ್ಸನ್ನು ಪ್ರಬಲವಾಗಿ ಸೆರೆಹಿಡಿದು ಬಿಟ್ಟಿತು. ಆತ್ಮಕಥೆಯಲ್ಲಿ "ಒಂದು ಪುಸ್ತಕದ ಮೋಡಿ" ಎಂಬ ಅಧ್ಯಾಯ ಬರೆಯುತ್ತಾ ಹೀಗೆಂದಿದ್ದಾರೆ—

> "ಆ ರಾತ್ರಿ ನನಗೆ ನಿದ್ರೆ ಬರಲಿಲ್ಲ. ವಿಚಾರದ ಸುಳಿಯಲ್ಲಿ ಸಿಕ್ಕಿದ್ದೆ. ಬೆಳಿಗ್ಗೆ ಎದ್ದವನೇ ರಸ್ಕಿನ್ ವಿವರಿಸಿದ್ದ ಅಮೋಘ ಜೀವನ ಧ್ಯೇಯಗಳಿಗನುಸಾರವಾಗಿ ಆ ಕ್ಷಣದಿಂದ ನಡೆದುಕೊಳ್ಳಲು ದೃಢಸಂಕಲ್ಪ ಮಾಡಿದೆ. ಪುಸ್ತಕದಿಂದ ನಾನು ಸಂಗ್ರಹಿಸಿದ ಮೂರು ಮಹಾತತ್ವಗಳಿವು :–
>
> ೧. ಸರ್ವರ ಒಳಿತಿನಲ್ಲೇ ವ್ಯಕ್ತಿಯ ಒಳಿತು ಅಡಕವಾಗಿದೆ.
>
> ೨. ವಕೀಲನಾಗಲಿ, ನಾಯಿಂದನಾಗಲಿ ಅವರವರ ಪರಿಶ್ರಮಕ್ಕೆ ಒಂದೇ ಬೆಲೆ. ತಮ್ಮ ಕಾಯಕದಿಂದ ಜೀವನ ನಿರ್ವಹಿಸುವ ಹಕ್ಕು ಸರ್ವರಿಗೂ ಸಮಾನ.

೩. ವ್ಯವಸಾಯಗಾರನ ಮತ್ತು ಕುಶಲಕರ್ಮಿಯ ದುಡಿಮೆಯ ಜೀವನವೇ ನಿಜವಾದ ಸಾರ್ಥಕ ಜೀವನ".

ಈ ಪುಸ್ತಕದ ಸಂಗ್ರಹ ಮಾಡಿ ಗುಜರಾತಿ ಭಾಷೆಗೆ ಭಾಷಾಂತರಿಸಿ "ಸರ್ವೋದಯ" ಎಂದು ಹೆಸರಿಟ್ಟು ಗಾಂಧೀಜಿ ಪ್ರಕಟಿಸಿದರು. ಅಂದು ಯುಗ ಪ್ರವರ್ತನೆಯ ಒಂದು ಮಹಾಧ್ಯೇಯದ ಉದಯವಾಯಿತು. ಗಾಂಧೀ ಮಾರ್ಗ ಅಂದರೆ ಅಹಿಂಸಾತ್ಮಕ ಸತ್ಯನಿಷ್ಠೆಯ ಬಾಳಿನಿಂದ ಸಮಾಜ ನ್ಯಾಯ ಸ್ಥಾಪಿಸಿ, ಸರ್ವೋದಯ ಸಾಧಿಸುವುದು ಎಂದು ವಿಶ್ವಕ್ಕೆ ಪ್ರಸಾರವಾಯಿತು.

ಈ ಸಂಕಲ್ಪದ ಪರಿಣಾಮವಾಗಿ ಗಾಂಧೀಜಿ ಪ್ರಾರಂಭಿಸಿದ ಮೊಟ್ಟ ಮೊದಲನೆಯ ಆಶ್ರಮ ವಸತಿ "ಫಿನಿಕ್ಸ್ ಸೆಟಲ್‌ಮೆಂಟ್". ಒಂದೇ ವಾರದಲ್ಲಿ ಎಂಭತ್ತು ಎಕರೆ ಜಮೀನು ಕೊಂಡು ಡರ್ಬಾನಿನಿಂದ ಹದಿನಾಲ್ಕು ಮೈಲಿ ದೂರದಲ್ಲಿ ಈ ಆಶ್ರಮ ಸ್ಥಾಪಿಸಿದರು. ತಮ್ಮ ಪತ್ರಿಕೆಯ ಕಾರ್ಯಾಲಯ ಮುದ್ರಣಾಲಯ ಎಲ್ಲವನ್ನೂ ಅಲ್ಲಿಗೆ ಸಾಗಿಸಿದರು. ಇಂಜನಿಯರ್ ಗೆಳೆಯ ಕಾಲೆನ್‌ಬಾಕ್, ಪತ್ರಿಕೋದ್ಯಮಿ ಆಲ್ಬರ್ಟ್ ವೆಸ್ಟ್. ಮಗನಲಾಲ್ ಗಾಂಧಿ ಮುಂತಾದ ಸಹಚರರು ಒಗ್ಗೂಡಿದರು. ಇಪ್ಪತ್ತು ಸಂಸಾರಗಳ ಸಹಕಾರ ಜೀವನದ ಹೊಸ ಅಧ್ಯಾಯ ಪ್ರಾರಂಭವಾಯಿತು. ಸರ್ವ ಸಮಾನತೆಯ ಶ್ರಮ ಜೀವನದ ದಿನಚರಿ ಪ್ರಾರಂಭವಾಯಿತು.

ಫಿನಿಕ್ಸ್ ಆಶ್ರಮದ ಜೀವನ ನಿಯಮಗಳು ಹೀಗಿದ್ದವು :

೧. ಎಲ್ಲರೂ ದೇಹಶ್ರಮ ಮಾಡಿ ಉತ್ಪಾದನೆ ಮಾಡಬೇಕು. ಎಲ್ಲರಿಗೂ ಸಮಾನ ಸಂಭಾವನೆ. ಸುಖ–ದುಃಖಗಳನ್ನು ಹಂಚಿಕೊಂಡು ಬಾಳಬೇಕು.

೨. ಪ್ರತಿಯೊಬ್ಬರಿಗೂ ಮೂರು ಎಕರೆ ವ್ಯವಸಾಯ ಭೂಮಿ.

೩. ಆವರಣದ ಸ್ವಚ್ಛತೆಯಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು. ಕಕ್ಕಸುಗಳನ್ನು ತಾವೇ ಗುಡಿಸಿ ತೊಳೆಯಬೇಕು.

೪. ಪ್ರತಿಯೊಬ್ಬರ ಅವಶ್ಯಕತೆಗಳು ಸರಳ ಆರೋಗ್ಯಕರ ಉಲ್ಲಾಸ ಜೀವನಕ್ಕೆ ಬೇಕಾದಷ್ಟಕ್ಕೆ ಸೀಮಿತವಾಗಬೇಕು. ಭೋಗವಸ್ತುಗಳ ಬಳಕೆ ಮಿತಿಗೊಳ್ಳಬೇಕು.

೫. ಮಕ್ಕಳಿಗೆ ಪರಿಶ್ರಮ ಕೇಂದ್ರಿತ ಶಿಕ್ಷಣ ಉದಾತ್ತ ಗುಣಗಳು ವರ್ಧಿಸುವಂತೆ ಆ ಕ್ಷೇತ್ರದಲ್ಲೇ ನಡೆಯಬೇಕು.

೬. ಸರ್ವ ಧರ್ಮಗಳ ಪವಿತ್ರ ಗ್ರಂಥಗಳ ಪರಿಚಯ ಎಲ್ಲರಿಗೂ ಇರಬೇಕು. ನೀತಿಧರ್ಮ ಎಲ್ಲರಿಗೂ ಸಮಾನವಾಗಿರಬೇಕು.

೭. ಪ್ರಕೃತಿ ನಿಯಮಗಳನ್ನನುಸರಿಸಿ ನಿಸರ್ಗ ಚಿಕಿತ್ಸೆಗಳ ಮೂಲಕ ರೋಗಗಳನ್ನು ಗುಣಪಡಿಸಿಕೊಳ್ಳಬೇಕು.

ಒಮ್ಮೆ ಫಿನಿಕ್ಸಿನಲ್ಲಿ ಕಸ್ತೂರಿಬಾಗೆ ತೀವ್ರ ರಕ್ತ ಸ್ರಾವ ಖಾಯಿಲೆ. ಡರ್ಬಾನ್‌ಗೆ ಹೋದರು. ಗಾಂಧೀಜಿ ಆಗ ಜೊಹಾನ್ಸ್ ಬರ್ಗ್‌ನಲ್ಲಿದ್ದರು. ವೈದ್ಯರು ಕಸ್ತೂರಿಬಾಗೆ ಗೋಮಾಂಸ ಸಾರ ಕೊಟ್ಟಲ್ಲದೆ ವಾಸಿಯಾಗದು ಎಂದರು. ಗಾಂಧೀಜಿ ಬರುವಷ್ಟರಲ್ಲಿ ಆಕೆಗೆ ತಿಳಿಸದೆ ಅದನ್ನು ಕೊಟ್ಟಿದ್ದರು. ದಂಪತಿಗಳಿಬ್ಬರಿಗೂ ಅದು ಅಸಹನೀಯವಾಗಿ ವೈದ್ಯರನ್ನೇ ಖಂಡಿಸಿದರು. ಅಪಾಯದ ಸ್ಥಿತಿಯಲ್ಲಿದ್ದಾರೆ ಆಕೆಯನ್ನು ಬದುಕಿಸಲು ಬೇರೆ ಮಾರ್ಗವಿಲ್ಲ ಎಂದರು ವೈದ್ಯರು. ಅಹಿಂಸಾ ವ್ರತಕ್ಕೆ ಇದು ನಿಷಿದ್ಧ. ನಾನು ಸತ್ತರೂ ಚಿಂತೆಯಿಲ್ಲ ಇಲ್ಲಿಂದ ನನ್ನನ್ನು ಕರೆದುಕೊಂಡು ಹೋಗಿ ಎಂದರು ಕಸ್ತೂರಿಬಾ. ಗಾಂಧೀಜಿಗೂ ಅದೇ ಅಭಿಪ್ರಾಯ. ವೈದ್ಯರು ಕೇಳದೆ ಫಿನಿಕ್ಸಿಗೆ ಕರೆದೊಯ್ದು ಪ್ರಕೃತಿ ಚಿಕಿತ್ಸೆ ಮಾಡಿದರು. ದೇವರ ದಯದಿಂದ ಗುಣವಾಯಿತು ಎಂದುಕೊಂಡರು. ತಮ್ಮ ಚಿಕಿತ್ಸೆಯಲ್ಲಿ ಗಾಂಧೀಜಿ ರಾಮನಾಮ ಒಂದು ದಿವ್ಯೌಷಧ ಎಂದು ನಂಬಿದ್ದರು. ಮನಸ್ಸಿನ ಸಮತೋಲನವೂ ಒಂದು ಮುಖ್ಯ ಅಂಶ ಎನ್ನುತ್ತಿದ್ದರು. ಹೀಗೆ ಹಲವಾರು ಪರೀಕ್ಷಾ ಸಮಯಗಳು ಬಂದವು. ಸಂಕಲ್ಪಶಕ್ತಿ ಮತ್ತು ಆದರ್ಶಕ್ಕಾಗಿ ಸರ್ವತ್ಯಾಗಕ್ಕೂ ಸಿದ್ಧರಾಗಿದ್ದ ಮನೋಧರ್ಮ ಅವರನ್ನು ಋಜು ಮಾರ್ಗದಲ್ಲಿ ನಡೆಸಿತು.

ಸತ್ಯಾಗ್ರಹದ ಕಾಲಕ್ಕೆ ಜೈಲಿಗೆ ಹೋದ ಭಾರತೀಯರ ಸಂಸಾರಗಳನ್ನು ನೋಡಿಕೊಳ್ಳುವ ಭಾರ ಗಾಂಧೀಜಿ ಮೇಲಿತ್ತು. ಆಗ ಜೋಹಾನ್ಸ್ ಬರ್ಗ್ ಬಳಿ ಮತ್ತೊಂದು ಆಶ್ರಮವನ್ನು ಸ್ಥಾಪಿಸಿದರು. ಗೆಳೆಯ ಕಾಲೆನ್‌ಬಾಕ್ ತನ್ನ ಸಾವಿರ ಎಕರೆ ಜಮೀನನ್ನು ದಾನಮಾಡಿದ. ಆ ವೇಳೆಗೆ ಗಾಂಧೀಜಿ ರಷ್ಯದ ಮಹರ್ಷಿ ಟಾಲ್ಸ್ ಟಾಯ್ ಅವರ ಅಹಿಂಸಾತ್ಮಕ ಜೀವನಾದರ್ಶಗಳಿಂದ ಪ್ರಭಾವಿತರಾಗಿದ್ದರು. "ಬ್ರೆಡ್‌ಲೇಬರ್" ಅಥವಾ ಅನ್ನಕಾಯಕ ಬಾಳಿನ ತಳಹದಿ. ಅದೇ ಆತ್ಮೋನ್ನತಿಯ ಮಾರ್ಗ ಎಂದ ಟಾಲ್ಸ್ ಟಾಯ್ ತಮ್ಮ ಶ್ರೀಮಂತಿಕೆಯನ್ನು ತ್ಯಜಿಸಿ ಇಳಿವಯಸ್ಸಿನಲ್ಲಿ ತಾವೇ ವ್ಯವಸಾಯ ಮಾಡಿ ಗುಡಿಸಲು ಕಟ್ಟಿ ಜೀವಿಸುತ್ತಿದ್ದರು. ಗಾಂಧೀಜಿ ಅವರೊಡನೆ ದೀರ್ಘ ಪತ್ರ ವ್ಯವಹಾರ ಮಾಡಿ ಸತ್ಯಾಗ್ರಹ ನೀತಿಯನ್ನು ವಿವರಿಸಿದರು. ಟಾಲ್ಸ್ ಟಾಯ್ ಅದನ್ನು ಬಹುವಾಗಿ ಮೆಚ್ಚಿ "ಮಾನವ ಕುಲಕ್ಕೆ ಇದೊಂದು ಆಶಾಕಿರಣ" ಎಂದಿದ್ದರು. ಜೊಹಾನ್ಸ್‌ಬರ್ಗ್ ಬಳಿಯ ಆಶ್ರಮಕ್ಕೆ ಗಾಂಧೀಜಿ "ಟಾಲ್ಸ್ ಟಾಯ್ ಫಾರಮ್" ಎಂದು ಹೆಸರಿಟ್ಟರು. ಆತ್ಮಕಥೆಯಲ್ಲಿ ಅಲ್ಲಿನ ಪ್ರಯೋಗಗಳನ್ನು ವಿವರವಾಗಿ ತಿಳಿಸಿದ್ದಾರೆ. ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಪ್ರಕೃತಿ ನಿಯಮಗಳನ್ನನುಸರಿಸುತ್ತಾ ಸ್ವಂತ ಪರಿಶ್ರಮದಿಂದ ಉತ್ಪಾದನೆ ಮಾಡಿ ಸ್ವಾವಲಂಬಿಗಳಾಗಿ ಜೀವಿಸುವುದನ್ನು ಟಾಲ್ಸ್‌ಟಾಯ್ ಫಾರಮ್ಮಿನಲ್ಲಿ ಎಲ್ಲರಿಗೂ ಕಲಿಸಿದರು. ಎಲ್ಲ ಧರ್ಮಗಳ, ಎಲ್ಲ ವಯಸ್ಸಿನ ಗಂಡಸರು, ಹೆಂಗಸರು, ಮಕ್ಕಳು ಒಟ್ಟು ನೂರು ಜನ ಮೊದಲ ಗುಂಪಿನಲ್ಲಿ ನೆಲೆಸಿದರು. ಮಾಂಸಾಹಾರ ವರ್ಜಿಸಿ ಎಲ್ಲರೂ ಸಾಮೂಹಿಕ ಅಡಿಗೆಮನೆ ನಡೆಸಿದರು. ದುಡಿಮೆಯ ಪಾಲನ್ನು ಹಂಚಿಕೊಂಡರು. ಬ್ಯಾರಿಸ್ಟರ್ ರಾಯಪ್ಪನ್ ಅವರಿಂದ ಹಿಡಿದು ಕೂಲಿ ವಿಹಾರಿಯ ತನಕ ಎಲ್ಲರೂ ರಟ್ಟೆ ಮುರಿದು ಕೆಲಸ ಮಾಡಿ ಮನೆಗಳನ್ನು ಕಟ್ಟಿದರು. ಶ್ರೀಮಂತ ಕಾಲೆನ್‌ಬಾಕ್ ಎಲ್ಲವನ್ನೂ ತ್ಯಜಿಸಿ ಸರಳ ಸ್ವಚ್ಛ ದುಡಿಮೆಯ ಬಾಳಿಗೆ ಬಹುಬೇಗ ಹೊಂದಿಕೊಂಡರು, ವೆಚ್ಚವನ್ನು ಅತಿ ಕನಿಷ್ಟ ಮಟ್ಟಕ್ಕೆ ಇಳಿಸಿದರು. ಕೈಯಂತ್ರಗಳಿಂದ ಹಿಟ್ಟುಬೀಸಿಕೊಂಡರು. ಸೇಂಗಾಯಿ ತಿರುವಿ ಬೆಣ್ಣೆ ಮಾಡಿದರು. ಹಣ್ಣುಗಳನ್ನು ತರಕಾರಿಗಳನ್ನು ಬೆಳೆದರು. ವಿವಿಧ ಹಿನ್ನೆಲೆಗಳಿಂದ ಬಂದಿದ್ದರೂ ಎಲ್ಲರೂ ಒಂದು ಶಿಸ್ತಿನ ದಿನಚರಿಗೆ ಒಗ್ಗಿ ಹೋದರು.

ಆದರೆ ಎಲ್ಲವೂ ಸುಗಮವಾಗಿರಲಿಲ್ಲ. ಕೆಟ್ಟ ಚಾರಿತ್ರ್ಯದಹ ಲವರು ಸೇರಿದ್ದರು. ಅವರ ಅನಾಚಾರಗಳನ್ನು ಬಹಿರಂಗವಾಗಿ ಎಲ್ಲರಿಗೂ ತಿಳಿಸಿ ಅವರ ಅಪರಾಧಕ್ಕಾಗಿ ತಾವು ಒಂದುವಾರದ ಉಪವಾಸ ಕೈಗೊಂಡರು ಗಾಂಧೀಜಿ. ಈ ಅನಿರೀಕ್ಷಿತ ಕ್ರಮ ಅಪರಾಧಿಗಳನೇಕರಿಗೆ ಪಶ್ಚಾತ್ತಾಪದಿಂದ ಬೆಂದು ತಾವೇ ಸುಧಾರಿಸಿಕೊಳ್ಳಲು ಅಗ್ನಿಪರೀಕ್ಷೆಯಾಯಿತು. ಕೆಲವರು ಬಿಟ್ಟುಹೋದರು, ಮಾನವನಲ್ಲಿರುವ ಒಳ್ಳೆಯ ಗುಣಗಳನ್ನೆಚ್ಚರಿಸಲು ವ್ಯಕ್ತಿಜೀವನದಲ್ಲೂ ಸತ್ಯಾಗ್ರಹ ಪರಿಣಾಮಕಾರಿ ಎಂದು ಇಂಥ ಅನೇಕ ಪ್ರಯೋಗಗಳಿಂದ ಗಾಂಧೀಜಿ ಸಿದ್ಧಮಾಡಿದರು.

ಇಲ್ಲಯೇ ಗಾಂಧೀಜಿಯ ಪ್ರಥಮ ಶಿಕ್ಷಣ ಪ್ರಯೋಗ ನಡೆಯಿತು. ನಲವತ್ತು ಮಕ್ಕಳಿದ್ದರು. ಗಾಂಧೀಜಿ ಮತ್ತು ಕಾಲೆನ್‌ಬಾಕ್ ಎರಡೆರಡು ಗಂಟೆ ಪಾಠ ಹೇಳುತ್ತಿದ್ದರು. ತಂದೆ ತಾಯಿಗಳನೇಕರು ಅನಕ್ಷರಸ್ಥರು. ತಮಿಳು, ಗುಜರಾತಿ. ಉರ್ದು ಎಲ್ಲ ಭಾಷೆಗಳ ಮಕ್ಕಳಿದ್ದರು. ಗಾಂಧೀಜಿ ತಾವೇ ತಮಿಳು ಕಲಿತರು. ಮಕ್ಕಳಿಗೆ ಶೀಲ, ಪರಿಶ್ರಮ, ತ್ಯಾಗ, ಸಂಯಮ ಸಹಕಾರ ಮುಂತಾದ ಉದಾತ್ತಗುಣಗಳು ಸಹಜವಾಗಿ ಬೆಳೆಯುವಂತೆ ಶಿಕ್ಷಣ ಕ್ರಮ ಕೂಪಿಸಿಕೊಂಡರು, 'ಆರೋಗ್ಯ ರಹಸ್ಯ' ಎಂಬ ಪುಸ್ತಕ ಬರೆದು ನೀರು. ಗಾಳಿ, ಅಕಾಶ. ಮಣ್ಣು ಇವುಗಳ ಶಾಸ್ತ್ರೀಯ ಉಪಯೋಗದಿಂದ ಶರೀರ ಹೇಗೆ ನಿರೋಗಿಯಾಗಿ ಚೈತನ್ಯ ತುಂಬಿಕೊಳ್ಳುತ್ತದೆ ಎಂಬ ಮಾರ್ಗದರ್ಶನ ಮಾಡಿದರು.

ಗೋಖಲೆಯವರು ಟಾಲ್‌ಸ್ಟಾಯ್ ಫಾರಮ್ಮಿಗೆ ಭೇಟಯಿತ್ತರು. ಅನೇಕರ ಜೀವನದಲ್ಲಿ ಅಗಾಧ ಪರಿವರ್ತನೆಯಾದುದನ್ನು ಕಂಡು ವಿಸ್ಮಿತರಾದರು, ತಂಡತಂಡವಾಗಿ ಸತ್ಯಾಗ್ರಹಿಗಳು ಇಲ್ಲಿ ಬಂದು ವಾಸಿಸುತ್ತಿದ್ದರು. ಸತ್ಯಾಗ್ರಹ ಚಳುವಳಿಮುಗಿದನಂತರ ಈ ಆಶ್ರಮವನ್ನು ಮುಕ್ತಾಯಗೊಳಿಸಿ ಉಳಿದವರನ್ನು ಫೀನಿಕ್ಸ್‌ಗೆ ಕರೆದೊಯ್ದರು. ಫೀನಿಕ್ಸ್ ಆಶ್ರಮವನ್ನು ಮುಂದೆ ಬಹುಕಾಲ ಗಾಂಧೀಜಿಯ ಮಗ ಮಣಿಲಾಲರು ನಡೆಸಿದರು.

—o—

ಅಧ್ಯಾಯ ೪ : ತಾಯ್ನಾಡಿನ ಸೇವೆಯಲ್ಲಿ

(i) ಸಬರ್ಮತಿಯ ಹೃದಯಕುಂಜ

ಗೋಖಲೆಯವರ ಸೂಚನೆಯಂತೆ 1914ರಲ್ಲಿ ಗಾಂಧೀಜಿ ದಕ್ಷಿಣ ಆಫ್ರಿಕ ಬಿಟ್ಟು ಭಾರತಕ್ಕೆ ಬರುವಮುನ್ನ ಲಂಡನ್ನಿಗೆ ಭೇಟಿ ಕೊಟ್ಟರು. ಆಗ ತಾನೆ ಮೊದಲನೆ ಮುಹಾಯುದ್ಧ ಘೋಷಿತವಾಗಿತ್ತು. ಜರ್ಮನಿ ಇಂಗ್ಲೆಂಡಿನಮೇಲೆ ಧಾಳಿಮಾಡಲು ಸಿದ್ಧವಾಗಿತ್ತು. ಗೋಖಲೆ, ದಾದಾಭಾಯಿ ನವರೋಜಿ. ಸರೋಜಿನಿನಾಯ್ಡು, ಆನಂದ ಕುಮಾರಸ್ವಾಮಿ ಮುಂತಾದ ಪ್ರಮುಖ ಭಾರತೀಯರಲ್ಲದೆ ಬಂಗಾಳ. ಪಂಜಾಬು ಮತ್ತಿತರ ಕಡೆಗಳಿಂದ ಬಂದ ಕ್ರಾಂತಿಕಾರಕ ಯುವಕರೂ ಆಗ ಲಂಡನ್ನಿನಲ್ಲಿದ್ದರು. ಭಾರತ ಈ ಸಮಯದಲ್ಲೇ ದಂಗೆಯೆದ್ದು ಸ್ವಾತಂತ್ರ್ಯ ಸಾಧಿಸಬೇಕು ಎಂದು ಅನೇಕ ಆತಂಕವಾದಿ ದೇಶಭಕ್ತ ಯುವಕರು ವಾದಿಸುತ್ತಿದ್ದರು. ವಿಧ್ವಂಸಕ ಕೃತ್ಯಗಳಲ್ಲಿ ತೊಡಗಲು ಬಯಸಿದ್ದರು. ಆದರೆ ಗಾಂಧೀಜಿ ಇದನ್ನೊಪ್ಪದೆ ಆ ಸಂಕಟಸಮಯದಲ್ಲಿ ಬ್ರಿಟನ್ನಿಗೆ ಸಹಾಯಮಾಡಬೇಕು, ಎದುರಾಳಿಯ ಕಷ್ಟಗಳಿಂದ ದುರ್ಲಾಭಪಡೆಯುವುದು ಸರಿಯಲ್ಲ ಎಂದರು.

ಗಾಯಗೊಂಡ ಸೈನಿಕರಿಗೆ ಶುಶ್ರೂಷೆ ಮಾಡಲು ಸ್ವಯಂಸೇವಕ ದಳವನ್ನು ರಚಿಸಿ ತಾವೂ ಸೈನಿಕಶಿಸ್ತು ಶಿಕ್ಷಣ ಪಡೆದರು. ಮಿಕ್ಕ ಭಾರತೀಯರನ್ನೂ ಪ್ರೇರೇಪಿಸಿದರು, ಈ ಮಧ್ಯೆ ಅವರ ಆರೋಗ್ಯ ಕುಸಿಯಿತು. ಶ್ವಾಸಕೋಶ ಬಾಯಿಲೆ (ಪ್ಲೂರಸಿ) ಬಂತು. ಭಾರತಕ್ಕೆ ಕೂಡಲೇ ಹಿಂತಿರುಗಲು ವೈದ್ಯರು ಸಲಹೆಮಾಡಿದರು. ಹೊರಡುವ ಮುನ್ನ ಒಂದು ಸಮಾರಂಭದಲ್ಲಿ ಮಾತನಾಡುತ್ತ ಗಾಂಧೀಜಿ

"ನನ್ನ ಕಲ್ಪನೆಯ ಭಾರತ ಜಗತ್ತಿನಲ್ಲಿ ಅದ್ವಿತೀಯ ದೇಶ. ಅಧ್ಯಾ

ತ್ಮಸಿಧಿಯು ತೌರು. ಭಾರತಕ್ಕೂ ಇಂಗ್ಲೆಂಡಿಗೂ ಇರುವ ಸಂಬಂಧ ಬದಲಾಗಿ ವಿಶಾಲ ಜಗತ್ತಿಗೆ ಶಾಂತಿ ನೆಮ್ಮದಿ ಮತ್ತು ಉತ್ತಮ ಆದರ್ಶಗಳ ಮೂಲವಾಗಲೆಂಬುದೇ ನನ್ನ ಗುರಿ" ಎಂದರು.

ದಕ್ಷಿಣ ಆಫ್ರಿಕದಿಂದ ಜೊತೆಯಲ್ಲಿ ಬಂದಿದ್ದ ಕಾಲೆನ್‌ಬಾಕರಿಗೆ ಆವರು ಜರ್ಮನರಾದ್ದರಿಂದ ಭಾರತಕ್ಕೆ ಹೋಗಲು ಅನುಮತಿ ನೀಡಲಿಲ್ಲ. ಗಾಂಧೀಜಿ ಒಬ್ಬರೇ ಸ್ವದೇಶಕ್ಕೆ ಹೊರಟರು, ಕಸ್ತೂರಿಬಾ ಮತ್ತು ಮಕ್ಕಳು ಆಗಲೇ ಹಿಂತಿರುಗಿದ್ದರು.

ಬೊಂಬಾಯಿನಲ್ಲಿ 1915ರ ಜನವರಿ ಒಂಭತ್ತರಂದು ಇಳಿದಾಗ ಗಾಂಧೀಜಿಗೆ ಅದ್ಭುತ ಸ್ವಾಗತ ದೊರೆಯಿತು, ಸರ್‌ಫಿರೋಜ್‌ಷಾ ಮೆಹ್ತ ಆತ್ಮೀಯತೆಯಿಂದ ಕಂಡರು. ಇಲ್ಲಿ ಬಂದಿಳಿದೊಡನೆ ಗಾಂಧೀಜಿ ಕಾಥೇವಾಡೀ ಸಾಂಪ್ರದಾಯಿಕ ಉಡುಪು ಧರಿಸಿದರು. ವೈಭವೋಪೇತ ಸಮಾರಂಭಗಳಲ್ಲಿ ಆಂಗ್ಲರನ್ನೇ ಅನುಕರಿಸುತ್ತಿದ್ದ ಪ್ರತಿಷ್ಠಿತರ ಸಭೆಯಲ್ಲಿ ಗುಜರಾತಿಯಲ್ಲೇ ಮಾತನಾಡಿದಾಗ ಒಂದು ಹೊಸ ರಾಷ್ಟ್ರೀಯ ಆತ್ಮಗೌರವದ ಮಿಂಚು ಸಂಚಾರವಾದಂತಾಯಿತು.

ಭಾರತದ ಸ್ಥಿತಿ ಗಂಭೀರವಾಗಿತ್ತು. ತಿಲಕರು ಆರುವರ್ಷ ಮ್ಯಾಂಡಲೆ ಜೈಲಿನಲ್ಲಿ ಖೈದಿಯಾಗಿದ್ದು ಆಗತಾನೆ ಹಿಂತಿರುಗಿದ್ದರು. ರಾಷ್ಟ್ರೀಯ ಕ್ಷಿತಿಜದಲ್ಲಿ ಅವರದೇ ಉನ್ನತ ಪ್ರಭಾವ. ಶ್ರೀಮತಿ ಆನಿಬಸೆಂಟರು 'ಹೋಂ ರೂಲ್' ಚಳುವಳಿ ಪ್ರಾರಂಭಿಸಿ ಹೊಸ ಸಂಘಟನೆಯನ್ನು ಮಾಡುತ್ತಿದ್ದರು. ಗೋಖಲೆ ಫಿರೋಜ್‌ಷಾ ಮೆಹ್ತ ಮುಂತಾದ ಮಂದಗಾಮಿಗಳು ಬ್ರಿಟಿಷರಿಗೆ ಯುದ್ಧ ಸಮಯದಲ್ಲಿ ಸಹಾಯ ಮಾಡಲು ಉತ್ಸುಕರಾಗಿದ್ದರು. ರವೀಂದ್ರನಾಥ ಠಾಕೂರರು ಶಾಂತಿನಿಕೇತನದಲ್ಲಿ ನೆಲೆಸಿ ಶಿಕ್ಷಣ ಪ್ರಯೋಗಗಳಲ್ಲಿ ತೊಡಗಿದ್ದರು. ಅವರೊಡನೆ ಸಿ. ಎಫ್. ಅಂಡ್ರೂಸರೂ ಸೇರಿದರು. ಗಾಂಧೀಜಿಗಿಂತ ಮುಂಚೆಯೇ ಭಾರತಕ್ಕೆ ಬಂದಿದ್ದ ಫಿನಿಕ್ಸ್ ಆಶ್ರಮದ ಹುಡುಗರಿಗೆ

ಶಾಂತಿನಿಕೇತನದಲ್ಲಿ ಆಶ್ರಯ ದೊರೆಕಿತ್ತು. ಟಾಗೂರರು ಗಾಂಧೀಜಿಯನ್ನು ನೋಡಿಯೇ ಇರಲಿಲ್ಲ. ಆದರೆ ಅವರ ಸತ್ಯಾಗ್ರಹ ಮಾರ್ಗಕ್ಕೆ ಮಾರು ಹೋಗಿದ್ದರು. "ನಿಮ್ಮ ಬಾಲಕರು ನಮ್ಮ ಬಾಲಿಕರಾಗಿರಲು ಒಪ್ಪಿ, ನಮ್ಮಿಬ್ಬರ ಜೀವನದಲ್ಲಿ ಒಂದು ಸಜೀವ ಬಾಂಧವ್ಯ ಸ್ಥಾಪಿಸಿರುವುದಕ್ಕಾಗಿ ನಾನು ಪೂರ್ಣ ಕೃತಜ್ಞ" ಎಂದು ಗಾಂಧೀಜಿಗೆ ಬರೆದರು. ಅಲ್ಲಿಂದಾಚೆ ಜೀವನ ಪರ್ಯಂತ ಈ ಬಾಂಧವ್ಯ ಬೆಳೆದು ರಾಷ್ಟ್ರೀಯ ಉತ್ಥಾನ ಪಥಕ್ಕೆ ಇಬ್ಬರೂ ಎರಡು ಕಣ್ಣುಗಳಾದರು.

ಗಾಂಧೀಜಿ ಭಾರತಕ್ಕೆ ಬರುವ ಮುನ್ನವೇ ಅವರ ಅಣ್ಣ ಲಕ್ಷ್ಮೀದಾಸರು ಸ್ವರ್ಗಸ್ಥರಾಗಿದ್ದರು. ಪುಣೆಯಲ್ಲಿ ಗೋಖಲೆಯವರನ್ನು ಕಂಡು ನಂತರ ಗಾಂಧೀಜಿಗೆ ತಮ್ಮ ಪೋರ್‌ಬಂದರಿನ ಮನೆಗೆ ಧಾವಿಸಿದರು. ಅಲ್ಲಿಯೇ ಸ್ವಲ್ಪಕಾಲ ಇದ್ದು ಮುಂದಿನ ಭವಿಷ್ಯವನ್ನು ರೂಪಿಸಿಕೊಳ್ಳಲು ವಿಚಾರ ಮಾಡುತ್ತಿದ್ದರು.

1915ನೇ ಜೂನ್ 3ರಂದು ಬ್ರಿಟಿಷ್ ಚಕ್ರವರ್ತಿಯ ಜನ್ಮೋತ್ಸವ. ಗಾಂಧೀಜಿಯ ಸಾರ್ವಜನಿಕ ಸೇವೆಗಾಗಿ ಅವರಿಗೆ ಕೈಸರ್-ಇ-ಹಿಂದ್ ಪದಕ ವನ್ನು ರವೀಂದ್ರನಾಥ ಠಾಕೂರರಿಗೆ "ಸರ್" ಪದವಿಯನ್ನು ಇತ್ತು ಗೌರವಿಸಿ ದರು. ಯುದ್ಧಕಾಲದಲ್ಲಿ ಚಕ್ರಾಧಿಪತ್ಯದ ಪ್ರಜೆಯಾಗಿ ತಮಗೆ ಸಹಾಯ ಮಾಡಿದುದನ್ನು ಬ್ರಿಟಿಷರು ಸ್ಮರಿಸಿದರು. ಯುದ್ಧ ಮುಗಿದೊಡನೆ ಭಾರತಕ್ಕೆ ಸ್ವಯಮಾಡಳಿತ ಕೊಡುವ ಆಶ್ವಾಸನವನ್ನೂ ಮಾಡಿದ್ದರು. 1918 ರಲ್ಲಿ ಯುದ್ಧ ಮುಗಿದು ಜರ್ಮನಿ ಸೋತಿತು. ಗೆದ್ದ ಅಹಂಕಾರದಲ್ಲಿ ಬ್ರಿಟಿಷರು ವಚನ ಭ್ರಷ್ಟರಾಗಿ ಭಾರತೀಯರನ್ನು ಮತ್ತಷ್ಟು ಅಧೋಗತಿಗೆ ತುಳಿದರು.

ಗೋಖಲೆಯವರ ಸೂಚನೆಯಂತೆ ಗಾಂಧೀಜಿ ಒಂದು ವರ್ಷ ಯಾವುದೇ ನಿರ್ದಿಷ್ಟ ಕಾರ್ಯಕ್ರಮದಲ್ಲಿ ತೊಡಗದೆ ಇಡೀ ಭಾರತವನ್ನು ಸುತ್ತಿದ್ದರು. ಸಾಮಾನ್ಯ ಭಾರತೀಯರನ್ನು ಅವರ ಜೀವನ ಪರಿಸರದಲ್ಲಿ ಕಂಡು ಮಿಳಿತವಾಗಿ ರಾಷ್ಟ್ರದ ಅಂತರಂಗದ ಆಳಲುಗಳನ್ನು ಅರಿತರು. ಅನಾಮಧೇಯ ಪ್ರವಾಸಿಯಂತೆ ಮೂರನೇ ದರ್ಜೆಯ ರೈಲು ಗಾಡಿಯಲ್ಲಿ

ಪ್ರಯಾಣ ಮಾಡುತ್ತಿದ್ದರು. "ಕಣ್ಣು ಕಿವಿಗಳನ್ನು ತೆರೆದಿಟ್ಟುಕೊಂಡು ತುಟಿಮುಚ್ಚಿ ಭಾರತ ಪ್ರದಕ್ಷಿಣೆ ಮಾಡು" ಎಂದಿದ್ದರು ಗೋಖಲೆ.

ಶಾಂತಿ ನಿಕೇತನಕ್ಕೆ ಹೋಗಿ ತಮ್ಮ ಫಿನಿಕ್ಸ್ ಸೋದರರನ್ನು ಕಂಡರು. ರವೀಂದ್ರರು ಆಗ ಅಲ್ಲಿರಲಿಲ್ಲ, ದಕ್ಷಿಣ ಭಾರತ ಗಾಂಧೀಜಿಗೆ ಹೊಸದು. ದಕ್ಷಿಣ ಆಫ್ರಿಕ ಸತ್ಯಾಗ್ರಹದಲ್ಲಿ ಒಡನಾಡಿಗಳಾಗಿ ಹೋರಾಡಿದ ತಮಿಳು ಸೋದರಿಯರನ್ನು ನೆನೆದು ಮದ್ರಾಸಿನಲ್ಲಿ ಅವರ ನಿಸ್ಸೀಮ ತ್ಯಾಗಬಲಿದಾನಗಳನ್ನು ಕೊಂಡಾಡಿದರು. ವಿದ್ಯಾರ್ಥಿಗಳೊಡನೆ ಗಂಟೆಗಟ್ಟಲೆ ಚರ್ಚಿಸುತ್ತಿದ್ದರು. ಕೇವಲ ಪಾಶ್ಚಾತ್ಯರ ಅನುಕರಣೆಯಾದ ಶಿಕ್ಷಣ ಪದ್ಧತಿ ಖಂಡಿಸಿ ನೀವೇ ಸ್ವತಂತ್ರವಾಗಿ ರಾಷ್ಟ್ರೀಯ ಶಾಲೆಗಳನ್ನೇರ್ಪಡಿಸಿಕೊಳ್ಳಿ, ಮೊದಲು ಅಪ್ಪಟ ಭಾರತೀಯ ವ್ಯಕ್ತಿತ್ವ ಪಡೆಯಿರಿ ಎನ್ನುತ್ತಿದ್ದರು. ಬೆಂಗಳೂರಿನಲ್ಲಿ ಮೆರವಣಿಗೆ ಮಾಡಿದಾಗ "ಅತಿಶಯ ಹೊಗಳಿಕೆಗಳಿಂದ ದೇಶನಾಯಕರ ಅಹಂಕಾರ ಹೆಚ್ಚುತ್ತದೆ. ಈ ವೈಭವದ ಉತ್ಸವಗಳನ್ನು ನಿಲ್ಲಿಸಿ" ಎಂದರು. 1915ರಲ್ಲಿ ಬೆಂಗಳೂರಿನ ಸಾಹಿತಿ ಡಿ. ವಿ. ಗುಂಡಪ್ಪನವರ ಆಹ್ವಾನಮೇಲೆ ಗೋಖಲೆ ಸಾರ್ವಜನಿಕ ಸಂಸ್ಥೆಯಲ್ಲಿ ಗೋಖಲೆಯವರ ಭಾವ ಚಿತ್ರವನ್ನು ಗಾಂಧೀಜಿಯೇ ಅನಾವರಣಮಾಡಿದರು. ಈಗಲೂ ಅದು ಅಲ್ಲಿ ವಿರಾಜಿಸುತ್ತಿದೆ.

1915ರಲ್ಲೇ ಗೋಖಲೆಯವರು ನಿಧನರಾದರು. ಗಾಂಧೀಜಿ ಅತ್ಯಂತ ಶೋಕದಿಂದ ಹೀಗೆಂದರು–

> "ಶಾಂತ ಸ್ವಭಾವದ ನಿಜವಾದ ವೀರರೊಬ್ಬರನ್ನು ಹುಡುಕಿಕೊಂಡು ಹೊರಟಾಗ ಗೋಖಲೆ ನನಗೆ ದೊರೆತರು. ಅವರ ಪಾದತಲದಲ್ಲಿ ಅನೇಕ ಪಾಠಗಳನ್ನು ಕಲಿತೆ."

ಫಿನಿಕ್ಸ್‌ನ ಗೆಳೆಯರೊಡಗೂಡಿ ಒಂದು ಆಶ್ರಮ ಸ್ಥಾಪಿಸಲು ಗಾಂಧೀಜಿಯ ಇಚ್ಛೆಗೆ ಗೋಖಲೆ ಆಶೀರ್ವದಿಸಿದ್ದರು. ಧನ ಸಹಾಯದ ಭರವಸೆಯನ್ನೂ ನೀಡಿದ್ದರು. ಅಷ್ಟರಲ್ಲೇ ಸ್ವರ್ಗಸ್ಥರಾದರು.

1915ರ ಮೇ ಇಪ್ಪತ್ತೆರಡರಂದು ಅಹಮದಾಬಾದಿನಲ್ಲಿ ಕೊಚರಬ್ ಪ್ರದೇಶದಲ್ಲಿ ಗಾಂಧೀಜಿ ತಮ್ಮ ಆಶ್ರಮ ಸ್ಥಾಪಿಸಿದರು. ಮಿತ್ರರಾದ ಜೀವನಲಾಲ್ ದೇಸಾಯಿ ಅವರುಕೊಟ್ಟ ಬಂಗಲೆಯಲ್ಲಿ ಆಶ್ರಮ ಪ್ರಾರಂಭವಾಯಿತು. ತಮ್ಮ ಮಾತೃಭಾಷೆಯಲ್ಲಿ ವ್ಯವಹರಿಸಲು, ಅಪ್ಪರ ಸಹಾಯ ದೊರಕಿಸಿಕೊಳ್ಳಲು ಸ್ವಕ್ಷೇತ್ರದ ಸಹಜ ಸಂಸ್ಕೃತಿಯಲ್ಲಿ ಲೀನವಾಗಲು ಅಹಮದಾಬಾದ್ ಅತ್ಯುತ್ತಮ ಸ್ಥಳ ಎಂದು ನಿರ್ಣಯಿಸಿದರು. ಆಶ್ರಮಕ್ಕೆ ಅನೇಕ ಹೆಸರುಗಳು ಸೂಚಿಸಲ್ಪಟ್ಟವು. ತಮ್ಮ ಗುರಿ ಮತ್ತು ಮಾರ್ಗಗಳೆರಡನ್ನೂ ಒಳಗೊಂಡಿರುವಂತೆ "ಸತ್ಯಾಗ್ರಹಾಶ್ರಮ" ಎಂದೇ ಗಾಂಧೀಜಿ ಹೆಸರಿಟ್ಟರು. ಆಶ್ರಮವಾಸಿಗಳಿಗೆ ಒಂದು ನಿಯಮಾವಳಿ ಸಿದ್ಧಮಾಡಿದರು. ಹದಿಮೂರು ತಮಿಳು ಮಿತ್ರರೂ ಕೆಲವು ಮಹಿಳೆಯರೂ ಸೇರಿದಂತೆ ಒಟ್ಟು ಇಪ್ಪತ್ತೈದು ಸಂಗಡಿಗರೊಡನೆ ಆಶ್ರಮ ಪ್ರಾರಂಭವಾಯಿತು. ಒಂದೇ ಸಂಸಾರದಂತೆ ಕೆಲಸಗಳನ್ನು ಹಂಚಿಕೊಂಡು ಒಟ್ಟಿಗೇ ಬಾಳಲು ನಿಶ್ಚಯಿಸಿದರು.

ಕೆಲವೇ ದಿನಗಳಲ್ಲಿ ಆಶ್ರಮ ಸೇರಲು ದೂದಾಭಾಯಿ ಎಂಬ ಅಸ್ಪೃಶ್ಯ ಪಂಗಡದ ವಿನೀತ ಗುಣವಂತ ಸೋದರ ತನ್ನ ಹೆಂಡತಿ ಮತ್ತು ಮಗಳು ಲಕ್ಷ್ಮಿಯೊಡನೆ ಬಂದ, ಗಾಂಧೀಜಿ ಸಂತೋಷದಿಂದ ಬರಮಾಡಿಕೊಂಡರು. ಆ ಕೂಡಲೇ ಆಶ್ರಮಕ್ಕೆ ಬಿಕ್ಕಟ್ಟು ತಲೆದೋರಿತು. ಮೊದಲು ಭಾವಿಯಲ್ಲಿ ನೀರು ಸೇದಲು ನೆರೆಹೊರೆಯವರು ಅಡ್ಡಿಮಾಡಿದರು. ದೂದಾಭಾಯಿಯನ್ನು ಹೀನಾಪಮಾನವಾಗಿ ಬೈದು ಹೊಡೆದರು. ಎಲ್ಲವನ್ನೂ ಶಾಂತವಾಗಿ ಸಹಿಸಿ ನಾವು ಒಗ್ಗಟ್ಟಾಗಿರೋಣ ಎಂದರು ಗಾಂಧೀಜಿ, ಆಶ್ರಮಕ್ಕೆ ಸಹಾಯಮಾಡುತ್ತಿದ್ದವರು ಹಿಂಜರಿದರು. ಧನಸಹಾಯ ನಿಂತಿತು. "ಇದು ನಮ್ಮ ಪರೀಕ್ಷೆ ! ಇಲ್ಲಿ ವಾಸಿಸುವುದು ಸಾಧ್ಯವಾಗದೇ ಹೋದರೆ ಅಸ್ಪೃಶ್ಯ ವಸತಿಗಳ ಮಧ್ಯೆಯೇ ಹೋಗಿ ಇರೋಣ" ಎಂದರು ಗಾಂಧೀಜಿ.

ಆ ವೇಳೆಗೆ ಅನಿರೀಕ್ಷಿತವಾಗಿ ಪ್ರಸಿದ್ಧ ಉದ್ಯೋಗಪತಿ ಅಂಬಾಲಾಲ್ ಸರಾಭಾಯ್ ಗಾಂಧೀಜಿ ಬಳಿಗೆ ಬಂದು ಹದಿಮೂರು ಸಾವಿರ ರೂಪಾಯಿಗಳ ಧನಸಹಾಯ ಕೊಟ್ಟು ಹೊರಟು ಹೋದರು. ಕೇವಲ ಅಪರಿಚಿತ ವ್ಯಕ್ತಿ

ಏನನ್ನೂ ವಿಚಾರಿಸದೆ ಹೀಗೆ ಸಹಾಯಮಾಡಿದ್ದನ್ನು ಭಗವಂತನ ಕೃಪೆ ಎಂದು ಕೊಂಡರು ಗಾಂಧೀಜಿ. ಕೋಚರಬ್‌ನಲ್ಲೇ ನಿಂತರು. ಆಶ್ರಮವಾಸಿಗಳೂ ಈ ಅಸ್ಪೃಶ್ಯ ಬಂಧುವನ್ನು ಹೀಯಾಳಿಸುತ್ತಿದ್ದುದನ್ನು ಗಾಂಧೀಜಿ ಸೂಕ್ಷ್ಮ ವಾಗಿ ಗ್ರಹಿಸಿದರು. ದೂದಾಭಾಯಿ ವಿದ್ಯಾವಂತ. ಶಿಕ್ಷಕ ವೃತ್ತಿಯಲ್ಲಿದ್ದ ವನು, ಅವನಿಗೂ ನೋವಾಗುತ್ತಿತ್ತು. ಗಾಂಧೀಜಿ ಬಹಿರಂಗವಾಗಿ ನಿಶ್ಚಿತ ಧ್ವನಿಯಲ್ಲಿ ಹೇಳಿದರು.

> "ಆಶ್ರಮದಲ್ಲಿ ಅಸ್ಪೃಶ್ಯತೆಗೆ ಎಂದಿಗೂ ಸ್ಥಾನವಿರುವುದಿಲ್ಲ. ಎಲ್ಲರೂ ಇದನ್ನರಿತು ನಡೆದುಕೊಳ್ಳಬೇಕು ದಾನಿಗಳಿಗೂ ಇದು ಗೊತ್ತಿರ ಬೇಕು"

ಎಲ್ಲರಿಗೂ ಇದು ಒಂದು ಹೃದಯ ಶೋಧನೆಯ ಘಟನೆಯಾಯಿತು, ಲಕ್ಷ್ಮಿ ಗಾಂಧೀಜಿಯ ಪ್ರೀತಿಯ ಸಾಕು ಮಗಳಾಗಿ ಈ ಸಂಸಾರದೊಂದಿಗೆ ಸೇರಿಹೋದಳು.

ಸ್ವಲ್ಪಕಾಲದನಂತರ ಕೊಚರಬ್ ಗ್ರಾಮದಲ್ಲಿ ಪ್ಲೇಗ್ ತಲೆದೋರಿತು. ಆಶ್ರಮವನ್ನು ಸಬರ್ಮತಿ ನದೀತೀರಕ್ಕೆ ಬದಲಾಯಿಸಬೇಕಾಯಿತು. ಅಹ ಮದಾಬಾದಿನಿಂದ ನಾಲ್ಕು ಮೈಲಿ ದೂರವಿರುವ ಪ್ರಶಾಂತ ವಿಶಾಲ ನಿವೇಶನ ವನ್ನು ಕೊಳ್ಳಲು ಶ್ರೀ ಪುಂಜಾಭಾಯಿ ಹಿರಾಚಂದ್ ಎಂಬ ಶ್ರೀಮಂತ ಮಿತ್ರ ರು ಗಾಂಧೀಜಿಗೆ ಧನಸಹಾಯ ನೀಡಿದರು. ಮೊದಲು ಎಲ್ಲರೂ ಗುಡಾರ ಗಳನ್ನು ಹಾಕಿಕೊಂಡರು. ಕ್ರಮೇಣ ಕಟ್ಟಡಗಳು ಬಂದವು. ಪ್ರಾಣಹಿಂಸೆ ಮಾಡಬಾರದು ಎಂದು ಹಾವುಗಳನ್ನು ಕೊಲ್ಲಲೂ ಗಾಂಧೀಜಿ ಒಪ್ಪುತ್ತಿರಲಿಲ್ಲ. ಅವುಗಳೇ ದೂರ ಹೋದವು. ಆಶ್ರಮವಾಸಿಗಳ ಸಂಖ್ಯೆ ಐವತ್ತಕ್ಕೇರಿತು. ಗಾಂಧೀಜಿಯ ಸರಳ ಕುಟೀರ "ಹೃದಯಕುಂಜಿ" ಎಂದು ಪ್ರಸಿದ್ಧವಾಯಿತು. 1920–24ರ ವೇಳೆಗೆ ಸಬರ್ಮತಿ ಆಶ್ರಮ ಸೇರಿದ ಮಹಾಮಹಿಮರು ಅನೇಕ, ಶಾಂತಿನಿಕೇತನದಿಂದ ಆಚಾರ್ಯ ಕಾಕಾಕಾಲೇಲ್ಕರ್, ವಾರಣಾಸಿ ಯಿಂದ ಆಚಾರ್ಯ ವಿನೋಬಾಭಾವೆ. ಅಹಮದಾಬಾದಿನ ಶಂಕರಲಾಲ್ ಬ್ಯಾಂಕರ್, ಮಹದೇವ ದೇಸಾಯಿ. ನರಹರಿ ಪರೇಖ್, ಬೊಂಬಾಯಿನಿಂದ

ಅರ್ಥಶಾಸ್ತ್ರಜ್ಞ ಜೊಸೆಫ್ ಕಾರ್ನಿಲಿಯಸ್ ಕುಮಾರಪ್ಪ ಮತ್ತು ಕಿಶೋರಿ ಲಾಲ್ ಮಶ್ರೂವಾಲ; ಮುಂದೆ ಮೀರಾಬಹೆನ್ ಎಂದು ಪ್ರಸಿದ್ಧಳಾದ ಇಂಗ್ಲೆಂಡಿನ ನೌಕಾಧಿಕಾರಿಯ ಮಗಳು ಕುಮಾರಿ ಮ್ಯಾಡಲೀನ್ ಸ್ಲೇಡ್; ಕನ್ನಡಿಗರಾದ ಗೊರೂರು ರಾಮಸ್ವಾಮಿ ಐಯ್ಯಂಗಾರ್ ಹಾಗೂ ರಾಮಚಂದ್ರ ವಡವಿ. ಈ ಅಹಿಂಸಾ ಸಾಧಕರ ಜ್ಯೋತಿಪಂಕ್ತಿ ಸತ್ಯಾಗ್ರಹಾಶ್ರಮದ ಬೆಳಕನ್ನು ನಾಡಿನಲ್ಲೆಲ್ಲ ಪಸರಿಸಿ ನಿಂತಿತು.

ವ್ಯವಸಾಯ, ನೇಯ್ಗೆ, ಮತ್ತಿತರ ಕೈಕಸಬುಗಳಲ್ಲಿ ತೊಡಗುವ ಸರ್ವ ಸಮಾನತೆಯು ಶ್ರಮಜೀವನ ಆಶ್ರಮದ ಪ್ರಧಾನ ನಿಯಮ. ಸತ್ಯ ಮತ್ತು ಅಹಿಂಸೆಯ ಆಧಾರದ ಮೇಲೆ ಜೀವನ ನಡೆಸುವುದೇ ಮುಖ್ಯ ಉದ್ದೇಶ. ಅರ್ಥಶಾಸ್ತ್ರ, ಶರೀರಶಾಸ್ತ್ರ, ಸಮಾಜಶಾಸ್ತ್ರ ಮತ್ತು ಶಿಕ್ಷಣಶಾಸ್ತ್ರಗಳ ಹೊಸ ಪ್ರಯೋಗಗಳು ಪ್ರಾರಂಭವಾದವು. ಅನ್ನ, ಬಲ, ಪ್ರೇಮ ಮತ್ತು ಜ್ಞಾನ ಇವುಗಳನ್ನು ಅಹಿಂಸಾ ಪಥದಲ್ಲಿ ಗಳಿಸಿಕೊಳ್ಳುವುದೇ ಜೀವನದ ಆಕಾಂಕ್ಷೆ. ದಿನವೂ ಬೆಳಿಗ್ಗೆ ಐದು ಗಂಟೆ ಮತ್ತು ಸಂಜೆ ಸರ್ವಧರ್ಮೀಯ ಪ್ರಾರ್ಥನೆ, ಇದರಲ್ಲಿ ಹನ್ನೊಂದು ವ್ರತಪಾಲಿಸುವ ಶ್ಲೋಕವನ್ನು ವಿನೋಬ ರಚಿಸಿ ಸೇರಿಸಿದರು.

ಅಹಿಂಸಾ ಸತ್ಯ, ಆಸ್ತೇಯ, ಬ್ರಹ್ಮಚರ್ಯ, ಅಸಂಗ್ರಹ

ಶರೀರಶ್ರಮ, ಅಸ್ವಾದ ಸರ್ವತ್ರಭಯ ವರ್ಜನ

ಸರ್ವಧರ್ಮ ಸಮಾನತ್ವ, ಸ್ವದೇಶೀ, ಸ್ಪರ್ಶಭಾವನ

ಹನ್ನೊಂದೀವ್ರತ ಕೈಗೊಳ್ವೆ ನಮ್ರ ನಿಶ್ಚಯಭಾವದಿ

ಆಶ್ರಮಜೀವನ ಭಾರತಕ್ಕೆ ಪ್ರಾಚೀನ ಕಲ್ಪನೆ, ವಯಕ್ತಿಕವಾಗಿ ಮೋಕ್ಷಗಳಿಸಲು ಸರ್ವಸಂಗ ಪರಿತ್ಯಾಗಮಾಡಿ ಏಕಾಂತದಲ್ಲಿ ತಪಸ್ಸುಮಾಡಲು ಆಶ್ರಮಕಟ್ಟುತ್ತಿದ್ದರು. ಆದರೆ ಈ ಸಬರ್ಮತಿಯ ಸಂತ ಕಟ್ಟಿದ ಆಶ್ರಮ

ಜೀವನದೊಡನೆ ಸಕ್ರಿಯವಾಗಿ ಬೆರೆತು ಅದೇ ಪ್ರಾಚೀನ ಆತ್ಮಶಕ್ತಿ ವರ್ಧನೆಯ ಪಥವನ್ನು ಸಮಾಜವಿಕಾಸಕ್ಕೆ ಶ್ರೇಷ್ಠ ಸಾಧನವನ್ನಾಗಿ ಪರಿವರ್ತಿಸಿತು. ಮಾನವನ ವಿಕಾಸಕ್ಕೆ ನೂತನ ನೈತಿಕ ಶಕ್ತಿಯನ್ನು ಬಳಸಿ ವಿಶ್ವವಿಖ್ಯಾತ ಸತ್ಯಾಗ್ರಹ ಮಾರ್ಗಕ್ಕೆ ಬುನಾದಿ ನಿರ್ಮಿಸಿತು. ಜಗತ್ತನ್ನು ಶಾಂತಿ ಮತ್ತು ಮೈತ್ರಿಯೆಡೆಗೆ ಕರೆದೊಯ್ಯುವ ಯುಗಧರ್ಮಕ್ಕೆ ಗಾಂಧೀಜಿ ಮತ್ತು ಅವರ ಋಜು ಜೀವನ ಶಾಶ್ವತ ಸಂಕೇತವಾಗಿ ನಿಂತಿತು. ಕವಿ ರವೀಂದ್ರರು 1916ರಲ್ಲಿ ಕಿರಿಯ ಗಾಂಧಿಯವರನ್ನು 'ಮಹಾತ್ಮ' ಎಂದು ಒಂದು ಸಭೆಯಲ್ಲಿ ಸಂಭೋಧಿಸಿದರು. ಅಲ್ಲಿಂದಾಚೆ 'ಮಹಾತ್ಮಗಾಂಧಿ' ಎಂಬ ಹೆಸರು ಶಾಶ್ವತವಾಗಿ ನಿಂತಿತು.

ಹನ್ನೊಂದು ವ್ರತಗಳಲ್ಲಿ ಅಹಿಂಸೆ, ಸತ್ಯ, ಅಸ್ತೇಯ ಬ್ರಹ್ಮಚರ್ಯ, ಅಸ್ವಾದ ಮತ್ತು ಅಸಂಗ್ರಹ ಭಾರತದ ಆರ್ಷೇಯ ಋಷಿ ಪರಂಪರೆಯಿಂದ ಬಂದ ಮಹಾವ್ರತಗಳು. ಗಾಂಧೀಜಿ ತಮ್ಮ ಜೀವನ ಪ್ರಯೋಗಗಳಿಂದ ಆಧುನಿಕ ಸಮಾಜ ಜೀವನವನ್ನು ಸ್ವಚ್ಛಗೊಳಿಸಲು ಸೇರಿಸಿದವು ಐದು ವ್ರತಗಳು. ಶರೀರಶ್ರಮ, ನಿರ್ಭಯತೆ, ಸರ್ವಧರ್ಮಸಮಭಾವ, ಸ್ವದೇಶಿ ಮತ್ತು ಅಸ್ಪೃಶ್ಯತಾ ನಿವಾರಣೆ (ಸ್ಪರ್ಶಭಾವನೆ),

(ii) ವಾರಣಾಸಿಯ ಡಿಂಡಿಮ

ಪಂಡಿತ ಮದನಮೋಹನ ಮಾಳವೀಯರು 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾನಿಲಯ ಪ್ರಾರಂಭೋತ್ಸವಕ್ಕೆ ಗಾಂಧೀಜಿಯನ್ನು ಆಹ್ವಾನಿಸಿದರು. ವೈಸರಾಯ್ ಲಾರ್ಡ್ ಹಾರ್ಡಿಂಜ್, ಶ್ರೀಮತಿ ಅನಿಬೆಸೆಂಟ್ ಮತ್ತು ಅನೇಕ ದೇಶೀಯ ರಾಜ ಮಹಾರಾಜರುಗಳು ಬಂದಿದ್ದರು. ಸಹಸ್ರಾರು ವಿದ್ಯಾರ್ಥಿಗಳೂ ಸಾರ್ವಜನಿಕರೂ ಸೇರಿದ್ದ ಆ ಮಹಾಸಭೆಯಲ್ಲಿ ಗಾಂಧೀಜಿ ಮಾಡಿದ ಚರಿತ್ರಾರ್ಹ ಭಾಷಣ ಭಾರತದ ಹೃದಯವನ್ನೇ ಎಚ್ಚರಿಸಿ ನಿಲ್ಲಿಸಿತು. ನಾಡಿನ ಪರಿಸ್ಥಿತಿಯ ನಿಷ್ಠುರ ಸತ್ಯ ಸಂಗತಿಗಳನ್ನು ನಿರ್ಭೀತರಾಗಿ

ಬಿಚ್ಚಿಟ್ಟರು. ಯುವಕರ ಭಾವನೆಗಳು ಪ್ರಚೋದಿತವಾಗಿ ಸ್ವಾತಂತ್ರ್ಯದ ಉತ್ಕಟ ಆಕಾಂಕ್ಷೆ ತುಂಬಿನಿಲ್ಲುವಂತಾಯಿತು. ಯಾವ ಆಟಾಟೋಪಗಳೂ ಇಲ್ಲದೆ, ಘರ್ಜನೆಗಳಿಲ್ಲದೆ, ಭಾವಾವೇಶಗಳಿಲ್ಲದೆ ಈ ವಿನೀತ ಕೃಶದೇಹಿಯಿಂದ ಮೃದುವಾಗಿಯೇ ಬಂದ ನುಡಿಗಳು ಸ್ವಾತಂತ್ರ್ಯ ಸಂಗ್ರಾಮದ ಹೊಸ ಡಿಂಡಿಮದಂತೆ ಬಾರಿಸಿ ದೇಶದ ಮೂಲೆ ಮೂಲೆಗಳಲ್ಲಿ ಪ್ರತಿಧ್ವನಿಸಿತು.

ಒರಟಾದ ಧೋತಿ, ಕಾಥೇವಾಡದ ನಿಲುವಂಗಿ ಮತ್ತು ರುಮಾಲು ಧರಿಸಿ ವೇದಿಕೆಯಲ್ಲಿ ನಿಂತ ಈ ಅಪರಿಚಿತ ಸಂತನ ಉದ್ಘೋಷ ಅಳ್ಳೆದೆಗಳನ್ನು ನುಚ್ಚುನೂರು ಮಾಡಿತು. ರಾಜಮಹಾರಾಜರುಗಳು ನಾಚಿಕೆಯಿಂದ ತಲೆತಗ್ಗಿಸಿದರು. ಬ್ರಿಟಿಷ್ ವೈಸರಾಯರು ಚಕಿತರಾದರು. ಆನಿ ಬಸೆಂಟರಿಗೂ ಈ ನಿಷ್ಠುರತೆ ಸಹಿಸಲಿಲ್ಲ. ಗಾಂಧೀಜಿಯನ್ನು "ಭಾಷಣ ನಿಲ್ಲಿಸಿ" ಎಂದು ಅಧ್ಯಕ್ಷ ಪೀಠದಿಂದ ಆಣತಿಮಾಡಿದರು. ಸಭೆಗೆ ಸಭೆಯೇ "ನಿಲ್ಲಿಸಬೇಡಿ ಮಾತನಾಡಿ" ಎಂದು ಕೂಗಿತು. ಆದರೂ ಗಾಂಧೀಜಿ "ಸಭಾಮರ್ಯಾದೆ ಕಾಪಾಡಲು ಅಧ್ಯಕ್ಷರ ಮಾತನ್ನು ಗೌರವಿಸಿ ನಿಲ್ಲಿಸುತ್ತೇನೆ. ಯಾರನ್ನೂ ನೋಯಿಸುವ ಉದ್ದೇಶ ನನಗಿಲ್ಲ" ಎಂದು ಹೇಳಿ ಕುಳಿತರು. ಅವರ ಕೆಲವು ಮಾತುಗಳು ಇವು–

> "ಈ ರಾಷ್ಟ್ರದ ಆಧ್ಯಾತ್ಮಿಕತೆಯನ್ನು ಬಾಯಿಮಾತಿನಿಂದ ಹೇಳಿಕೊಡಲು ಹೇಗೆ ಸಾಧ್ಯ ? ಹಾಗೆ ಮೋಸಹೋಗಬೇಡಿ ! ಈ ಪವಿತ್ರ ನಗರದಲ್ಲಿ ನನ್ನ ದೇಶಬಾಂಧವರನ್ನು ಪರಭಾಷೆಯಲ್ಲಿ ಸಂಬೋಧಿಸುವ ಬಲಾತ್ಕಾರಕ್ಕೆ ಒಳಗಾಗಿದ್ದೇನೆ, ನಮ್ಮ ಭಾಷೆಗಳಿಗೆ ಇದೆಂಥಹ ಅವಮಾನ ! ಈ ಪ್ರತಿಕೂಲ ಪರಭಾಷೆಯ ಹೊರೆ ರಾಷ್ಟ್ರದ ಬೆನ್ನು ಮುರಿಯುತ್ತಿದೆ. ಜನತೆಯ ಹೃದಯವನ್ನು ನಾವು ಮುಟ್ಟಲಾರೆವು, ಭಾರತದ ಅದ್ವಿತೀಯ ಆಧುನಿಕ ಚಿಂತಕರ ಜ್ಞಾನಭಂಡಾರದಿಂದ ಸಾಮಾನ್ಯರು ವಂಚಿತರಾಗುತ್ತಿದ್ದಾರೆ. ವಿಶ್ವವಿದ್ಯಾನಿಲಯಗಳು ಇದನ್ನರಿಯಬೇಕು......

ನಮ್ಮ ಸ್ವಯಮಾಡಳಿತ ಬೇಡಿಕ ಕೇವಲ ಮಾತುಗಳಿಂದ ಸಾಧಿತವಾಗಲಾರದು. ನಮ್ಮ ಚಾರಿತ್ರ್ಯ ನಮ್ಮ ದೇಶಪ್ರೇಮ ನಮ್ಮ ನಿರ್ಭೀತ ತ್ಯಾಗ ಬೇಕು. ತಮ್ಮ ಇಚ್ಛೆಯಿಂದಲೋ ಬಲಾತ್ಕಾರದಿಂದಲೋ ಆಂಗ್ಲರು ಇಲ್ಲಿಂದ ಹೊರಟು ಹೋದ ಮೇಲೆ ತಾನೇತಾನಾಗಿ ಈ ದೇಶದ ಪವಿತ್ರತೆ ಪುನರ್ನಿರ್ಮಾಣವಾಗುವುದಿಲ್ಲ, ಈ ಕೊಳಕು, ಈ ಮೋಸ, ಈ ದಂಭಾಚಾರ, ಧರ್ಮದ ಹೆಸರಿನಲ್ಲಿ ಶೋಷಣೆ, ಆತ್ಮವಂಚನೆ ಮೊದಲು ನಿಲ್ಲಬೇಕು......

ಇಲ್ಲಿ ವಜ್ರ ವೈಢೂರ್ಯಗಳ ಮೆರವಣಿಗೆ ನೋಡುತ್ತಿದ್ದೇನೆ. ರಾಜ ಮಹಾರಾಜರು ಈ ಅಲಂಕಾರ ಧರಿಸಿ ಭಾರತದ ಬಡತನ ಕುರಿತು ಮಾತನಾಡಿದ್ದಾರೆ. ಎಂಥ ವಿಪರ್ಯಾಸ ಇದು ! ಈ ಶ್ರೀಮಂತಕುಲ ತಮ್ಮ ಸಂಪತ್ತನ್ನು ವಿಶ್ವಸ್ತ ಆಸ್ತಿಯನ್ನಾಗಿ ಪರಿವರ್ತಿಸಬೇಕು. ನಿಮ್ಮ ಸಂಪತ್ತು, ನಿಮ್ಮ ಒಡವೆ, ನಿಮ್ಮ ಅರಮನೆಗಳೆಲ್ಲ ಭಾರತದ ಅಸಂಖ್ಯಾತ ವ್ಯವಸಾಯಗಾರರ ಪರಿಶ್ರಮದಿಂದ ಬಂದಿದೆ. ಈ ದೇಶದ ಗ್ರಾಮ ನಿವಾಸಿಗಳಾದ ರೈತರೇ ನಮಗೆ ಸ್ವಯಮಾಡಳಿತ ಹಕ್ಕನ್ನು ದೊರಕಿಸಿಕೊಟ್ಟಾರು ಮೇಲ್ವರ್ಗದವರೆಲ್ಲ ದಾಸ್ಯವನ್ನೇ ಅಪ್ಪಿಕೊಂಡಿದ್ದೇವೆ......

ಇಲ್ಲಿಗೆ ಬಂದ ವೈಸರಾಯರನ್ನು ರಕ್ಷಿಸಲು ಸಾವಿರಾರು ಪೋಲೀಸರು ಇಲ್ಲಿ ಸೇರಿದ್ದಾರೆ. ತಮ್ಮ ಪ್ರಜೆಗಳಲ್ಲಿ ಈ ಅಪನಂಬಿಕೆ ಏಕೆ ? ಹಾರ್ಡಿಂಜರೂ ಸಹ ಹೀಗೆ ಬದುಕಿ ಸಾಯುವುದಕ್ಕಿಂತ ಸತ್ತು ಬದುಕುವುದೇ ಮೇಲಲ್ಲವೇ ? ಈ ಗುಪ್ತಚಾರರನ್ನು ನಮ್ಮ ಮೇಲೆ ಏಕೆ ಹೇರಬೇಕು ? ಈ ಅಪಮಾನಗಳಿಂದ ದೊಡ್ಡ ಕ್ರಾಂತಿಕಾರಕ ಪಡೆಗಳೇ ಸೃಷ್ಟಿಯಾಗಿವೆ. ಆದರೆ ಅರಾಜಕತೆಯಿಂದ, ದೊಂಬಿಯಿಂದ ನಾವೇನನ್ನೂ ಸಾಧಿಸಲಾರೆವು. ಅವು ಭಯದ ಚಿಹ್ನೆಗಳು. ಮೊದಲು ನಿರ್ಭೀತರಾಗೋಣ. ಅಧಿ

ಕಾರ ಶಾಹಿಯ ಮುಂದೆ ಆತ್ಮಗೌರವದಿಂದ ತಲೆಯೆತ್ತಿ ನಿಲ್ಲಿ, ಆದರೆ ಕೊಲೆಗಡುಕತನ ರಹಸ್ಯ ಪಿತೂರಿಗಳು ಅರ್ಥಹೀನ, ಬಹಿರಂಗವಾಗಿ ಎದುರಿಸೋಣ. ಸ್ವಾತಂತ್ರ್ಯಕ್ಕಾಗಿ ಬಲಿದಾನಕ್ಕೆ ಸಿದ್ಧರಾಗೋಣ, ಬಾಂಬುಗಳನ್ನೆಸೆದು, ಬಂದೂಕಗಳನ್ನು ಹಾರಿಸಿ, ನಾವು ಅಕೃತ್ಯಗಳಿಂದ ನಮ್ಮನ್ನೇ ನಾಶಮಾಡಿಕೊಳ್ಳುತ್ತೇವೆ. ಇದನ್ನು ನಮ್ಮ ದೇಶಭಕ್ತ ಯುವಕರಿಗೆ ಸಾರಿ ಸಾರಿ ಹೇಳುತ್ತೇನೆ......

ನಮ್ಮ ಗುರಿಯನ್ನು ಮುಟ್ಟಬೇಕಾದರೆ ಎರಡು ಕಡೆಯೂ ಸಂಶಯ ತೊಲಗಬೇಕು. ಪ್ರೇಮ ಮತ್ತು ನಂಬಿಕೆಯ ಆಧಾರದಮೇಲೆ ಸಾಮ್ರಾಜ್ಯ ನಿಲ್ಲಬೇಕು. ಆತ್ಮ ನಿರೀಕ್ಷೆಮಾಡಿಕೊಳ್ಳಿ. ನಮ್ಮ ಆಳರಸರಿಗೆ ನಿಸ್ಸಂಕೋಚವಾಗಿ ಹೇಳೋಣ. ಅವರಿಗೆ ಅಪ್ರಿಯವೆನಿಸಿದರ ಪರಿಣಾಮವನ್ನು ಶಾಂತವಾಗಿ ಎದುರಿಸೋಣ... ಸ್ವಾತಂತ್ರ್ಯವನ್ನು ಯಾರೂ ಇನ್ನೊಬ್ಬರಿಗೆ ಕೊಡುವುದಿಲ್ಲ. ನಾವೇ ಸಾಹಸದಿಂದ ಪಡೆಯಬೇಕು. ನಮ್ಮ ಸತ್ವ ಪರೀಕ್ಷೆ ಆಗಬೇಕು..."

ಬ್ರಿಟಿಷ್ ಚಕ್ರಾಧಿಪತ್ಯದ ಸ್ವಾಮಿನಿಷ್ಠ ಪ್ರತಿಷ್ಠಿತರಿಗೆ, ತಮ್ಮ ಸ್ವಾತಂತ್ರ್ಯನೀಗಿದ್ದ ರಾಜಮಹಾರಾಜರುಗಳಿಗೆ. ದಾಸ್ಯದಲ್ಲಿದ್ದ ಅಧಿಕಾರ ವರ್ಗಕ್ಕೆ ಈ ಭಾಷಣದಿಂದ ಕೋಪಬಂದು ಅವರು ಸಭೆಯಿಂದ ಹೊರಟು ಹೋದರು. ವಿದ್ಯಾರ್ಥಿಗಳೂ ಯುವಕರೂ ಉತ್ಸಾಹ ಪ್ರೇರಿತರಾಗಿ ಅನಿರೀಕ್ಷಿತವಾಗಿ ಬಂದ ಈ ಗಾಂಧೀ ಬೀಸಿಗೆ ಮಾರು ಹೋದರು, ಜೈಕಾರಗಳಾದವು. ಸಭೆ ಗೊಂದಲದಲ್ಲಿ ಕೊನೆಗೊಂಡಿತು. ಪತ್ರಿಕೆಗಳು ಭಾಷಣವನ್ನು ಪ್ರಕಟಿಸಿದವು. ಭಾಷಣವನ್ನೋದಿ ಆಗ ವಾರಣಾಸಿಯಲ್ಲಿದ್ದ ಯುವಕ ವಿದ್ಯಾರ್ಥಿ ವಿನೋಬಭಾವೆ ಕೂಡಲೇ ಗಾಂಧೀಜಿಗೆ ಪತ್ರ ಬರೆದು ಸಬರ್ಮತಿ ಆಶ್ರಮಕ್ಕೆ ಧಾವಿಸಿದರು. ಅವರಂತೆಯೇ ಸಹಸ್ರಾರು ವಿದ್ಯಾರ್ಥಿಗಳು ಗಾಂಧೀವಾದಿಗಳಾದರು ವಿನೋಬ ಹೇಳಿರುವಂತೆ–

"ನಾನು ಬಿಸಿರಕ್ತದ ವಿಧ್ವಂಸಕ ಕ್ರಾಂತಿಕಾರರೊಡನೆ ಸೇರಲೋ, ಮೋಕ್ಷಪಥ ಹಿಡಿದು ಸನ್ಯಾಸಿಯಾಗಿ ಹಿಮಾಲಯಕ್ಕೆ ಹೋಗಲೋ ಎಂಬ ತುಮುಲದಲ್ಲಿದ್ದೆ. ಗಾಂಧೀಜಿ ನನಗೆ ವಿಚಾರ ಕ್ರಾಂತಿಯ ಜ್ವಾಲೆಯನ್ನೂ ಆಧ್ಯಾತ್ಮಿಕತೆಯ ಬೆಳಕನ್ನೂ ಸಾಧಿಸುವ ಸತ್ಯಾಗ್ರಹ ಪಥತೋರಿದರು."

ಆ ರಾತ್ರಿ ಬಹಳ ಹೊತ್ತಿನಮೇಲೆ ಪೋಲೀಸು ಕಮೀಷನರು ಗಾಂಧೀಜಿ ಇದ್ದಲ್ಲಿಗೆ ಬಂದು ತಕ್ಷಣ ವಾರಣಾಸಿ ಬಿಟ್ಟುಹೊರಡಲು ಆಜ್ಞೆಮಾಡಿದರು. ಮಾಳವೀಯರು ಮಧ್ಯೆ ಪ್ರವೇಶಿಸಿ ಅಜ್ಞೆಯನ್ನು ಹಿಂತೆಗೆದುಕೊಳ್ಳುವಂತೆ ಮೇಲಧಿಕಾರಿಗಳ ಮನವೊಲಿಸಿದರು. ಆದರೆ ತಮ್ಮ ಕಾರ್ಯಕ್ರಮದಂತೆ ಮಾರನೆ ಬೆಳಿಗ್ಗೆ ಗಾಂಧೀಜಿ ಅಲ್ಲಿಂದ ಹೊರಟುಬಿಟ್ಟರು.

(iii) ಮೊದಲ ಪ್ರಯೋಗಗಳು

ನೀಲಿಯ ಕಲೆ

ಸುತ್ತಲಿನ ಸಮಾಜದಲ್ಲಿ ಎಲ್ಲಿ ಅನ್ಯಾಯ ಕಂಡರೂ ಪ್ರತಿಭಟಿಸಿ ಅಹಿಂಸಾತ್ಮಕ ವಿಧಾನಗಳಿಂದ ಪರಿಹರಿಸುವುದು ಸತ್ಯಾಗ್ರಹಿಯ ಸಹಜಧರ್ಮ. ಬಿಹಾರ ರಾಜ್ಯದ ಚಂಪಾರಣ್ಯದಲ್ಲಿ ಗುತ್ತಿಗೆದಾರ ರೈತರು ಕಡ್ಡಾಯವಾಗಿ ನೀಲಿಗಿಡ ಬೆಳೆದು ಜಮೀನುದಾರರಿಗೆ ಒಪ್ಪಿಸುವ ಪದ್ಧತಿ ಜಾರಿಯಲ್ಲಿತ್ತು. ಎಕರೆಯ ಏಳನೇ ಒಂದುಭಾಗ (ತೀನ್ ಕಠಿಯಾ) ಪ್ರದೇಶವನ್ನು ಇದಕ್ಕಾಗಿ ಮೀಸಲಾಗಿಡಬೇಕಾಗಿತ್ತು. ಇದರ ಸ್ವಾಮ್ಯವೆಲ್ಲ ಬಿಳಿಯ ತೋಟಗಾರರು. ಅಲ್ಲಿನ ರೈತ ರಾಜಕುಮಾರ ಶುಕ್ಲ ಗಾಂಧೀಜಿಯನ್ನು ಕಂಡು ತಮ್ಮ ರೈತರಿಗಾಗುತ್ತಿರುವ ಅನ್ಯಾಯ ಬಣ್ಣಿಸಿದ. 1916ರಲ್ಲಿ ಲಕ್ನೋ ಕಾಂಗ್ರೆಸ್ ಈ ರೈತರಿಗೆ ಸಹಾನುಭೂತಿ ತಿಳಿಸುವ ಠರಾವನ್ನೂ ಮಾಡಿತ್ತು. ಆಗಿನ್ನೂ ಕಾಂಗ್ರೆಸ್ಸಿಗೆ ಗಾಂಧೀಜಿ ಪ್ರವೇಶ ಆಗಿರಲಿಲ್ಲ. ಶುಕ್ಲ ಗಾಂಧೀಜಿ ಬೆನ್ನುಹತ್ತಿ ಅವರು ಕಲ್ಕತ್ತೆಗೆ ಬಂದಾಗ ಮನವೊಲಿಸಿ ಚಂಪಾರಣ್ಯಕ್ಕೆ ಕರೆತಂದ. ಪಾಟ್ನ

ದಲ್ಲಿ ಆಗ ಸುಪ್ರಸಿದ್ಧ ಶ್ರೀಮಂತ ವಕೀಲರೆನಿಸಿದ್ದ ಬಾಬುಬ್ರಜ ಕಿಶೋರ್ ಪ್ರಸಾದ್ ಮತ್ತು ಬಾಬು ರಾಜೇಂದ್ರ ಪ್ರಸಾದರು ಗಾಂಧೀಜಿಗೆ ಸಹಾಯಕ ರಾದರು. ಮುಜಫರ್‌ಪುರದಲ್ಲಿ ಕಾಲೇಜೊಂದರ ಪ್ರಾಂಶುಪಾಲರಾಗಿದ್ದ ಆಚಾರ್ಯ ಜೆ. ಬಿ. ಕೃಪಲಾನಿ ನಿಕಟಾನುವರ್ತಿಗಳಾದರು.

ಚಂಪಾರಣ್ಯ ಜಿಲ್ಲಾಕೇಂದ್ರ ಮೋತಿಹಾರಿಯಲ್ಲಿ ಗಾಂಧೀಜಿ ಬಂದಿಳಿದರು. ನೀಲಿತೋಟಗಳ ಮಾಲಿಕರಾಗಿದ್ದ ಜಮೀನ್‌ದಾರರನ್ನು ಮೊದಲು ಭೇಟಿಯಾದರು. ಇವರು ಬಂದದ್ದು ಅವರಿಗೆ ಸಹಿಸಲಿಲ್ಲ. "ಹೊರಗಿನವರಾದ ನೀವು ನಮ್ಮ ವ್ಯವಹಾರದಲ್ಲಿ ತಲೆ ಹಾಕಬೇಡಿ" ಎಂದು ನಿಷ್ಠುರವಾಗಿ ನುಡಿದರು. ಅವರೆಲ್ಲ ಬಹುಪಾಲು ಯೂರೋಪಿನವರು. "ಭಾರತದಲ್ಲಿ ನಾನು ಎಲ್ಲೂ ಹೊರಗಿನವನಾಗಲಾರೆ. ಈ ರೈತರು ನನ್ನ ಬಾಂಧವರು" ಎಂದರು ಗಾಂಧೀಜಿ. ಜಿಲ್ಲಾಧಿಕಾರಿಗಳು ಜಮೀನ್‌ದಾರರ ಪರವೇ ಇದ್ದರು ನೀವು ಇಲ್ಲಿಂದ ಹೊರಟು ಬಿಡಿ ಎಂದು ಸಲಹೆ ನೀಡಿದರು. ಯಾವುದನ್ನೂ ಗಮನಿಸದೆ ತಮ್ಮ ಸಂಗಡಿಗರೊಡನೆ ಗಾಂಧೀಜಿ ರೈತರ ಸಂಕಷ್ಟಗಳ ತನಿಖೆಗೆ ತೊಡಗಿದರು. ಹಳ್ಳಿ ಹಳ್ಳಿಗೆ ಹೋಗಿ ವಿಚಾರಿಸಿದರು, ಕಾಡು ಪ್ರದೇಶಕ್ಕೆ ಆನೆಮೇಲೆ ಹೋದರು. ಜನರಲ್ಲಿ ಮಿಂಚು ಸಂಚಾರವಾಯಿತು, ಶುಕ್ಲನ ಹಳ್ಳಿ ಬೆಟ್ಟಿಯಾದಲ್ಲಿ ಒಬ್ಬ ರೈತನನ್ನು ಜಮೀನ್‌ದಾರರು ತುಂಬ ಹಿಂಸೆಗೆ ಗುರಿಮಾಡಿದ್ದರು. ಈ ಗ್ರಾಮಕ್ಕೆ ಹೊರಟಾಗ ಜಿಲ್ಲಾಧಿಕಾರಿ ದಾರಿಯಲ್ಲೇ ನಿಲ್ಲಿಸಿ ಗಾಂಧೀಜಿ ಚಂಪಾರಣ್ಯ ಬಿಟ್ಟು ಹೊರಡಬೇಕೆಂದು ಆಜ್ಞೆ ಜಾರಿಮಾಡಿದ. ಈ ಆಜ್ಞೆಯನ್ನು ನಾನು ಪಾಲಿಸುವುದಿಲ್ಲ ಎಂದು ವಿನಯದಿಂದ ನಿರಾಕರಿಸಿದರು. ಮಾರನೆ ದಿನ ನ್ಯಾಯಾಲಯದಲ್ಲಿ ಅವರ ಮೇಲೆ ಕಟ್ಟಳೆ ಹಾಕಿದರು. ಈ ಸುದ್ದಿಗಳು ಕಾಡ್ಗಿಚ್ಚಿನಂತೆ ಹರಡಿ ನೂರಾರು ರೈತರು ಮೋತಿಹಾರಿಗೆ ಬಂದರು. ನ್ಯಾಯಾಲಯದ ಬಳಿ ದೊಡ್ಡ ಜನಸಂದಣಿ. ಸ್ವಯಂಸೇವಕರು ಅವರೆಲ್ಲ ಶಾಂತರಾಗಿ ಶಿಸ್ತಿನಿಂದ ಇರುವಂತೆ ವ್ಯವಸ್ಥೆ ಮಾಡಿದರು. ಗಾಂಧೀಜಿ ನೇರವಾಗಿ ನ್ಯಾಯಾಲಯಕ್ಕೆ ಬಂದು ತಾವು ಸರ್ಕಾರಿ ಆಜ್ಞೆಯನ್ನು ಉಲ್ಲಂಘಿಸಿದ್ದೇನೆ ಎಂದು ಒಪ್ಪಿ ಶಿಕ್ಷೆಗೆ ಸಿದ್ಧ ಎಂದು ಹೇಳಿದರು. ತಮ್ಮನ್ನು ಹಿಂಬಾಲಿಸಿದ್ದ ಜನಜಂಗುಳಿಯನ್ನು ಶಾಂತ

ವಾಗಿರಲು ವಿನಂತಿಸಿಕೊಂಡರು. ಯಾರೂ ಅವರ ಮಾತನ್ನು ಮೀರಲಿಲ್ಲ. ಶಿಕ್ಷೆಗೆ ಸಿದ್ಧರಾಗಿಯೇ ಎಲ್ಲರೂ ನಿರ್ಭೀತರಾಗಿ ಬಂದಿದ್ದರು, ಪೋಲೀಸರಿಗೆ ಸ್ವಯಂಸೇವಕರೇ ಸಹಾಯಕರಾಗಿ ನಿಂತು ಎಲ್ಲೂ ಗದ್ದಲಸಡೆಯದಂತೆ ನೋಡಿಕೊಂಡರು. ಗಾಂಧೀಜಿ ಆಗಿನ್ನೂ ಅಪರಿಚಿತವ್ಯಕ್ತಿ. ಆದರೂ ಆ ಜನತೆಯಲ್ಲಿ ಪ್ರೇಮ ವಿಶ್ವಾಸಗಳು ಮೂಡಿಬಂದುದನ್ನು ಕಂಡು ಚಕಿತರಾದರು. "ರೈತರೊಡನೆ ಹೀಗೆ ಸೇರಿದಾಗ ನನಗೆ ಸತ್ಯ ಅಹಿಂಸಾ ರೂಪದ ನನ್ನ ದೇವರ ಪ್ರತ್ಯಕ್ಷ ಸಂದರ್ಶನವಾದಂತಾಯಿತು" ಎಂದಿದ್ದಾರೆ. ತಮ್ಮ ಆತ್ಮ ಕಥೆಯಲ್ಲಿ.

ಮೊಕದ್ದಮೆ ನಡೆಯಿತು, ಮೂರನೆ ದಿನ ತೀರ್ಪು ಕೇಳಲು ಗಾಂಧೀಜಿ ನ್ಯಾಯಾಲಯಕ್ಕೆ ಹೋದರು. ಅಧಿಕಾರಿಗಳಿಗೆ ನ್ಯಾಯಾಧೀಶರಿಗೆ ಗಾಂಧೀಜಿಯ ನಡತೆ ವಿನಯಗಳನ್ನು ಕಂಡು ವಿಸ್ಮಯವಾಗಿತ್ತು. ಚಂಪಾರಣ್ಯದ ಉಪರಾಜ್ಯಪಾಲರು ಮೊಕದ್ದಮೆಯನ್ನು ಹಿಂತೆಗೆದುಕೊಳ್ಳಲು ಆಜ್ಞೆಮಾಡಿ ಗಾಂಧೀಜಿ ತಮ್ಮನ್ನು ಭೇಟಿಯಾಗಲು ಆಹ್ವಾನಿಸಿದ್ದರು. ಜಿಲ್ಲಾಧಿಕಾರಿ "ನಿಮ್ಮ ತನಿಖೆನಡೆಸಲು ಅಡ್ಡಿಯಿಲ್ಲ" ಎಂದರು. ಸಾವಿರಾರು ರೈತರು ತಮ್ಮ ಹೇಳಿಕೆಗಳನ್ನು ದಾಖಲು ಮಾಡಿದರು. ಸ್ವಯಂಸೇವಕರು ವರದಿ ಸಿದ್ಧಮಾಡಿದರು. ಎಲ್ಲೆಲ್ಲೂ ಜನತೆಯ ಉತ್ಸಾಹದ ಅಲೆಯೆದ್ದಿತು. ಉಪರಾಜ್ಯಪಾಲರು ರೈತರ ಸಮಸ್ಯೆ ವಿಚಾರಿಸಲು ಒಂದು ಸಮಿತಿ ರಚಿಸಿದರು. ಗಾಂಧೀಜಿಯನ್ನೂ ಸದಸ್ಯರಾಗಲು ಕೋರಿದರು. ಹಳ್ಳಿ ಹಳ್ಳಿಯಲ್ಲಿ ರೈತರನ್ನು ಕಂಡು ಈ ಸಮಿತಿ ವಾಸ್ತವಾಂಶಗಳನ್ನು ಸಂಗ್ರಹಿಸಿತು. ನೀಲಿ ತೋಟಗಳ ಮಾಲಿಕರು ರೈತರಿಂದ ಅನ್ಯಾಯವಾಗಿ ಕಸಿಯುತ್ತಿದ್ದ ಲಾಭ ಬಯಲಾಯಿತು. ಈ 'ತೀನ್‌ಕಠಿಯಾ' ಪದ್ಧತಿ ಕಾನೂನುಬಾಹಿರ ಎಂದು ತೀರ್ಪಿತ್ತರು, ಬಿಳಿಯರಾಗಿದ್ದ ಮಾಲೀಕರು ಪಡೆದ ಹಣದ ಒಂದು ಭಾಗವನ್ನು ರೈತರಿಗೆ ಹಿಂತಿರುಗಿಸಬೇಕು ಎಂದರು. ಸುಮಾರು ನೂರು ವರ್ಷ ನಡೆದು ಬಂದಿದ್ದ ಈ 'ನೀಲಿಯ ಕಲೆ' ಅಳಿಸಿ ಹೋಯಿತು. ರೈತರು ಸ್ವತಂತ್ರರಾದರು.

ಚಂಪಾರಣ್ಯದ ಹಳ್ಳಿಗಳ ದಾರುಣ ಆರ್ಥಿಕ ದುಃಸ್ಥಿತಿ, ಅಲ್ಲಿನ ಅನಾರೋಗ್ಯ. ಅಶುಚಿ, ಅನಕ್ಷರತೆ, ಕಂಡು ಗಾಂಧೀಜಿಗೆ ದುಃಖವಾಯಿತು. ಆ ಕೂಡಲೆ ಸ್ವಯಂಸೇವಕದಳ ಕಟ್ಟಿ ಗ್ರಾಮಸೇವೆಗೆ ತೊಡಗಿದರು. ಅನ್ಯಾಯಗಳೊಡನೆ ಹೋರಾಟ ಬೇರೆ, ರಚನಾತ್ಮಕ ಗ್ರಾಮಪುನರ್ರಚನೆ ಬೇರೆ ಎರಡೂ ಒಟ್ಟಿಗೆ ನಡೆಯಬೇಕು ಎಂದರು. ಶಿಕ್ಷಣ ಶಾಲೆಗಳನ್ನು ಪ್ರಾರಂಭಿಸಿದರು. ನೈರ್ಮಲ್ಯ ಮತ್ತು ಆರೋಗ್ಯದ ಪಾಠಗಳಿಂದಲೇ ಮೊದಲು ಮಾಡಿದರು. ಸತಿ ಕಸ್ತೂರಿಬಾ, ಮಿತ್ರರಾದ ಕೃಪಲಾನಿ, ರಾಜೇಂದ್ರ ಪ್ರಸಾದ್ ಮುಂತಾದವರೆಲ್ಲ ಗೌರವ ಶಿಕ್ಷಕರಾದರು. ಹೆಂಗಸರಿಗೆ ಒಗೆದು ಉಡಲು ಎರಡನೆಯ ಸೀರೆಯೇ ಇಲ್ಲದುದನ್ನು ಕಸ್ತೂರಿಬಾ ಕಣ್ಣಾರೆಕಂಡು ತಿಳಿಸಿದರು. ಗಾಂಧೀಜಿಯ ಹೃದಯ ಮಿಡಿಯಿತು. ಈ ಸಮಸ್ಯೆಗಳನ್ನು ಕುರಿತು ಚಿಂತಿಸಿದರು. ಬಡಜನತೆಯ ದಿನದಿನದ ಸಮಸ್ಯೆಗಳ ಪರಿಹಾರದಿಂದಲೇ ಸ್ವರಾಜ್ಯದ ಕಾರ್ಯ ಮೊದಲಾಗಬೇಕು ಎಂದು ನಿರ್ಧರಿಸಿದರು. ಹಳ್ಳಿಯವರು ಸುಲಭವಾಗಿ ಕೈಗೊಂಡು ತಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳುವಂತೆ ಅನೇಕ ಕಾರ್ಯಕ್ರಮಗಳನ್ನು ಹಾಕಿಕೊಟ್ಟರು. ನಾಲ್ಕಾರು ತಿಂಗಳು ಚಂಪಾರಣ್ಯದಲ್ಲೇ ನಿಂತರು. ಈ ಎಲ್ಲ ಘಟನೆಗಳೂ ದೇಶವ್ಯಾಪಿಯಾಗಿ ಪ್ರಚಾರವಾಗಿ ಗಾಂಧೀಜಿಯ ಹೆಸರು ಮನೆಮಾತಾಯಿತು.

ಅಹಮದಾಬಾದ್ ಗಿರಣಿ ಮುಷ್ಕರ

ಅಹಮದಾಬಾದ್ ಭಾರತದ ಬಟ್ಟೆಗಿರಣಿಗಳ ಪ್ರಮುಖ ಕೇಂದ್ರ. 1918ರಲ್ಲಿ ಗಿರಣಿ ಕಾರ್ಮಿಕರಿಗೂ ಮಾಲೀಕರಿಗೂ ವಿವಾದ ಎದ್ದು ಮಾಲೀಕರು ಬೀಗಮುದ್ರೆ ಹಾಕಿದರು. ಗಾಂಧೀಜಿ ಚಂಪಾರಣ್ಯದಿಂದ ಬಂದಿದ್ದರು. ಕಾರ್ಮಿಕರ ಬೇಡಿಕೆ ಅತ್ಯಂತ ನ್ಯಾಯವಾದುದು ಎಂದು ಅವರಿಗೆ ತಿಳಿಯಿತು. ಪ್ಲೇಗು ಜಾಡ್ಯ ಮತ್ತು ಮೊದಲ ಮಹಾಯುದ್ಧದ ಕಾರಣವಾಗಿ ಏರಿದ ಜೀವನವೆಚ್ಚ ಕಾರ್ಮಿಕರನ್ನು ಹೀನಸ್ಥಿತಿಗೆ ತಳ್ಳಿತ್ತು. ಪ್ಲೇಗ್ ಹರಡಿದ್ದ ಸಮಯದಲ್ಲಿ ಕೊಟ್ಟಿದ್ದ ವಿಶೇಷ ಭತ್ಯ (ಬೋನಸ್)ವನ್ನೂ ಹಿಂತೆಗೆದು

ಕೊಂಡಿದ್ದರು. ತಿಂಗಳಿಗೆ 26 ರೂ, ಕೂಲಿಸಿಗುತ್ತಿತ್ತು. ಶೇಕಡ 50 ಹೆಚ್ಚಿಸಲು ಕಾರ್ಮಿಕರು ಬೇಡಿದರು. ಗಾಂಧೀಜಿ, ವಲ್ಲಭಾಯಿ ಪಟೇಲ್ ಶಂಕರಲಾಲ ಬ್ಯಾಂಕರ್ ಮತ್ತು ಅನಸೂಯ ಬಹೆನ್ ಕಾರ್ಮಿಕರಪರ ವಾದಿಸಿದರು. ಆನಸೂಯ ಬಹೆನ್ ಪ್ರಮುಖ ಗಿರಣಿ ಮಾಲೀಕರಾಗಿದ್ದ ಅಂಬಲಾಲ್ ಸರಾಭಾಯಿ ಅವರ ತಂಗಿ. ಗಾಂಧೀಜಿಯ ನಿಕಟ ಶಿಷ್ಯೆ. ಸರಾಭಾಯಿ ಕುಟುಂಬ ಗಾಂಧೀಜಿಯನ್ನು ತುಂಬ ಪ್ರೀತಿಯಿಂದ ಕಾಣುತ್ತಿತ್ತು. ವಿವಾದವನ್ನು ಪಂಚಾಯಿತಿಗೆ ಒಪ್ಪಿಸಿ ಕಾರ್ಮಿಕರ ಕೂಲಿಯನ್ನು ಕಡೆಯಪಕ್ಷ ಶೇಕಡ 30 ರಷ್ಟಾದರೂ ಹೆಚ್ಚಿಸಿ ಎಂದು ಗಾಂಧೀಜಿ ಸಲಹೆ ಮಾಡಿದರು, ಗಿರಣಿ ಮಾಲೀಕರ ಸಂಘ ನಿರಾಕರಿಸಿತು. ಮುಷ್ಕರ ಹೂಡುವುದೊಂದೇ ಮಾರ್ಗ ಎಂದು ಗಾಂಧೀಜಿಯ ನೇತೃತ್ವದಲ್ಲಿ ಕಾರ್ಮಿಕರು ಸಂಕಲ್ಪಿಸಿದರು.

ಗಿರಣಿಗಳ ವ್ಯಾಪಾರ ವ್ಯವಹಾರಗಳ ಅಂಕಿ ಅಂಶಗಳನ್ನು ಗಾಂಧೀಜಿ ಪರಿಶೀಲಿಸಿದರು. ಭಾರತದಲ್ಲಿ ದುಡಿಮೆಯ ಬೆಲೆ ಅಗ್ಗವಾಗಿ ಲಾಭದ ಬಹುಪಾಲು ಮಾಲೀಕನಿಗೆ ಸೇರಿಬಿಡುತ್ತಿತ್ತು, ಕಾರ್ಮಿಕರ ಬೇಡಿಕೆ ನ್ಯಾಯುವಾಗಿತ್ತು ಒಗ್ಗಟ್ಟಿನಿಂದ ಮುಷ್ಕರ ಹೂಡಿ ಎಂದು ತಿಳಿಸಿದರು. ತಾನೇ ನೇತಾರರಾದರು, ಅನುಸೂಯಬಹೆನ್ ಬೆಂಬಲಕ್ಕೆ ನಿಂತರು. ಕಾರ್ಮಿಕರು ಅತ್ಯಂತ ಅಹಿಂಸಾತ್ಮಕವಾಗಿ ಶಿಸ್ತಿನಿಂದ ಮುಷ್ಕರ ನಡೆಸುವಂತೆ ಗಾಂಧೀಜಿ ನಾಲ್ಕು ಕಡ್ಡಾಯ ನಿಯಮಗಳನ್ನು ಹಾಕಿದರು.

೧. ಹಿಂಸಾಚಾರಕ್ಕೆ ಎಂದೂ ಕೈಹಾಕಬಾರದು.

೨, ಮುಷ್ಕರ ಸೇರಿದಿದ್ದವರನ್ನು ಹಿಂಸಿಸಬಾರದು.

೩. ಭಿಕ್ಷೆಗೆ ಕೈಚಾಚಬಾರದು.

೪. ಎಷ್ಟೇ ಕಾಲವಾದರೂ ದೃಢವಾಗಿ ನಿಲ್ಲಬೇಕು.

ಆ ಸಮಯದಲ್ಲಿ ಬೇರೆ ಪ್ರಾಮಾಣಿಕ ಕೆಲಸ ಮಾಡಿ ಹೊಟ್ಟೆ ಹೊರೆಯಬೇಕು ಎಂದು ದುಡಿಮೆಗಾರರಿಗೆ ಮನದಟ್ಟಾಗುವಂತೆ ವಿವರಿಸಿದರು. ಅವರೆಲ್ಲರೂ ಒಮ್ಮತದಿಂದ ಸಮ್ಮತಿಸಿದರು. ದಿನವೂ ಸಭೆ ನಡೆಯುತ್ತಿತ್ತು.

ಆಗಿಂದಾಗ್ಗೆ ಗಿರಣಿ ಮಾಲಿಕರೊಡನೆ ಸಮಲೋಜನೆಗಳೂ ನಡೆದವು. ಅವರು ಮಣಿಯಲಿಲ್ಲ. ಎರಡು ವಾರಗಳು ಎಲ್ಲವೂ ಶಾಂತವಾಗಿ ನಡೆಯಿತು. ಗಿರಣಿಗಳು ಮುಚ್ಚಿದವು. ಸಾರ್ವಜನಿಕರ ಸಹಾನುಭೂತಿಯನ್ನು ಗಾಂಧೀಜಿ ಕಾರ್ಮಿಕರ ಕಡೆಗೆ ಒಲಿಸಿಕೊಂಡರು. ಕಾಲ ಉರುಳಿದಂತೆ ಸಹನೆಯ ಪರೀಕ್ಷೆ ಯಾಗುತ್ತಿತ್ತು. ಕಾರ್ಮಿಕರ ಮನೋಬಲ ಸಡಿಲವಾಗುತ್ತಿತ್ತು. ಹಸಿವಿನ ಒತ್ತಡ ಕ್ರಮೇಣ ಹೆಚ್ಚಾಗುತ್ತಿತ್ತು. ಒಗ್ಗಟ್ಟು ಮುರಿಯುವ ಪಿತೂರಿಗಳೂ ಸಾಗಿದವು. ಶಿಸ್ತು ಒಡೆಯುತ್ತಿತ್ತು, ಅಲ್ಲಲ್ಲಿ ಗಲಭೆಗಳಾದವು. ಅಷ್ಟು ಜನರಿಗೂ ಬೇರೆ ಕೆಲಸ ಒದಗಿಸುವುದು ಹೇಗೆ ಎಂಬ ಚಿಂತೆಯಾಯಿತು. ಗಾಂಧೀಜಿ ತಾವೇ ಬಲಿದಾನಕ್ಕೆ ಸಿದ್ಧರಾಗಿ ಉಪವಾಸ ಮಾಡಲು ನಿರ್ಧರಿಸಿ ಬಿಟ್ಟರು. ಸಾರ್ವಜನಿಕ ಕಾರಣಕ್ಕಾಗಿ ಭಾರತದಲ್ಲಿ ಅವರು ಕೈಗೊಂಡ ಮೊದಲ ಉಪವಾಸ ಪ್ರಯೋಗ ಇದು. "ನೀವು ನಿಮ್ಮ ಸಂಕಲ್ಪಮರೆತು ಕಷ್ಟಗಳಿಗೆ ಹೆದರಿ, ಒಗ್ಗಟ್ಟು ಮುರಿಯುವುದಾದರೆ ನಾನು ಇಂದಿನಿಂದ ಆಹಾರ ಮುಟ್ಟುವುದಿಲ್ಲ" ಎಂದರು. ಕಾರ್ಮಿಕರಿಗೆ ವಿಪರೀತ ಪಶ್ಚಾತ್ತಾಪವಾಯಿತು. "ಎಷ್ಟೇಕಾಲವಾದರೂ, ಎಷ್ಟೇಕಷ್ಟವಾದರೂ ನಾವು ಒಗ್ಗಟ್ಟಿನಿಂದ ಮುಷ್ಕರ ಮುಂದುವರಿಸುತ್ತೇವೆ. ನೀವು ಉಪವಾಸ ಮಾಡಬೇಡಿ" ಎಂದು ಕೇಳಿಕೊಂಡರು. ಎಲ್ಲರೂ ಒಂದು ದಿನ ಉಪವಾಸ ಪ್ರಾರ್ಥನೆಗಳಲ್ಲಿ ಕಳೆದು ಮತ್ತೆ ದೃಢವಾಗಿ ನಿಂತರು. ಬೇರೆ ಕೆಲಸ ಮಾಡಿ ದಿನದಿನದ ಊಟ ಸಂಪಾದಿಸಲು ತೀರ್ಮಾನಿಸಿದರು. ಆಶ್ರಮದ ಕಟ್ಟಡದ ಅಡಿಪಾಯಗಳಿಗೆ ಮರಳು ಸಾಗಿಸಬೇಕಾಗಿತ್ತು. ಸಬರ್ಮತಿ ನದೀತೀರದಿಂದ ಮರಳು ಸಾಗಿಸಲು ಸಾವಿರಾರು ಕಾರ್ಮಿಕರು ಬುಟ್ಟಿ ಹಿಡಿದು ನಡೆದರು. ಅನುಸೂಯಾ ಬಹೆನ್ ಮುಂಚೂಣಿಯಲ್ಲಿದ್ದರು. ಇರುವೆಗಳ ಸಾಲಿನಂತೆ ಬುಟ್ಟಿಗಳನ್ನು ಹೊತ್ತು ಮರುಳು ಸಾಗಿಸುತ್ತಿದ್ದ ಆ ದೃಶ್ಯ ರೋಮಾಂಚಕಾರಿಯಾಗಿತ್ತು. ಆತ್ಮಗೌರವದಿಂದ ದಿನಗೂಲಿಗಾಗಿ ದುಡಿದು ಮುಷ್ಕರ ಮುಂದುವರಿಸುವ ಸಂಕಲ್ಪ ಸಾಕಾರವಾಗಿತ್ತು.

ಗಾಂಧೀಜಿಯ ಉಪವಾಸದ ಸುದ್ದಿ, ಕಾರ್ಮಿಕರ ಒಗ್ಗಟ್ಟಿನ ಸಂಕಲ್ಪ ಮತ್ತು ಸಾರ್ವಜನಿಕರ ಸಹಾನುಭೂತಿ ಎಲ್ಲವೂ ಗಿರಣಿ ಮಾಲೀಕರನ್ನು

ಮಣಿಸಿತು. ಈ ಶಾಂತಿಸಮರದಲ್ಲಿ ಆವರೂ ತಮ್ಮ ಜವಾಬ್ದಾರಿಯನ್ನರಿತರು. ಉಪವಾಸದ ಮೂರನೇ ದಿನ ಗಿರಣಿ ಮಾಲೀಕರೂ, ಜಿಲ್ಲಾ ಕಮೀಷನರೂ ಗಾಂಧೀಜಿ ಬಳಿಗೆ ಬಂದರು. ಒಂದು ಮರದ ಕೆಳಗೆ ಬಯಿಲಿನಲ್ಲಿ ಕೂತು ಕಾರ್ಮಿಕರ ಬೇಡಿಕೆಗಳನ್ನೊಪ್ಪಿ ಸಂಧಾನಕ್ಕೆ ಸಹಿ ಹಾಕಿದರು. ಇಡೀ ವಾತಾವರಣವೇ ಸ್ನೇಹ ಸೌಹಾರ್ದಗಳಿಂದ ತುಂಬಿ ತುಳುಕಿತು. ಕಾರ್ಮಿಕರಿಗೆಲ್ಲ ಸಿಹಿ ತಿಂಡಿ ಹಂಚಿದರು. ಗಾಂಧೀಜಿ ಉಪವಾಸ ನಿಲ್ಲಿಸಿದರು. ಈಗ ಎಪ್ಪತ್ತು ವರ್ಷಗಳುರುಳಿವೆ. ಈಗಲೂ ಅಹಮದಾಬಾದ್ ಗಿರಣಿ ಕಾರ್ಮಿಕರ ಸಂಘ ಮಧುರ ಬಾಂಧವ್ಯ ಉಳಿಸಿಕೊಂಡೇ ಕಾರ್ಮಿಕರ ಹಿತ ಸಾಧಿಸುತ್ತಿದೆ. ಗಾಂಧೀ ಮಾರ್ಗದ ಒಂದು ಮಾದರಿಯಾಗಿ ಉಳಿದಿದೆ.

ಖೇಡಾ ಸತ್ಯಾಗ್ರಹ

1918ರಲ್ಲಿ ಗುಜರಾತಿನ ಖೇಡಾ ಜಿಲ್ಲೆಯಲ್ಲಿ ಮಳೆಯಾಗದೆ ಬರಗಾಲ ಬಂತು. ರೈತರಿಗೆ ಕಂದಾಯ ಕೊಡಲಾಗಲಿಲ್ಲ. ಮನ್ನಾ ಮಾಡಲು ಸರ್ಕಾರಕ್ಕೆ ಮನವಿ ಮಾಡಿದರು. ಶ್ರೀ ಅಮೃತಲಾಲ್ ಥಕ್ಕರ್ ಪರಿಸ್ಥಿತಿಯನ್ನು ಕಂಡು ಜಿಲ್ಲಾಧಿಕಾರಿಗೆ ವರದಿ ಮಾಡಿದರು. ಸ್ಥಳೀಯ ಮುಖಂಡರಾಗಿದ್ದ ಮೋಹನಲಾಲ್ ಪಾಂಡ್ಯ ಮತ್ತು ಶಂಕರಲಾಲ್ ಪರೇಖ್ ಬೊಂಬಾಯಿನಲ್ಲಿ ವಿಠಲಭಾಯಿ ಪಟೇಲರ ಮೂಲಕ ವಿಧಾನ ಪರಿಷತ್ತಿಗೆ ಮನವಿ ಸಲ್ಲಿಸಿದರು. ರಾಜ್ಯಪಾಲರಿಗೂ ವಿನಂತಿ ಹೋಯಿತು. ಯಾವುದಕ್ಕೂ ಸರ್ಕಾರ ಕಿವಿಗೊಡಲೇ ಇಲ್ಲ. ಆಗ್ಗ ಗಾಂಧೀಜಿ ಗುಜರಾತ್ ಸಭಾ ಎಂಬ ಸಾರ್ವಜನಿಕ ಸಂಸ್ಥೆಯ ಅಧ್ಯಕ್ಷರು. ಅವರಿಂದಲೂ ಮನವಿಗಳು ಹೋದವು. ಅಧಿಕಾರಿಗಳು ಎಲ್ಲವನ್ನೂ ಮೂಲೆಗೊತ್ತಿ ಕಾಣಬಂದವರನ್ನು ಅವಮಾನಿಸಿದರು. ರೈತರ ಬೇಡಿಕೆ ಅತ್ಯಂತ ಸಾಧುವಾಗಿತ್ತು. ಕಾಲುಭಾಗಕ್ಕಿಂತ ಕಡಮೆ ಬೆಳೆಯಾದರೆ ಕಂದಾಯವನ್ನು ಮನ್ನಾ ಮಾಡಲು ಕಾನೂನಿನಲ್ಲೇ ಅವಕಾಶವಿತ್ತು. ಆದರೆ ಬರಗಾಲ ಎಂದು ಸರ್ಕಾರ ಒಪ್ಪಲೇ ಇಲ್ಲ. ಯಾರೂ ಬಂದು ನೋಡಲೂ ಇಲ್ಲ, ತಾಳ್ಮೆಯಿಂದ ಕಾದು ಕೊನೆಗೆ ಗಾಂಧೀಜಿ ಸತ್ಯಾಗ್ರಹ ಕೈಗೊಳ್ಳಿ ಎಂದು ರೈತರಿಗೆ ಸಲಹೆ ಮಾಡಿದರು.

ವಲ್ಲಭಾಯಿ ಪಟೇಲ್, ಶಂಕರಲಾಲ್ ಬ್ಯಾಂಕರ್, ಅನುಸೂಯ ಬಹೆನ್, ಇಂದುಲಾಲ್ ಯಾಜ್ಞಿಕ್, ಮಹದೇವ ದೇಸಾಯಿ ಮುಂತಾದ ಗುಜರಾತಿನ ಪ್ರಖ್ಯಾತ ನಾಯಕರೂ ಜೊತೆಗೂಡಿದರು. ವಲ್ಲಭಾಯಿ ಯವರು ದೊಡ್ಡ ವಕೀಲ ವೃತ್ತಿಯನ್ನು ಬದಿಗೊತ್ತಿ ಬಂದರು. ನದಿಯಾದ್ ಊರು ಸತ್ಯಾಗ್ರಹ ಕೇಂದ್ರವಾಯಿತು. ನೂರಾರು ರೈತರು ಸತ್ಯಾಗ್ರಹ ಪ್ರತಿಜ್ಞೆ ಕೈಗೊಂಡರು. "ಯಾರೂ ಕಂದಾಯ ಕೊಡುವುದಿಲ್ಲ. ಯಾವ ಕ್ರಮ ಕೈಗೊಂಡರೂ ಶಿಕ್ಷೆ ಅನುಭವಿಸುತ್ತೇವೆ. ಕಂದಾಯ ಕೊಡಬಲ್ಲವರೂ ಬಡವರೊಡನೆ ಒಂದಾಗಿದ್ದೇವೆ. ಗೌರವಯುತ ಒಪ್ಪಂದವಾಗುವವರೆಗೂ ಅಹಿಂಸಾತ್ಮಕವಾಗಿ ಹೋರಾಡುತ್ತೇವೆ. ನಮ್ಮ ಆಸ್ತಿಪಾಸ್ತಿಗಳು ಜಫ್ತಿ ಯಾದರೂ ಸರಿ, ನಮ್ಮನ್ನು ಜೈಲಿಗೆ ಹಾಕಿದರೂ ಸರಿ. ದೃಢವಾಗಿ ನಿಲ್ಲು ತ್ತೇವೆ" ಎಂದು ಘೋಷಿಸಿದರು. ಗಾಂಧೀಜಿಯೇ ನೇತಾರರಾದರು. ಘೋಷಣೆಯ ಪೂರ್ಣ ಪಾಠವನ್ನು ಎಲ್ಲ ಅಧಿಕಾರಿಗಳಿಗೂ ಬರೆದು ತಿಳಿಸಿದರು. ಪತ್ರಿಕೆಗಳು ಪ್ರಕಟಿಸಿದುವು. ದೇಶದಲ್ಲೆಲ್ಲ ಕುತೂಹಲ ಕೆರಳಿತು, ರೈತರು ಜಾಗೃತರಾಗತೊಡಗಿದರು. ಭಯ ನಿವಾರಣೆ ಯಾಗಿತ್ತು.

ಈ ರೈತರಿಗೆ ಸತ್ಯಾಗ್ರಹ ಶಿಕ್ಷಣ ಕೊಡುವುದು ಪ್ರಧಾನವಾಗಿತ್ತು. ನಮ್ರತೆ ಕೇವಲ ಬಾಹ್ಯಾಚಾರವಲ್ಲ; ಹೃತ್ಪೂರ್ವಕವಾಗಿ ಎದುರಾಳಿಯ ಒಳಿತನ್ನು ಬಯಸುವ ಮನೋಧರ್ಮ ಸಹಜವಾದರೆ ಮಾತ್ರ ಅದು ಸತ್ಯಾ ಗ್ರಹ ಎಂದರು ಗಾಂಧೀಜಿ. ಖೇಡಾದಲ್ಲಿ ಹೀಗೆ ಪ್ರಾರಂಭವಾದ ಹೋರಾಟ ಸ್ವಲ್ಪದಿನ ಪ್ರಖರವಾಗಿ ನಡೆಯಿತು. ಬರುಬರುತ್ತಾ ಸ್ವಲ್ಪ ಶಿಥಿಲವಾಯಿತು. ಅಧಿಕಾರಿಗಳ ದರ್ಪ ಹೆಚ್ಚಿತು. ಕಂದಾಯ ವಸೂಲಿಗಾಗಿ ರೈತರ ದನ-ಕರು ಗಳು, ಉಪಕರಣಗಳು, ಇತರ ಪದಾರ್ಥಗಳನ್ನು ಜಫ್ತಿ ಮಾಡಿದರು. ಜಮೀನುಗಳನ್ನು ವಶಪಡಿಸಿಕೊಂಡರು. ಇದನ್ನೆಲ್ಲ ನೋಡಿ ಕೆಲವರು ಹಿಮ್ಮೆಟ್ಟತೊಡಗಿದರು. ಹೋರಾಟಕ್ಕೆ ಹುರುಪು ಕೊಡಲು ಹೊಸದಾರಿ ಹುಡಕಬೇಕಾಯಿತು. ಒಂದುಕಡೆ ಅನ್ಯಾಯವಾಗಿ ವಶಪಡಿಸಿಕೊಂಡಿದ್ದ ಜಮೀನಿನಲ್ಲಿ ಈರುಳ್ಳಿ ಬೆಳೆ ಬೆಳೆದು ನಿಂತಿತ್ತು. ಆ ಬೆಳೆಯ ಮೇಲೆ ಸರ್ಕಾರದ ನೈತಿಕ ಹಕ್ಕು ಇಲ್ಲ ಅದನ್ನು ಕಿತ್ತು ವಶಪಡಿಸಿಕೊಳ್ಳಿ ಎಂದು

ಗಾಂಧೀಜಿ ರೈತರಿಗೆ ಸಲಹೆ ಮಾಡಿದರು. ಮೋಹನಲಾಲ್ ಪಾಂಡ್ಯ ಮತ್ತು ಕೆಲವು ಗೆಳೆಯರು ಉತ್ಸಾಹದಿಂದ ಬೆಳೆಯನ್ನು ಕಿತ್ತು ಸಾಗಿಸಿದರು. ಪೋಲೀಸರು ಬಂದರು. ಪಾಂಡ್ಯರನ್ನು ಕಳ್ಳತನದ ಅಪರಾಧ ಹೊರಿಸಿ ದಸ್ತಗಿರಿ ಮಾಡಿದರು. ಇಡೀ ಜನಸ್ತೋಮ ಪ್ರತಿಭಟಿಸಿ ನಿಂತಿತು. ಯಾವುದೇ ಬಲಿದಾನವಿಲ್ಲದೆ ಸತ್ಯಾಗ್ರಹ ಸಫಲವಾಗುವುದಿಲ್ಲ ಎಂದು ತಿಳಿದಿದ್ದ ಪಾಂಡ್ಯರಿಗೆ ಇದರಿಂದ ಸಂತೋಷವಾಯಿತು. ರೈತರಿಗೂ ಸೆರೆಮನೆಯ ಭಯ ಹೋಯಿತು. ಮೋಹನಲಾಲ್ ಪಾಂಡ್ಯರನ್ನು ಕೋರ್ಟಿನಲ್ಲಿ ನಿಲ್ಲಿಸಿ ಕಳ್ಳತನದ ಆರೋಪದ ಮೇಲೆ ಶಿಕ್ಷೆ ವಿಧಿಸಿದರು. ಸೆರೆಮನೆಗೆ ಕೊಂಡೊಯ್ಯುವಾಗ ಅವರ ಹಿಂದೆ ದೊಡ್ಡ ಮೆರವಣಿಗೆಯೇ ಹೊರಟಿತು. "ಈರುಳ್ಳಿ ಕಳ್ಳ" ಎಂದು ಪಾಂಡ್ಯರಿಗೆ ಬಿರುದು ಬಂದು ಬಿಟ್ಟಿತು.

ಕೊನೆಗೆ ಸರ್ಕಾರ ತಾನೇ ಒಂದು ಆಜ್ಞೆ ಹೊರಡಿಸಿತು. ಶ್ರೀಮಂತ ರೈತರು ಕಂದಾಯ ಕಟ್ಟಿದರೆ ಬಡವರಿಗೆ ಮನ್ನಾ ಮಾಡಲಾಗುವುದು ಎಂದು ತಹಸೀಲ್ದಾರರು ತಿಳಿಸಿದರು. ಜಿಲ್ಲಾಧಿಕಾರಿಗಳೂ ಅನುಮೋದಿಸಿದರು. ರೈತರ ಮೂಲ ಬೇಡಿಕೆಯೂ ಇದೇ ಆಗಿತ್ತು. ಆದರೆ ಯಾರು ಬಡವರು ಎಂದು ಅಧಿಕಾರಿಗಳೇ ನಿರ್ಣಯಿಸುವುದು ಗಾಂಧೀಜಿಗೆ ಸಮಾಧಾನವಾಗಲಿಲ್ಲ. ಸತ್ಯಾಗ್ರಹದಿಂದ ಜನಶಕ್ತಿ ಬೆಳೆಯಬೇಕು, ದುರ್ಬಲವಾಗಬಾರದು ಎಂದು ಅವರ ಮತ. ಆದರೂ ಹೋರಾಟ ಯಶಸ್ವಿಯಾದುದು ದೇಶವಲ್ಲೆಲ್ಲ ಉತ್ಸಾಹ ತುಂಬಿತು. ಎಲ್ಲೆಲ್ಲೂ ರೈತರಲ್ಲಿ ಹೊಸ ಜಾಗೃತಿ ಮೂಡಿತು. ಶ್ರೀಮತಿ ಆನಿಬಸೆಂಟರ ಹೋಂರೂಲು ಚಳುವಳಿ ಸಾಮಾನ್ಯ ಜನರನ್ನು ಎಚ್ಚರಗೊಳಿಸುತ್ತಿತ್ತು. ಖೇಡಾ ಸತ್ಯಾಗ್ರಹ ನೇರವಾಗಿ ಜನತೆಯ ಹೃದಯ ದೊಡನೆ ಹೆಣೆದುಕೊಂಡಿತು. ದೇಶನಾಯಕರು ದೇಶದ ಬಡಜನರೊಂದಿಗೆ ಏಕರಸವಾಗಬೇಕೆಂದು ಅರಿವಾಯಿತು. ಆದರೆ ಸತ್ಯಾಗ್ರಹ ವಿಜ್ಞಾನ ಇನ್ನೂ ಚೆನ್ನಾಗಿ ಅರಳಲು ಕಾಲಬೇಕಾಗಿತ್ತು. ಈವರೆಗಿನ ಹೋರಾಟವೆಲ್ಲ ಗಾಂಧೀಜಿಯ ವಯಕ್ತಿಕ ಪ್ರಯತ್ನವೇ ಆಗಿತ್ತು. ರಾಷ್ಟ್ರೀಯ ಕಾಂಗ್ರೆಸ್ ಈ ಕ್ಷೇತ್ರಕ್ಕೆ ಪ್ರವೇಶಿಸಿಯೇ ಇರಲಿಲ್ಲ.

ಮೊದಲನೆ ಮಹಾಯುದ್ಧ 1918ರಲ್ಲಿ ಕೊನೆಯ ಹಂತ ಮುಟ್ಟಿತು. ಇಂಗ್ಲೆಂಡ್ ಸಾವು ಬದುಕಿನ ಹೋರಾಟದಲ್ಲಿ ಸಿಕ್ಕಿತ್ತು, ವೈಸ್‌ರಾಯರು ಭಾರತದ ನಾಯಕರನ್ನು ಸಭೆ ಸೇರಿಸಿ, ಸೈನ್ಯ ಜಮಾವಣೆಗೆ ಸಹಾಯ ಮಾಡಲು ಕೋರಿದರು. ಗಾಂಧೀಜಿಯೂ ಈ ಸಭೆಗೆ ಆಹ್ವಾನಿತರಾಗಿದ್ದರು, ಅಹಿಂಸೆಯಲ್ಲಿ ತಮ್ಮ ಮೂಲಭೂತ ನಂಬಿಕೆ ಇರುವುದಾದರೂ ಈ ಸಂಕಟ ಸಮಯದಲ್ಲಿ ಸಾಮ್ರಾಜ್ಯದ ಪ್ರಜೆಯಾಗಿ ಬ್ರಿಟಿಸ್‌ಗೆ ಬೆಂಬಲ ನೀಡಿ ಭಾರತ ಔದಾರ್ಯದಿಂದ ವರ್ತಿಸಬೇಕೆಂದು ಇಚ್ಛಿಸಿದರು. ತಿಲಕ್, ಆನಿಬಸೆಂಟ್. ಸುರೇಂದ್ರನಾಥ ಬ್ಯಾನರ್ಜಿ ಮುಂತಾದ ಅಗಿನ ಆಗ್ರಪಂಕ್ತಿಯ ರಾಷ್ಟ್ರೀಯ ನಾಯಕರಲ್ಲೂ ಇದೇ ಮನವಿ ಮಾಡಿಕೊಂಡರು. ಭಾರತದ ಸ್ವಯಮಾಡಳಿತ ಬೇಡಿಕೆಗೆ ಈ ಸ್ನೇಹಹಸ್ತ ಪ್ರಬಲ ನೈತಿಕ ಬಲವಾಗುವುದೆಂದು ವಾದಿಸಿದರು. ತಾವೇ ಸ್ವಯಂಪ್ರೇರಿತರಾಗಿ ಯುದ್ಧದಲ್ಲಿ ಸಹಾಯಕ ಸೈನಿಕರಾಗಿ ಸೇರುವಂತೆ ಪ್ರಚಾರ ಕೈಗೊಂಡರು. ಗುಜರಾತಿನಲ್ಲೆಲ್ಲ ಸಂಚರಿಸಿ ಸಾವಿರಾರು ಯುವಕರನ್ನು ಸೈನ್ಯಕ್ಕೆ ಸೇರಿಸಿದರು. ಅಧಿಕಾರಿಗಳು ಬೆರಗಾದರು. ವೈಸ್‌ರಾಯರು ವಂದನೆಯ ಪತ್ರ ಬರೆದರು. ಈ ಕಾರ್ಯದಲ್ಲಿ ನಿರತರಾಗಿದ್ದಾಗ ಗಾಂಧೀಜಿ ತೀವ್ರವಾದ ರಕ್ತಬೇಧಿ ಕಾಯಿಲೆಗೆ ತುತ್ತಾಗಿ ಮಲಗಿದರು. ಸಾವಿನ ಅಂಚಿನಲ್ಲಿದ್ದಂತೆ ಅನ್ನಿಸಿತು. ಸಬರ್ಮತಿ ಆಶ್ರಮಕ್ಕೆ ಹಿಂತಿರುಗಿದರು. ನಿಸರ್ಗ ಚಿಕಿತ್ಸೆ ಮಾಡಿದರು. ಮೂಲವ್ಯಾಧಿಗೆ ಶಸ್ತ್ರಚಿಕಿತ್ಸೆಯನ್ನೂ ಮಾಡಿಸಿಕೊಂಡರು. ನಿಶ್ಶಕ್ತಿ ಸರಿಪಡಿಸಲು ವೈದ್ಯರು ಹಸುವಿನ ಹಾಲು ಕುಡಿಯಬೇಕೆಂದರು, ಮಾಂಸದ ಸಾರ ತೆಗೆದುಕೊಳ್ಳಿ ಎಂದರು. ಈ ಬಗ್ಗೆ ದೃಢ ವ್ರತದೀಕ್ಷೆ ಕೈಗೊಂಡಿದ್ದ ಗಾಂಧೀಜಿ ಎರಡನ್ನೂ ನಿರಾಕರಿಸಿದರು.

ಕಸ್ತೂರಿಬಾಗೆ ಚಿಂತೆಯಾಯಿತು. ಒಂದು ಉಪಾಯ ಹುಡುಕಿದರು. ನಿಮ್ಮ ವ್ರತ ಹಸು ಮತ್ತು ಎಮ್ಮೆ ಹಾಲುಗಳ ವರ್ಜನೆ, ಮೇಕೆಹಾಲು ಏಕಾಗಬಾರದು ?" ಎಂದು ಬೇಡಿಕೊಂಡರು. ಗಾಂಧೀಜಿ ಒಪ್ಪಿ ಅಲ್ಲಿಂದಾಚೆ ಅನೇಕ ವರ್ಷಗಳ ಕಾಲ ಮೇಕೆಹಾಲು ಸೇವಿಸುತ್ತಿದ್ದರು. ಆರೋಗ್ಯ ಸುಧಾರಿಸುವ ವೇಳೆಗೆ ಯುದ್ಧ ಮುಗಿದು ಇಂಗ್ಲೆಂಡ್ ಜರ್ಮನಿಯ ಮೇಲೆ ದಿಗ್ವಿಜಯ ಸಾಧಿಸಿತ್ತು. ಭಾರತದ ಬಗ್ಗೆ ತನ್ನ ನೀತಿ ಬದಲಿಸಿ ಸ್ವಯಮಾ

ದಳಿತ ಹಕ್ಕನ್ನು ಒಪ್ಪುವುದೆಂದು ಎಲ್ಲರೂ ನಿರೀಕ್ಷಿಸಿದರು. ವಿಜಯದ ಆಮಲಿನಲ್ಲಿ ಇಂಗ್ಲೇಂಡ್ ವಿಶ್ವಾಸಘಾತಮಾಡಿತು. ಸಾಮ್ರಾಜ್ಯ ಶಾಹಿ ನಿರಂಕುಶಾಧಿಕಾರವನ್ನು ಪ್ರಬಲಗೊಳಿಸಿ ರಾಷ್ಟ್ರೀಯ ಭಾವನೆಗಳನ್ನು ಹತ್ತಿಕ್ಕ ಲಾರಂಭಿಸಿತು. ಗಾಂಧೀಜಿಗೆ ನಿರಾಶೆಯಾಯಿತು. ಆಳರಸರ ಪ್ರಾಮಾಣಿಕತೆ ಯಲ್ಲಿ ನಂಬಿಕೆ ಹೋಯಿತು. ತನ್ನಸ್ವಾತಂತ್ರ್ಯಕ್ಕಾಗಿ ಭಾರತ ಸಮಗ್ರವಾಗಿ ಸಮರ ಹೂಡುವುದೊಂದೇ ದಾರಿ ಎಂದು ನಿರ್ಧರಿಸಿದರು. ಭಾರತದಲ್ಲಿ ಸಂಘಟಿತ ಸತ್ಯಾಗ್ರಹ ಚಳುವಳಿಗೆ ನಾಂದಿಹಾಡಿದರು.

—o—

ಅಧ್ಯಾಯ ೫ : ಎಚ್ಚೆತ್ತ ರಾಷ್ಟ್ರ

(i) ಜಲಿಯನ್‌ವಾಲಾ ಬಾಗ್

ಗಾಂಧೀಜಿ ಅನಾರೋಗ್ಯದಿಂದ ಆಗ ತಾನೆ ಪಾರಾಗಿ ವಿಶ್ರಾಂತಿ ಪಡೆಯು ತ್ತಿದ್ದಾಗ ಭಾರತಸರ್ಕಾರ ಜನತೆಯ ರಾಜಕೀಯ ಚಟುವಟಿಕೆಗಳನ್ನೆಲ್ಲ ಮಟ್ಟ ಹಾಕಲು "ರೌಲಟ್ ಕಾಯಿದೆ" ಗಳನ್ನು ರಚಿಸಿ ಪ್ರಕಟಿಸಿತು. ಸರ್ ಸಿಡ್ನಿ ರೌಲತ್ ಸಮಿತಿ ಶಿಫಾರಸ್ಸುಗಳನ್ನು ಕಾನೂನಾಗಿ ಅಂಗೀಕರಿಸಲು ಸಾಮ್ರಾಜ್ಯದ ನ್ಯಾಯ ವಿಧಾಯಕ ಸಭೆ ಸೇರಲಿತ್ತು, ಗಾಂಧೀಜಿಗೆ ಸಿಡಿಲು ಬಡಿದಂತಾ ಯಿತು. ಕೂಡಲೇ ಆಶ್ರಮದಲ್ಲಿ ವಲ್ಲಭಾಯಿ ಪಟೇಲ್, ಶ್ರೀ ಶಂಕರಲಾಲ್ ಬ್ಯಾಂಕರ್ ಮುಂತಾದವರೊಡನೆ ಸಮಾಲೋಚಿಸಿದರು. ದೆಹಲಿಗೆ ಹೋಗಿ ವೈಸರಾಯರಿಗೆ ಈ ಕಾಯಿದೆ ಮಾಡಬೇಡಿ ಎಂದು ಬಿನ್ನವಿಸಿದರು. ನ್ಯಾಯ ವಿಧಾಯಕ ಸಭೆಯಲ್ಲಿ ರೈಟ್ ಆನರಬಲ್ ಶ್ರೀನಿವಾಸಶಾಸ್ತ್ರಿಯವರು ಈ ಕಾಯಿದೆಯನ್ನು ಉಗ್ರವಾಗಿ ಪ್ರತಿಭಟಿಸಿದರು. ಗಾಂಧೀಜಿ ಪ್ರೇಕ್ಷಕರಾಗಿ ಹೋಗಿದ್ದರು. ಪ್ರಜಾಭಿಪ್ರಾಯವನ್ನು ಭಾರತ ಸರ್ಕಾರ ಮನ್ನಿಸಬಹುದೆಂದು ತಿಳಿದು ತಮ್ಮ ಪ್ರವಾಸ ಮುಂದುವರಿಸಿ ಮದ್ರಾಸಿಗೆ ಬಂದರು.

ಆನಿಬಸೆಂಟರೂ ತಿಲಕರೂ ಬ್ರಿಟಿಷ್ ಸಾಮ್ರಾಜ್ಯದ ಒಳಗೇ ಭಾರತ ಕ್ಕೆ ಸ್ವಯಮಾಡಳಿತ ಹಕ್ಕು ಕೊಡಿ ಎಂದು ಪ್ರಬಲವಾಗಿ ವಾದಿಸುತ್ತಿದ್ದರು, ಯುದ್ಧದಲ್ಲಿ ಸಾವಿರಾರು ದೇಶಭಕ್ತರು ಈ ನಿರೀಕ್ಷೆಯಲ್ಲೇ ರಕ್ತ ಚೆಲ್ಲಿದ್ದರು, ಇವಕ್ಕೆಲ್ಲ ಬಂದ ನಿರ್ದಯ ಉತ್ತರ ರೌಲಟ್ ಮಸೂದೆ. ಯಾವ ವಿರೋಧ ವನ್ನೂ ಲೆಕ್ಕಿಸದೆ 1919ರ ಮಾರ್ಚಿ 18 ರಂದು ಇದು ಕಾನೂನಾಯಿತೆಂದು ಘೋಷಿಸಲಾಯಿತು. ಯುದ್ಧದ ಕರಾಳ ಛಾಯೆ ಕರಗಿತು ಎನ್ನುವಷ್ಟರಲ್ಲಿ ಭಾರತ ಮತ್ತೆ ಕಗ್ಗತ್ತಲಿನಲ್ಲಿ ಮುಳುಗಿದಂತಾಯಿತು.

ಆತ್ಮಗೌರವವಿರುವ ಯಾವ ಭಾರತೀಯನೂ ಈ ಕಪ್ಪು ಶಾಸನವನ್ನು ಅಂಗೀಕರಿಸಲಾರ ಎಂದರು ಗಾಂಧೀಜಿ. ಯಾರಿಗೂ ಕಾಯದೆ ಸತ್ಯಾಗ್ರಹ ಸಭಾ ಎಂಬ ಸಂಸ್ಥೆಯನ್ನು ವಲ್ಲಭಾಯಿ, ಸರೋಜಿನಿನಾಯ್ಡು, ಬ್ಯಾಂಕರ್, ಇಂದುಲಾಲ್ ಯಾಜ್ಞಿಕ್ ಮುಂತಾದವರೊಡನೆ ಬೊಂಬಾಯಿನಲ್ಲಿ ಸ್ಥಾಪಿಸಿದರು. ಸಾವಿರಾರು ಸದಸ್ಯರು ಸೇರಿದರು.

ಕಾನೂನು ಘೋಷಿತವಾದಾಗ ಗಾಂಧೀಜಿ ಮದ್ರಾಸಿನಲ್ಲಿದ್ದರು. ಆ ರಾತ್ರಿ ಅವರಿಗೆ ನಿದ್ರೆ ಬರಲಿಲ್ಲ. ಇಡೀ ದೇಶ ಪ್ರತಿಭಟಿಸುವಂತಾಗಲು ಯಾವ ಕಾರ್ಯಕ್ರಮ ಎಂದು ಚಿಂತಿಸುತ್ತಲೇ ಇದ್ದರು. ಬೆಳಗಿನ ಜಾವದಲ್ಲಿ ಇದ್ದಕ್ಕಿದ್ದಂತೆ ದಾರಿ ಹೊಳೆಯಿತು. ರಾಷ್ಟ್ರದಲ್ಲೆಲ್ಲ ಒಂದು ದಿನದ ಪ್ರತಿಭಟನೆಯ "ಹರತಾಳ" ಆಚರಿಸಿ ಎಂದು ಕರೆನೀಡಬೇಕು ಎಂದುಕೊಂಡರು. ಆಪ್ತರಾಗಿದ್ದ ರಾಜಗೋಪಾಲಾಚಾರಿಯವರೊಡನೆ ಸಮಾಲೋಚಿಸಿದರು. ಮಹದೇವದೇಸಾಯಿ ಅವರೂ ಒಪ್ಪಿದರು.

ಸಾಮೂಹಿಕ ಉಪವಾಸ, ಪ್ರಾರ್ಥನೆ, ಎಲ್ಲ ವ್ಯವಹಾರಗಳ ಮಾರುಕಟ್ಟೆಗಳ, ಕಛೇರಿ ಶಾಲೆಗಳ ಸಂಪೂರ್ಣ ನಿಲುಗಡೆ, ಶಾಂತವಾದ ಪ್ರತಿಭಟನಾ ಮೆರವಣಿಗೆ, ಎಲ್ಲ ಕಡೆಯಿಂದಲೂ ಒಕ್ಕೊರಳಿನ ಪ್ರಬಲ ಬೇಡಿಕೆ ಸಲ್ಲಿಸುವುದು. ಇದು ಆ ದಿನದ ಕಾರ್ಯಕ್ರಮ. ಹರತಾಳ 1919ರ ಏಪ್ರಿಲ್ 6ರಂದು ನಡೆಯಲಿ ಎಂದು ಗಾಂಧೀಜಿ ಮತ್ತು ರಾಜಾಜಿ ಪ್ರಕಟಣೆ ಕೊಟ್ಟು ರಾಷ್ಟ್ರದಲ್ಲೆಲ್ಲ ಜಾಹೀರು ಮಾಡಿಬಿಟ್ಟರು.

ಆ ದಿನಗಳಲ್ಲಿ ಗಾಂಧೀಜಿ ಇನ್ನೂ ಸಾಮಾನ್ಯ ಜನತೆಗೆ ಅಪರಿಚಿತರು. ಸತ್ಯಾಗ್ರಹದ ಬಗ್ಗೆ ಹೆಚ್ಚಿಗೆ ಯಾರಿಗೂ ತಿಳಿದಿರಲಿಲ್ಲ. ಆದರೂ ಅದೇನು ಚಮತ್ಕಾರ! ದೇಶಕ್ಕೆ ದೇಶವೇ ಈ ಕರೆಗೆ ಓಗೊಟ್ಟಿತು. ಭೂಮಿಯ ಅಂತರಾಳದಿಂದೇಳುವ ಅಗ್ನಿಪರ್ವತದ ಉಕ್ಕುವಿಕೆಯಂತೆ ಜನರ ಉತ್ಸಾಹ ಉಕ್ಕೇರಿತು. ಅದೊಂದು ಅದ್ಭುತವೇ ನಡೆದು ಹೋಯಿತು ಎನ್ನುತ್ತಾರೆ ಗಾಂಧೀಜಿ ತಮ್ಮ ಆತ್ಮಕಥೆಯಲ್ಲಿ. ಅವರ ಆತ್ಮವಿಶ್ವಾಸವೂ ಸೂರ್ಮಡಿಸಿತು.


ಭುಗಿಲೆದ್ದ ಈ ಜಾಗೃತಿಗೆ ನಿಶ್ಚಿತ ಕಾರ್ಯಕ್ರಮ ಬೇಕಾಯಿತು. ಬೊಂಬಾಯಿನಲ್ಲಿದ್ದ ಗಾಂಧೀಜಿ ಎರಡನೆ ಹೆಜ್ಜೆಯಿಟ್ಟರು. ಪತ್ರಿಕಾ ಸ್ವಾತಂತ್ರ್ಯ ಮತ್ತು ವಾಕ್ ಸ್ವಾತಂತ್ರ್ಯಗಳನ್ನು ದಮನಮಾಡಿದ್ದ ಕಾನೂನುಗಳನ್ನು ಭಂಗ ಮಾಡಲು ಬಹಿಷ್ಕೃತ ಸಾಹಿತ್ಯ ಕೃತಿಗಳನ್ನು ಬಹಿರಂಗವಾಗಿ ಮಾಡೋಣ. ಸಭೆಗಳಲ್ಲಿ ನಿರ್ಭಯವಾಗಿ ಮಾತನಾಡೋಣ ; ಆದರೆ ಯಾರೂ ಎಲ್ಲೂ ಶಾಂತಿಭಂಗ ಮಾಡಕೂಡದು ಎಂದು ಸೂಚಿಸಿದರು, ಗಾಂಧೀಜಿ ಬರೆದಿದ್ದ "ಹಿಂದ್ ಸ್ವರಾಜ್ಯ" ಮತ್ತು "ಸರ್ವೋದಯ" ಪುಸ್ತಕಗಳು ಬಹಿಷ್ಕರಿಸಲ್ಪಟ್ಟಿದ್ದವು. ಈ ಚಿಕ್ಕ ಪುಸ್ತಕಗಳನ್ನು ನಾಲ್ಕಾಣೆ ಬೆಲೆಗೆ ಬಹಿರಂಗವಾಗಿ ಮಾರಲು ಸ್ವಯಂಸೇವಕರು ಮುಂದಾದರು. ಸಾವಿರಾರು ಪ್ರತಿಗಳನ್ನು ಬೊಂಬಾಯಿನ ಸಾರ್ವಜನಿಕರು ಕೊಂಡರು. ಹಲವರು ಐವತ್ತು ರೂಪಾಯಿಗಳಷ್ಟನ್ನು ಕೊಟ್ಟು ಸತ್ಯಾಗ್ರಹ ನಿಧಿ ಹೆಚ್ಚಿಸಿದರು. ಹಿಂದೂಗಳೂ ಮುಸ್ಲಿಮರೂ ಒಗ್ಗೂಡಿದರು. ದೇಶವೇ ಜಾಗೃತವಾಗಿ ನಿಲ್ಲುತ್ತಿತ್ತು. ಬೊಂಬಾಯಿನಲ್ಲಲ್ಲದೆ ಅಹಮದಾಬಾದ್, ದೆಹಲಿ, ಕಲ್ಕತ್ತ, ಅಲಹಾಬಾದ್ ಮದ್ರಾಸ್ ಮುಂತಾದ ಹತ್ತಾರು ನಗರಗಳಲ್ಲಿ ನೂರಾರು ಸಣ್ಣ ಊರುಗಳಲ್ಲಿ ಹರತಾಳ ಯಶಸ್ವಿಯಾಗಿ ನಡೆದು ಜನತೆಯಲ್ಲೆಲ್ಲ ಹೊಸಶಕ್ತಿ ಸಂಚಾರವಾಯಿತು. ಪಂಜಾಬಿನಲ್ಲಿ ವಿಶೇಷ ಉತ್ಸಾಹವಿತ್ತು. ಗಾಂಧೀಜಿಯನ್ನು ಆಹ್ವಾನಿಸಿದರು. ಅವರು ಏಪ್ರಿಲ್ 7ರಂದು ದೆಹಲಿ ಮಾರ್ಗವಾಗಿ ಲಾಹೋರಿಗೆ ಹೊರಟರು. ಮಧ್ಯದಲ್ಲೇ ಪೋಲೀಸರು ಅವರನ್ನು ತಡೆದು ದಸ್ತಗಿರಿ ಮಾಡಿ ಬೊಂಬಾಯಿಗೆ ಹಿಂತಿರುಗಿ ಕರೆತಂದರು. ಈ ಸುದ್ಧಿ ಹರಡಿ ಬೊಂಬಾಯಿ ರೈಲು ನಿಲ್ದಾಣದಲ್ಲಿ ಅಗಾಧ ಜನಸಂದಣಿ ಸೇರಿ ಅವರನ್ನು ದೊಡ್ಡ ಮೆರವಣಿಗೆಯಲ್ಲಿ ಕರೆದೊಯ್ದರು. ಅಹಮದಾಬಾದ್ ಮತ್ತು ಅಮೃತಸರಗಳಲ್ಲಿ ಗಾಂಧೀಜಿಯ ದಸ್ತಗಿರಿಯವಾರ್ತೆ ಜನತೆಯನ್ನು ರೊಚ್ಚಿಗೆಬ್ಬಿಸಿತು. ದೊಂಬಿಗಳಾದವು. ಆವೇಶದಿಂದ ಜನ ವಾರ್ತಾ ತಂತಿಗಳನ್ನು ಕಿತ್ತರು, ರೈಲು ನಿಲ್ದಾಣಗಳನ್ನು ನಾಶಮಾಡಲು ಹೊರಟರು. ಪೋಲೀಸರು ದಬ್ಬಾಳಿಕೆಗೆ ಗುರಿಯಾದರು. ಹಿಂಸಾಚಾರ ವ್ಯಾಪಕವಾಗಿ ನಡೆದು ಹೋಯಿತು. ಇದನ್ನರಿತ ಗಾಂಧೀಜಿಗೆ ತುಂಬಾ ನೋವಾಯಿತು. ಕೂಡಲೇ ಸಬರ್ಮತಿಗೆ ಧಾವಿಸಿದರು. "ಇದೇಕೆ ಹೀಗೆ ಮಾಡಿದಿರಿ ? ಅಹಿಂಸೆಯ

ಪಾತ ಏನಾಯಿತು? ಇದು ನಾಚಿಕೆಗೇಡು; ಅವಮಾನಕರ ವರ್ತನೆ. ತಪ್ಪನ್ನೊಪ್ಪಿ ಪ್ರಾಯಶ್ಚಿತ್ತ ಮಾಡಿಕೊಳ್ಳೋಣ, ನಾನೇ ಕಾರಣನಾದ ಹಿಮಾಲಯದಂತಹ ಈ ತಪ್ಪಿಗಾಗಿ ಮೂರು ದಿನ ಉಪವಾಸ ಮಾಡುತ್ತೇನೆ" ಎಂದು ಭಾವಪರವಶರಾಗಿ ನುಡಿದರು. ಸತ್ಯಾಗ್ರಹದ ವಿಧಿನಿಯಮಗಳನ್ನು ಜನರು ಅರಿಯದೆ ದೊಂಬಿಯಾದರೆ ಎಲ್ಲವೂ ಹಾಳಾಗುವುದೆಂದರಿತು ಗಾಂಧೀಜಿ ರೌಲತ್ ಸತ್ಯಾಗ್ರಹವನ್ನು ನಿಲ್ಲಿಸಲು ಘೋಷಣೆ ಮಾಡಿದರು. ಕಾಯಾ ವಾಚಾ ಮನಸಾ ಅಹಿಂಸಾತ್ಮಕವಾಗಿ ನಡೆದುಕೊಳ್ಳದೆ ಜನಶಕ್ತಿ ಬೆಳೆಯುವುದಿಲ್ಲ ಎಂದು ಎಚ್ಚರಿಸಿದರು.

ಪಂಜಾಬಿನ ಪರಿಸ್ಥಿತಿ ಇನ್ನೂ ಹದಗೆಟ್ಟಿತ್ತು. ಸೈನ್ಯದ ಪ್ರಮುಖ ಪ್ರದೇಶವಾಗಿದ್ದ ಅಮೃತಸರದಲ್ಲಿ ಜನ ಎಚ್ಚೆತ್ತು ಬ್ರಿಟಿಷ್ ಅಧಿಕಾರವನ್ನು ಅಲುಗಾಡಿಸುವುದನ್ನು ಸರ್ಕಾರ ಸಹಿಸದಾಯಿತು. ಹಿಂದೂ ಮುಸಲ್ಮಾನ ಸಿಕ್ ಪಂಥದವರೆಲ್ಲ ಒಗ್ಗೂಡಿ 1919ರ ಮಾರ್ಚಿ 30ರುದು ಅತ್ಯಂತ ಶಾಂತಿಯುತ ಹರತಾಳ ಆಚರಿಸಿದರು. ಪಂಜಾಬಿನ ಲೆಫ್ಟಿನೆಂಟ್ ಗೌರ್ನರ್ ಮೈಕೇಲ್ ಒಡ್ವಯರ್ ಈ ಸಂಘಟನೆಯನ್ನು ಕಂಡು ಕುಪಿತನಾದ. ಗಾಂಧೀಜಿಯನ್ನು ಪಂಜಾಬಿಗೆ ಸೇರಿಸದೆ ದಸ್ತಗಿರಿ ಮಾಡಿ ಬೊಂಬಾಯಿಗೆ ಕರೆದೊಯ್ದ ಸುದ್ಧಿ ಕಾಡ್ಗಿಚ್ಚಿನುತೆ ಹರಡಿತು. ಭಾರತ ರಕ್ಷಣಾ ಕಾನೂನಿನ ಪ್ರಕಾರ ಪ್ರಮುಖ ಪಂಜಾಬಿ ಮುಖಂಡರನ್ನು ದಸ್ತಗಿರಿ ಮಾಡಿದರು. ಡಾ॥ ಸೈಫುದ್ದೀನ್ ಕಿಚಲು ಮತ್ತು ಡಾ॥ ಸತ್ಯಪಾಲರನ್ನು ಬಂಧಿಸಿದರು. ಜನತೆಯಲ್ಲಿ ಕೋಪದ ಕಿಡಿ ಹರಡಿತು. ತಮ್ಮ ನಾಯಕರನ್ನು ಬಿಡಿ ಎಂದು ಘೋಷಿಸುತ್ತಾ ದೊಡ್ಡ ಮೆರವಣಿಗೆ ಜಿಲ್ಲಾಧಿಕಾರಿಯೆಡೆಗೆ ಹೊರಟಿತು. ಪೋಲೀಸರು ತಡೆದು ಚದುರಿಸಲು ಗುಂಡು ಹಾರಿಸಿದರು. ಜನ ಹುಚ್ಚೆದ್ದು ದೊಂಬಿಯಲ್ಲಿ ತೊಡಗಿ ಐದಾರು ಇಂಗ್ಲೀಷ್ ನಾಗರಿಕರನ್ನು ಕೊಂದುಬಿಟ್ಟರು. ಸೇನೆಯ ತುಕುಡಿಗಳು ಅಮೃತಸರಕ್ಕೆ ಧಾವಿಸಿ ಬಂದವು. ಜನರಲ್ ಡೈಯರ್ ಎಂಬ ಕ್ರೂರ ಸೇನಾಧಿಕಾರಿಯನ್ನು ಕಳುಹಿಸಲಾಗಿತ್ತು. ಸಭೆ ಸಮಾವೇಶ ಮೆರವಣಗೆಗಳೆಲ್ಲ ಬಹಿಷ್ಕೃತವಾದವು,

ಏಪ್ರಿಲ್ 12ರಂದು ಜಲಿಯನ್‌ವಾಲಾ ಬಾಗ್ ತೋಟದಲ್ಲಿ ಸಾರ್ವಜನಿಕ ಸಭೆಯನ್ನು ಸೇರಿಸಿದರು. ಅಂದು ವೈಶಾಖೀ ಹಬ್ಬದ ದಿನ. ಸುಮಾರು ಆರು ಸಾವಿರ ಜನ ಗಂಡಸರು ಹೆಂಗಸರು ಮಕ್ಕಳು ಈ ತೋಟದಲ್ಲಿ ಸೇರಿದ್ದರು. ನಾಲ್ಕು ಕಡೆಯೂ ಗೋಡೆ. ಒಂದೇ ಬಾಗಿಲು. ಈ ಸಭೆ ನಡೆಯಕೂಡದು ಎಂಬ ಆಜ್ಞೆಯನ್ನು ಇಂಗ್ಲೀಷಿನಲ್ಲಿ ಜಾಹೀರು ಮಾಡಲಾಗಿತ್ತು. ಜನರಿಗೆ ಗೊತ್ತೇ ಆಗಲಿಲ್ಲ. ಜನರಲ್ ಡೈಯರ್ ತನ್ನ ಸೈನ್ಯದೊಡನೆ ಬಂದು ಬಾಗಿಲಿಗೆ ಅಡ್ಡಲಾಗಿ ನಿಂತ. ಇದ್ದಕ್ಕಿದ್ದಂತೆ ಆ ಇಡೀ ಜನ ಸಮೂಹದ ಮೇಲೆ ಗುಂಡುಹಾರಿಸಿ ಎಂದು ಅಪ್ಪಣೆ ಮಾಡಿಬಿಟ್ಟ. ಪಾರಾಗಲು ಜಾಗವೇ ಇಲ್ಲದೆ ಜನ ಈ ಅಮಾನುಷ ಕಗ್ಗೊಲೆಗೆ ತುತ್ತಾದರು. ಒಂದೇ ಸಮನೆ ತಮ್ಮಲ್ಲಿದ್ದ ಬಂದೂಕ ತೋಟಗಳೆಲ್ಲ ಮುಗಿಯುವವರೆಗೂ ಸೈನಿಕರು ಗುಂಡು ಹಾರಿಸುತ್ತಲೇ ಹೋದರು. ಅರಕ್ಷಿತ ನಿಸ್ಸಹಾಯಕಜನ ಹೆಂಗಸರು ಮಕ್ಕಳು ಚೀರಿ ಬಿದ್ದರು. ಸುಮಾರು 400 ಜನ ಸತ್ತರು. ಸಾವಿರದ ಮುನ್ನೂರು ಜನ ಘಾಯಗೊಂಡರು. ನೂಕುನುಗ್ಗಲಿನಲ್ಲಿ ಸಹಸ್ರಾರು ಜನ ಬಿದ್ದು ನೊಂದರು. ಎಲ್ಲವನ್ನೂ ಅಧಿಕಾರದ ಅಟ್ಟಹಾಸದಿಂದ ನೋಡುತ್ತಲೇ ನಿಂತ ಜನರಲ್ ಡೈಯರ್, "ನನ್ನ ಸಾಮ್ರಾಜ್ಯದ ಶತ್ರುಗಳನ್ನು ಧ್ವಂಸಮಾಡಿದೆ" ಎಂದು ಹೆಮ್ಮೆಯಿಂದ ಹೇಳಿಕೊಂಡ. ದೇಶಕ್ಕೆ ದೇಶವೇ ಈ ಕರಾಳ ಕಗ್ಗೊಲೆಯಿಂದ ಖತಿಕೊಂಡು ಪ್ರತಿಭಟಿಸಿತು. ಸುದ್ಧಿ ಹರಡದಂತೆ ಪತ್ರಿಕೆಗಳ ಮೇಲೆ ಗದಾಪ್ರಹಾರ ಮಾಡಿದರು. ಸೈನಿಕ ಕಾನೂನು (ಮಾರ್ಷಲ್ ಲಾ) ಜಾರಿಯಾಯಿತು. ಈ ಘೋರ ಘಟನೆ ಎಲ್ಲೆಲ್ಲೂ ಪ್ರತೀಕಾರದ ಕಿಚ್ಚನ್ನು ಕೆರಳಿಸಿತು. ಅದನ್ನೇ ನೆಪಮಾಡಿ ಭಾರತಾದ್ಯಂತ ಕ್ರೂರದಮನದ ಕ್ರಮಗಳನ್ನು ಬ್ರಿಟಿಷ್ ಸರ್ಕಾರ ಕೈಗೊಂಡಿತು. ಗಾಂಧೀಜಿ ಇವೆಲ್ಲವನ್ನೂ ಕಂಡು ಖೇದಗೊಂಡರು. ಜನರ ಹಿಂಸಾ ಮನೋಧರ್ಮದಿಂದಲೂ ಅವರು ದುಃಖಿತರಾದರು.

ಅಮೃತಸರದಲ್ಲಿ ಡೈಯರನ ಪೈಶಾಚಿಕ ಪ್ರತೀಕಾರ ವರ್ತನೆ ಊಹೆಗೂ ಮೀರಿ ನಡೆಯಿತು. ಎಲ್ಲೆಲ್ಲೂ ಉಗ್ರ ಶಿಕ್ಷೆಯ ಭಯೋತ್ಪಾದನೆ. ವಿದ್ಯಾರ್ಥಿಗಳೂ ಸೇರಿ ಅನೇಕರು ದಿನವೂ ಹತ್ತಾರು ಮೈಲಿ ನಡೆದು ಪೋಲೀಸು



ಸತ್ಯಾಗ್ರಹಿ ಗಾಂಧಿ — 1918

ಠಾಣೆಗಳಲ್ಲಿ ಹಾಜರಾಗಬೇಕೆಂದು ಅಪ್ಪಣೆಯಾಗುತ್ತಿತ್ತು. ಒಬ್ಬ ಇಂಗ್ಲೀಷ್ ಮಹಿಳೆಗೆ ಹೊಡೆದವರೆಂದು ಆ ರಸ್ತೆಯಲ್ಲಿ ಜನರು ಹೊಟ್ಟೆಯ ಮೇಲೆ ತೆವಳಿ ಹೋಗಬೇಕೆಂದು ಆಜ್ಞೆಯಾಯಿತು. ಸಂಶಯ ಬಂದವರನ್ನು ಕಂಬಕ್ಕೆ ಕಟ್ಟಿ ಚಾವಟಿಯಿಂದ ಹೊಡೆದರು, ರಾಷ್ಟ್ರೀಯ ನಾಯಕರಿಗೆ ಕೈತೋಳ ತೊಡಿಸಿ ನಡೆಸಿದರು. ನಿಸ್ಸಹಾಯಕ ನಿರಪರಾಧಿಗಳಿಗೆ ಗರಬಡಿದಂತಾಗಿ ಸ್ಮಶಾನ ನೀರವತೆ ಹರಡಿ ನಿಂತಿತು.

ರವೀಂದ್ರನಾಥಠಾಕೂರರು ವೈಸರಾಯರಿಗೆ ಬಹಿರಂಗ ಪತ್ರ ಬರೆದು ಪ್ರತಿಭಟಿಸಿದರು. ತಮ್ಮ "ಸರ್" ಪದವಿಯನ್ನು ಹಿಂತಿರುಗಿಸಿ ಬಿಟ್ಟರು. ಈ ಸರ್ಕಾರದಲ್ಲಿ ನನ್ನ ಗೌರವ ಭರವಸೆಗಳೆಲ್ಲ ನಾಶವಾಗಿವೆ. ಇಂತಹ ಅಮಾನುಷ ದಬ್ಬಾಳಿಕೆ ಖಂಡನೀಯ. ಯಾವ ನಾಗರಿಕ ಸರ್ಕಾರಕ್ಕೂ ಅವಮಾನಕರ ಎಂದರು. ಗಾಂಧೀಜಿಗೂ ಹಾಗೆಯೇ ಅನಿಸಿತು. ತಮ್ಮ ಕೈಸರ್ ಇ ಹಿಂದ್ ಪದಕವನ್ನೂ ಇತರ ಗೌರವ ಸಂಕೇತಗಳನ್ನೂ ಹಿಂತಿರುಗಿಸಿದರು. ಈ ಕೂಡಲೇ ಒಂದು ವಿಚಾರಣಾ ಸಮಿತಿ ರಚಿಸಿ ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷಿಸಿ ಎಂದು ಕೇಳಿದರು. ರಾಷ್ಟ್ರೀಯ ಕಾಂಗ್ರೆಸ್ ತಾನೇ ಒಂದು ಸಮಿತಿ ರಚಿಸಿ ಜಲಿಯಾನ್ ವಾಲಾಬಾಗಿನ ಸಮಸ್ತ ಸಾಕ್ಷ್ಯಗಳನ್ನು ಸಂಗ್ರಹಿಸಿ ಜಾಹೀರು ಮಾಡುವುದಾಗಿ ಘೋಷಿಸಿತು,

ಕೊನೆಗೆ ಭಾರತ ಸರ್ಕಾರ "ಹಂಟರ್ ಸಮಿತಿ" ನೇಮಿಸಿ ವಿಚಾರಣೆ ನಡೆಸಿತು. ಕಾಂಗ್ರೆಸ್ ಇದನ್ನು ಬಹಿಷ್ಕರಿಸಿತು. ನಾಯಕರು ಪಂಜಾಬಿನಲ್ಲೆಲ್ಲ ಸಂಚರಿಸಿ ಸತ್ಯ ಸಂಗತಿಗಳನ್ನು ಸಂಗ್ರಹಿಸಿದರು. ಡೈಯರ್ ತಪ್ಪಿತಸ್ಥನೆಂದು ಗೊತ್ತಾದರೂ ಆತನ ಕಾರ್ಯ ಭಾರತ ಸರ್ಕಾರದ ರಕ್ಷಣೆಗೆ ಅಗತ್ಯವೇ ಆಗಿತ್ತು ಎಂದು ಇಂಗ್ಲೀಷ್ ಆಳರಸರು ತೀರ್ಮಾನಿಸಿದರು.

ಆ ಘಳಿಗೆಯಿಂದ ಗಾಂಧೀಜಿಗೆ ಸಾಮ್ರಾಜ್ಯವಾದೀ ವ್ಯವಸ್ಥೆಯ ಮೇಲೆ ಎಲ್ಲ ಭರವಸೆಯೂ ಇಂಗಿಹೋಯಿತು. ಈ ವ್ಯವಸ್ಥೆ ನಿರ್ನಾಮವಾಗದೆ ಭಾರತಕ್ಕೆ ಮೋಕ್ಷವಿಲ್ಲ ಎಂದು ತೀರ್ಮಾನಿಸಿದರು. ರಾಜಕಾರಣದಲ್ಲಿ

ಪ್ರವೇಶಿಸಲು ಅವರಿಗೆ ಒಲವಿಲ್ಲದಿದ್ದರೂ ಅನಿವಾರ್ಯವಾಗಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟ ವೇದಿಕೆಯ ಕೇಂದ್ರಕ್ಕೆ ಬಂದು ನಿಲ್ಲಬೇಕಾಯಿತು, ಗಾಂಧೀ ಯುಗ ಭಾರತದ ಚರಿತ್ರೆಯಲ್ಲಿ ಉದಯವಾಯಿತು.

(ii) ಸತ್ಯಾಗ್ರಹ ಸಿದ್ಧತೆ

ರಾಷ್ಟ್ರೀಯ ಸ್ವಾತಂತ್ರ್ಯ ಸಮರಕ್ಕೆ ಜನತೆಯನ್ನು ಅನುಗೊಳಿಸುವುದು ಪ್ರಥಮ ಕರ್ತವ್ಯ ಎಂದು ಭಾವಿಸಿದರು ಗಾಂಧೀಜಿ. ಈಗಾಗಲೇ ಬೊಂಬಾಯಿ ಕ್ರಾನಿಕಲ್ ಪತ್ರಿಕೆ ಶ್ರೀ ಬಿ. ಜಿ. ಹಾರ್ನಿಮನ್ ಅವರ ಸಂಪಾದಕತ್ವದಲ್ಲಿ ಸತ್ಯಾಗ್ರಹದ ಬಗ್ಗೆ ಜನತೆಗೆ ಶಿಕ್ಷಣ ನೀಡುತ್ತಿತ್ತು. ಹಠಾತ್ತನೆ ಸರ್ಕಾರ ಶ್ರೀ ಹಾರ್ನಿಮನ್ನರನ್ನು ಗಡೀಪಾರು ಮಾಡಿತು. ಪತ್ರಿಕೆಯನ್ನು ನಿಲ್ಲಿಸಿತು. ಆ ವೇಳೆಗೆ ಶ್ರೀ ಸೋಬಾನಿ ಮತ್ತು ಶಂಕರಲಾಲ್ ಬ್ಯಾಂಕರ್ ನಡೆಸುತ್ತಿದ್ದ "ಯಂಗ್ ಇಂಡಿಯಾ' ಸತ್ಯಾಗ್ರಹದ ಮುಖವಾಣಿಯಾಯಿತು.

ಹಿಂದೂ ಮುಸ್ಲಿಂ ಐಕ್ಯತೆ, ಆಸ್ಪೃಶ್ಯತಾ ನಿವಾರಣೆ ಮತ್ತು ಖಾದಿ ಉತ್ಪಾದನೆ ಗಾಂಧೀಜಿಯ ರಚನಾತ್ಮಕ ಕ್ರಾಂತಿ ಪಥದ ಪ್ರಮುಖ ಕಾರ್ಯಕ್ರಮಗಳಾದವು, ರಾಜಕೀಯ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳು ಬೇರೆ ಬೇರೆ ಅಲ್ಲ. ಸಮಗ್ರ ದೃಷ್ಟಿಯಿಂದ ದೇಶವನ್ನು ಕಟ್ಟುತ್ತಾ ಹೋದಂತೆ ಜನತೆಯ ಜೀವನಸ್ಥಿತಿ ಉತ್ತಮಗೊಂಡು ರಾಜಕೀಯ ದಾಸ್ಯವೂ ಕೊನೆಗಾಣುತ್ತದೆ ಎಂದು ಗಾಂಧೀಜಿ ಪ್ರತಿಪಾದಿಸಿದರು.

ಗಾಂಧೀಜಿ ದಕ್ಷಿಣ ಆಫ್ರಿಕದಲ್ಲಿದ್ದಾಗಲೇ 1908ರಲ್ಲಿ ಬರೆದ "ಹಿಂದ್ ಸ್ವರಾಜ್ಯ" ದಲ್ಲಿ ಕೈಮಗ್ಗದ ಬಟ್ಟೆ ಉತ್ಪಾದನೆಯಿಂದ ಭಾರತ ಗ್ರಾಮೀಣ ಜನತೆಯ ದಾರಿದ್ರ್ಯ ನಿವಾರಣೆಯಾದೀತು ಎಂದು ಪ್ರತಿಪಾದಿಸಿದ್ದರು. 1916ರಲ್ಲಿ ಸತ್ಯಾಗ್ರಹ ಆಶ್ರಮದಲ್ಲಿ ಎಲ್ಲರೂ ಬಟ್ಟೆ ನೆಯ್ದು ಉಪಯೋಗಿಸಲು ತೊಡಗಿದರು. ಆಗಿನ್ನೂ ಗಿರಣಿಗಳ ನೂಲನ್ನೇ ಉಪಯೋಗಿಸುತ್ತಿದ್ದರು. ಚರಕವನ್ನು ನೋಡಿಯೇ ಇರಲಿಲ್ಲ, 1917ರಲ್ಲಿ ಗುಜರಾತಿನ

ಸಮಾಜ ಸೇವಾ ಕಾರ್ಯಕರ್ತೆ ಗಂಗಾಬಹೆನ್ ಮುಂಜುಂದಾರ್ ಬರೋಡ ಜಿಲ್ಲೆಯ ವಿಜಾಪುರ ಗ್ರಾಮದಲ್ಲಿ ಚರಕದಲ್ಲಿ ನೂಲುತ್ತಿದ್ದ ನೂರಾರು ಸಂಸಾರ ಗಳನ್ನು ಕಂಡರು. ಅವರ ಚರಕಗಳೆಲ್ಲ ಮೂಲೆ ಗುಂಪಾಗಿದ್ದವು, ಅವರಿಗೆ ಬೇಕಾದ ಹಂಜಿ ದೊರೆಯುತ್ತಿರಲಿಲ್ಲ. ಕೂಡಲೇ ಗಂಗಾಬಹೆನ್ ಗಾಂಧೀಜಿ ಬಳಿಗೆ ಧಾವಿಸಿದರು. ಗಾಂಧೀಜಿಗೆ ತನ್ನ ಅನ್ವೇಷಣೆ ತಿಳಿಸಿ ಒಂದು ಚರಕ ವನ್ನು ತಂದುಕೊಟ್ಟರು. ಗಾಂಧೀಜಿಗೆ ಪರಮ ಸಂತೋಷವಾಯಿತು. ಕೂಡಲೇ ಕೈಯಿಂದ ನೂಕು ಕೈಮಗ್ಗದಿಂದ ನೇಯುವ "ಖಾದಿ" ಯ ಪುನರ್ಜನ್ಮವಾಯಿತು. ಸಹಸ್ರಾರು ವರ್ಷಗಳಿಂದ ಗ್ರಾಮದ ಭಾಗ್ಯ ಲಕ್ಷ್ಮಿ ಯಾಗಿದ್ದ ಏಕೈಕ ಕೈಗಾರಿಕೆ ಮತ್ತೆ ಜನ್ಮತಾಳಿತು. ಆಕ್ಷಣದಿಂದ ಎಷ್ಟೇ ಒರಟಾಗಿದ್ದರೂ ಗ್ರಾಮದಲ್ಲಿ ಉತ್ಪಾದಿತ ಖಾದಿಯನ್ನೇ ಗಾಂಧೀಜಿ ಮತ್ತು ಇತರ ಆಶ್ರಮವಾಸಿಗಳು ತೊಟ್ಟರು. ತಾವೇ ದಿನವೂ ಚರಕದಿಂದ ನೂಲುತ್ತಿದ್ದರು.

1920ರ ಜುಲೈ 21ರ "ಯಂಗ್ ಇಂಡಿಯಾ" ದಲ್ಲಿ ಖಾದಿಯ ಬಗ್ಗೆ ಗಾಂಧೀಜಿ ಹೀಗೆ ಬರೆದರು :—

> "ನಿಧಾನವಾಗಿ ಆದರೆ ಖಂಡಿತವಾಗಿ ಭಾರತದ ಅತ್ಯಂತ ಪ್ರಾಚೀನ ವಾದ ಈ ಗೃಹಯಂತ್ರದ ಮಧುರ ಸಂಗೀತ ಮತ್ತೆ ನಮ್ಮ ಸಮಾಜವನ್ನು ತುಂಬಿ ನಿಲ್ಲುತ್ತದೆ. ರಾಷ್ಟ್ರಕ್ಕಾಗಿ ರಾಜರಿಂದ ರಂಕರವರೆಗೂ ಚರಕದಲ್ಲಿ ನೂಲುವ ಪವಿತ್ರ ರಾಷ್ಟ್ರಕಾರ್ಯವನ್ನು ಕೈಗೊಳ್ಳಬೇಕು. ಯೂರೋಪಿನ ಜನರೂ ಯಂತ್ರ ಸೈತಾನನ ಬೋನಿಗೆ ಸಿಕ್ಕಿಕೊಳ್ಳುವ ಮುನ್ನ ನೂಲುತ್ತಿದ್ದರು. ಅದೊಂ ದು ಅತ್ಯಂತ ಗೌರವ ವೃತ್ತಿ ಎನಿಸಿತ್ತು. "ಸ್ಪಿನ್‌ಸ್ಟರ್" ಮತ್ತು "ವೈಫ್" ಎಂಬ ಪದಗಳೇ ನೂಲುವ ಮತ್ತು ನೇಯುವ ಮಹಿಳೆಯರ ಕಲೆಯ ಘನತೆಗೆ ಸಾಕ್ಷಿ, ಭಾರತದ ಆರ್ಥಿಕ ಮತ್ತು ನೈತಿಕ ಪುನರುಜ್ಜೀವನಕ್ಕೆ ಚರಕ ಅಮೂಲ್ಯ ಕೊಡುಗೆ. ಲಕ್ಷೋ ಪಲಕ್ಷ ಜನರಿಗೆ ವ್ಯವಸಾಯಕ್ಕೆ ಪೂರಕವಾದ ಒಂದು ಸರಳ

> ಕೈಗಾರಿಕೆ ಬೇಕೇ ಬೇಕು, ಲಕ್ಷಾಂತರ ಜನ ತಮ್ಮ ಕುಟೀರಗಳಲ್ಲೇ ಹಸಿವಿನಿಂದ ಸಾಯುವುದನ್ನು ತಪ್ಪಿಸಬೇಕಾದರೆ ಪ್ರತಿ ಹಳ್ಳಿಯೂ ತನ್ನ ನೇಕಾರರನ್ನು ಪುನಃ ಪಡೆಯಬೇಕು. ಪ್ರತಿ ಮನೆಯಲ್ಲೂ ಚರಕ ತಿರುಗಬೇಕು",

ಸ್ವರಾಜ್ಯ ಗಳಿಸಬೇಕಾದರೆ ಕವಿ ರವೀಂದ್ರರಂಥ ಘನವೆತ್ತ ಮಹಾಪುರುಷರೂ ಯಜ್ಞ ರೂಪದಲ್ಲಿ ನೂಲಬೇಕು. ಶರೀರಶ್ರಮಕ್ಕೆ ಘನತೆಯನ್ನೂ ರೈತನಿಗೆ ಸ್ವಾಭಿಮಾನವನ್ನು ತಂದುಕೊಡಲು ಮೇಲ್ವರ್ಗದವರೆಲ್ಲ ಭಾರತದ ಗ್ರಾಮೀಣ "ಅಸ್ಥಿಪಂಜರ" ಗಳಂತಿರುವ ಬಡವರೊಡನೆ ಒಂದಾಗಿ ಅವರನ್ನು ಮೇಲೆತ್ತಬೇಕು. ಇಂಗ್ಲೆಂಡಿನ ಬಟ್ಟೆ ಗಿರಣಿಗಳಿಂದಲೇ ನಮ್ಮ ಲಕ್ಷಾಂತರ ಹಳ್ಳಿಗಳೂ ಕೈಕಸುಬುದಾರರೂ ನಾಶವಾಗಿದ್ದಾರೆ, ಸ್ವದೇಶೀ ಧರ್ಮ ಎಂದರೆ ವಿದೇಶೀ ವಸ್ತ್ರ ಬಹಿಷ್ಕರಿಸಿ ನಮ್ಮ ನೆರೆಹೊರೆಯವರ ಪರಿಶ್ರಮದಿಂದ ಉತ್ಪಾದಿತವಾಗುವ ಬಟ್ಟೆ ಧರಿಸುವುದು. ನಾವು ಸ್ವಾವಲಂಬಿಗಳಾಗಿ ಬದುಕುವುದೇ ನಿಜವಾದ ಸ್ವರಾಜ್ಯ, ಬ್ರಿಟಿಷ್ ಸಾಮ್ರಾಜ್ಯದಿಂದ ಬಿಡುಗಡೆಯಾಗಲು ಈ ಸ್ವದೇಶೀ ಧರ್ಮ ಅನಿವಾರ್ಯ. ಆಸಹಕಾರ ಚಳುವಳಿಗೆ ಚರಕದ ಈ ಸಂದೇಶವೇ ಬುನಾದಿಯಾಗಬೇಕು. ಭಾರತ ಬದುಕಿರುವುದು ಗ್ರಾಮಗಳಲ್ಲಿ. ನಗರಗಳು ವಿದೇಶೀ ಪ್ರಭುತ್ವದ ಪ್ರಭಾವದಿಂದ ಬೆಳೆದು ಗ್ರಾಮಗಳ ರಕ್ತ ಹೀರುತ್ತಿವೆ, ಬಡವರಾಗುತ್ತಿರುವ ಹಸಿವ ಗ್ರಾಮಸ್ಥರಿಗೆ ಚರಕವೇ ದೇವರು. ಅದರಿಂದಲೇ ಎರಡು ತುತ್ತು ಜೀವದಾಯಕ ಅನ್ನ ದೊರೆತೀತು ಎಂದರು ಗಾಂಧೀಜಿ.

ಖಿಲಾಫತ್ ಬೇಡಿಕೆ

ಹಿಂದೂ ಮುಸ್ಲಿಂ ಐಕ್ಯವನ್ನು ಕ್ರಿಯಾತ್ಮಕ ಶಕ್ತಿಯನ್ನಾಗಿ ಪರಿವರ್ತಿಸಲು ಗಾಂಧೀಜಿ ಕಾತುರರಾಗಿದ್ದರು. ಮೊದಲನೆ ಮಹಾಯುದ್ಧ ಮುಗಿದು ಶಾಂತಿಕೌಲಾದಾಗ ತುರ್ಕಿದೇಶದ ಖಲೀಫರ ಧಾರ್ಮಿಕ ಮತ್ತು ಭೌಗೋಳಿಕ ಹಕ್ಕುಗಳನ್ನು ಮೊಟಕು ಮಾಡಲಾಯಿತು. ಇಂಗ್ಲೆಂಡ್ ಸಾರ್ವಭೌಮ

ಸರ್ಕಾರ ಇದಕ್ಕೆ ಕಾರಣವಾಗಿತ್ತು. ಭಾರತೀಯ ಮುಸಲ್ಮಾನರು ತಮ್ಮ ಖಲೀಫರಿಗೆ ಆದ ಅವಮಾನವನ್ನು ಸಹಿಸದಾದರು. ಪ್ರತಿಭಟನೆ ಎದ್ದು ನಿಲ್ಲುತ್ತಿತ್ತು, ಪ್ರಸಿದ್ಧ ನಾಯಕರಾಗಿದ್ದ ಸಹೋದರರು ಮುಹಮ್ಮದಾಲಿ ಮತ್ತು ಷೌಕತ್‌ಆಲಿ ಅವರನ್ನು ಸೆರೆಯಲ್ಲಿಡಲಾಯಿತು. ಈ ಅನ್ಯಾಯವನ್ನು ಖಂಡಿಸುವ, ವ್ಯಾಪಕ ಚಳುವಳಿಯನ್ನು ಹಕೀಮ್ ಅಜಮಲ್‌ಖಾನ್, ಅಸಫ್‌ಆಲಿ, ಸ್ವಾಮಿ ಶ್ರದ್ಧಾನಂದ ಮತ್ತು ಗಾಂಧೀಜಿ ಒಟ್ಟುಗೂಡಿ ಸಮಾಲೋಚಿಸಿದರು. ಇದು ರಾಷ್ಟ್ರೀಯ ಗೌರವದ ಪ್ರಶ್ನೆ ಎಲ್ಲರೂ ಒಟ್ಟಾಗಿ ದುಡಿಯೋಣ ಎಂದರು ಗಾಂಧೀಜಿ. ಸ್ವದೇಶೀ ಚಳುವಳಿ, ವಿದೇಶೀ ವಸ್ತು ಬಹಿಷ್ಕಾರ ಮತ್ತು ಸರ್ಕಾರದೊಡನೆ ಸಂಪೂರ್ಣ ಅಸಹಕಾರ ಇವು ಸತ್ಯಾಗ್ರಹದ ಪ್ರಬಲ ಅಸ್ತ್ರಗಳು. ಶಾಂತಿಯುತವಾಗಿ ನೈತಿಕ ಶಕ್ತಿಯಿಂದ ನಿರ್ಭಯವಾಗಿ ಎದುರುನಿಲ್ಲಲು ಒಂದು ಸಂಘಟನೆ ಸಿದ್ಧವಾಯಿತು. ಮುಸಲ್ಮಾನ ಸಮಾಜ ಗಾಂಧೀಜಿಯ ನೇತೃತ್ವ ಅಂಗೀಕರಿಸಿ ಮುನ್ನಡೆಯಲು ನಿರ್ಧರಿಸಿತು.

ಇದೇ ವೇಳೆಗೆ ಬ್ರಿಟಿಷ್ ಸರ್ಕಾರ ಆಡಳಿತ ಸುಧಾರಣೆಗಳನ್ನು ಭಾರತದಲ್ಲಿ ತರಲು ಉದ್ದೇಶಿಸಿತು. ಮಾಂಟೆಗೂ ಚೆಲ್ಮ್‌ಸ್‌ಫರ್ಡ್ ಸುಧಾರಣೆಗಳು ಎಂದು ಪ್ರಸಿದ್ಧವಾದ ಈ ಕಣ್ಣೊರೆಸುವ ಸಲಹೆಗಳನ್ನು ಅಮೃತಸರ ಕಾಂಗ್ರೆಸ್ ನಿರಾಕರಿಸಿತು. ಗೌರವಯುತ ಸ್ವಯಮಾಡಳಿತ ವ್ಯವಸ್ಥೆಯೊಂದೇ ಭಾರತದ ದುಃಸ್ಥಿತಿಯನ್ನು ಪರಿಹರಿಸಬಲ್ಲದು. ಸಾಮ್ರಾಜ್ಯದೊಳಗೇ ಇದ್ದು ರಾಷ್ಟ್ರದೊಳಗಿನ ಎಲ್ಲ ಆಡಳಿತವನ್ನೂ ಭಾರತ ಪ್ರಜೆಗಳ ಪ್ರತಿನಿಧಿಗಳಿಗೆ ಒಪ್ಪಿಸಬೇಕು ಎಂದು ಅಧ್ಯಕ್ಷ ಮೋತೀಲಾಲರು ಘೋಷಿಸಿದರು.

ಕಾಂಗ್ರೆಸ್ಸಿಗೆ ಒಂದು ಹೊಸ ಅಂಗರಚನೆ ರಚಿಸಲು ಗಾಂಧೀಜಿಯ ನೇತೃತ್ವದಲ್ಲಿ ಒಂದು ಸಣ್ಣ ಸಮಿತಿ ನೇಮಿಸಿದರು. ತಿಲಕರು ಚಿತ್ತರಂಜನ ದಾಸರು ಬೆಂಬಲಿಸಿದರು. ಸದಸ್ಯರ ಕರ್ತವ್ಯ ಮತ್ತು ಹಕ್ಕುಗಳನ್ನಲ್ಲದೆ ಪ್ರತಿಯೊಬ್ಬರೂ ರಾಷ್ಟ್ರದ ಪುನರ್ನಿರ್ಮಾಣ ಕಾರ್ಯದಲ್ಲೂ ಸಂಘಟಿತವಾಗಿ

ತೊಡಗುವಂತೆ ಗಾಂಧೀಜಿ ಕಾಂಗ್ರೆಸ್ಸಿಗೆ ಹೊಸ ತಿರುವು ಕೊಟ್ಟರು. ಸ್ವರಾಜ್ಯ ಸಂಗ್ರಾಮದ ಚರಿತ್ರೆಯಲ್ಲಿ ಇದೊಂದು ಮೈಲಿಗಲ್ಲು.

1920ರಲ್ಲಿ ಖಿಲಾಫತ್ ಚಳುವಳಿ ಬಿರುಸಾಯಿತು. ಮೌಲಾನಾ ಅಬ್ದುಲ್ ಕಲಾಮ್ ಅಜಾದ್ ಗಾಂಧೀಜಿಗೆ ಉತ್ಸಾಹೀ ಬೆಂಬಲಿಗರಾದರು. 1920ರ ಮಾರ್ಚಿ 11 ರಂದು ರಾಷ್ಟ್ರೀಯ ಶೋಕದಿನ ಆಚರಿಸಿ ನಂತರ ಅಸಹಕಾರ ಚಳುವಳಿಗೆ ಕರೆಕೊಡಲು ಗಾಂಧೀಜಿ ಘೋಷಿಸಿದರು. ವಾಯುವ್ಯ ಪ್ರಾಂತಗಳ ಮುಸ್ಲಿಮರನೇಕರು 'ಹಿಜರತ್' ಚಳುವಳಿ ಆರಂಭಿಸಿ ಅಫ್ಘಾನಿಸ್ತಾನಕ್ಕೆ ವಲಸೆ ಹೋದರು. ಗಡಿನಾಡಿನ ಧೀರನಾಯಕ ಖಾನ್ ಅಬ್ದುಲ್ ಗಫಾರ್‌ಖಾನ್ ಚಳುವಳಿಗೆ ಧುಮುಕಿದರು.

1920ರ ಆಗಸ್ಟ್ ಒಂದರಿಂದ ಮೊದಲ ರಾಷ್ಟ್ರವ್ಯಾಪೀ ಅಸಹಕಾರ ಆಂದೋಲನ ಪ್ರಾರಂಭಿಸಲು ಗಾಂಧೀಜಿ ನಿರ್ಣಯಿಸಿದರು. ಹಠಾತ್ತನೆ ಜುಲೈ 26ರಂದು ಲೋಕಮಾನ್ಯ ತಿಲಕರು ತೀವ್ರ ಅಸ್ವಸ್ಥರಾದರು. ಆಗಸ್ಟ್ ಒಂದರಂದೇ ರಾತ್ರಿ ಅವರು ಬೊಂಬಾಯಿನಲ್ಲಿ ಸ್ವರ್ಗಸ್ಥರಾದರು. ಭಾರತೀಯ ಆಗಸದಲ್ಲಿ ಒಂದು ಮಹಾಜ್ಯೋತಿ ಕಳಚಿಬಿದ್ದು ಅಸ್ತಂಗತವಾಯಿತು. ಎಲ್ಲರೂ ಬೊಂಬಾಯಿಗೆ ಧಾವಿಸಿ ಬಂದರು. ದೇಶವೇ ಶೋಕದಲ್ಲಿ ಮುಳುಗಿತು. ಗಾಂಧೀಜಿ, ಡಾಕಿಚ್ಲೂ, ಷೌಕತ್‌ಆಲಿ ಮುಂತಾದ ಪ್ರಮುಖ ನಾಯಕರು ತಿಲಕರ ಶವಹೊತ್ತು ಗೌರವ ಸೂಚಿಸಿದರು. ಬೊಂಬಾಯಿನ ಚೌಪಾತಿಯಲ್ಲಿ ಲಕ್ಷೋಪಲಕ್ಷ ಜನರ ಜೈಕಾರದ ಮಧ್ಯೆ ತಿಲಕರ ಮೃತದೇಹಕ್ಕೆ ಅಗ್ನಿಸ್ಪರ್ಶಮಾಡಲಾಯಿತು.

ಗಾಂಧೀಜಿ ತಮ್ಮ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಹೀಗೆ ಬರೆದರು

> "ಲೋಕಮಾನ್ಯರಷ್ಟು ಸುಸಂಗತವಾಗಿಯೂ ದೃಢವಾಗಿಯೂ ಸ್ವರಾಜ್ಯ ಸಂದೇಶವನ್ನು ಸಾರಿದವರು ಬೇರೊಬ್ಬರಿಲ್ಲ. "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು" ಎಂದ ವೀರರವರು. ಅವರ ಶಾಶ್ವತ ಸತ್ವ ನಮ್ಮಲ್ಲಿ ಸದಾ ಜಾಗೃತವಾಗಿರುತ್ತದೆ. ನಮ್ಮ

ಬದುಕಿನೊಡನೆ ಅವರ ಸರಳ ಜೀವನ, ಅದ್ಭುತ ಪರಿಶ್ರಮ, ತ್ಯಾಗ ಮತ್ತು ರಾಷ್ಟ್ರಪ್ರೇಮ ಶಾಶ್ವತವಾಗಿ ಹೆಣೆದುಕೊಂಡಿದೆ. ಭಾರತದಲ್ಲಿ ಅವರ ಕೀರ್ತಿ ಆಚಂದ್ರಾರ್ಕವಾಗಿ ನಿಲ್ಲುತ್ತದೆ."

(iii) ಅರೆನಗ್ನ ಫಕೀರ

ಬೊಂಬಾಯಿನ ಖಿಲಾಫತ್ ಸಮ್ಮೇಳನದ ನಂತರ ಗುಜರಾತ್ ರಾಜಕೀಯ ಸಮ್ಮೇಳನ ಗಾಂಧೀಜಿಯ ಅಸಹಕಾರ ಆಂದೋಲನ ನಿರ್ಣಯವನ್ನು ಅಂಗೀಕರಿಸಿತು. ವಲ್ಲಭಾಯಿ ಪಟೇಲ್ ಮುಂತಾದವರು ಅಬ್ಬಾಸ್ ತಯಾಬ್ಜಿ ಬೆಂಬಲಿಸಿದರು. 1920ರ ಸೆಪ್ಟೆಂಬರ್ 20 ರಂದು ಕಲ್ಕತ್ತೆಯಲ್ಲಿ ವಿಶೇಷ ಕಾಂಗ್ರೆಸ್ ಅಧಿವೇಶನ ಸೇರಿತು. ಪಂಜಾಬಿನ ಲಾಲಾ ಲಜಪತರಾಯ್ ಅಧ್ಯಕ್ಷರು. ಗಾಂಧೀಜಿ ಅಸಹಕಾರ ನಿರ್ಣಯ ಸೂಚಿಸಿದ್ದರು. ರಾಷ್ಟ್ರನಾಯಕರ ಅಗ್ರಪಂಕ್ತಿ ಹೇಗೆ ಸ್ವೀಕರಿಸುವುದೋ ಎಂದು ಚಿಂತಿಸಿದರು. ಷೌಕತ್ ಆಲಿ, ಪಂಡಿತ ಮಾಳವೀಯ, ಮೌಲಾನಾ ಅಜಾದ್, ಮೋತಿಲಾಲ್ ನೆಹರು, ವಿಜಯರಾಘದಾಚಾರ್, ಶ್ರೀಮತಿ ಆನಿಬಸೆಂಟ್, ಚಿತ್ತರಂಜನದಾಸ್ ಉಪಸ್ಥಿತರಿದ್ದರು. ಕೇವಲ ಪಂಜಾಬ್ ಸಮಸ್ಯೆ ಮತ್ತು ಖಿಲಾಫತ್ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಈ ಕ್ರಮವನ್ನು ಗಾಂಧೀಜಿ ಸೂಚಿಸಿದ್ದರು ಆದರೆ ಸ್ವರಾಜ್ಯವೇ ನಮ್ಮ ಮುಖ್ಯ ಬೇಡಿಕೆ ಅದನ್ನು ಸೇರಿಸಿ ಎಂದರು ವಿಜಯರಾಘವಾಚಾರ್ಯರು. ಆಗತಾನೆ ಅಗಲಿದ್ದ ಮಹಾನಾಯಕ ಲೋಕಮಾನ್ಯ ತಿಲಕರ ನೆನಪಾಯಿತು. "ಸ್ವರಾಜ್ಯ ನನ್ನ ಜನ್ಮಸಿದ್ಧಹಕ್ಕು ಅದನ್ನು ಪಡದೇ ತೀರುತ್ತೇವೆ." ಎಂಬ ಅವರ ಘೋಷವಾಕ್ಯ ಸ್ಫೂರ್ತಿಯಾಯಿತು. ಸಾಧ್ಯವಾದರೆ ಸಾಮ್ರಾಜ್ಯದೊಳಗೇ ಇಲ್ಲದಿದ್ದರೆ ಅದನ್ನು ತೊರೆದು ಸ್ವರಾಜ್ಯಗಳಿಸುವುದೇ ನಮ್ಮ ಪ್ರಧಾನ ಗುರಿ ಅದಕ್ಕಾಗಿ ರಾಷ್ಟ್ರಾದ್ಯಂತ ಅಸಹಕಾರ ಮತ್ತು ಸವಿನಯ ಶಾಸನಭಂಗ ಚಳುವಳಿಗಳು ಆಗಬೇಕು ಎಂದು 1921ರಲ್ಲಿ ನಾಗಪುರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನ ತೀರ್ಮಾನಿಸಿತು. ವಿಜಯರಾಘವಾಚಾರ್ಯರು ಅಂದಿನ ಅಧ್ಯಕ್ಷರು. ಹದಿನೈದು ಸಾವಿರಕ್ಕೂ ಮೀರಿ

ದೇಶಭಕ್ತರು ಅಲ್ಲಿ ಸೇರಿದ್ದರು, ಗಾಂಧೀಜಿಯೇ ಆ ಚಳುವಳಿಯ ನೇತಾರರಾಗಬೇಕು ಎಂದು ಕೋರಲಾಯಿತು. ರಾಷ್ಟ್ರೀಯ ಕಾಂಗ್ರೆಸ್ ಸಂಪೂರ್ಣವಾಗಿ ಗಾಂಧೀ ಪ್ರಭಾವದೊಳಗೆ ಪ್ರವೇಶಿಸಿತು. ಆಗವರಿಗೆ ಐವತ್ತೆರಡು ವರ್ಷ.

ಹಿಂದೂ ಮುಸಲ್ಮಾನ ಐಕ್ಯತೆ, ಅಸ್ಪೃಶ್ಯತಾ ನಿವಾರಣೆ ಮತ್ತು ಖಾದಿ ಧಾರಣೆ ಅಂಗೀಕರಿಸಿ ನಿರ್ಣಯಗಳಾದವು, ಜನಕೋಟಿಯೊಡನೆ ಕಾಂಗ್ರೆಸ್ ಏಕರಸವಾಗಿ ವಿಲೀನವಾಯಿತು. ಬಡವರೊಡನೆ ಸಂಲಗ್ನವಾಗಲು ಖಾದಿ ಕಾರ್ಯಕ್ರಮ ಅತ್ಯಂತ ಜನಪ್ರಿಯ ಚಳುವಳಿಯಾಯಿತು. ಚರಕ ರಾಷ್ಟ್ರಧ್ವಜದ ಕೇಂದ್ರದಲ್ಲಿ ಕಂಗೊಳಿಸಿತು.

ಈ ಘಟ್ಟಕ್ಕೆ ಬಂದನಂತರ ಗಾಂಧೀಜಿಯ ಜೀವನ ರಾಷ್ಟ್ರದ ಚರಿತ್ರೆಯೊಡನೆ ಬೆರತು ಹೋಯಿತು. ಅಂತಯೇ ಅವರು ತಮ್ಮ ಆತ್ಮಕಥನವನ್ನು 1921ಕ್ಕೆ ನಿಲ್ಲಿಸಿದ್ದಾರೆ. ಮುಂದಿನದೆಲ್ಲ ಎಲ್ಲರಿಗೂ ತಿಳಿದ ತೆರೆದ ಪುಸ್ತಕ ಎಂದು ಬಿಟ್ಟರು. ಆತ್ಮಕಥೆಯ ಕೊನೆಯಲ್ಲಿ "ಬೀಳ್ಕೊಡಿಗೆ" ಎಂದು ಬರೆಯುತ್ತಾ ಹೀಗೆ ಹೇಳಿದ್ದಾರೆ ;–

> "ನನ್ನ ಈ ಸತ್ಯಶೋಧನೆಗೆ ನಾನು ಮಹತ್ವನೀಡಿದ್ದೇನೆ. ಕಾರಣ ನನ್ನ ಸತತ ಅನುಭವದಿಂದ ಸತ್ಯವಲ್ಲದೆ ಬೇರೆ ದೇವರಿಲ್ಲ ಎಂಬ ದೃಢವಾದ ನಂಬಿಕೆ ಬಂದಿದೆ. ಸತ್ಯಸಾಕ್ಷಾತ್ಕಾರಕ್ಕೆ ಇರುವುದು ಒಂದೇದಾರಿ ಅಹಿಂಸೆ. ನನ್ನ ಕಥೆ ಇದನ್ನು ಸಾರದಿದ್ದಲ್ಲಿ ಅದು ವ್ಯರ್ಥ. ನಾನೆಷ್ಟು ಅಪೂರ್ಣ ವ್ಯಕ್ತಿಎಂದು ಬಲ್ಲೆ. ಸತ್ಯ ನಿಷ್ಠೆಯ ಅತ್ಯಮೋಘ ಶಕ್ತಿಯನ್ನರಿಯಲು ನನ್ನದೊಂದು ಕಿರಣಮಾತ್ರ. ಸತ್ಯದ ಪೂರ್ಣ ಸಾಕ್ಷಾತ್ಕಾರಮಾಡಿಕೊಳ್ಳಲು ಸೃಷ್ಟಿಯಲ್ಲಿ ಅತಿಕನಿಷ್ಟ ಜೀವಜಂತುವನ್ನೂ ಪ್ರೀತಿಸುವ ಅಹಿಂಸೆಯನ್ನು ಸಾಧಿಸಿಕೊಳ್ಳಬೇಕು. ಇಂಥ ಸಾಧಕ ಜೀವನದ ಯಾವ ಕ್ಷೇತ್ರಕ್ಕೂ ವಿಮುಖನಾಗಲಾರ. ಆದ್ದರಿಂದಲೇ ನನ್ನ

ಸತ್ಯಾನ್ವೇಷಣೆ ನನ್ನನ್ನು ರಾಜಕೀಯ ಕ್ಷೇತ್ರಕ್ಕೂ ಎಳೆತಂದಿದೆ. ಇದೇ ನನ್ನ ಧರ್ಮ. ರಾಜಕೀಯಕ್ಕೂ ಧರ್ಮಕ್ಕೂ ಏನೂ ಸಂಬಂಧವಿಲ್ಲ ಎನ್ನುವವರಿಗೆ ಧರ್ಮ ಎಂದರೇನು ಎಂದು ತಿಳಿಯದು ಎಂದು ವಿನೀತನಾಗಿ ಆದರೆ ಖಚಿತವಾಗಿ ಹೇಳಬಯಸುತ್ತೇನೆ. ಆತ್ಮಶುದ್ಧಿಯೇ ಪರಮಶ್ರೇಷ್ಠಮಾರ್ಗ, ಜೀವನದ ಸಮಸ್ತ ಕ್ಷೇತ್ರವೂ ಪರಿಶುದ್ಧವಾಗಬೇಕು. ವ್ಯಕ್ತಿ ಪರಿಶುದ್ಧನಾಗಿ ನಡೆದರೆ ವಾತಾವರಣವೇ ಶುಭ್ರವಾಗುತ್ತದೆ. ಕಾಯಾ ವಾಚಾ ಮನಸಾ ಶುದ್ಧರಾಗಿ, ರಾಗದ್ವೇಷಗಳಿಗೆ ಬಲಿಯಾಗದೆ ಪ್ರಾಮಾಣಿಕರಾಗಿ ಅತ್ಯಂತ ನಮ್ರತೆಯಿಂದ ಅಹಿಂಸಾಪಥ ಅನುಸರಿಸಲು ಭಗವಂತ ಶಕ್ತಿಕೊಡಲಿ ಎಂದು ಪ್ರಾರ್ಥಿಸುತ್ತ ಮುನ್ನಡೆಯುತ್ತೇನೆ."

1920ರ ಆಗಸ್ಟ್ ಕೊನೆಯ ವೇಳೆಗೆ ದೇಶದಲ್ಲಿ ಎಲ್ಲೆಲ್ಲೂ ಜನತೆಯ ಪ್ರತಿಭಟನೆಯ ಉತ್ಸಾಹ ಚಿಮ್ಮುತ್ತಿತ್ತು. ರಾಷ್ಟ್ರೀಯ ಕಾಂಗ್ರೆಸ್ ಸರ್ವಾನುಮತದಿಂದ ಸತ್ಯಾಗ್ರಹ ಸಮರಕ್ಕೆ ಸಿದ್ಧವಾಗಿತ್ತು. ಚಳುವಳಿಯ ಘೋಷಣೆಯನ್ನೂ ಮಾಡಿ ಗಾಂಧೀಜಿಯ ವಿನೂತನ ಸಮರಾರಂಭದ ಖಚಿತ ಹೆಜ್ಜೆಗಳಿಗೆ ಕಾದುನಿಂತಿತು. ಸಂಪೂರ್ಣ ಜವಾಬ್ದಾರಿಯ ಹೊಣೆಹೊತ್ತ ಬಾಪೂಜಿ ದಿನ ದಿನವೂ ತಮ್ಮ ಅಭಿಪ್ರಾಯಗಳನ್ನೂ ಜನತೆಯ ಹೊಣೆಗಾರಿಕೆಗಳನ್ನೂ ಸ್ಪಷ್ಟವಾಗಿ ಸಾರುತ್ತ ದೇಶದಲ್ಲೆಲ್ಲ ಸಂಚಾರಮಾಡಿದರು.

"ಪಶುಬಲದ ಈ ಯುಗದಲ್ಲಿ ಅದರ ಪರಮಾಧಿಕಾರವನ್ನು ನಿರಾಕರಿಸಿ ಪ್ರತಿಭಟಿಸಿ ನಿಲ್ಲಲು ಸಾಧ್ಯ ಎಂದು ಯಾರೂ ನಂಬರು. ...ಕತ್ತಿಯ ಸಿದ್ಧಾಂತದ ಪ್ರಭಾವ ಬಹುಸಂಖ್ಯಾತರನ್ನು ಪ್ರಬಲವಾಗಿ ಆವರಿಸಿದೆ. ಅಸಹಕಾರ ಚಳುವಳಿಯ ಯಶಸ್ಸು ಪ್ರಧಾನವಾಗಿ ಪೂರ್ಣ ಅಹಿಂಸಾಪಾಲನೆಯಮೇಲೆ ನಿಂತಿದೆ... ಪೇಡಿತನ ಅಥವ ಹಿಂಸೆ ಈ ಎರಡೇದಾರಿ ಇದ್ದಲ್ಲಿ ಹಿಂಸೆಯನ್ನೇ ಆರಿಸಿಕೊಳ್ಳಬಹುದು. ಸಶಸ್ತ್ರದಂಗೆಗೂ ಕಠಿಣಶಿಕ್ಷಣ ಅಗತ್ಯ.

ಭಾವಾವೇಶದ ದೊಂಬಿಯಿಂದ ಏನೂ ಸಾಧಿಸಲಾಗದು. ಆತ್ಮ ಗೌರವ ರಕ್ಷಣೆಗಾಗಿ ಭಾರತ ಶಸ್ತ್ರ ಧರಿಸಬೇಕಾದರೂ ಅಡ್ಡಿಯಿಲ್ಲ. ಹೇಡಿತನದಿಂದ ಅಪಮಾನಕ್ಕೆ ತುತ್ತಾಗುವುದಾಗಲಿ ನಿಸ್ಸಹಾಯಕವಾಗಿ ನಿಲ್ಲುವುದಾಗಲಿ ಸರ್ವಥಾ ಯೋಗ್ಯವಲ್ಲ, ಆದ್ದರಿಂದ ಭಾರತ ದುರ್ಬಲ ಎಂದು ಭಾವಿಸಿ ಅಹಿಂಸೆಯನ್ನನುಸರಿಸಬೇಕು ಎಂದು ನಾನು ಕೇಳುತ್ತಿಲ್ಲ. ತನ್ನ ಬಲಸಾಮರ್ಥ್ಯಗಳ ಪ್ರಜ್ಞೆಯಿಂದಲೇ ಅಹಿಂಸಾತ್ಮಕ ಸಮರ ಹೂಡಲಿ ಎಂದು ನನ್ನ ಮತ. ಅಜೇಯ ಆತ್ಮಶಕ್ತಿ ಒಂದುಂಟು ಅದು ಇಡೀ ಜಗತ್ತಿನ ಭೌತಿಕ ಶಕ್ತಿ ಸಂಘಟನೆಯನ್ನೆಲ್ಲ ಪ್ರತಿಭಟಿಸಿ ನಿಲ್ಲಬಲ್ಲದು ಎಂದು ತಿಳಿದುಕೊಳ್ಳುವುದೇ ಸತ್ಯಾಗ್ರಹದ ಅಡಿಗಲ್ಲು. ಕತ್ತಿಯ ಸಿಧ್ಧಾಂತವನ್ನನುಸರಿಸಿ ಒಂದು ವೇಳೆ ಭಾರತ ಕ್ಷಣಿಕ ವಿಜಯ ಸಾಧಿಸುವುದಾದರೆ ಅದು ನನ್ನ ಅಭಿಮಾನದ ಹೆಮ್ಮೆಯ ಭಾರತ ಆಗಲಾರದು. ಭಾರತ ಕುರುಡಾಗಿ ಯುರೋಪನ್ನನುಕರಿಸಬಾರದು. ಅಹಿಂಸಾಧರ್ಮದ ಮೂಲಕ ಭಾರತದ ಸೇವೆಗಾಗಿ ನನ್ನ ಜೀವನದ ಸರ್ವಸ್ವವೂ ಸಮರ್ಪಿತ."

ಆಗಸ್ಟ 11ರ "ಯಂಗ್ ಇಂಡಿಯಾ" ಪತ್ರಿಕೆಯಲ್ಲಿ ಮೊಳಗಿದ ಗಾಂಧೀಜಿಯ ಪಾಂಚಜನ್ಯದ ಘೋಷ ಇದು. ವಾರ ವಾರವೂ ಸಮರ ಸಂದೇಶ ಹೊತ್ತು ಗಾಂಧೀವಾಣಿ ಲಕ್ಷೋಪಲಕ್ಷ ಹೃದಯಗಳಲ್ಲಿ ಪ್ರತಿಧ್ವನಿಸಿ ಜನ ಮಾನಸವನ್ನು ಗೆದ್ದು ನಿಲ್ಲುತ್ತಿತ್ತು.

1921 ರಲ್ಲಿ ಇಂಗ್ಲೆಂಡ್ ರಾಜಮನೆತ್ತನದ ಡ್ಯೂಕ್ ಆಫ್ ಕೆಂಟರು ಭಾರತಕ್ಕೆ ಬಂದರು. ಗಾಂಧೀಜಿ ಅವರನ್ನುದ್ದೇಶಿಸಿ "ವ್ಯಕ್ತಿಗತ ವಿರೋಧ ನಮಗೆ ಯಾವ ಇಂಗ್ಲೀಷರ ಬಗ್ಗೆಯೂ ಇಲ್ಲ. ಇಂಗ್ಲೆಂಡಿನ ವಿನಾಶ ನಮ್ಮ ಗುರಿಯೂ ಅಲ್ಲ. ಭಾರತದ ದೈಹಿಕ ಮಾನಸಿಕ ಮತ್ತು ಅಧ್ಯಾತ್ಮಿಕ ಜೀವನವನ್ನೇ ನಿರ್ವೀರ್ಯಗೊಳಿಸಿರುವ ನಿಮ್ಮ ಪದ್ಧತಿಯನ್ನು ನಿರ್ಮೂಲ ಮಾಡುವುದು ನಮ್ಮ ಉದ್ದೇಶ. ಒಂದು ಲಕ್ಷ ಇಂಗ್ಲಿಷರು ಮೂವತ್ತು ಮೂರು ಕೋಟಿ

ಭಾರತೀಯರನ್ನು ನಿರಂತರ ಪ್ರಾಣ ಭೀತಿಗೆ ಗುರಿಮಾಡಿ ಸತತ ದಾಸ್ಯ ದಾರಿದ್ರ್ಯಗಳಿಗೆ ನೂಕಿಬಿಡುವುದು ನಿಮಗೆ ಭೂಷಣವೂ ಅಲ್ಲ ; ನಾವೂ ಅದನ್ನು ಸಹಿಸಲಾರೆವು." ಎಂದು ಬರೆದರು.

ರಾಷ್ಟ್ರದಲ್ಲೆಲ್ಲ ಪ್ರಚಂಡ ಸಭೆಗಳನ್ನು ದ್ವೇಶಿಸಿ ಮಾತನಾಡುತ್ತಾ ಗಾಂಧೀಜಿ ಮತ್ತು ಅನುಯಾಯಿಗಳು ಅಸಹಕಾರಕ್ಕೆ ಕರನೀಡಿದರು ಅವರೊಡನೆ ಆಲಿ ಸಹೋದರರು, ಆಜಾದರು, ಚಿತ್ತರಂಜನದಾಸ್, ಮೋತಿಲಾಲ್ ನೆಹರು ಸರೋಜಿನಿದೇವಿ ಜವಹರಲಾಲರೇ ಮುಂತಾದವರು ಪಾದರಸದಂತೆ ಓಡಾಡಿದರು. ಎಲ್ಲೆಲ್ಲೂ ಸಮರೋತ್ಸಾಹ. ಮನೆ ಮನೆಯಲ್ಲಿ, ಹಳ್ಳಿ ಹಳ್ಳಿಗಳಲ್ಲಿ ಚರಕದ ಝೇಂಕಾರನಾದ ಹೊಮ್ಮುತ್ತಿತ್ತು. ಖಾದಿ ನಮ್ಮ ಸ್ವಾತಂತ್ರ್ಯದ ಸಂಕೇತ ವಸ್ತ್ರ ಎಂದರು ಜವಹರಲಾಲ್. ಆವರಾಗ ಮೂವತ್ತರ ಹರೆಯದ ನವಯುವಕರು ಸರ್ಕಾರಿ ಶಾಲೆಗಳನ್ನು ಬಹಿಷ್ಕರಿಸಿದ ವಿದ್ಯಾರ್ಥಿಗಳಿಗಾಗಿ ನೂರಾರು ದೇಶೀಯ ಸ್ವತಂತ್ರ ವಿದ್ಯಾಲಯಗಳು ಪ್ರಾರಂಭವಾದವು. ಗಾಧೀಜಿಯೇ ಅಹಮದಾಬಾದಿನಲ್ಲಿ ಗುಜರಾತ್ ವಿದ್ಯಾಪೀಠ ಪ್ರಾರಂಭಿಸಿದರು. ಆಲಿಘಡದ ಮುಸ್ಲಿಮ್ ವಿದ್ಯಾಲಯ, ಪಾಟ್ನಾದ ರಾಷ್ಟ್ರೀಯ ವಿದ್ಯಾಲಯ, ಕಲ್ಕತ್ತದಲ್ಲಿ ಅನೇಕ ದೇಶೀಯ ವಿದ್ಯಾಶಾಲೆಗಳು ತಲೆಯೆತ್ತಿ ನಿಂತವು. ಮದ್ರಾಸ್, ಬೆಂಗಳೂರು, ಬೊಂಬಾಯಿಗಳಲ್ಲೂ ಪ್ರಮುಖ ದೇಶೀಯ ವಿದ್ಯಾ ಮಂದಿರಗಳು ತೆರೆದವು.

ಅನೇಕಸಹಸ್ರ ವಿದ್ಯಾರ್ಥಿಗಳು ಸರ್ಕಾರಿ ಶಾಲೆ ತೊರೆದು ಬಂದರು. ಬಹುಪಾಲು ಯುವಕರು ರಾಷ್ಟ್ರಕಾರ್ಯದಲ್ಲಿ ಸ್ವಯಂಸೇವಕರಾದರು. ಬಿರುದಾಂಕಿತರು ಬಿರುದುಗಳನ್ನು ತ್ಯಜಿಸಿದರು. ವಕೀಲರು ಸನ್ನದುಗಳನ್ನು ಬಿಸುಟರು. ಸರ್ಕಾರಿ ಉದ್ಯೋಗಿಗಳು ರಾಜಿನಾಮೆಯಿತ್ತರು. ಅಸಹಕಾರದ ಬಿಸಿ ಸಾಮ್ರಾಜ್ಯವಾದಿಗಳನ್ನು ನಡುಗಿಸಿತು.

ತಿಲಕ್ ಸ್ವರಾಜ್ಯ ನಿಧಿಗೆ ಗಾಂಧೀಜಿ ಒಂದು ಕೋಟಿ ರೂಪಾಯಿಗಳು ಸಂಗ್ರಹ ಮಾಡಿದರು. ಒಂದು ಕೋಟಿ ಸ್ವಯಂ ಸೇವಕರು ಸಿದ್ಧರಾಗಬೇಕು ಎಂದು ಕರೆಯಿತ್ತರು. ಇಪ್ಪತ್ತು ಲಕ್ಷ ಚರಕಗಳನ್ನು ಹಂಚಬೇಕು. ಅಷ್ಟೇ

ಲಕ್ಷ ಜನರಿಗೆ ಉದ್ಯೋಗ ದೊರಕಬೇಕು ಎಂದರು. ನಮ್ಮ ಆತ್ಮಪ್ರೇರಿತ ಪರಿಶ್ರಮದಿಂದ ಸ್ವಾವಲಂಬಿಗಳಾಗಿ ವಿದೇಶೀ ವಸ್ತ್ರ ಬಹಿಷ್ಕರಿಸಿದರೆ ಅಂದೇ ನಾವು ಸ್ವರಾಜ್ಯಕ್ಕೆ ಅರ್ಹರಾಗುತ್ತೇವೆ. ಬ್ರಿಟಿಷರ ಶಕ್ತಿ ಇರುವುದು ನಮ್ಮ ಸಹಕಾರದಿಂದ. ಇದೇ ರಚನಾತ್ಮಕ ಆಂದೋಲನದ ಗುರಿ ಎಂದರು.

1921ರ ಜುಲೈ 31ರಂದು ಬೊಂಬಾಯಿನಲ್ಲಿ ಅತಿ ದೊಡ್ಡ ಸಭೆ. ಗಾಂಧೀಜಿ ಮತ್ತು ಉಮರ್ ಸೋಬಾನಿ ವಿದೇಶೀ ವಸ್ತ್ರಗಳ ಬೆಟ್ಟದಂತಹ ರಾಶಿಗೆ ಬೆಂಕಿಯಿಟ್ಟು ಹೋಳಿ ಮಾಡಿಬಿಟ್ಟರು. ಜನ ತಮ್ಮ ಮೈಮೇಲಿನ ವಿದೇಶೀ ವಸ್ತ್ರಗಳನ್ನೆಲ್ಲ ಆಹುತಿ ಮಾಡಿದರು. ಗಗನಕ್ಕೇರಿದ ಮಹಾಜ್ವಾಲೆ ರಾಷ್ಟ್ರ ಜೀವನದಲ್ಲಿ ಸ್ವಾತಂತ್ರ್ಯ ಜ್ವಾಲೆಯನ್ನು ಪ್ರಬಲಗೊಳಿಸಿ ಲಕ್ಷಾಂತರ ಜನರನ್ನು ಸೆಳೆಯಿತು. ಆಗಸ್ಟ್ 1ರಂದು ತಿಲಕರ ಮೊದಲ ಪುಣ್ಯ ತಿಥಿ. ಚೌಪಾತಿಯಲ್ಲಿ ಪ್ರಚಂಡ ಜನ ಸಮೂಹ. ಗಾಂಧೀಜಿ ವೇದಿಕೆಯೇರಿ ರಾಷ್ಟ್ರ ವ್ಯಾಪೀ ಅಹಿಂಸಾ ಸಮರ ಘೋಷಿಸಿದರು. ವಿದೇಶೀ ವಸ್ತ್ರಗಳ ಮೋಹ, ವ್ಯಾಪಾರದ ಕಪಟ, ದೇಶದ ಅತ್ಯಗಾಧ ಪ್ರಮಾಣದ ಉದ್ಯೋಗ ನಾಶ ಇವೇ ನಮ್ಮ ದಾಸ್ಯದ ಮೂಲ ಕಾರಣಗಳು. ಇವನ್ನು ಮೂಲೋತ್ಪಾದನೆ ಮಾಡುವುದೇ ವಿದೇಶೀ ವಸ್ತ್ರದಹನದ ಸಂಕೇತ. ಸ್ವದೇಶೀ ನಿಷ್ಠೆ ದೃಢ ವಾಗಲಿ. ಖಾದಿ ಧರಿಸಿ ಬಡವರಿಗೆ ಉದ್ಯೋಗ ನೀಡಿ, ಅಸ್ಪೃಶ್ಯರನ್ನು ಬಂಧುಗಳಂತೆ ಸ್ವೀಕರಿಸಿ, ರಾಷ್ಟ್ರಸೇವೆಯಲ್ಲಿ ಸಮಸ್ತ ಬಲಿದಾನಕ್ಕೂ ಸಿದ್ಧ ರಾಗಿ ಎಂದು ಯುವಕರಿಗೂ, ಮಹಿಳೆಯರಿಗೂ ವಿಶೇಷವಾಗಿ ಗಾಂಧೀಜಿ ಮನವಿ ಮಾಡಿದರು. ಸತ್ಯಾಗ್ರಹ ದುಂದುಭಿ ದೇಶವನ್ನೆಲ್ಲ ಆವರಿಸಿ ನಿಂತಿತು.

1921ರ ರಾಷ್ಟ್ರಪರ್ಯಟನೆಯ ಸಮಯ, ಗಾಂಧೀಜಿ ತಮಿಳು ನಾಡಿಗೆ ಬಂದರು ಹಳ್ಳಿಹಳ್ಳಿಯಲ್ಲಿ ರೈತರು ಸ್ವಾಗತಿಸಿದರು. "ರೈತರ ಬರಿಮೈ, ಕೇವಲ ತುಂಡುಬಟ್ಟೆ, ಬಡತನ. ಆದರೆ ಅವರ ಶ್ರಮನಿಷ್ಠೆ ಪ್ರಾಮಾಣಿಕತೆ ಎಷ್ಟು ಉನ್ನತ! ನಾನಿವರ ಪ್ರತಿನಿಧಿ; ನನಗೇಕೆ ಇಷ್ಟು ಬಟ್ಟೆ" ಎಂದುಕೊಂಡರು ಗಾಂಧೀಜಿ. ಅಂಗಿ, ಧೋತರ, ಟೋಪಿ, ಅಂಗವಸ್ತ್ರ

ಹಾಕುತ್ತಿದ್ದರು. ಆ ಕೂಡಲೇ ಸಂಕಲ್ಪಿಸಿಬಿಟ್ಟರು. ಆ ಕ್ಷಣದಿಂದ ಭಾರತದ ಕಟ್ಟಕಡೆಯ ರೈತನಂತೆಯೇ ತುಂಡುಪಂಚೆ, ಹೊದೆಯುವ ದುಪ್ಪಟಿ ಮತ್ತು ಚಪ್ಪಲಿ ಧರಿಸಿ, ತಿರುಚನಾಪಳ್ಳಿಯ ಬೃಹತ್ ಸಭೆಗೆ ಬಂದು ನಿಂತರು. ಇಡೀ ಜನಸ್ತೋಮ "ಉಘೇ" ಎಂದು ಭಾವಾವೇಶದಿಂದ ಕೂಗಿತು. ಆಂದೇ ಬೆಳಿಗ್ಗೆ ತಲೆಯ ಕೂದಲನ್ನೆಲ್ಲ ಕ್ಷೌರ ಮಾಡಿಸಿಬಿಟ್ಟರು. ಅಲ್ಲಿಂದಾಚೆ ಕಡೆಯ ವರೆಗೂ "ಅರೆನಗ್ನ ಫಕೀರ" ಎಂದೇ ಪ್ರಸಿದ್ಧರಾದರು ಗಾಂಧೀಜಿ. ಲೋಕವೇ ವಿಸ್ಮಯದಿಂದ ಈ ಧೀರ ತ್ಯಾಗಿಗೆ ತಲೆ ಬಾಗಿತು.

ಒಮ್ಮೆ ಬ್ರಿಟಿಷ್ ಪ್ರಧಾನಿ ಚರ್ಚಿಲ್ "ಈ ಅರೆನಗ್ನ ಫಕೀರ ಬ್ರಿಟಿಷ್ ಸಾಮ್ರಾಜ್ಯ ಪ್ರತಿನಿಧಿ ವೈಸರಾಯರ ಅರಮನೆಯ ಮೆಟ್ಟಲು ಹತ್ತಿ, ಸರಿ ಸಮಾನನಂತೆ ಸಂಧಾನ ನಡೆಸುವುದನ್ನು ನಾನು ಸಹಿಸಲಾರೆ" ಎಂದು ಅಹಂಕಾರದ ಅಟ್ಟಹಾಸದಿಂದ ನುಡಿದ. ಮುಂದೆ 1932 ರಲ್ಲಿ ಬ್ರಿಟಿಷ್ ಚಕ್ರವರ್ತಿಯೇ ಲಂಡನ್ನಿನಲ್ಲಿ ತನ್ನ ಅರಮನೆಗೆ ಈ ಅರೆನಗ್ನ ಮಹಾತ್ಮನನ್ನು ಅವರ ಉಡುಪಿನಲ್ಲೇ ಗೌರವದಿಂದ ಬರಮಾಡಿಕೊಂಡು ಸತ್ಕರಿಸಬೇಕಾಯಿತು. "ಇದೇ ಉಡುಪಿನಲ್ಲಿ ಹೋಗಿದ್ದಿರಾ" ಎಂದು ಗಾಂಧೀಜಿಯನ್ನು ಪತ್ರಿಕೆಯ ವರು ಕೇಳಿದಾಗ "ಹೌದು, ನಮ್ಮಿಬ್ಬರಿಗೂ ಆಗಿ ಮಿಗುವಷ್ಟು ಬಟ್ಟೆಗಳನ್ನು ಚಕ್ರವರ್ತಿಗಳೇ ಧರಿಸಿದ್ದರಲ್ಲ!" ಎಂದು ಹಾಸ್ಯದ ಚಟಾಕಿ ಹಾರಿಸಿದರು.

1921ರ ನವೆಂಬರ್ 11ಕ್ಕೆ ಬಾರ್ಡೋಲಿಯಲ್ಲಿ ಸವಿನಯ ಶಾಸನ ಭಂಗ ಚಳುವಳಿ ಪ್ರಾರಂಭಿಸಲು ಗಾಂಧೀಜಿ ಯೋಚಿಸಿದರು. ಅಂದೇ ಬೊಂಬಾಯಿನಲ್ಲಿ ಇಂಗ್ಲೆಂಡಿನ ರಾಜಕುಮಾರ, ಪ್ರಿನ್ಸ್ ಆಫ್ ವೇಲ್ಸ್, ಭಾರತ ಭೇಟಿಗಾಗಿ ಬಂದಿಳಿದರು. ವೈಭವಯುಕ್ತ ಸರ್ಕಾರಿ ಸ್ವಾಗತಗಳನ್ನೆಲ್ಲ ದೇಶಕ್ಕೆ ದೇಶವೇ ಬಹಿಷ್ಕರಿಸಿ ಹರತಾಳ ಆಚರಿಸಿತು. ಆದರೆ ಸಿಟ್ಟಿಗೆದ್ದ ಜನ ಜಂಗುಳಿ ಬೊಂಬಾಯಿನಲ್ಲಿ ಅಶಿಸ್ತಿನಿಂದ ದಂಗೆಯೆದ್ದು ವಿಧ್ವಂಸಕ ಭೀಕರ ನಾಶದ ಕಾರ್ಯಗಳಲ್ಲಿ ತೊಡಗಿಬಿಟ್ಟಿತು. ಪೋಲೀಸರು, ಸೈನಿಕರು ಕ್ರೂರವಾಗಿ ದಮನಮಾಡಿದರು. ಅನೇಕರು ಗುಂಡಿನೇಟಿಗೆ, ಲಾಠಿಹೊಡೆತಗಳಿಗೆ ಗುರಿ ಯಾದರು. ಇಡೀ ವಾತಾವರಣ ಹಿಂಸೆಯಿಂದ ತಪ್ತವಾಗಿತ್ತು. ತೀವ್ರವಾಗಿ

ಖತಿಗೊಂಡು ಗಾಂಧೀಜಿ ನವೆಂಬರ್ 19 ರಂದು ಪಶ್ಚಾತ್ತಾಪದಿಂದ ಉಪವಾಸ ಕೈಗೊಂಡರು. ಎಲ್ಲರಿಗೂ ಸಿಡಿಲುಬಡಿದಂತಾಯಿತು. ಪರಸ್ಪರ ಸೌಹಾರ್ದ ಶಾಂತಿನೆಲೆಸುವವರೆಗೆ ಉಪವಾಸ ನಿಲ್ಲಿಸುವುದಿಲ್ಲ ಎಂದರು. ಪರಿಸ್ಥಿತಿ ಹಠಾತ್ತನೆ ಗಂಭೀರವಾಯಿತು. ಎಲ್ಲರೂ ತಮ್ಮ ಕೃತ್ಯಗಳಿಗಾಗಿ ಪಶ್ಚಾತ್ತಾಪಪಟ್ಟರು. ಬೊಂಬಾಯಿ ನಗರ ಮತ್ತೆ ಶಾಂತವಾಯಿತು. ಅಹಿಂಸಾತ್ಮಕ ಪ್ರತಿಭಟನೆಗೆಬೇಕಾದ ಶಿಸ್ತುಸಂಯಮಗಳ ನಿಯಮಪಾಲಿಸುವ ಭರವಸೆ ಬರುವವರೆಗೆ ಸತ್ಯಾಗ್ರಹ ನಡೆಸುವುದಿಲ್ಲ ಎಂದು ಗಾಂಧೀಜಿ ಬಾರ್ಡೋಲಿ ಚಳುವಳಿಯನ್ನು ಮುಂದೆ ಹಾಕಿದರು.

ಪ್ರಿನ್ಸ್ ಆಫ್ ವೇಲ್ಸರ ಭೇಟಿ ಬಹಿಷ್ಕಾರ ಚಳುವಳಿಯಲ್ಲಿ ರಾಷ್ಟ್ರನಾಯಕರೆಲ್ಲರ ದಸ್ತಗಿರಿಯಾಗಿತ್ತು. ಲಾಲಾ ಲಜಪತ್‌ರಾಯ್, ಮೋತಿಲಾಲ್ ನೆಹರು, ಚಿತ್ತರಂಜನದಾಸ್, ಜವಹರಲಾಲ್, ಸುಭಾಷ್‌ಚಂದ್ರ ಬೋಸ್, ಎಲ್ಲರೂ ಸೆರೆಮನೆ ಸೇರಿದ್ದರು. ಲಕ್ಷಾಂತರ ದೇಶಭಕ್ತ ಸ್ವಯಂಸೇವಕರು ಗಾಂಧೀಟೋಪಿ ಧರಿಸಿ ಎಲ್ಲೆಲ್ಲೂ ಬ್ರಿಟಿಷ್ ಸಿಂಹಾಸನದ ಪ್ರತಿನಿಧಿಗೆ ಎದುರಾಗಿ ಹರತಾಳ ಆಚರಿಸಿದರು. ಪೋಲೀಸರು ಗಾಂಧೀಟೋಪಿ ಕಂಡೆಡೆ ಹೌಹಾರಿ ಮೇಲೆ ಬಿದ್ದು ಜನರನ್ನು ದಂಡಿಸುತ್ತಿದ್ದರು, ಸಾಮ್ರಾಜ್ಯದ ಅಡಿಗಲ್ಲುಗಳು ಸಡಿಲವಾಗುತ್ತಿದ್ದ ಚಿನ್ಹೆ ಗಮನಿಸಿ ಪ್ರಿನ್ಸ್ ಆಫ್ ವೇಲ್ಸ್ ಹಿಂತಿರುಗಬೇಕಾಯಿತು.

'ಒಂದು ವರ್ಷದಲ್ಲಿ ಸ್ವರಾಜ್ಯ' ಎಂದು ಕಲ್ಕತ್ತ ಕಾಂಗ್ರೆಸ್ಸಿನಲ್ಲಿ ಗಾಂಧೀಜಿ ಘೋಷಿಸಿದ್ದರು, ವರ್ಷ ಕಳೆಯುತ್ತ ಬಂದಾಗ ದೇಶ ಇನ್ನೂ ಸುಸಂಘಟಿತ ಅಹಿಂಸಾ ಸಮರಕ್ಕೆ ಸಿದ್ಧವಿಲ್ಲ ಎಂದು ತಿಳಿದು ತಮ್ಮ ಸೋಲನ್ನು ಒಪ್ಪಿಕೊಂಡರು. ಆದಗೆ ನೂರ್ಮಡಿ ಉತ್ಸಾಹದಿಂದ ಮುಂದಿನ ಮಹಾಸಮರಕ್ಕೆ ದೇಶಬಾಂಧವರನ್ನು ಸಂಘಟಿಸಿ ಕ್ರಿಯಾತ್ಮಕ ಶಾಂತಿಸಮರಕ್ಕೆ ಸಿದ್ಧಗೊಳಿಸಲು ತೊಡಗಿದರು. ರಾಷ್ಟ್ರದ ಧಮನಿಧಮನಿಗಳಲ್ಲಿ ಸ್ವಾತಂತ್ರ್ಯ ದೀಕ್ಷೆಯ ಮಹಾಸಂಕಲ್ಪ ಧುಮ್ಮಿಕ್ಕಿ ಪ್ರವಹಿಸಿತು. 1921ರ ಡಿಸೆಂಬರಿನಲ್ಲಿ ಅಹಮದಾಬಾದಿನಲ್ಲಿ ಕಾಂಗ್ರೆಸ್ ಅಧಿವೇಶನ. ಅಧ್ಯಕ್ಷ ಸಿ. ಆರ್. ದಾಸರು ಸೆರೆಯ

ಲ್ಲಿದ್ದರು. ಹಕೀಮ ಅಜಮಲ್‌ಖಾನರು ಹಂಗಾಮಿ ಅಧ್ಯಕ್ಷರಾದರು. ಖಾದಿ ಬಟ್ಟೆಗಳಿಂದಲೇ ನಿರ್ಮಿತವಾದ ಬಹತ್ ಮಂಟಪ ಗಾಂಧೀ ನಾಯಕತ್ವದ ಪ್ರಚಂಡ ಪ್ರತೀಕವಾಯಿತು. ಸವಿನಯ ಶಾಸನಭಂಗ, ಅಸಹಕಾರ, ಹರತಾಳ ಮತ್ತು ಎಲ್ಲ ಕಡೆಯೂ ಸ್ವದೇಶೀ ವ್ರತಸ್ವೀಕಾರ ವಿದೇಶೀ ವಸ್ತು ಬಹಿಷ್ಕಾರ ಇವು ರಾಷ್ಟ್ರೀಯ ಸ್ವಾತಂತ್ರ್ಯ ಸಮರದ ಕಾರ್ಯಕ್ರಮ ಎಂದು ಕಾಂಗ್ರೆಸ್ ಘೋಷಿಸಿತು. ಈ ಚಳುವಳಿಯ ನೇತೃತ್ವವನ್ನು ಗಾಂಧೀಜಿಯೇ ವಹಿಸಬೇಕೆಂದು ನಿರ್ಣಯಿಸಿದರು. ಅವರು ಹಾಕುವ ನಿಯಮಗಳಿಗನುಸಾರವಾಗಿ ಎಲ್ಲ ಸ್ವಯಂಸೇವಕರೂ ಶಿಸ್ತಿನಿಂದಲೂ ಶಾಂತಿಯಿಂದಲೂ ನಡೆದುಕೊಳ್ಳಬೇಕು ಎಂದು ಸಂಕಲ್ಪಿಸಿದರು.

(iv) ಚೌರಿಚೌರದ ದುರಂತ

ಬ್ರಿಟಿಷ್ ಸರ್ಕಾರ ಭಾರತದಲ್ಲಿ ವಾಕ್‌ಸ್ವಾತಂತ್ರ್ಯ ಪತ್ರಿಕಾಸ್ವಾತಂತ್ರ್ಯ ಮತ್ತು ಸಂಘ ಸ್ವಾತಂತ್ರ್ಯಗಳನ್ನು ಪ್ರಬಲವಾಗಿ ದಮನಮಾಡಿತು. ದೇಶಪ್ರೇಮೀ ಪತ್ರಿಕೆಗಳು ಕಾನೂನು ಬಾಹಿರವಾದವು. ರಾಷ್ಟ್ರೀಯ ಸಮಸ್ಯೆಗಳನ್ನು ಕುರಿತು ಜನತೆಗೆ ತಿಳಿಸುವುದೇ ಅಪರಾಧವಾಯಿತು. ಮಧ್ಯವರ್ತಿಗಳು ನಡೆಸಿದ ರಾಜೀ ಪ್ರಯತ್ನಗಳು ವಿಫಲವಾದವು. "ಸವಿನಯ ಶಾಸನಭಂಗ ಪೊಂದೇದಾರಿ ಅದು ಕಸಿದುಕೊಳ್ಳಲಾಗದ ಹಕ್ಕು" ಎಂದರು ಗಾಂಧೀಜಿ. ಬಾರ್ದೋಲಿಯಲ್ಲಿ ಕರನಿರಾಕರಣೆ ಚಳುವಳಿ ಪ್ರಾರಂಭಿಸಲು ಕಾಂಗ್ರೆಸ್ ನಿರ್ಣಯಿಸಿತು. ಗಾಂಧೀಜಿಯೇ ಮಾರ್ಗದರ್ಶಕರಾದರು. ಸಂಧಾನ ಅಥವಾ ಹೋರಾಟ ಎರಡೇ ನಮಗಿರುವ ದಾರಿಗಳು ಎಂದು ವೈಸರಾಯರಿಗೆ ಬರೆದು ತಿಳಿಸಿದರು. ಸಂಧಾನಕ್ಕೆ ಬನ್ನಿ ಎಂದು ಪ್ರಾರ್ಥಿಸಿದರು. ಬ್ರಿಟಿಷ್ ಸರ್ಕಾರ ದರ್ಪದಿಂದ ತಿರಸ್ಕರಿಸಿತು.

ಬಾರ್ದೋಲಿಯಲ್ಲಿ ಸತ್ಯಾಗ್ರಹವನ್ನು ಗಾಂಧೀಜಿ ಇನ್ನೇನು ಪ್ರಾರಂಭಿಸುವುದರಲ್ಲಿದ್ದರು. ಶ್ರೀ ವಲ್ಲಭಾಯಿ ಪಟೇಲರು ಜನತೆಯನ್ನು ಅಹಿಂಸಾತ್ಮಕ ಸಮರಕ್ಕೆ ಸಿದ್ಧಮಾಡಿದ್ದರು. ಚೇರೆಕಡೆ ಈಗಲೇ ಬೇಡ ಎಂದು

ಗಾಂಧೀಜಿ ಸೂಚಿಸಿದ್ದರು. ಆದರೂ ಜನ ತಾವೇ ನಿರ್ಣಯಿಸಿಬಿಟ್ಟು ಅನೇಕ ಕಡೆಗಳಲ್ಲಿ ಪ್ರತಿಭಟನಾ ಮೆರವಣಿಗೆಗಳು, ಹರತಾಳಗಳು, ಚಳುವಳಿಗಳು ಪ್ರಾರಂಭವಾಗಿ ಬಿಟ್ಟವು. ಅಗ್ರಪಂಕ್ತಿಯ ನಾಯಕರು ಇನ್ನೂ ಸೆರೆಯಲ್ಲೇ ಇದ್ದರು. ಸರ್ಕಾರದ ದಬ್ಬಾಳಿಕೆಗೆ ಧಿಕ್ಕಾರ ಪ್ರಬಲವಾಯಿತು.

ಉತ್ತರ ಪ್ರದೇಶದ ಗೋರಖಪುರ ಜಿಲ್ಲೆಯ ಸಣ್ಣ ಊರು ಚೌರಿ ಚೌರ ಅಲ್ಲಿ ಮೆರವಣಿಗೆ ಆದಾಗ ಪೋಲೀಸರಿಗೂ ಜನರಿಗೂ ತೀವ್ರ ಘರ್ಷಣೆಯಾಯಿತು. ಜನ ತಾಳ್ಮೆಗೆಟ್ಟು ಆಕ್ರೋಶದಿಂದ ಪೋಲೀಸು ಠಾಣೆಗೆ ಬೆಂಕಿಹಾಕಿದರು. ಇಪ್ಪತ್ತೆಂಟು ಜನ ಪೋಲೀಸರನ್ನು ಜೀವಸಹಿತ ದಹಿಸಿಬಿಟ್ಟರು. ಹಾಹಾಕಾರದ ಜ್ವಾಲೆ ಭುಗಿಲ್ಲೆಂದು ಎದ್ದು ಹಬ್ಬಿತು. ಈ ತಿಳಿಗೇಡಿತನದ ರಾಕ್ಷಸೀ ಕೃತ್ಯ ಕಂಡು ಗಾಂಧೀಜಿಗೆ ವಿಪರೀತ ದುಃಖವಾಯಿತು.

> "ಇದೆಂತಹ ಅಹಿಂಸಕ ಸಮರ ! ಏನು ಅಮಾನುಷ ಕ್ರೂರಕೊಲೆ ಗಡುಕತನ ! ಈ ಅಪ್ರಮಾಣಿಕತೆ ನಾನು ಸಹಿಸಲಾರೆ. ದೇಶಕ್ಕೆ ಇನ್ನೂ ನನ್ನ ಮಾತು ಅರ್ಥವಾಗುತ್ತಿಲ್ಲ. ನಾವಿನ್ನೂ ಸತ್ಯಾಗ್ರಹಕ್ಕೆ ಸಿದ್ಧರಿಲ್ಲ. ಈ ಕ್ಷಣದಿಂದ ಈ ರಾಷ್ಟ್ರೀಯ ಹೋರಾಟವನ್ನು ನಿಲ್ಲಿಸಿದ್ದೇನೆ." ಎಂದು ಘೋಷಿಸಿದರು. ದೇಶಕ್ಕೆ ದಿಗ್ಭ್ರಾಂತಿಯಾಯಿತು. ಸೆರೆಯಲ್ಲಿದ್ದ ನಾಯಕರು ಸಿಟ್ಟಾದರು. ಎಲ್ಲೋ ಒಂದುಕಡೆ ತಪ್ಪಾದರೆ ದೇಶಕ್ಕೆಲ್ಲ ಈ ಖಂಡನೆ ಏಕೆ ? ಎಂದು ಮೋತಿಲಾಲರೂ ಲಾಲಾ ಲಜಪತ ರಾಯರೂ ಸೆರೆಮನೆಯಿಂದಲೇ ಗಾಂಧೀಜಿಯನ್ನು ಪ್ರಶ್ನಿಸಿದರು ಜವಹರಲಾಲರೂ ಈ ಕ್ರಮ ಒಪ್ಪಲಿಲ್ಲ, ಗಾಂಧೀಜಿ ದೃಢವಾಗಿ ಸಂಕಲ್ಪಿಸಿ ಎಲ್ಲರೊಡನೆ ವಾದಿಸಿ ಸತ್ಯಾಗ್ರಹ ನಿಲ್ಲಿಸಬೇಕು ಎಂದು ಒಪ್ಪಿಸಿದರು.

1922ರ ಫೆಬ್ರವರಿ 12 ರಂದು ಈ ಹಿಂಸಾತ್ಮಕ ಘಟನೆಗಳ ಪ್ರಾಯಶ್ಚಿತ್ತಕ್ಕಾಗಿ ಗಾಂಧೀಜಿ ತಾವೇ ಐದು ದಿನಗಳ ಉಪವಾಸ ಪ್ರಾರಂಭಿಸಿದರು.

ಎಲ್ಲರ ಹೃದಯಗಳೂ ತಲ್ಲಣಿಸಿ ತಪ್ಪು ಸ್ಪಷ್ಟವಾಯಿತು, ಗಂಭೀರ ಮೌನ ದೇಶವನ್ನಾವರಿಸಿತು.

"ಈ ದುರಂತದಿಂದ ಪೂರ್ಣಪಾತ ಕಲಿತಲ್ಲಿ ಶಾಪವೂ ಒಂದು ಅನುಗ್ರಹವಾಗುತ್ತದೆ. ಸತ್ಯ ಅಹಿಂಸೆಗಳಲ್ಲಿ ಶ್ರದ್ಧೆಯಿಟ್ಟು ವಿಚಾರ ಆಚಾರಗಳನ್ನು ಸಮನ್ವಯಗೊಳಿಸಿ ಸ್ವದೇಶಿ ಚಳುವಳಿ, ಖಾದಿ, ಮತ್ತಿತರ ರಚನಾತ್ಮಕ ಕಾರ್ಯಕ್ರಮಗಳನ್ನು ಪೂರ್ಣಗೊಳಿಸುವುದಾದರೆ ನಾವು ಸಂಪೂರ್ಣ ಸ್ವರಾಜ್ಯ ಸ್ಥಾಪಿಸಬಲ್ಲೆವು. ಕ್ರೂರ ಹಿಂಸೆಯಿಂದ ಇದು ಸಾಧ್ಯವೇ ಇಲ್ಲ" ಎಂದು 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಗಾಂಧೀಜಿ ಬರೆದರು.

ಈ ದುರಂತವನ್ನು ಬಳಸಿಕೊಂಡು ಬ್ರಿಟಿಷ್ ಸರ್ಕಾರ ಎಲ್ಲ ರಾಷ್ಟ್ರೀಯ ಚಳುವಳಿಗಳನ್ನೂ ಹತ್ತಿಕ್ಕಲು ಪ್ರಬಲ ಪ್ರಯತ್ನ ನಡೆಸಿತು. ಇದು ಗಾಂಧೀಜಿಯ ಸೋಲು ಎಂದು ಪ್ರಚಾರಮಾಡಿ ಅರಾಜಕತೆಗೆ ಅವರು ಪ್ರೋತ್ಸಾಹ ಕೊಟ್ಟರು ಎಂದು ಆಪಾದಿಸಿತು. ಈ ಸವಾಲಿಗೆ ಗಾಂಧೀಜಿ ಯಂಗ್ ಇಂಡಿಯಾದಲ್ಲಿ ಸಾಮ್ರಾಜ್ಯಶಾಹಿಯನ್ನು ಖಂಡಿಸಿ ಮೂರು ಪ್ರಸಿದ್ಧ ಲೇಖನಗಳನ್ನು ಬರೆದರು. ಜನ ತಾಳ್ಮೆಗೆಟ್ಟುದು ನಿಜ. ಅವರು ನಿಶ್ಶಸ್ತ್ರರಾಗಿದ್ದರು. ನಾಯಕರು ಇರಲಿಲ್ಲ. ಸರ್ಕಾರದ ಕ್ರೌರ್ಯ, ಅಮಾನುಷ ಅನಾಗರಿಕ ದಬ್ಬಾಳಿಕೆ, ಅವರನ್ನು ರೊಚ್ಚಿಗೆಬ್ಬಿಸಿದುದು ಆಶ್ಚರ್ಯವೇನಲ್ಲ ಎಂದರು.

ರಾಜದ್ರೋಹದ ಆಪಾದನೆ ಹೊರಿಸಿ 1922ರ ಮಾರ್ಚಿ 11ರಂದು ಸಬರ್ಮತಿ ಆಶ್ರಮದಲ್ಲಿ ಗಾಂಧೀಜಿಯನ್ನು ಸೆರೆಹಿಡಿದು ಮೊಕದ್ದಮೆ ಹೂಡಲಾಯಿತು.

(v) ಮಹಾ ವಿಚಾರಣೆ

ಅಹಮದಾಬಾದಿನ ಬ್ಲೂಮ್ ಫೀಲ್ಡ್ ಎಂಬ ನ್ಯಾಯಾಧೀಶನ ಮುಂದೆ ಗಾಂಧೀಜಿಯನ್ನು ಅಪರಾಧಿ ಎಂದು ತಂದು ನಿಲ್ಲಿಸಿದರು. ಲೇಖನಗಳಿಂದ

ಜನರನ್ನು ರಾಜದ್ರೋಹ ಮಾಡಲು ಪ್ರಚೋದಿಸಿದರು ಎಂದು ಅಪಾದಿಸ ಲಾಗಿತ್ತು. "ನಾನು ಗಾಂಧೀ ವಯಸ್ಸು ಐವತ್ತೆರಡು. ಉದ್ಯೋಗ, ಬೇಸಾಯ ಮತ್ತು ನೇಕಾರಿಕೆ. ಸಬರ್ಮತಿ ಆಶ್ರಮದಲ್ಲಿ ವಾಸ. ಸರ್ಕಾರ ದಲ್ಲಿ ಅವಿಶ್ವಾಸ ಹರಡುವ ಅಪರಾಧಮಾಡಿದ್ದೇನೆ ಎಂದು ಒಪ್ಪಿಕೊಳ್ಳುತ್ತೇನೆ 'ಯಂಗ್ ಇಂಡಿಯಾ' ಸಂಪಾದಕ ಎಂದು ಹೇಳಿಕೆಯನ್ನು ಗಾಂಧೀಜಿ ನ್ಯಾಯಾಲಯದಲ್ಲಿ ಮಂಡಿಸಿದರು. ಶಂಕರಲಾಲ್ ಬ್ಯಾಂಕರ್ ಎರಡನೇ ಅಪರಾಧಿ. ಇಬ್ಬರ ಪರವಾಗಿ ಯಾವ ವಕೀಲರನ್ನೂ ಗೊತ್ತುಮಾಡದೆ ತಾವೇ ವಾದಿಸಿದರು ಗಾಂಧೀಜಿ,

ತೀರ್ಪಿಗೆ ಮುಂಚೆ ಪೂರ್ಣಹೇಳಿಕೆ ಓದಿ ತಿಳಿಸಲು ಗಾಂಧೀಜಿಯನ್ನು ಕೇಳಿದರು. ಆ ಐತಿಹಾಸಿಕ ಹೇಳಿಕೆ ಜಗತ್ತಿನ ಮಹಾಪುರುಷರ ಪಂಕ್ತಿಗೆ ಗಾಂಧೀಜಿಯನ್ನೂ ಏರಿಸಿತು, ಸಾಕ್ರಟೀಸ್, ಏಸು, ಇಂಥ ಶುದ್ಧಾತ್ಮರ ವಿಚಾರಣೆಗಳನ್ನು ನೆನಪಿಗೆ ತಂದಿತು. ಅವರೆಂದರು,

> "ಅಹಿಂಸೆ ನನ್ನ ಪ್ರಪ್ರಥಮ ಧರ್ಮಸಂಹಿತೆ...ನನ್ನ ದೇಶಕ್ಕೆ ಭರಿಸ ಲಾಗದ ಕೇಡುಮಾಡಿರುವ ಈ ವ್ಯವಸ್ಥೆಗೆ ನಾನು ಮಣಿಯ ಲಾರೆ. ಈ ಸತ್ಯವನ್ನು ಜನತೆ ಅರಿತಾಗ ಹುಚ್ಚೆದ್ದು ದಂಗೆ ಮಾಡಿದ್ದಾರೆ. ಹೀಗೆ ನಡೆದಿದ್ದಕ್ಕಾಗಿ ನಾನು ತೀವ್ರ ಪಶ್ಚಾ ತ್ತಾಪ ಪಟ್ಟಿದ್ದೇನೆ. ಅದಕ್ಕಾಗಿ ಕಠಿಣ ಶಿಕ್ಷೆ ಅನುಭವಿಸಲು ನಾನು ಸಿದ್ಧ. ಆದರೆ ಈ ಅಧಿಕಾರಶಾಹಿಯ ಕರುಣೆಯ ಭಿಕ್ಷೆ ಯನ್ನೆಂದಿಗೂ ಬೇಡಲಾರೆ. ಕಾನೂನು ಯಾವುದನ್ನು ಅಪ ರಾಧ ಎನ್ನುತ್ತದೋ ಅದು ಈ ಘಳಿಗೆಯಲ್ಲಿ ನನ್ನ ಕರ್ತವ್ಯ ಎಂದು ತಿಳಿದೇ ಮಾಡಿದ್ದೇನೆ. ಶಿಕ್ಷೆಯನ್ನು ಸಂತೋಷದಿಂದ ಸ್ವಾಗತಿಸುತ್ತೇನೆ. ನಿಮ್ಮ ನ್ಯಾಯಸಂಹಿತೆಯಲ್ಲಿ ನಿಮಗೆ ವಿಶ್ವಾ ಸವಿದ್ದರೆ, ಅದರಿಂದ ಜನಕ್ಕೆ ಕಲ್ಯಾಣವಾಗುತ್ತದೆಂದು ಪ್ರಾಮಾ ಣಿಕವಾಗಿ ಭಾವಿಸಿದ್ದರೆ ನನಗೆ ಶಿಕ್ಷೆ ವಿಧಿಸಲೇಬೇಕಾದುದು ನಿಮ್ಮ ಕರ್ತವ್ಯವಾಗುತ್ತದೆ. ಹಾಗಿಲ್ಲದಿದ್ದರೆ ನಿಮ್ಮ ಸ್ಥಾನಕ್ಕೆ ರಾಜಿ ನಾಮೆ ನೀಡಿ ಈ ವ್ಯವಸ್ಥೆಯನ್ನು ಧಿಕ್ಕರಿಸಿ."

ಮಹಾತ್ಮನಾದ ಈ ಅಪರಾಧಿಗೆ ಗೌರವ ಸಲ್ಲಿಸಿ ನ್ಯಾಯಾಧೀಶ ಬ್ಲೂಮ್ ಫೀಲ್ಡ್ ತಮ್ಮ ತೀರ್ಪನ್ನು ವಿನಯದಿಂದಲೇ ತಿಳಿಸಿ ಹೀಗೆಂದರು :

"ಗಾಂಧಿಯವರೇ, ನೀವು ಅಪರಾಧವನ್ನೊಪ್ಪಿಕೊಂಡು ನನ್ನ ಕೆಲಸವನ್ನು ಹಗುರ ಮಾಡಿದಿರಿ, ಕಾನೂನು ವ್ಯಕ್ತಿಗಳನ್ನು ಗಮನಿಸುವುದಿಲ್ಲ. ಆದರೆ ಈ ದಿನ ನನ್ನ ಮುಂದೆ ನಿಂತಿರುವ ತಾವು ಈ ಹಿಂದೆ ನಿಂತ ಅಥವಾ ಮುಂದೆ ನಿಲ್ಲಬಹುದಾದ ಎಲ್ಲರಿಗಿಂತಲೂ ಭಿನ್ನರಾಗಿದ್ದೀರಿ. ಕೋಟ್ಯಾಂತರ ದೇಶ ಬಾಂಧವರ ದೃಷ್ಟಿಯಲ್ಲಿ ನೀವು ನಿಸ್ಸೀಮ ದೇಶ ಭಕ್ತರು, ಮಹಾತ್ಮರು. ಇದನ್ನು ಹೇಗೆ ಮರೆಯಲಿ. ನನ್ನ ಕರ್ತವ್ಯ ಈ ಪೀಠದಿಂದ ನಿರ್ಣಯಿತವಾಗಿದೆ. ಶಾಸನ ಭಂಗ ಮಾಡುವುದೇ ನಿಮ್ಮ ಕರ್ತವ್ಯ ಎಂದು ತಿಳಿಸಿ ಸಾಧಾರಣನಾದ ನನ್ನಂಥ ಮನುಷ್ಯನ ದೃಷ್ಟಿಯಿಂದ ರಾಜ್ಯಾಧಿಕಾರಕ್ಕೆ ಅಪರಾಧವೆಸಗಿರುವುದು ಸ್ಪಷ್ಟವಾಗಿದೆ. ಹಿಂಸೆಯನ್ನು ನೀವು ಪ್ರಬಲವಾಗಿ ತಡೆಗಟ್ಟಲು ಪ್ರಯತ್ನಿಸಿರುವುದು ನಿಜ. ಆದರೆ ನಿಮ್ಮ ಪ್ರಚಾರದಿಂದ ಆವೇಶಗೊಂಡ ಜನ ವಿಧ್ವಂಸಕ ಹಿಂಸಾ ಕೃತ್ಯಗಳಿಗೆ ಕೈಹಾಕುವುದಿಲ್ಲ ಎಂದು ನಂಬುವುದು ನನಗೆ ಸಾಧ್ಯವಿಲ್ಲ. ನಿಮಗೆ ಸಲ್ಲಬೇಕಾದ ಗೌರವ ಮತ್ತು ನನಗೆ ತೋರಿದಂತೆ ನ್ಯಾಯ ನಿರ್ಣಯಿಸುವ ಕರ್ತವ್ಯ ಇವೆರಡನ್ನು ಗಮನದಲ್ಲಿಟ್ಟು ತೀರ್ಪುಕೊಡುತ್ತಿದ್ದೇನೆ... ಇದೇ ಕಟ್ಟಳೆಯಡಿಯಲ್ಲಿ ಹಿಂದೆ ವಿಚಾರಣೆಗೆ ಗುರಿಯಾಗಿದ್ದ ಲೋಕಮಾನ್ಯ ತಿಲಕರಿಗೆ ಆರು ವರ್ಷಗಳ ಸಾದಾಸಜ ವಿಧಿಸಲಾಯಿತು, ಅದರಂತೆಯೇ ನಿಮ್ಮ ಮೂರು ಲೇಖನಗಳ ಅಪರಾಧಕ್ಕಾಗಿ ನಿಮಗೂ ಆರು ವರ್ಷಗಳ ಶಿಕ್ಷೆಕೊಡುವುದು ನನ್ನ ಕರ್ತವ್ಯ ಎಂದು ತಿಳಿಯುತ್ತೇನೆ. ಆದರೆ ಭಾರತದ ಪರಿಸ್ಥಿತಿಯೇ ಬದಲಾಗಿ ಸರ್ಕಾರ ನಿಮ್ಮನ್ನು ಬಿಡುಗಡೆ ಮಾಡುವುದಾದರೆ ನಾನು ಅತ್ಯಂತ ಹರ್ಷಿಸುತ್ತೇನೆ."

ವಿನಯದಿಂದ ವರ್ತಿಸಿದ ನ್ಯಾಯಾಧೀಶರಿಗೆ ಗಾಂಧೀಜಿ ವಂದಿಸಿದರು. ತಿಲಕರ ಜೊತೆಗೆ ತಮ್ಮ ಹೆಸರು ಸೇರಿಸಿ ಗೌರವಿಸಿದ್ದಕ್ಕಾಗಿ ಹರ್ಷಿಸಿದರು. ಇದಕ್ಕಿಂತ ಹೆಚ್ಚಿನ ಸೌಜನ್ಯ ನಾನು ನಿರೀಕ್ಷಿಸಿರಲಿಲ್ಲ ಎಂದರು. ಈ ವಿಚಾರಣೆಯಲ್ಲಿ ಹಾಜರಿದ್ದ ಕವಿಯತ್ರಿ ಸರೋಜನಿನಾಯ್ಡು ಕವಿಸಹಜವಾಣಿಯಲ್ಲಿ ಹೀಗೆಂದರು ;–

> "ನ್ಯಾಯಾಲಯದ ದೃಷ್ಟಿಯಲ್ಲಿ ಅವರೊಬ್ಬ ಖೈದಿ, ಒಬ್ಬ ಅಪರಾಧಿ ! ಆದರೂ ಗಾಂಧೀಜಿ ಪ್ರವೇಶಿಸಿದೊಡನೆ, ತೆಳುವಾದ ಶರೀರ, ಗಂಭೀರ ಮುಖಮುದ್ರೆ, ತುಂಡು ಬಟ್ಟೆಧರಿಸಿದ ಅಪ್ರತಿಹತ ವ್ಯಕ್ತಿತ್ವದ ಈ ಮಹಾತ್ಮನಿಗೆ ಇಡೀ ನ್ಯಾಯಾಲಯವೇ ಸಹಜ ಪ್ರೇರಣೆಯಿಂದ ಎದ್ದುನಿಂತು ಪ್ರಣಾಮ ಸಲ್ಲಿಸಿತು ...
>
> ಹಿಂದೆ ಇಂಥದೇ ಪ್ರೇಮಸಂದೇಶ ಸಾರಿದ ಏಸು ಶಿಲುಬೆಗೇರಿದ್ದ. ಇಲ್ಲಿಯೂ ಕರುಣಾಮಯಿಯಾದ ಅತ್ಯುತ್ಕೃಷ್ಟ ಮಾನವಪ್ರೇಮಿಯಾದ ಈ ಅಜೇಯ ಭಾರತೀಯ ಸ್ವಾತಂತ್ರ್ಯ ಪ್ರವರ್ತಕ ! ದೀನರ ಸೇವೆಗಾಗಿ ಧಾವಿಸಿದ ಈ ಯುಗಪುರುಷ ! ಇವೆರಡರ ಮಧ್ಯೆ ಎಂಥಹ ಸಾಮ್ಯ !
>
> ಕೋಟಿ ಹೃದಯಗಳ ದುಃಖ ಪ್ರಕಟನೆಯ ಕೇಂದ್ರವಾಗಿ ಈ ಮಹಾವ್ಯಕ್ತಿ ಅಚಲವಾಗಿ ಅತೀತವಾಗಿ ನಿಂತಿದ್ದರು. ಅದೇ ಸರಳತೆಯ ದಿವ್ಯ ತೇಜಸ್ಸು ; ಮೂರ್ತಿವೆತ್ತ ಭಾರತದ ದಿವ್ಯ ಪಾವಿತ್ರ್ಯ ಬಲಿದಾನಗಳ ಜೀವಂತ ಸಾಕ್ಷಿ."

ಅಲ್ಲಿಂದ ಗಾಂಧೀಜಿಯನ್ನು ಪುಣೆಯ ಬಳಿ ಯರವಾಡಾ ಸೆರೆಮನೆಗೆ ಕೊಂಡೊಯ್ದು ಬಂಧಿಸಿಟ್ಟರು. ಗಾಂಧೀಜಿ ಅದನ್ನು ಯರವಾಡ ಮಂದಿರ ಎಂದು ಕರೆದರು. ಆಶ್ರಮದ ಸೋದರ ಸೋದರಿಯರಿಗೆ ಅಲ್ಲಿಂದ ಸತತವಾಗಿ ಪತ್ರ ಬರೆಯುತ್ತಿದ್ದರು. ಆ ಪತ್ರಸಂಕಲನ "ಯರವಾಡ ಮಂದಿರದಿಂದ" ಎಂದೇ ಪ್ರಕಟವಾಗಿದೆ.

ಸೆರೆಮನೆಯಲ್ಲಿ ಗಾಂಧೀಜಿ ಅತ್ಯಂತ ಶಿಸ್ತಿನ ಖೈದಿ. ಎಲ್ಲ ನಿಯಮ ಗಳಿಗೂ ಸಂತೋಷವಾಗಿ ಬದ್ಧರಾಗುತ್ತಿದ್ದರು. ಅಧಿಕಾರಿಗಳಿಗೆ ಅವರಲ್ಲಿ ಗೌರವ ಹೆಚ್ಚಿತು. ಚರಕದಲ್ಲಿ ದಿನವೂ ಒಂದು ಗಂಟೆ ನೂಲುವುದು, ಓದು ವುದು, ಸ್ವಚ್ಛತೆ ಕಾರ್ಯಗಳಿಗಾಗಿ ಅವರಿಗೆ ವಿಶೇಷ ಅನುಮತಿಯಿತ್ತು. ಆಡಿನ ಹಾಲು ಹಣ್ಣುಗಳನ್ನು ಒದಗಿಸಿದರು. ನಿಗದಿಯಾದ ವೆಚ್ಚಕ್ಕೆ ಮೀರಬಾರದು ಎಂದು ಗಾಂಧೀಜಿ ಆಹಾರ ಕಡಮೆಮಾಡಿದರು. ಇತರ ಖೈದಿಗಳಿಗೆ ಇಲ್ಲದ ಸೌಲಭ್ಯ ತಮಗೂ ಬೇಡ ಎಂದರು. ಕಠಿಣ ದಿನಚರಿಯಿಂದ ತೂಕ 14 ಪೌಂಡು ಕಡಮೆಯಾಯಿತು. ಕಸ್ತೂರಿಬಾ ನೋಡಲು ಬಂದು ಎಂದಿನ ಆಹಾರ ತೆಗೆದುಕೊಳ್ಳಲು ಆಗ್ರಹಮಾಡಿದರು. ಸೆರೆಮನೆಯ ಎರಡು ವರ್ಷ ಗಳ ಏಕಾಂತದಲ್ಲಿ ನೂರೈವತ್ತು ಧಾರ್ಮಿಕ, ಶಾಸ್ತ್ರೀಯ, ಐತಿಹಾಸಿಕ ಮತ್ತು ಇಂಗ್ಲೀಷ್ ಸಾಹಿತ್ಯ ಗ್ರಂಥಗಳನ್ನು ಗಾಂಧೀಜಿ ವ್ಯಾಸಂಗಮಾಡಿದರು. ವಿಪುಲವಾದ ಟಿಪ್ಪಣಿಗಳನ್ನು ಬರೆದರು. ಆರು ವರ್ಷಗಳ ಅಧ್ಯಯನಕ್ಕೆ ಸಿದ್ಧಮಾಡಿಕೊಂಡಿದ್ದರು. ಆದರೆ ಆದ ಇತಿಹಾಸವೇ ಬೇರೆ.

ಕಾಂಗ್ರೆಸ್ ಸಂಸ್ಥೆಯಲ್ಲಿ ಒಡಕಿನ ಬಿಕ್ಕಟ್ಟು ತಲೆದೋರಿತು. ಚಿತ್ತರಂಜನ ದಾಸ್ ಮತ್ತು ಮೋತಿಲಾಲರು ಸ್ವರಾಜ್ಯಪಕ್ಷ ಸ್ಥಾಪಿಸಿದರು. ಬ್ರಿಟಿಷ್ ಸರ್ಕಾರದ ಶಾಸನ ಸಭೆಗಳಿಗೆ ಚುನಾಯಿತರಾಗಿ ಹೋಗಿ ಜನತೆಯ ಬೇಡಿಕೆಗ ಳನ್ನು ಪ್ರತಿಪಾದಿಸಬೇಕು ಎಂದು ಆಗ್ರಹತೊಟ್ಟರು. ಮೇ 1 ರಂದು ನಾಗ ಪುರದಲ್ಲಿ ಪ್ರಸಿದ್ಧ ಧ್ವಜಸತ್ಯಾಗ್ರಹ ವಲ್ಲಭಾಯಿ ಪಟೇಲರ ನೇತೃತ್ವದಲ್ಲಿ ನಡೆದು ರಾಷ್ಟ್ರಧ್ವಜದ ಮೇಲಿನ ಪ್ರತಿಬಂಧಕ ರದ್ದಾಯಿತು. ಘಟನೆಗಳು ಮಿಂಚಿನವೇಗದಲ್ಲಿ ಸಾಗಿದವು.

1924ರಲ್ಲಿ ಜೈಲಿನಲ್ಲಿದ್ದ ಗಾಂಧೀಜಿಗೆ ಹಠಾತ್ತನೆ ತೀವ್ರವಾದ ಕರುಳು ಬಾಲದಬೇನೆ (ಅಪೆಂಡಿಸೈಟಿಸ್) ತಲೆದೋರಿತು, ಅವರನ್ನು ಪುಣೆಯ ಸಸೂನ್ ಆಸ್ಪತ್ರೆಗೆ ಸಾಗಿಸಿದರು. ದೇಶಕ್ಕೆ ದೇಶವೇ ಗಾಬರಿಯಿಂದ ತಲ್ಲಣಿ ಸಿತು. ಬ್ರಿಟಿಷ್ ಸೈನ್ಯದ ವೈದ್ಯಾಧಿಕಾರಿ ಕರ್ನಲ್ ಮೆಡಾಕ್ ಅವರಲ್ಲಿ ಗಾಂಧೀಜಿ ವಿಶ್ವಾಸವಿಟ್ಟು ಶಸ್ತ್ರಚಿಕಿತ್ಸೆಗೆ ಸಮ್ಮತಿಸಿದರು. ತಮ್ಮ ಖಾಸಗಿ

ವೈದ್ಯರನ್ನು ಮತ್ತು ಕೆಲವು ಬಂಧುಗಳನ್ನು ಬಳಿಗೆ ಕರೆಸಬಹುದೆಂದಾಗ ಗಾಂಧೀಜಿ ಒಬ್ಬ ವೈದ್ಯರನ್ನೂ ಆಪ್ತ ಸ್ನೇಹಿತರಾದ ರೈಟ್‌ಆನರಬಲ್ ಶ್ರೀನಿವಾಸಶಾಸ್ತ್ರಿಗಳನ್ನೂ ಪತ್ನಿ ಕಸ್ತೂರಿಬಾ ಅವರನ್ನೂ ಕರೆಸಿಕೊಂಡರು. ಅಭಿಪ್ರಾಯ ಬೇಧಗಳು ಸ್ನೇಹ ವಾತ್ಸಲ್ಯಗಳಿಗೆ ಅಡ್ಡಿಯಾಗಬಾರದು ಎಂದು ಗಾಂಧೀಜಿ ನಂಬಿ ನಡೆಯುತ್ತಿದ್ದರು. ಶಸ್ತ್ರಚಿಕಿತ್ಸೆ ಯಶಸ್ವಿಯಾಗಿ ನಡೆಯಿತು ಕರ್ನಲ್ ಮೆಡಾಕ್ ಆತ್ಮೀಯ ಸ್ನೇಹಿತರಾದರು. ಸಮುದ್ರ ತೀರದಲ್ಲಿ ವಿಶ್ರಾಂತಿ ಪಡೆಯಲು ಸಲಹೆ ಮಾಡಿದರು. ಸರ್ಕಾರ ಅನಿರೀಕ್ಷಿತವಾಗಿ ಗಾಂಧೀಜಿಯ ಶಿಕ್ಷೆಯ ಅವಧಿ ರದ್ದುಗೊಳಿಸಿ 1924ರ ಫೆಬ್ರವರಿ 5 ರಂದು ಬಿಡುಗಡೆಮಾಡಿತು. ಜೈಲಿನ ಅಧಿಕಾರಿಗಳಿಗೂ, ಆಸ್ಪತ್ರೆಯ ದಾದಿಯರಿಗೂ ಕರ್ನಲ್ ಮೆಡಾಕ್ ಅವರಿಗೂ ಮನಸಾರೆ ಕೃತಜ್ಞತೆ ಸಲ್ಲಿಸಿ ಗಾಂಧೀಜಿ ಬೊಂಬಾಯಿನ ಜುಹುಸಮುದ್ರ ತೀರದಲ್ಲಿ ವಿಶ್ರಾಂತಿಗಾಗಿ ಹೋದರು.

ಆರು ವರ್ಷಗಳ ಶಿಕ್ಷೆ ಅನುಭವಿಸಬೇಕಾಗಿದ್ದು ಮಧ್ಯೆಬಿಡುಗಡೆಯಾದುದರಿಂದ ಗಾಂಧೀಜಿ ಸ್ವಯಂಪ್ರೇರಣೆಯಿಂದ ಯಾವುದೇ ರಾಜಕೀಯ ಚಳುವಳಿಗಳನ್ನು ಪ್ರಾರಂಭಿಸಲಿಲ್ಲ. ಬದಲಾಗಿ ಜನತೆಯಲ್ಲಿ ಧೈರ್ಯ ಸ್ವಾವಲಂಬನೆ ಮತ್ತು ಸರ್ವಧರ್ಮ ಸಮಭಾವಗಳ ಪ್ರಚಾರ ಕೈಗೊಂಡರು.

ಈ ವೇಳೆಗೆ ಖಿಲಾಫತ್ ಚಳುವಳಿ ಕರಗಿಹೋಗಿತ್ತು. ಮುಸ್ತಫಾ ಕಮಾಲ್ ಪಾಷಾ ಟರ್ಕಿಯ ಖಲೀಫರ ಪರಮಾಧಿಕಾರ ನಿರಾಕರಿಸಿದ್ದರು. ಭಾರತದ ಮುಸ್ಲಿಮರು ರಾಷ್ಟ್ರೀಯತೆಯ ಮುಖ್ಯ ಪ್ರವಾಹದಿಂದ ಬೇರೆಯಾಗಿ ಉಳಿದರು. ಜಾತೀಯ ವಿರಸ ಹರಡಲು ಬ್ರಿಟಿಷರ ಪಿತೂರಿಗಳು ಕಾರಣವಾದವು. ವಿಶೇಷ ಸೌಲಭ್ಯಗಳನ್ನಿತ್ತು ಮುಸ್ಲಿಮರನ್ನು ದೇಶೀಯ ನಾಯಕರಿಂದ ಪ್ರತ್ಯೇಕಿಸಿದರು. ಧರ್ಮಾಂಧ ಪುರೋಹಿತಶಾಹಿಗೆ ಪ್ರೋತ್ಸಾಹಸಿಕ್ಕಿ ಪರಸ್ಪರ ಧರ್ಮಾಚರಣೆಗಳ ಹೆಸರಿನಲ್ಲಿ ರಕ್ತಸಿಂಚಿತ ಘರ್ಷಣೆಗಳು ದೇಶದಲ್ಲಿ ಹರಡಿದವು. ಧಾರ್ಮಿಕ ಸೌಹಾರ್ದಕ್ಕಾಗಿ ಗಾಂಧೀಜಿ ಪರಿತಪಿಸಿ ತಮ್ಮ ಪತ್ರಿಕೆಗಳಲ್ಲಿ ವಿಪುಲವಾಗಿ ಬರೆದು ಬೋಧಿಸಿದರು. "ಎಲ್ಲ ಧರ್ಮಗಳೂ ಸತ್ಯವಾದವು. ಎಲ್ಲದರ ಉಗಮಸ್ಥಾನವೂ ಈಶ್ವರ ಶಕ್ತಿಯೇ.

ಆದರೆ ಎಲ್ಲವೂ ಅಪೂರ್ಣ ಮಾನವ ಮಾಧ್ಯಮದಿಂದ ಹರಿದು ಬಂದಿರುವುದರಿಂದ ಎಲ್ಲದರಲ್ಲಿಯೂ ದೋಷಗಳಿವೆ. ಶುದ್ಧ ಶೀಲವೊಂದೇ ಧರ್ಮದ ಒರೆಗಲ್ಲಾಗಬೇಕು. ತಮ್ಮ ನಡವಳಿಕೆಗಳಿಂದ ದಿನವೂ ಭಗವಂತನನ್ನು ನಿರಾಕರಿಸುತ್ತಿರುವವರು ಎಂದಿಗೂ ಧರ್ಮಪ್ರಚಾರಕರಾಗಲಾರರು." ಎಂದರು.

ದೇಶದಲ್ಲಿ ಅಗಾಧವಾದ ನಿರಾಶೆ ತುಂಬುತ್ತಿತ್ತು. ಗಾಂಧೀಜಿ ಬೊಂಬಾಯಿನಿಂದ ಸಬರ್ಮತಿಗೆ ಹಿಂತಿರುಗಿ ಮುಂದಿನ ಹೆಜ್ಜೆಯನ್ನು ಚಿಂತಿಸಿದರು.

(vi) ಕರ್ನಾಟಕದಲ್ಲಿ ಕಾಂಗ್ರೆಸ್–1924

ಕಾಲ ವೇಗವಾಗಿ ಉರುಳುತ್ತಿತ್ತು. ರಾಷ್ಟ್ರೀಯ ನಾಯಕರನೇಕರು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಸ್ಪರ್ಧಿಸಿ ಜಯಶೀಲರಾಗಿದ್ದರು, ಸಿ. ಆರ್. ದಾಸರು ಕಲ್ಕತ್ತದ ಪ್ರಥಮ ಮೇಯರಾದರು ಅವರೊಡನೆ ಸುಭಾಸ್‌ಚಂದ್ರ ಬೋಸರು ಸೇರಿದರು. ವಿಠಲಭಾಯಿ ಪಟೇಲ್ ಬೊಂಬಾಯಿ ನಗರಸಭೆಯ ಅಧ್ಯಕ್ಷರಾದರು, ವಲ್ಲಭಾಯಿ ಪಟೇಲ್ ಅಹಮದಾಬಾದಿನ ಪೌರ ಸಭೆಗೂ, ರಾಜೇಂದ್ರ ಪ್ರಸಾದ್ ಪಾಟ್ನಾದ ಮತ್ತು ಜವಹರಲಾಲರು ಅಲಹಾಬಾದಿನ ಪೌರಸಭೆಗಳ ಅಧ್ಯಕ್ಷರಾದರು. ಪುರಸಭೆಗಳು ಗಾಂಧೀಜಿ ಹೋದಲ್ಲೆಲ್ಲ ಮಾನಪತ್ರ ಅರ್ಪಿಸಿ ಗೌರವಿಸಿದವು. ಪೌರ ಪ್ರಜ್ಞೆ ಮತ್ತು ನಾಗರಿಕ ಶಿಸ್ತು ರೂಢಿಸಿಕೊಳ್ಳುವುದೂ ಸತ್ಯಾಗ್ರಹಿಯ ಶಿಕ್ಷಣ. ಕಾನೂನು ಭಂಗಮಾಡಲು ಕಾನೂನುಗಳನ್ನು ಪಾಲಿಸುವ ಸಹಜ ಪ್ರವೃತ್ತಿ ಇದ್ದವರಿಗೆ ಮಾತ್ರವೇ ಹಕ್ಕುಂಟು ಎನ್ನುತ್ತಿದ್ದರು ಗಾಂಧೀಜಿ.

ಕಾಂಗ್ರೆಸ್ ಸಂಸ್ಥೆಯ ಸದಸ್ಯರು ಕೇವಲ ನೇರ ಹೋರಾಟವೊಂದನ್ನೇ ಕಾರ್ಯಕ್ರಮ ಎಂದು ಭಾವಿಸಬಾರದು. ದಿನ ದಿನವೂ ರಾಷ್ಟ್ರದ ಆರ್ಥಿಕ ಸಾಮಾಜಿಕ ಉನ್ನತಿಗೆ ರಚನಾತ್ಮಕ ಕೆಲಸ ಕೈಗೊಳ್ಳಬೇಕು ಎಂದು ಗಾಂಧೀಜಿ

ಒಂದು ಹೊಸ ನಿಯಮಾವಳಿ ಸೂಚಿಸಿದರು. ಸದಸ್ಯರು ತಾವೇ ಚರಕದಲ್ಲಿ ನೂತ ಒಂದು ಲಡಿ ನೂಲನ್ನು ಸದಸ್ಯ ಶುಲ್ಕವಾಗಿ ಕೊಡಬೇಕು. ಕಡ್ಡಾಯವಾಗಿ ಖಾದಿ ಬಟ್ಟೆ ಧರಿಸಬೇಕು. ವಿದೇಶೀವಸ್ತ್ರ ವ್ಯಾಪಾರ ಮಾಡಕೂಡದು. ಹಿಂಸಾತ್ಮಕ ಪ್ರತಿಭಟನೆಗಳನ್ನು ನಿಷೇಧಿಸಬೇಕು. ಅಸ್ಪೃಶ್ಯತಾ ನಿವಾರಣೆ ಮತ್ತು ಹಿಂದೂ ಮುಸ್ಲಿಂ ಸೌಹಾರ್ದಗಳಿಗೆ ಕ್ರಿಯಾತ್ಮಕ ಕಾರ್ಯಗಳಲ್ಲಿ ತೊಡಗಬೇಕು, ಮದ್ಯಪಾನ ನಿಷೇಧಿಸಬೇಕು. ಹೀಗೆ ಅನೇಕ ಕಾರ್ಯಕ್ರಮಗಳನ್ನು ರೂಪಿಸಿಕೊಟ್ಟರು. ಮೊದಮೊದಲು ಪ್ರಮುಖ ನಾಯಕರೇ ಗಾಂಧೀಜಿಯ ನಿಯಮಗಳನ್ನು ವಿರೋಧಿಸಿದರು, ನಾಲ್ಕಾರು ಸಭೆಗಳಲ್ಲಿ ಗಾಂಧೀಜಿ ತಾಳ್ಮೆಯಿಂದ ದೀರ್ಘವಾಗಿ ವಾದಿಸಿ ಅವರನ್ನೊಲಿಸಿಕೊಂಡರು. "ಪರಾಭವ ನನ್ನನ್ನು ನಿರುತ್ಸಾಹಗೊಳಿಸುವುದಿಲ್ಲ ನನ್ನನ್ನು ಪುಟಕ್ಕೆ ಹಾಕುತ್ತದೆ. ನನ್ನ ತತ್ವಗಳಲ್ಲಿ ನನಗೆ ನಂಬಿಕೆ ಅಚಲ. ದೇವರುದಾರಿ ತೋರುತ್ತಾನೆ, ಮನುಷ್ಯನ ಬುದ್ಧಿವಂತಿಕೆಗಿಂತ ಸತ್ಯವೇ ಶ್ರೇಷ್ಠವಾದುದು" ಎಂದು 'ಯಂಗ್ ಇಂಡಿಯಾ'ದಲ್ಲಿ ಬರೆದರು.

ದೇಶದಲ್ಲಿ ಆಂತರಿಕ ಅಭಿವೃದ್ಧಿ ಕೆಲಸ ನಡೆಯದೆ ರಾಜಕೀಯ ಒತ್ತಡ ನಿರ್ಮಾಣವಾಗುವುದಿಲ್ಲ. ಕಾಂಗ್ರೆಸ್ ಅಧಿಕಾಧಿಕವಾಗಿ ಸಾಮಾನ್ಯ ಭಾರತೀಯರನ್ನು ಪ್ರತಿನಿಧಿಸಬೇಕು. ಅವರ ಕಷ್ಟಗಳನ್ನರಿತು ಪರಿಹಾರಗಳಿಗೆ ಶ್ರಮಿಸಬೇಕು. ಅವರಿಗೆ ಇನ್ನೂ ರಾಜಕೀಯ ಜಾಗೃತಿ ಬಂದಿಲ್ಲ. ಕಟ್ಟಕಡೆಯವನಿಗೆ ನ್ಯಾಯ ಎಂಬ ಗುರಿಸಾಧನೆಯೇ ಸ್ವರಾಜ್ಯದ ಉದ್ದೇಶ ಎಂದು ಜನತೆಗೆ ಮನದಟ್ಟಾಗಬೇಕು ಎಂದು ಗಾಂಧೀಜಿ ಸೂಚಿಸಿದರು. ಶ್ರೀಮತಿ ಅನಿಬಸೆಂಟ್ ಈ ಹೊಸತಿರುವನ್ನು ಅನುಮೋದಿಸಿದರು.

ಕಾಂಗ್ರೆಸ್ಸಿನ ಮುಂದಿನ ಸಮ್ಮೇಳನಕ್ಕೆ ಗಾಂಧೀಜಿಯೇ ಅಧ್ಯಕ್ಷರಾಗಬೇಕೆಂದು ಸೂಚಿಸಲಾಯಿತು. "ಒಡಕುಗಳು ಹೆಚ್ಚಾಗಲು ನಾನು ಬಯಸುವುದಿಲ್ಲ. ದೇಶಕ್ಕೆ ಒಳಿತಾಗುವುದೆಂದು ಸರ್ವಸಮ್ಮತಿಯಿದ್ದರೆ ಮಾತ್ರ ಆಗೌರವ ಅಂಗೀಕರಿಸುತ್ತೇನೆ" ಎಂದು ಅವರು ಸ್ಪಷ್ಟಪಡಿಸಿದರು.

ಹಿಂದೂ ಮುಸ್ಲಿಮ್ ಗಲಭೆಗಳು ವ್ಯಾಪಕವಾಗಿ ಹರಡಿ ಅನೇಕ ಕಡೆಗಳಲ್ಲಿ ಭೀಕರ ಕೊಲೆಗಳು ದೊಂಬಿಗಳು ನಿರಪರಾಧಿಗಳಿಗೆ ಹಿಂಸೆ, ಆಸ್ತಿಪಾಸ್ತಿಗಳ ನಾಶ ನಡೆಯುತ್ತಿದ್ದವು. ಪವಿತ್ರ ಸ್ಥಾನಗಳಮೇಲೆ ಧಾಳಿಮಾಡುವುದು ಹೆಚ್ಚಾಯಿತು. ಘೋರವಾದ ಹಗೆತನ ಬೆಳೆದು ರಾಷ್ಟ್ರೀಯ ಭಾವನೆ ನಾಶವಾಗುತ್ತಿತ್ತು. ಗಾಂಧೀಜಿಯ ಹೃದಯ ಕಲಕಿಹೋಯಿತು. 1924ರ ಸೆಪ್ಟೆಂಬರ್ 18 ರಂದು ಇಪ್ಪತ್ತೊಂದು ದಿನಗಳ ದೀರ್ಘ ಉಪವಾಸದ ನಿರ್ಧಾರ ಘೋಷಿಸಿದರು. ಆಗ ದೆಹಲಿಯಲ್ಲಿ ಮಹಮದಾಲಿಯವರ ನಿವಾಸದಲ್ಲಿದ್ದರು, ಆತ್ಮಶುದ್ಧಿ ಮತ್ತು ಸೌಹಾರ್ದಪ್ರೇರಣೆ ಅದರಗುರಿ ಎಂದು ಸಾರಿದರು, "ಧರ್ಮಕ್ಕೂ ಮಾನವತೆಗೂ ಅಗೌರವತರುತ್ತಿರುವ ಈ ಕೊಲೆ ಪಾತಕ ಜಗಳವನ್ನು ನಿಲ್ಲಿಸಿ. ದೇವರನ್ನು ಪದಚ್ಯುತಗೊಳಿಸಬೇಡಿ. ಆತನನ್ನು ನಮ್ಮ ಹೃದಯಗಳಲ್ಲಿ ಪುನಃ ಪ್ರತಿಷ್ಠಾಪಿಸಿಕೊಳ್ಳೋಣ" ಎಂದು ಬೇಡಿಕೊಂಡರು. ದೇಶದಲ್ಲೆಲ್ಲಾ ಪರಿತಾಪದ ಹೊನಲು ಉಕ್ಕಿ ಹರಿಯಿತು. ಪ್ರಾಯೋಪವೇಶದ ಅಗ್ನಿಜ್ವಾಲೆಯಲ್ಲಿ ಧುಮುಕಿದ ಈ ಮಹಾತಪಸ್ವಿಯ ಆತ್ಮನಿವೇದನೆ ಲಕ್ಷಾಂತರ ಹಿಂದೂ ಮುಸಲ್ಮಾನರನ್ನು ಪರಿವರ್ತಿಸಿತು.

ಸೆಪ್ಟೆಂಬರ್ 26ರಲ್ಲಿ ದೆಹಲಿಯಲ್ಲಿ ರಾಷ್ಟ್ರೀಯ ಮಹಾನಾಯಕರು ಕರೆದ ಸರ್ವಧರ್ಮೀಯರ ಸಮ್ಮೇಳನ ಸಮಾವೇಶಗೊಂಡು ಪರಸ್ಪರ ಸೌಹಾರ್ದದ ನಿರ್ಣಯ ಅಂಗೀಕರಿಸಿತು. ಮೋತಿಲಾಲ್ ನೆಹರು ಅಧ್ಯಕ್ಷಪೀಠದಿಂದ ಗಾಂಧೀಜಿಗೆ ದೀರ್ಘಾಯಸ್ಸನ್ನು ಕೋರಿ ಪ್ರಾರ್ಥನೆ ಸಲ್ಲಿಸಿದರು. ದೀನಬಂಧು ಆಂಡ್ರೂಸ್, ಮೌಲಾನಾ ಮಹಮ್ಮದಾಲಿ, ಸ್ವಾಮಿ ಶ್ರದ್ಧಾನಂದ ಡಾ॥ ಆನಿಬಸೆಂಟ್ ಗಾಂಧೀಜಿಯ ಬಳಿ ಸಾರಿದರು. 1924ರ ಅಕ್ಟೋಬರ್ 6 ರಂದು ಗಾಂಧೀಜಿ ಉಪವಾಸ ಮುಕ್ತಾಯಮಾಡಿದರು. ಡಾ॥ ಅನ್ಸಾರಿ ಅವರು ನೀಡಿದ ಕಿತ್ತಲೆಹಣ್ಣಿನ ರಸವನ್ನು ಸರ್ವಧರ್ಮೀಯ ಪ್ರಾರ್ಥನೆ ನಡೆಸಿ ಸ್ವೀಕರಿಸಿದರು. ದೇಶದಲ್ಲೆಲ್ಲ ಹರಡಿದ್ದ ಆತಂಕ ಕೊನೆಗೊಂಡಿತು.

ರಾಜಕೀಯ ಪರಿಸ್ಥಿತಿ ಹದಗೆಡುತ್ತಿತ್ತು. ಗಾಂಧೀಜಿ ಸ್ವರಾಜ್ಯ ಪಕ್ಷದ ಸ್ನೇಹಿತರೊಡನೆ ಒಂದು ಒಡಂಬಡಿಕೆಗೆ ಬಂದರು. ಕಾಂಗ್ರೆಸ್ಸನ್ನು ಸಬಲ

ಗೊಳಿಸುವ ಒಕ್ಕೂಟ ಸಾಧಿಸುವುದೇ ಅವರ ಗುರಿ. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಮೂವತ್ತೊಂಬತ್ತನೆಯ ಅಧಿವೇಶನ ಡಿಸೆಂಬರ್ 24 ರಂದು ಕರ್ನಾಟಕದ ಬೆಳಗಾವಿಯಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಆಗ ಆ ಪ್ರದೇಶ ಬೊಂಬಾಯಿ ಪ್ರಾಂತಕ್ಕೆ ಸೇರಿತ್ತು. ಡಾ॥ ಎನ್. ಎಸ್. ಹರ್ಡೀಕರ್ ಹಿಂದೂಸ್ತಾನಿ ಸೇವಾದಳ ಪ್ರಾರಂಭಿಸಿ ಗಾಂಧೀಜಿಯ ಬೆಂಬಲ ಪಡೆದರು. ನೈರ್ಮಲ್ಯ, ಶಿಸ್ತು, ಸುವ್ಯವಸ್ಥೆ ಅತ್ಯಂತ ಸಮರ್ಪಕವಾಗಿತ್ತು.

ಅತ್ಯಂತ ಸಂಕ್ಷಿಪ್ತ ಭಾಷಣಮಾಡಿದರು ಗಾಂಧೀಜಿ. "ಜನತೆಯ ಮೇಲಿನ ದಬ್ಬಾಳಿಕೆ ಒಂದು ರೋಗದ ಚಿಹ್ನೆ. ವಿಶ್ವಾಸ ಕಳೆದುಕೊಂಡ ಸರ್ಕಾರ ದುರಾಚಾರಕ್ಕೆ ಇಳಿಯುತ್ತದೆ. ಅಲ್ಲಲ್ಲಿ ನಡೆದ ಶಾಂತಿಯುತ ಪ್ರತಿಭಟನೆಗಳಲ್ಲಿ ಜನ ನಿಸ್ಸೀಮ ತ್ಯಾಗ ಬಲಿದಾನಗಳನ್ನು ಮಾಡಿದ್ದಾರೆ". ಎಂದರು "ಕಾಂಗ್ರೆಸ್ಸಿನ ಅಖಂಡತೆಯನ್ನುಳಿಸಿಕೊಂಡು ಮುಂದಿನ ಹೋರಾಟಕ್ಕೆ ಜನತಾ ಶಿಕ್ಷಣ ಕೈಗೊಳ್ಳಲು ಈಗ ಅಸಹಕಾರ ಆಂದೋಲನವನ್ನು ನಿಲ್ಲಿಸಲಾಗಿದೆ. ಸತ್ಯಾಗ್ರಹದಲ್ಲಿ ಸೋಲೆಂಬುದಿಲ್ಲ. ನಮ್ಮ ನಿರೀಕ್ಷೆಯಿದ್ದಷ್ಟು ಫಲ ಕೂಡಲೇ ದೊರಕದಿರಬಹುದು. ಸತ್ಯಸ್ಥಾಪನೆಗೆ ಒಬ್ಬನೇ ಒಬ್ಬ ಪರಿಪೂರ್ಣ ಸತ್ಯಾಗ್ರಹಿ ಇದ್ದರೂ ಸಾಕು. ನಾವೆಲ್ಲ ಅಂತಹಪೂರ್ಣತೆ ಪಡೆಯಲು ಪ್ರಯತ್ನಿಸೋಣ. ಸ್ವರಾಜ್ಯದಂತೆ ಸತ್ಯಾಗ್ರಹವೂ ನಮ್ಮ ಜನ್ಮಸಿದ್ಧಹಕ್ಕು. ಈ ಕ್ಷಣದಿಂದ ನೀವೊಬ್ಬೊಬ್ಬರೂ ಮಹಾಜನತೆಯ ಮಧ್ಯೆಹೋಗಿ ಖಾದಿಯ ಸಂದೇಶವನ್ನು ಸಾರಿಹೇಳಿ : ಹಿಂದೂ ಮುಸ್ಲಿಮರನ್ನು ಒಟ್ಟು ಗೂಡಿಸಿರಿ ; ಅಸ್ಪೃಶ್ಯತೆಯ ಕಲಂಕ ನಿರ್ಮೂಲಮಾಡಿ : ಯುವಕರನ್ನು ಸಂಘಟಿಸಿ ; ಈ ಕೂಡಲೇ ಪೂರ್ಣಸ್ವರಾಜ್ಯ ಅಲ್ಲದಿದ್ದರೂ ಸಾಮ್ರಾಜ್ಯದೊಳಗಡೆಯೇ ಪೂರ್ಣಸ್ವಾಯತ್ತತೆಯ ಭಾರತವನ್ನು ರೂಪಿಸುವುದು ನಮ್ಮ ಉದ್ದೇಶ ಎಂದು ಬ್ರಿಟಿಷರಿಗೆ ಸ್ನೇಹಪೂರ್ವಕವಾಗಿ ಹೇಳುತ್ತೇನೆ. ಅವರಲ್ಲಿ ನನಗೆ ಹಗೆಯಿಲ್ಲ. ಅವರ ಪದ್ಧತಿಯ ಅನಿಷ್ಟವನ್ನರಿತು ಅವರು ಸ್ವರಾಜ್ಯ ನೀಡಲಿ ಎಂದು ಬಯಸುತ್ತೇನೆ. ಆದರೆ ಬ್ರಿಟಿಷರ ತಪ್ಪಿನ ಕಾರಣದಿಂದ ನಾವು ಪ್ರತ್ಯೇಕವಾಗುವುದು ಅನಿವಾರ್ಯವಾದರೆ ಅವರೊಡನೆ ಎಲ್ಲ ಸಂಬಂಧಗಳನ್ನೂ

ಕಡಿಯಲು ನಾನು ಹಿಂಜರಿಯುವುದಿಲ್ಲ. ಆಗ ಅವರೇ ಅದಕ್ಕೆ ಜವಾಬ್ದಾರರಾಗುತ್ತಾರೆ" ಎಂದರು.

"ಸಂಗ್ರಾಮಕ್ಕೆ ಆತುರಬೇಡ. ಮೊದಲು ನಾವು ಬಿಚ್ಚುಮನಸ್ಸಿನಿಂದ ಒಬ್ಬರನ್ನೊಬ್ಬರು ಪ್ರೀತಿಸಿ ಒಂದುಗೂಡೋಣ. ಜನತೆಯ ದಿನದಿನದ ಭವಣೆಯನ್ನು ಗಮನಿಸಿ ಗ್ರಾಮಪುನರ್ರಚನೆಯ ಪವಿತ್ರ ಕಾರ್ಯದಲ್ಲಿ ದರಿದ್ರ ನಾರಾಯಣನ ಸೇವೆಮಾಡುತ್ತ ಜನತೆಯ ಪೂರ್ಣವಿಶ್ವಾಸಗಳಿಸೋಣ. ಅಹಿಂಸೆಯ ಅಭ್ಯಾಸಕ್ಕೆ ಅದು ಅಗತ್ಯ. ಪೂರ್ಣಸಿದ್ಧತೆಯಿಲ್ಲದೆ ಯಾವ ಸತ್ಯಾಗ್ರಹವೂ ಯಶಸ್ವಿಯಾಗುವುದಿಲ್ಲ. ಹೃದಯ ಹೃದಯಗಳಲ್ಲಿ ಸತ್ಯ ಅಹಿಂಸೆಗಳು ಬೇರೂರಿ ನಿಲ್ಲಲು ಶ್ರಮಿಸಿ". ಗಾಂಧೀಜಿಯ ಈ ಸಂದೇಶ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಆಖಂಡ ಭಾರತಜನತೆಯ ಏಕೈಕ ಪ್ರತಿನಿಧಿ ಸಂಸ್ಥೆಯನ್ನಾಗಿ ಪರಿವರ್ತಿಸಿತು. ಮೇಲ್ವರ್ಗದ ಬುದ್ಧಿಜೀವಿಗಳನ್ನೆಲ್ಲ ಸಾಮಾನ್ಯ ಭಾರತೀಯನ ಬಾಳಿನೊಡನೆ ಸಮರಸವಾಗುವಂತೆ ಅವರ ಜೀವನ ಶೈಲಿಗಳನ್ನೇ ಬದಲಿಸಿತು. ಆಗರ್ಭ ಶ್ರೀಮಂತರು, ಅಗಾಧ ವರಮಾನದ ವಕೀಲರು, ವೈದ್ಯರು, ವರ್ತಕರು, ಗಾಂಧೀಜಿಯ ಸರಳತೆಯ ದೀಕ್ಷೆ ಪಡೆದು ಸ್ವಾತಂತ್ರ್ಯಯೋಧರಾದರು. ಮೋತಿಲಾಲ ನೆಹರು, ಜವಹರಲಾಲರು, ಸಿ.ಆರ್. ದಾಸರು, ಸುಭಾಶಚಂದ್ರಬೋಸರು, ಖಾನ್ ಅಬ್ದುಲ್ ಗಫಾರ್ ಖಾನ್, ಡಾ॥ ಅನ್ಸಾರಿ, ಸಿ. ರಾಜಗೋಪಾಲಾಚಾರಿ, ಸರೋಜಿನಿ ದೇವಿ, ಸರ್ದಾರ್ ಪಟೇಲ್ ಈ ಮಹಾನಾಯಕ ಪಂಕ್ತಿ ದೇಶಬಾಂಧವರ ಹೃದಯಗಳನ್ನು ಸೂರೆಗೊಂಡಿತು.

(vii) ರಚನಾತ್ಮಕ ಕ್ರಾಂತಿ ಪಥ

ತಮ್ಮ ಅಧ್ಯಕ್ಷತೆಯ ಅವಧಿಯಲ್ಲಿ ಗಾಂಧೀಜಿ ನೇರ ಸತ್ಯಾಗ್ರಹ ಕಾರ್ಯಕ್ರಮಕ್ಕೆ ಅನುಮತಿ ಕೊಡಲಿಲ್ಲ. ಬದಲಾಗಿ ತಮ್ಮ ಚರಕದ ಸಂದೇಶ ಹೊತ್ತು ದೇಶದಲ್ಲೆಲ್ಲ ಪ್ರವಾಸಮಾಡಿದರು, ಎಲ್ಲ ರಾಷ್ಟ್ರನಾಯಕರೂ

ಬೆಂಬಲಿಸಿ ತಾವೂ ಜನಸಾಮಾನ್ಯರೊಡನೆ ಬೆರತು ಪ್ರವಾಸಗಳನ್ನು ಕೈಗೊಂಡರು. ಲಕ್ಷಾಂತರ ರಾಟೆಗಳು ದೇಶದಲ್ಲಿ ಸುಸ್ವರ ಸ್ವಾತಂತ್ರ್ಯ ಗೀತೆಯನ್ನು ಒಕ್ಕೊರಲಿನಿಂದ ಹಾಡುತ್ತಿದ್ದವು. ಹೋದೆಡೆ ಗಾಂಧೀಜಿ ಅಸ್ಪೃಶ್ಯತಾ ನಿವಾರಣೆ, ಗ್ರಾಮನೈರ್ಮಲ್ಯ, ಮಹಿಳೆಯರ ಜಾಗೃತಿ. ಜಾತೀಯ ಐಕ್ಯತೆ ದೇಶಭಾಷಾ ಪ್ರಚಾರ, ವಿದ್ಯಾರ್ಥಿ ಸಂಘಟನೆ, ಗ್ರಾಮರಾಜ್ಯದ ಪ್ರಸಾರ ಮುಂತಾದ ರಚನಾತ್ಮಕ ಕಾರ್ಯಗಳಲ್ಲಿ ಲಕ್ಷಾಂತರ ವಿದ್ಯಾವಂತ ಯುದಕರನ್ನು ತೊಡಗಿಸಿದರು. ಆರ್ಥಿಕ ಸ್ವಾತಂತ್ರ್ಯ, ಸಾಮಾಜಿಕ ಪರಿವರ್ತನೆ, ಸಾಂಸ್ಕೃತಿಕ ವಿಕಾಸ, ನಿರ್ಭಯ ಸ್ವಾಭಿಮಾನಗಳ ಸ್ಪಷ್ಟಕಲ್ಪನೆ ಮೂಡಿಸಿದರು. ವಿಚಾರ ಕ್ರಾಂತಿಯ ಅತಿಮುಖ್ಯ ಬುನಾದಿ ಹಾಕಿದರು.

ಕ್ರಾಂತಿ ಆಂದರೆ ರಕ್ತಪಾತ ಅಲ್ಲ, ಸಶಸ್ತ್ರ ಹಿಂಸಾತ್ಮಕ ದಂಗೆ ಅಲ್ಲ, ರಾಜಕೀಯ ಆಂದೋಲನ ಅಲ್ಲ, ವರ್ಗಸಂಘರ್ಷವೂ ಅಲ್ಲ. ಕ್ರಾಂತಿ ಅಂದರೆ ಮೌಲ್ಯಾಧಾರಿತ ಜೀವನ ಪರಿವರ್ತನೆ, ಇದು ಅಹಿಂಸೆಯಿಂದ ಮಾತ್ರ-ಸಾಧ್ಯ, ಮಿಕ್ಕರೀತಿಯ ಕ್ರಾಂತಿಪಥಗಳು ಅನಾವಶ್ಯಕ ಹಿಂಸೆ, ಅಮಾನುಷ ಸರ್ವಾಧಿಕಾರ, ಸೈನ್ಯಶಕ್ತಿಯ ಅಟ್ಟಹಾಸಗಳಲ್ಲಿ ಪರ್ಯವಸಾನವಾಗುತ್ತವೆ. ಸರ್ವೋದಯ ಸಮಾಜ ಸ್ಥಾಪಿತವಾಗಲು ಮಾನವಲೋಕ ಇಂದಲ್ಲ ನಾಳೆ ಅಹಿಂಸಾತತ್ವವನ್ನು ಅಂಗೀಕರಿಸಿಯೇ ತೀರುತ್ತದೆ. ಅದಕ್ಕೆ ಭಾರತದ ಈ ರಚನಾತ್ಮಕ ಕ್ರಾಂತಿಪಥ ದಾರಿದೀಪವಾಗಲಿ ಎಂದು ಸಾರುತ್ತ ಗಾಂಧೀಜಿ ಇಡೀ ದೇಶದ ಜನಸ್ತೋಮದ ಮಧ್ಯೆ ಪಾದರಸದಂತೆ ಚಲಿಸುತ್ತಿದ್ದರು.

ಕೇರಳದ ವೈಕೋಮ್‌ನಲ್ಲಿ ದೇವಸ್ಥಾನದ ರಸ್ತೆಯಲ್ಲಿ ಅಥವಾ ಚೌಕದಲ್ಲಿ ಅಸ್ಪೃಶ್ಯರೆಂಬುವರು ಸುಳಿದರೆ ಮೈಲಿಗೆ ಎಂದು ಅವರನ್ನು ಬಿಡುತ್ತಿರಲಿಲ್ಲ. ಮೇಲ್ವರ್ಗದವರ ಮೇಲೆ ಅವರ ನೆರಳುಬಿದ್ದರೂ ಸ್ನಾನಮಾಡುತ್ತಿದ್ದರಂತೆ. ಅಸ್ಪೃಶ್ಯತೆಯ ಈ ಅತ್ಯಂತ ಘೋರಚಿತ್ರ ಗಾಂಧೀಜಿಯ ಕಿವಿಗೆ ಬಿದ್ದಿತು. ವೈಕೋಮಿನಲ್ಲಿ ಪ್ರತಿಭಟನೆಯ ಸತ್ಯಾಗ್ರಹ ಕೆಲವು ತಿಂಗಳು ನಡೆಯಿತು. 1925ರ ಮಾರ್ಚಿಯಲ್ಲಿ ಗಾಂಧೀಜಿ ವೈಕೋಮ್‌ಗೆ ಹೋದರು. ತಿರುವಾಂಕೂರು ಆಗ ಒಂದು ರಾಜರ ಆಡಳಿತದಲ್ಲಿದ್ದ ದೇಶೀಯ

ಸಂಸ್ಥಾನ. ಅವರ ಸರ್ಕಾರ ಸಂಪ್ರದಾಯಸ್ಥರ ಕಡೆಗೇ ಇತ್ತು. ದೇವ ಸ್ಥಾನಗಳ ರಸ್ತೆಗೆ ಅಸ್ಪೃಶ್ಯರ ಪ್ರವೇಶ ನಿಷೇಧಿಸಿ ಆಜ್ಞೆಮಾಡಿದ್ದರು. ಪೋಲೀಸರ ಪಹರೆಯೂ ಇತ್ತು. ಇದನ್ನು ಉಲ್ಲಂಘಿಸಿ ಸ್ವಯಂಸೇವಕರು ಸತ್ಯಾಗ್ರಹ ಹೂಡಿದ್ದರು. 'ಯಂಗ್ ಇಂಡಿಯಾ' ಪತ್ರಿಕೆಯಲ್ಲಿ ಗಾಂಧೀಜಿ ಈ ಸತ್ಯಾಗ್ರಹಿಗಳಿಗೆ ಬೆಂಬಲವಿತ್ತು ಎಲ್ಲ ರೀತಿಯಲ್ಲೂ ಅಹಿಂಸೆಯನ್ನು ಪಾಲಿಸಿ ಹೋರಾಡಬೇಕು ಎಂದಿದ್ದರು. ಕೊನೆಗೆ ತಾವೇ ಬಂದುನಿಂತರು. ಹಿಂದೂ ಧರ್ಮ ಮಾಡಿರುವ ಈ ಪಾಪಕ್ಕೆ ಮೇಲ್ವರ್ಗದವರು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ಅಸ್ಪೃಶ್ಯತೆ ಪಾಲಿಸುವ ಧರ್ಮ ಧರ್ಮವೇ ಅಲ್ಲ. ಎಂದು ತಿಳಿಸಿದರು. ರಾಜರೊಡನೆ ಸಂಧಾನ ನಡೆಸಿದರು, ಸತ್ಯಾಗ್ರಹದ ಉತ್ಸಾಹವೂ ಬಲವೂ ನೂರ್ಮಡಿಸಿದವು. ಕೊನೆಗೆ ಸರ್ಕಾರ ದೇವಸ್ಥಾನದ ರಸ್ತೆಗಳಲ್ಲಿ ಪ್ರತಿಬಂಧಕ ಆಜ್ಞೆ ಹಿಂತೆಗೆದುಕೊಂಡಿತು. ಆದರೆ ಪೂಜಾರಿವರ್ಗದ ಜನ ಪರಿವರ್ತಿತರಾಗಲೇ ಇಲ್ಲ. ಮುಂದೆ ಕೇರಳದ ಗುರುವಾಯೂರಿನಲ್ಲಿ ಮತ್ತೊಂದು ಪ್ರಸಿದ್ಧ ಸತ್ಯಾಗ್ರಹನಡೆದು ಹರಿಜನರಿಗೆ ದೇವಾಲಯ ಪ್ರವೇಶ ನೀಡಿದ ಮೊದಲ ಸರ್ಕಾರ ತಿರುವಾಂಕೂರೇ ಆಯಿತು.

ಅದೇ ವರ್ಷ ಗಾಂಧೀಜಿ ಶಾಂತಿನಿಕೇತನಕ್ಕೆ ಭೇಟಿಕೊಟ್ಟರು. ರವೀಂದ್ರ ನಾಥ ಠಾಕೂರರೊಡನೆ ದೀರ್ಘ ಸಮಾಲೋಚನೆಗಳನ್ನು ನಡೆಸಿದರು. ದೇಶದ ಯುವಜನರಿಗೆಲ್ಲ ಮಹಾತ್ಮಗಾಂಧಿ ಮತ್ತು ಗುರುದೇವ ಠಾಕೂರರು ಅತ್ಯಂತ ಸ್ಫೂರ್ತಿದಾಯಕ ನಾಯಕಮಣಿಗಳಾದರು. ದೇಶದ ಶಿಕ್ಷಣ ಸಮ ಸ್ಯೆಗಳ ಬಗ್ಗೆ ಅವರಿಬ್ಬರೂ ಅಮೋಘ ಮಾರ್ಗದರ್ಶನ ನೀಡಿದರು. ತಮ್ಮನ್ನು ಕಾಣಲು ಬಂದ ವಿದೇಶೀಯರಿಗೆಲ್ಲ ಗಾಂಧೀಜಿ ಹೀಗೆ ಹೇಳುತ್ತಿ ದ್ದರು. "ಭಾರತ ಇರುವುದು ತನ್ನ ಲಕ್ಷಾಂತರ ಗ್ರಾಮಗಳಲ್ಲಿ, ದೊಡ್ಡನಗರ ಗಳಲಲ್ಲ. ಭಾರತ ಸಂಸ್ಕೃತಿ ತಿಳಿಯಲು ಗುರುದೇವರ ಶಾಂತಿನಿಕೇತನಕ್ಕೆ ಹೋಗಿ, ಪಾಂಡಿಚರಿಯ ಅರವಿಂದಾಶ್ರಮ ನೋಡಿಬನ್ನಿ, ಹಿಮಗಿರಿಯ ತಪ್ಪಲಿನ ಸಹಸ್ರಾರು ತಪಸ್ವಿಗಳನ್ನು ಕಾಣಿ". ವಿಚಾರಪರಿವರ್ತನೆ ಅಲೆ ಅಲೆ ಯಾಗಿ ಹಬ್ಬಿ ನಿಲ್ಲುತ್ತಿತ್ತು. ಭಾರತೀಯರ ಆತ್ಮಗೌರವ, ಆತ್ಮವಿಶ್ವಾಸ,

ಆತ್ಮಶಕ್ತಿಗಳನ್ನು ಹೆಚ್ಚಿಸಲು ಗಾಂಧೀಜಿ ಸತತವಾಗಿ ಪ್ರವಾಸಮಾಡುತ್ತಲೇ ಇದ್ದರು.

"ನಮ್ಮ ದೇಶ ಸ್ವತಂತ್ರವಾಗಬೇಕು ಎಂದು ಬಯಸುತ್ತೇನೆ. ಹಾಗೆಂದರೆ ಅದು ಇಂಗ್ಲೆಂಡಿನ ಅಳಿವೂ ಅಲ್ಲ, ಆಂಗ್ಲೇಯರ ವಿನಾಶವೂ ಅಲ್ಲ. ಸ್ವತಂತ್ರ ಭಾರತ ಮಾನವ ಕಲ್ಯಾಣಕ್ಕಾಗಿ ಸಮಸ್ತತ್ಯಾಗಕ್ಕೂ ಸಿದ್ಧ. ಯಾವ ಶೋಷಣೆಯನ್ನೂ ಅದು ಸಹಿಸದು. ಅದಕ್ಕಾಗಿಯೇ ನನ್ನ ಸೇವಾದೀಕ್ಷೆ" ಎನ್ನುತ್ತಿದ್ದರು.

1922ರ ಸೆಪ್ಟೆಂಬರಿನಲ್ಲಿ ಗಾಂಧೀಜಿ ಅಖಿಲ ಭಾರತ ನೂಲುವವರ ಸಂಘ ಸ್ಥಾಪಿಸಿದರು. ರಾಜಕೀಯ ಚಟುವಟಿಕೆಗಳಿಂದ ದೂರ ಇದ್ದು ಸತತವಾಗಿ ಗ್ರಾಮಗಳ ಆರ್ಥಿಕ ಪ್ರಗತಿಗೆ ಸಹಾಯವಾಗುವಂತೆ ವಿಶೇಷವಾದ ಸ್ವಯಂಸೇವಕರ ದಳವನ್ನೇ ನಿರ್ಮಾಣಮಾಡಿದರು. ಖಾದಿ ಉತ್ಪಾದನಾ ಕೇಂದ್ರಗಳು ಎಲ್ಲೆಲ್ಲೂ ಪ್ರಾರಂಭವಾದವು. ಬಿಹಾರದಲ್ಲಿ ರಾಜೇಂದ್ರಬಾಬು, ಆಚಾರ್ಯ ಕೃಪಲಾನಿ, ಮದ್ರಾಸಿನಲ್ಲಿ ರಾಜಾಜಿ, ಗುಜರಾತ್ ಮಹಾರಾಷ್ಟ್ರಗಳಲ್ಲಿ ಶಂಕರಲಾಲ್ ಬ್ಯಾಂಕರ್, ಬಂಗಾಳದಲ್ಲಿ ಸತೀಶಚಂದ್ರದಾಸ್ ಗುಪ್ತ, ಪ್ರಫುಲ್ಲಚಂದ್ರರೇ ಮುಂತಾದ ಪ್ರಮುಖರು ಚರಕ ಸಂದೇಶ ಸಾರುತ್ತಾ ತಾವೇ ಖಾದಿ ಕೇಂದ್ರಗಳನ್ನು ಸ್ಥಾಪಿಸಿ ನಡೆಸಿದರು. ದೇಶೀಯ ವಿದ್ಯಾಶಾಲೆಗಳು, ಖಾದಿ ಭಂಡಾರಗಳು, ಮಹಿಳಾ ಸಮಾಜಗಳು ಮತ್ತು ಸೇವಾದಳ ಕೇಂದ್ರಗಳು ನಾಡಿನ ಸ್ವಾತಂತ್ರ್ಯಯೋಧರ ತರಬೇತಿ ಕೇಂದ್ರಗಳಾದವು. ರಚನಾತ್ಮಕ ಕ್ರಾಂತಿಯ ಉಗಮಸ್ಥಾನಗಳಾದವು. ಒಂದು ವಿನೂತನ ಅಹಿಂಸಾತ್ಮಕ ಪರಿಸರ ಸೃಷ್ಟಿಯಾಯಿತು. ಗಾಂಧೀಜಿಯ ಸತ್ಯಾಗ್ರಹ ವಿಜ್ಞಾನವನ್ನು ಜನ ಕ್ರಮಕ್ರಮವಾಗಿ ತಿಳಿದು ಅಭ್ಯಾಸಮಾಡತೊಡಗಿದರು. ಕಾಂಗ್ರೆಸ್ಸಿನ ಸದಸ್ಯನಾಗಲು ಖಾದಿಧಾರಿಯಾಗಬೇಕು ಮತ್ತು ಕಡ್ಡಾಯವಾಗಿ ದಿನವೂ ಸ್ವಲ್ಪಕಾಲ ಚರಕದಿಂದ ನೂಲಬೇಕು ಎಂಬ ನಿಯಮವೇ ಜಾರಿಗೆ ಬಂತು. ಜವಹರಲಾಲರಿಂದ ಹಿಡಿದು ರಾಜಕುಮಾರಿ ಅಮೃತಕೌರರವರೆಗೆ ವಿದ್ಯಾರ್ಥಿಗಳಿಂದ ಹಿಡಿದು ವಿಜ್ಞಾನಿ ಆಚಾರ್ಯ. ಪಿ. ಸಿ. ರೇ ಅವರ ವರೆಗೆ

ಎಲ್ಲರೂ ಈ 'ಸೂತ್ರಯಜ್ಞ'ದಲ್ಲಿ ಭಾಗಿಯಾಗುತ್ತಿದ್ದರು. ಕಾಂಗ್ರೆಸ್ ಅಧಿವೇಶನಗಳಲ್ಲಿ ಖಾದಿ ವಸ್ತುಪ್ರದರ್ಶನ ಮತ್ತು ಸಹಸ್ರಾರು ಜನ ಒಟ್ಟಿಗೆ ಕುಳಿತು ನೂಲುವ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾದವು.


ಇದೇ ಸಮಯಕ್ಕೆ ಗಾಂದೀಜಿ ತಮ್ಮ ಆತ್ಮಕಥೆಯನ್ನು ಬರೆಯತೊಡಗಿದರು. ಯಂಗ್ ಇಂಡಿಯಾದಲ್ಲಿ 'ಸತ್ಯಶೋಧನೆ' ಎಂಬ ವಾರ ವಾರದ ಶೀರ್ಷಿಕೆ ಪ್ರಕಟವಾಯಿತು. ತಮ್ಮ ಜೀವನವೇ ಸತ್ಯನಿಷ್ಠೆಯ ಪ್ರಯೋಗ ಶಾಲೆ ಎಂದು ಕರೆದರು. ತಮ್ಮ ತಪ್ಪುಗಳನ್ನು ಒಪ್ಪಿಕೊಂಡರು. ದೌರ್ಬಲ್ಯಗಳನ್ನು ಹೇಳಿಕೊಂಡರು. "ನನ್ನ ಶ್ರದ್ಧೆ ನನಗೆ ಅನುದಿನವೂ ನೂತನ ಸತ್ಯಗಳನ್ನು ಕಾಣಿಸುತ್ತಿದೆ. ಆತ್ಮದ ಸ್ವರೂಪವೇ ಅಹಿಂಸೆ. ಆದುದರಿಂದಲೇ ಸಕಲರೂ ಬದುಕಿನ ಸಕಲ ವ್ಯವಹಾರಗಳಲ್ಲೂ ಅದನ್ನು ಅನುಷ್ಠಾನಕ್ಕೆ ತರಬೇಕು. ಎಲ್ಲ ಕ್ಷೇತ್ರಗಳಲ್ಲೂ ಅದನ್ನು ಅನುಷ್ಠಾನ ಮಾಡಲಾಗದಿದ್ದರೆ ಅದಕ್ಕೆ ಔಪಯೋಗಿಕ ಮೌಲ್ಯವೇ ಇಲ್ಲ" ಎಂದು ಬರೆದರು.

ಪ್ರವಾಸ ಕಾಲದಲ್ಲಿ ವಿಪರೀತ ಶ್ರಮದಿಂದಾಗಿ ಗಾಂಧೀಜಿ ತುಂಬ ಅಸ್ವಸ್ಥರಾದರು. 1927ರ ಏಪ್ರಿಲ್‌ನಲ್ಲಿ ವಿಶ್ರಾಂತಿಗಾಗಿ ಆಗಿನ ಮೈಸೂರು ಸಂಸ್ಥಾನ ಸರ್ಕಾರದ ಅತಿಥಿಯಾಗಿ ನಂದೀಬೆಟ್ಟಕ್ಕೆ ಬಂದರು. ಮೂರು ತಿಂಗಳ ಅವರ ಸಾನ್ನಿಧ್ಯ ಹಳೆಯ ಮೈಸೂರಿನ ಸಹಸ್ರಾರು ರಾಷ್ಟ್ರಸೇವಕರಿಗೆ ಚಿರಸ್ಮರಣೀಯ ದಿನಗಳಾದವು.

ಅಧ್ಯಾಯ ೬ : ದಂಡಿ ಮಹಾಯಾತ್ರೆ

(i) ಪೂರ್ಣ ಸ್ವರಾಜ್ಯದ ಘೋಷ

ಬ್ರಿಟಿಷರ ಅಧೀನದಲ್ಲೇ ಸ್ವಯಮಾಡಳಿತ (ಡೊಮಿನಿಯನ್ ಸ್ಟೇಟಸ್) ಬೇಡಿಕೆಯನ್ನು 1928ರಲ್ಲಿ ಕಲ್ಕತ್ತ ಕಾಂಗ್ರೆಸ್ ಅನುಮೋದಿಸಿತ್ತು. ಸ್ವರಾಜ್ಯ ಪಕ್ಷದ ಮೋತಿಲಾಲ ನೆಹರು ಅಧ್ಯಕ್ಷರಾಗಿದ್ದರು. ಭಾರತೀಯರು ಸ್ವರಾಜ್ಯಕ್ಕೆ ಯೋಗ್ಯರೇ ? ಎಂದು ನಿರ್ಣಯಿಸಲು ಬ್ರಿಟಿಷ್ ಸರ್ಕಾರ ಸರ್ ಜಾನ್ ಸೈಮನ್ ಅವರನ್ನು ಕಳುಹಿಸಿತು. ಇಡೀ ದೇಶವೇ ಈ ಅವಮಾನ ಸಹಿಸದೆ ಪ್ರತಿಭಟಿಸಿತು, "ಸೈಮನ್ ಹೊರಟು ಹೋಗು" ಎಂಬ ಒಕ್ಕೊರಲಿನ ಕೂಗು ಎಲ್ಲೆಲ್ಲೂ ಎದ್ದು ಸೈಮನ್ ಆಯೋಗ ವಿಫಲವಾಯಿತು. ಹಿರಿಯನಾಯಕರೆಲ್ಲ ಸೆಟೆದು ನಿಂತರು. ತರುಣ ಪೀಳಿಗೆ ಬ್ರಿಟನ್ನನ್ನು ಧಿಕ್ಕರಿಸಿ ಮುನ್ನುಗ್ಗಲು ಕಾತುರರಾದರು. ಗಾಂಧೀಜಿ ಇವನ್ನು ಗಮನಿಸಿ 1929ರ ಲಾಹೋರ್ ಕಾಂಗ್ರೆಸ್ಸಿಗೆ ತೇಜಸ್ವೀ ನವಯುವಕ ಜವಹರಲಾಲರನ್ನು ಅಧ್ಯಕ್ಷತೆಗೆ ಸೂಚಿಸಿದರು. ದೇಶ ಉಘೇ ಎಂದು ಹರ್ಷೋದ್ಗಾರ ಮಾಡಿತು, ಹಿರಿಯರಿಗೆ ಗಾಂಧೀಜಿ ಹೇಳಿದರು. "ಜವಹರರ ಮತ್ತು ನನ್ನ ಹೃದಯಗಳು ಒಂದೇ. ಉತ್ಸಾಹೀ ಚಾಲಕ ಶಕ್ತಿ, ರಾಷ್ಟ್ರನಿಷ್ಠೆ ಮತ್ತು ಕಠೋರ ಶಿಸ್ತಿನ ಯೋಧರಾದ ಜವಹರರಲ್ಲಿ ಪೂರ್ಣ ವಿಶ್ವಾಸವಿಡಲು ಏನೂ ಅಡ್ಡಿಯಿಲ್ಲ." ರಾವಿನದಿತೀರದ ಆ ಮಹಾಧಿವೇಶನದಲ್ಲಿ ತಂದೆ ಮೋತಿಲಾಲರು ಮಗ ಜವಹರರಿಗೆ ರಾಷ್ಟ್ರದ ಅಂದಿನ ಅತ್ಯಂತ ಉನ್ನತ ಪೀಠದ ಜವಾಬ್ದಾರಿ ಒಪ್ಪಿಸಿದುದು ಇತಿಹಾಸ ಪ್ರಸಿದ್ಧ ಘಟನೆ. ಗಾಂಧೀಜಿ ರಾಷ್ಟ್ರದ ಆಚಾರ್ಯ ಪೀಠದಲ್ಲಿದ್ದ ಸರ್ವಮಾನ್ಯನಾಯಕರಾಗಿದ್ದರು. ಜವಹರರ ಮತ್ತು ಸುಭಾಸಚಂದ್ರಬೋಸರ ಅಪ್ರತಿಹತ ತರುಣ ಶಕ್ತಿ ಅವರಲ್ಲಿ ಸಮಾವೇಶಗೊಂಡಿತು. ಅಂದು ಮೂಡಿಬಂದ ಪೂರ್ಣಸ್ವಾತಂತ್ರ್ಯ ಘೋಷ ಅಜೇಯವಾಯಿತು.



ಕರ್ಮಯೋಗಿ ಗಾಂಧೀಜಿ — 1930



Smt Kasturba Gandhi
(1869 to 1944)

ಕಸ್ತೂರಿಬಾಯಿ ಗಾಂಧಿ

ತರುಣರಿಗೆ ಜವಹರಲಾಲ್ ಕರೆಕೊಟ್ಟರು "ನಿರ್ಭೀತಿಯಿಂದ ಮುನ್ನುಗ್ಗಿ ನಡೆದವರಿಗೇ ಜಯಲಭಿಸೀತು ಅಳ್ಳೆದೆಯವರಗೆ ಅದು ದುರ್ಲಭ ... ಇನ್ನೂ ಬ್ರಿಟಿಷರ ದಾಸ್ಯದಲ್ಲಿರುವುದು ಮಾನವತ್ವಕ್ಕೂ ದೈವತ್ವಕ್ಕೂ ವಿರೋಧವಾದ ಅಪರಾಧ." ಹೊಸ ಆಸೆ ಹರಡಿತು. ಹೊಸ ಉದ್ವೇಗ ಚಿಮ್ಮಿತು. ದೇಶ ಸ್ವತಂತ್ರವಾಗಲೇಬೇಕು ಎಂಬ ಸಂಕಲ್ಪ ತುಂಬಿ ಬೀಸಿತು.

ಗಾಂಧೀಜಿಯನ್ನು ಕಾಂಗ್ರೆಸ್ ಮತ್ತೆ ಮರೆಹೊಕ್ಕು "ಹೊಸ ಸತ್ಯಾಗ್ರಹಕ್ಕೆ ಕರೆನೀಡಿ, ನಾವು ಸಮಸ್ತ ಬಲಿದಾನಕ್ಕೂ ಸಿದ್ಧ, ಅಹಿಂಸೆಯಲ್ಲಿ ನಮ್ಮ ಪೂರ್ಣವಿಶ್ವಾಸವಿದೆ. ನಿಮ್ಮ ಆಜ್ಞೆಯಂತೆ ಲಕ್ಷಾಂತರ ಜನ ಎಲ್ಲ ಕಷ್ಟವನ್ನೂ ಸಹಿಸಿ, ದಬ್ಬಾಳಿಕೆಗೆ ಮಣಿಯದೆ, ಸೆರೆಮನೆ ಸೇರುತ್ತೇವೆ." ಎಂದಿತು. ಗಾಂಧೀಜಿಯ ನೈತಿಕ ಶಕ್ತಿ ಸೂರ್ಮಡಿಸಿತು. ಅಪೂರ್ವ ಶಾಂತಿಸಮರಕ್ಕೆ ನಾಡು ಸಿದ್ಧವಾಯಿತು.

ಗಾಂಧೀಜಿ ಸಬರ್ಮತಿಗೆ ಹಿಂತಿರುಗಿದರು. ಕವಿ ರವೀಂದ್ರರು ಅವರ ಬಳಿ ಬಂದರು. ದೇಶದಲ್ಲಿ ಹಿಂಸಾಭಾವನೆ ಹೆಚ್ಚಾಗಿದೆ ಎಂದು ಅವರ ಶಂಕೆ. ಗಾಂಧೀಜಿಯೊಡನೆ ಚರ್ಚಿಸಿದರು. "ಏನು ಮತ್ತೆ ಸೆರೆಮನೆಯ ಚಿಕಿತ್ಸೆಗೆ ಹೊರಟಿರಾ, ನನಗೂ ಅದು ಸಿಕ್ಕೀತೇ ?" ಎಂದರು ಟಾಗೋರ್. "ಹೇಗೆ ಸಾಧ್ಯ ! ನೀವು ವಿಧೇಯರಾಗಬೇಕಲ್ಲ !" ಗಾಂಧೀಜಿ ನಗೆಯಾಡಿದರು. "ನಾನು ನಿಮಗಿಂತ ಹತ್ತು ವರ್ಷ ಹೆಚ್ಚಿನ ವೃದ್ಧ" ಎಂದಾಗ ಗಾಂಧೀಜಿ "ನೀವು ನೃತ್ಯಮಾಡುವ ಎಪ್ಪತ್ತು ವರ್ಷದ ತರುಣರು. ನಾನು ಅರವತ್ತರ ಮುದುಕ" ಎಂದರು. ಮತ್ತೆ ಗಂಭೀರರಾಗಿ ಗುರುದೇವರು "ನಿಮ್ಮ ಮುಂದಿನ ಯೋಜನೆ ಏನು ?" ಎಂದರು. "ನಾನಿನ್ನೂ ನಿರ್ಧರಿಸಿಲ್ಲ. ಆದರೆ ಇದು ನಿಶ್ಚಯ, ಯಾವುದೇ ಹೆಜ್ಜೆಯಿಡಲಿ ಅದು ಪೂರ್ಣ ಸ್ವಾತಂತ್ರ್ಯದೆಡೆಗೆ" ಗಾಂಧೀಜಿಯ ಉತ್ತರ ರವೀಂದ್ರರನ್ನು ಪುಳಕಗೊಳಿಸಿತು. ಆಶ್ರಮವಾಸಿಗಳಿಗೆಂದರು "ನಿಮಗೊಬ್ಬ ಮಹಿಮಾನ್ವಿತ ಗುರುದೊರಕಿದ್ದಾನೆ, ಅವನಿಂದ ಸತ್ಯನಿಷ್ಠೆಯ ಪಾಠಕಲಿಯಿರಿ. ಮಾತಿಗಿಂತ ಕೃತಿಮುಖ್ಯ."

1930ರ ಜನವರಿ 26ರಂದು ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ದಿನ ಆಚರಿಸಬೇಕೆಂದು ಕಾಂಗ್ರೆಸ್ ಜನತೆಗೆ ಕರೆಕೊಟ್ಟಿತು. ಇಂದಿಗೂ ಈ ಪವಿತ್ರದಿನ ರಾಷ್ಟ್ರದ ಗಣರಾಜ್ಯದಿನವೆಂದು ಶಾಶ್ವತವಾಗಿ ನಮ್ಮ ನೆನಪಿಗೆ ಬರುವಂತಾಗಿದೆ. ಸ್ವಾತಂತ್ರ್ಯ ದಿನ ಆಚರಿಸಿದಂದು ಲಕ್ಷಾಂತರ ದೇಶಭಕ್ತರು ಪ್ರತಿಜ್ಞಾವಚನ ಸ್ವೀಕರಿಸಿದರು. ಹಳ್ಳಿ ಹಳ್ಳಿಗಳಲ್ಲಿ ತ್ರಿವರ್ಣ ಧ್ವಜಹಾರಿತು. ನಗರಗಳಲ್ಲಿ ಪ್ರಚಂಡ ಸಭೆಗಳಾದವು. ಗಾಂಧೀಜಿ ಮತ್ತು ಕಾಂಗ್ರೆಸ್ ಏಕೀಭವಿಸಿ ಇಡೀ ದೇಶದ ಮೇಲೆ ಅಗಾಧ ಪರಿಣಾಮಬೀರಿತ್ತು, ಪ್ರತಿಜ್ಞೆಯ ಪಾಠ ಹೀಗಿತ್ತು ;–

"ವಿಶ್ವದ ಎಲ್ಲ ಜನಾಂಗಗಳಿರುವಂತೆಯೇ ಭಾರತೀಯರಿಗೂ ಸ್ವಾತಂತ್ರ್ಯ, ಶ್ರಮಾರ್ಜಿತ ಫಲದ ಅನುಭವ, ಒಳ್ಳೆಯ ಜೀವನಕ್ಕೆ ಬೇಕಾದ ಅವಶ್ಯಕತೆಗಳನ್ನು ಪಡೆಯುವುದು, ಇವು ಆಜನ್ಮಸಿದ್ಧ ಹಕ್ಕುಗಳು. ವಿದೇಶೀ ಸರ್ಕಾರ ಇದನ್ನು ಅಪಹರಿಸಿದೆ. ದಮನಮಾಡುತ್ತಿದೆ. ನಮ್ಮನ್ನು ರಾಜಕೀಯವಾಗಿ ಸಾಂಸ್ಕೃತಿಕವಾಗಿ ನಾಶಮಾಡುತ್ತಿದೆ. ಆದ್ದರಿಂದ ಬ್ರಿಟಿಷ್ ಆಡಳಿತವನ್ನು ಸಮಾಪ್ತಿಗೊಳಿಸಿ ಪೂರ್ಣ ಸ್ವರಾಜ್ಯ ಪಡೆಯಲು ನಾವು ದೃಢವಾಗಿ ಸಂಕಲ್ಪಮಾಡುತ್ತೇವೆ.

ನಾವು ಸ್ವಂತ ಇಚ್ಛೆಯಿಂದ ಅಹಿಂಸಾತ್ಮಕ ಅಸಹಕಾರ, ಕರನಿರಾಕರಣೆ, ಶಾಸನ ಉಲ್ಲಂಘನೆ ಮುಂತಾದ ಅಹಿಂಸಾತ್ಮಕ ಸತ್ಯಾಗ್ರಹ ಮಾರ್ಗಗಳಿಂದ ಪೂರ್ಣಸ್ವಾತಂತ್ರ್ಯ ಪಡೆದುಕೊಳ್ಳಲು ಎಲ್ಲ ಕಷ್ಟನಷ್ಟಗಳನ್ನೂ ಸಹಿಸಲು ಪ್ರತಿಜ್ಞೆ ಮಾಡುತ್ತೇವೆ."

ಗಾಂಧೀಜಿ ಈ ಹಿಂದೆಯೇ ಕನಿಷ್ಟಪಕ್ಷ ಇಷ್ಟನ್ನುನೀಡಿ ಎಂದು ಬ್ರಿಟಿಷ್ ಸರ್ಕಾರಕ್ಕೆ ಹನ್ನೊಂದು ಅಂಶಗಳ ಬೇಡಿಕೆಯೊಂದನ್ನು ಕಳುಹಿಸಿದ್ದರು, ಅವರಲ್ಲಿ ಭಾರತದ ಮೇಲೆ ಹೊರೆಯಾಗಿರುವ ಸೈನ್ಯದ ವೆಚ್ಚ ; ಆಡಂಬರದ ಆಡಳಿತ ವೆಚ್ಚಗಳನ್ನು ತಗ್ಗಿಸಿ ! ಭೂಕಂದಾಯ ಅರ್ಧಕ್ಕೆ ಇಳಿಸಿ !

ಉಪ್ಪಿನಮೇಲಿನ ತೆರಿಗೆ ತೆಗೆಯಿರಿ. ಮದ್ಯಪಾನ ನಿಷೇಧಿಸಿ, ಪರದೇಶೀ ಬಟ್ಟೆಗಳಮೇಲೆ ತೆರಿಗೆಹಾಕಿ ಸ್ವದೇಶೀ ಉತ್ಪಾದನೆ ಪ್ರೋತ್ಸಾಹಿಸಿ, ರಾಜಕೀಯ ಖೈದಿಗಳನ್ನು ಬಿಡುಗಡೆಮಾಡಿ ಮುಂತಾದ ಬೇಡಿಕೆಗಳಿದ್ದವು. ಸರ್ಕಾರ ಯಾವುದಕ್ಕೂ ಕಿವಿಗೊಡಲಿಲ್ಲ. ಕೊನೆಗೆ ಸಾಮೂಹಿಕ ಶಾಸನ ಭಂಗದ ಸತ್ಯಾಗ್ರಹವೊಂದೇದಾರಿ ಎಂದು ಗಾಂಧೀಜಿ ನಿರ್ಣಯಿಸಿದರು. ಲಾಹೋರ್ ಕಾಂಗ್ರೆಸ್ಸಿನ ಆದೇಶದಮೇಲೆ ತಾವು ಸಂಗ್ರಾಮದ ಪೂರ್ಣಜವಾಬ್ದಾರಿ ತೆಗೆದುಕೊಂಡರು. ಮಾರ್ಚಿ ಎರಡರಂದು ವೈಸ್‌ರಾಯರಿಗೆ ಬರೆದು ತಿಳಿಸಿದರು. "ಬ್ರಿಟಿಷರ ಆಡಳಿತ ಒಂದು ಶಾಪ ಎಂದು ನನಗೆ ತಿಳಿದಿದೆ. ಆದರೆ ಯಾವೊಬ್ಬ ಆಂಗ್ಲೇಯನಿಗೂ ನಾನು ಕೇಡು ಬಯಸುವುದಿಲ್ಲ. ಭಾರತದಲ್ಲಿ ಅವನ ನ್ಯಾಯಬದ್ಧ ಹಿತಾಸಕ್ತಿಗೆ ಧಕ್ಕೆತರಲು ಬಯಸುವುದಿಲ್ಲ...ಈ ಆಡಳಿತ ಅನೇಕ ವಿಧದ ಸೂರೆಗಳಿಂದ ಜನರನ್ನು ದಟ್ಟದರಿದ್ರರನ್ನಾಗಿ ಮಾಡುತ್ತಿದೆ. ತಾನು ದುಂದು ವೆಚ್ಚಮಾಡುತ್ತಿದೆ. ಜನ ಜೀತದಾಳುಗಳಾಗುತ್ತಿದ್ದಾರೆ. ನಿಸ್ಸಹಾಯಕರಾಗಿದ್ದಾರೆ. ಯಾವ ಸ್ವಾತಂತ್ರ್ಯವೂ ಅವರಿಗಿಲ್ಲ ... ದೇಶಕ್ಕೆ ಈ ರೀತಿಯ ಅರೆಸಾವಿನ ಸ್ಥಿತಿತಪ್ಪಬೇಕಾದರೆ ಅಹಿಂಸಾತ್ಮಕವಾಗಿ ಹೋರಾಡಿ ಸ್ವರಾಜ್ಯ ಪಡೆಯುವುದೊಂದೇ ದಾರಿ. ಬ್ರಿಟಿಷರ ಮನೋಧರ್ಮವನ್ನು ನಾನು ಪರಿವರ್ತಿಸಲು ಪ್ರಯತ್ನಿಸುತ್ತೇನೆ. ಅವರ ತಪ್ಪನ್ನು ಅವರಿಗೆ ಕಾಣಿಸಲು ನಾವೇ ಬುದ್ಧಿಪೂರ್ವಕವಾಗಿ ಕ್ಲೇಶ ಅನುಭವಿಸುತ್ತೇವೆ ... ನಮ್ಮ ಸ್ವಾತಂತ್ರ್ಯವನ್ನು ಮನ್ನಿಸಿದಾಗಲೇ ಸಂಧಾನ ಸಾಧ್ಯ ... ನೀವು ಅನವಶ್ಯಕವಾಗಿ ಮತೀಯ ಸಮಸ್ಯೆಗಳನ್ನು ಎತ್ತಿ ಆಡಿದ್ದೀರಿ, ಇದು ನಾಡಿಗೆ ಕೆಡುಕು ಮಾಡುತ್ತದೆ...ಈ ಪತ್ರ ನಿಮ್ಮ ಹೃದಯವನ್ನು ಮುಟ್ಟದೇ ಹೋದರೆ ನನಗೆ ಬೇರೆದಾರಿ ಇಲ್ಲ. ಈ ತಿಂಗಳು 11ನೇ ತಾರೀಕು ನನ್ನ ಜೊತೆಯಲ್ಲಿ ಕೆಲವು ಸಹಕಾರ್ಯಕರ್ತರೊಡನೆ ಉಪ್ಪಿನ ಕಾನೂನನ್ನು ಮುರಿಯಲು ನಾನು ಹೊರಡುತ್ತೇನೆ. ಸ್ವಾತಂತ್ರ್ಯ ಚಳುವಳಿ ಈ ದೇಶದ ಕಡುಬಡವನಿಗೆ ಸಂಬಂಧಪಟ್ಟಿದ್ದಾದ್ಧರಿಂದ ಸರ್ವರಿಗೂ ಬೇಕಾದ ಉಪ್ಪಿನ ಬಗ್ಗೆ ಇರುವ ಅನ್ಯಾಯದ ತೆರಿಗೆ ನಿರಾಕರಿಸುತ್ತೇನೆ. ನನ್ನ ಹಿಂದೆ ಸಾವಿರಾರು ದೇಶಸೇವಕರು ಹಿಂಬಾಲಿಸುತ್ತಾರೆ. ಸತ್ಯಾಗ್ರಹಿಯಾಗಿ ಈ ವಿನಯದ ಪತ್ರ ಬರೆಯುವ ಕರ್ತವ್ಯ ಪಾಲಿಸಿದ್ದೇನೆ," ಲಾರ್ಡ್ ಇರ್ವಿನ್ನರಿಗೆ ಗಾಂಧೀಜಿ ಬರೆದ

ಈ ಪತ್ರವನ್ನು ತಮ್ಮ ಆಪ್ತ ಆಂಗ್ಲ ಸ್ನೇಹಿತರೂ ಆಶ್ರಮವಾಸಿಗಳೂ ಆಗಿದ್ದ ರೆಜಿನಾಲ್ಡ್ ರೇನಾಲ್ಡ್ಸ್ ಎಂಬುವರೊಡನೆ ಕಳುಹಿಸಿಕೊಟ್ಟರು. ವೈಸ ರಾಯ್ ಇದನ್ನು ನಿರಾಕರಿಸಿದರು. ಶಾಂತಿಭಂಗಮಾಡಲು ಗಾಂಧೀ ಹವಣಿ ಸಿದ್ದಾರೆ ಎಂದು ದೂರಿದರು. "ಮೊಣಕಾಲೂರಿ ರೊಟ್ಟಿಬೇಡಿದರೆ ದೊರೆ ತದ್ದು ಕಲ್ಲು !" ಎಂದು ಗಾಂಧೀಜಿ ವಿಷಾದಿಸಿದರು. "ಈ ಸ್ಮಶಾನ ಶಾಂತಿ ಯನ್ನು ಸಹಿಸೆವು" ಎಂದು ತಿಳಿಸಿ ಸತ್ಯಾಗ್ರಹ ಸಮರ ಘೋಷಿಸಿದರು.

(ii) ನಡೆಮುಂದೆ – ನಡೆ ಮುಂದೆ

ಗಾಂಧೀಜಿಗೆ ಆಗ ಅರವತ್ತೊಂದು ವರ್ಷ, ಸಮಸ್ತ ಜನಸ್ತೋಮದ ಕೇಂದ್ರ ಶಕ್ತಿಯಾಗಿದ್ದರು. ಸ್ಪಷ್ಟಗುರಿ, ದಿಟ್ಟ ಹೆಜ್ಜೆಗಳ ಸ್ಫೂರ್ತಿ ತುಂಬಿ ತುಳುಕುತ್ತಿತ್ತು, ಅರೆನಗ್ನ ಕೃಶ ಶರೀರ. ಕೈಯಲ್ಲಿ ಧರ್ಮದಂಡ, ಕಣ್ಣು ಗಳಲ್ಲಿ ಮಿಂಚಿನಕಾಂತಿ, ನುಡಿಯಲ್ಲಿ ನಮ್ರತೆ, ಜೊತೆಯಲ್ಲಿ ನಿಶ್ಯಸ್ತ್ರ ಅಹಿಂಸಕ ಪಡೆ, ಎತ್ತಿಹಿಡಿದ ಪವಿತ್ರ ಸ್ವಾತಂತ್ರ್ಯ ಧ್ವಜ, ಸಾಮ್ರಾಜ್ಯ ಶಾಹಿಯನ್ನು ಧ್ವಂಸಮಾಡುವ ಧೀರಸಂಕಲ್ಪ – ಹೀಗೆ ಗಾಂಧೀಜಿ ದಂಡೀ ಯಾತ್ರೆಯ ಮುಂಚೂಣಿಯಲ್ಲಿ ನಡೆದರು. 'ಮಹಾತ್ಮ ಗಾಂಧೀಕಿ ಜೈ' ಮುಗಿಲಿಗೆ ಮುಟ್ಟಿತು, ವಿಶ್ವವೇ ಆವಾಕ್ಕಾಗಿ ನೋಡುತ್ತ ನಿಂತಿತು.

ಮಾರ್ಚಿ 12, 1930. ಬೆಳಗಿನ ಸೂರ್ಯೋದಯಕ್ಕೆ ಪ್ರಾರ್ಥನಾ ಸಭೆ ನಡೆಸಿ ದೇಶದ ನಾನಾ ಭಾಗಗಳಿಂದ ಬಂದಿದ್ದ 78 ನುರಿತ ಸತ್ಯಾಗ್ರಹಿ ಗಳ ತಂಡ ಸಬರ್ಮತಿ ಆಶ್ರಮದಿಂದ ಮಹಾಯಾತ್ರೆ ಆರಂಭಿಸಿತು. ಅದಕ್ಕೆ ಮುಂಚೆ ಸಬರ್ಮತಿ ತೀರದಲ್ಲಿ ಸಭೆ ಸೇರಿ ಬೆಂಬಲಕೊಟ್ಟ ಲಕ್ಷಾಂತರ ಜನ ಸಮೂಹಕ್ಕೆ ಗಾಂಧೀಜಿ ಹೀಗೆ ನುಡಿದಿದ್ದರು–

> "ನಾಳೆ ಪ್ರಾತಃಕಾಲ ನನ್ನನ್ನು ಬಂಧಿಸಿದರೂ, ಈಗ ಆರಂಭವಾದ ದಂಡಯಾತ್ರೆ ನಿಲ್ಲಿಸಕೂಡದು. ತಂಡದ ಹಿಂದೆ ತಂಡ ಸಿದ್ಧ ವಾಗಬೇಕು, ಈ ಕಾರ್ಯಮುಗಿಸುವಷ್ಟು ಸತ್ಯಾಗ್ರಹಿಗಳು

ಭಾರತದಲ್ಲಿದ್ದಾರೆಂಬ ನಂಬಿಕೆ ನನಗಿದೆ. ನಮ್ಮ ಉದ್ದೇಶ ಸತ್ಯವೂ ನ್ಯಾಯವೂ ಆಗಿದ್ದರೆ ದೈವಕೃಪೆ ಇದ್ದೇ ತೀರುತ್ತದೆ. ಸತ್ಯಾಗ್ರಹಕ್ಕೆ ಸೋಲೆಂಬುದಿಲ್ಲ. ಸತ್ಯ ಮತ್ತು ಅಹಿಂಸೆಗಳನ್ನು ಪಾಲಿಸದಿದ್ದರೆ ನಿರಾಶೆಯಾದೀತು ಜೋಕೆ !"

ಗಾಂಧೀಜಿಯೊಡನೆ ಹೊರಟ ಯಾತ್ರಿಕರು ಅತ್ಯಂತ ಸಾಮಾನ್ಯ ಭಾರತೀಯ ರೈತರಂತಿದ್ದರು. ಪ್ರಸಿದ್ಧ ನಾಯಕರಾಗಲಿ, ಉನ್ನತ ಪ್ರತಿಷ್ಠಿತರಾಗಲಿ, ಮಹಿಳೆಯರಾಗಲಿ, ಆಂಗ್ಲ ರೀತಿನೀತಿಗಳ ಆಧುನಿಕರಾಗಲಿ, ವಿದೇಶೀಯರಾಗಲಿ ಇರಲಿಲ್ಲ, ನಿಷ್ಕಪಟ ಜೀವನದ ಸರಳ ಸ್ವಭಾವದ ಮಣ್ಣಿನ ಮಕ್ಕಳ ಆಪಡೆಗೂ ಆಧುನಿಕ ಶಸ್ತ್ರಾಸ್ತ್ರ ಸಜ್ಜಿತ ಯುದ್ಧದ ಶಿಕ್ಷಣ ಪಡೆದ ಪ್ರಬಲ ಸೈನ್ಯಕ್ಕೂ ಎಷ್ಟು ವ್ಯತ್ಯಾಸ ! ಈ ಸಮರದಲ್ಲಿ ಇವರು ಉಳಿದಾರೆ ಎಂದು ಲೋಕಬೆರಗಾಗಿ ನೋಡುತ್ತಿತ್ತು.

ನಡೆ ಮುಂದೆ ! ನಡೆ ಮುಂದೆ ! ನುಗ್ಗಿ ನಡೆ ಮುಂದೆ–"ಮಣಿಯದಿಹ ಮನವೊಂದು, ಸಾಧಿಸುವ ಹಠವೊಂದು, ನಿಜವನೇರಕೆ ನಡೆವ ನಿಶ್ಚಲತೆಯೊಂದು ಪ್ರೇಮಕ್ಕೆ ಮರುಕಕ್ಕೆ ಚಿರತೆರೆದ ಎದೆಯೊಂದು" – ನಿರ್ಭೀತರಾಗಿ ಆತ್ಮಾರ್ಪಣ ಬುದ್ಧಿಯಿಂದ ನಾಡನ್ನು ವಿಮೋಚನೆಗೊಳಿಸಲು ಇಂಥ ಕವಿವಾಣಿ ಲಕ್ಷ ಲಕ್ಷ ಹೃದಯಗಳಲ್ಲಿ ಪ್ರತಿಧ್ವನಿಸಿ ಮುನ್ನಡೆಸುತ್ತಿತ್ತು.

ದಿನವೂ ಹತ್ತುಮೈಲಿ ಪ್ರಯಾಣ, ಒಂದು ಹಳ್ಳಿಯಲ್ಲಿ ಒಂದು ದಿನ ಶಿಬಿರ, ಪ್ರಾರ್ಥನಾ ಸಭೆಗಳು, ಭೇಟಿಗಳು, ಯಾತ್ರೆಯ ಉದ್ದೇಶಗಳ ವಿವರಣೆ. ಜನರ ಕರ್ತವ್ಯಗಳನ್ನು ತಿಳಿಸುವುದು, ಸೂತ್ರಯಜ್ಞ. ವಾರಕ್ಕೊಂದು ದಿನ ವಿಶ್ರಾಂತಿ, ಗ್ರಾಮಸ್ವಚ್ಛತೆ, ಶಿಕ್ಷಣ, ಅಸ್ಪೃಶ್ಯತಾ ನಿವಾರಣೆ, ಇವುಗಳಲ್ಲಿ ಗ್ರಾಮಸ್ಥರನ್ನು ತೊಡಗಿಸುವುದು. ಹೀಗೆ ಸಾಗಿತ್ತು ಗಾಂಧೀಜಿಯ ದಿನಚರಿ.

ಮಹಿಳೆಯರಿಗೆ ವಿದೇಶೀ ವಸ್ತ್ರದಂಗಡಿಗಳ ಬಹಿಷ್ಕಾರ, ಹೆಂಡದಂಗಡಿಗಳ ನಿಷೇಧ, ಸಾಮೂಹಿಕ ಸರ್ವಧರ್ಮ ಪ್ರಾರ್ಥನೆ ಇವುಗಳನ್ನು ಶಿಸ್ತಿನಿಂದ ಅಹಿಂಸಾತ್ಮಕವಾಗಿ ನೀವಿದ್ದಕಡೆ ನಡೆಸಿರಿ ಎಂದು ಆದೇಶ ನೀಡಿದರು ಗಾಂಧೀಜಿ.

241 ಮೈಲಿ ಪ್ರಯಾಣಮಾಡಿ 1930 ಏಪ್ರಿಲ್ 5 ರಂದು ಸಮುದ್ರ ತೀರದ ದಂಡಿ ತಲುಪಿದರು. ಏಪ್ರಿಲ್ 6ರ ಬೆಳಗಿನ ಜಾವದ ಪ್ರಾರ್ಥನೆ ನಡೆಸಿದರು. "ಈ ದಿನ ಸಮುದ್ರದಿಂದ ಉಪ್ಪು ತಯಾರಿಸಿ ಕಾನೂನು ಭಂಗ ಮಾಡುತ್ತೇನೆ. ಈ ಘಳಿಗೆಯಿಂದ ಎಲ್ಲರೂ ತಮ್ಮ ತಮ್ಮ ಸ್ಥಳಗಳಲ್ಲಿ ಶಾಸನಭಂಗ ಚಳುವಳಿ ಪ್ರಾರಂಭಿಸಿ"ಎಂದು ಗಾಂಧೀಜಿ ದೇಶಕ್ಕೆಕರೆಕೊಟ್ಟರು. ಅಮಿತೋತ್ಸಾಹದ ಅಲೆ ಎಲ್ಲೆಲ್ಲೂ ಭೋರ್ಗರೆದು ಉಕ್ಕಿತು. ತಾವು ಬಂಧಿತರಾದರೆ ತಮ್ಮನಂತರ ನಿವೃತ್ತ ನ್ಯಾಯಾಧೀಶ ಅಬ್ಬಾಸ್ ತಯಾಬ್ಜಿಯವರು ಅವರನಂತರ ಶ್ರೀಮತಿ ಸರೋಜಿನಿ ನಾಯ್ಡು ಚಳುವಳಿಯ ನಾಯಕರಾಗುವರು ಎಂದು ನೇಮಿಸಿದರು.

ಸಮುದ್ರಸ್ನಾನಮಾಡಿ ಬೆಳಿಗ್ಗೆ 8-30 ಗಂಟೆಗೆ ಸಮುದ್ರತೀರದಲ್ಲಿನ ಸ್ವಾಭಾವಿಕ ಉಪ್ಪನ್ನು ಒಂದು ಹಿಡಿತೆಗೆದುಕೊಂಡು "ಬಹಿರಂಗವಾಗಿ ಶಾಸನ ಭಂಗಮಾಡಿದ್ದೇನೆ" ಎಂದು ಕೈಗಳನ್ನೆತ್ತಿ ಘೋಷಣೆ ಮಾಡಿದರು ಗಾಂಧೀಜಿ. ಕಿಕ್ಕಿರಿದ ಜನಸ್ತೋಮ ಏಕಕಂಠದಿಂದ ಜೈಕಾರಮಾಡಿತು. ಪೋಲೀಸು ಪಡೆ ಮೂಕ ವಿಸ್ಮಿತರಾಗಿ ನೋಡುತ್ತಿದ್ದರು. ಕವಯತ್ರಿ ಸರೋಜನಿ ದೇವಿಯ ಹೃದಯತುಂಬಿ ಬಂತು.

"ಸೆರೆಕಳಚಿದ ಓ ಶಾಸನಭಗ್ನಕಾರೀ ! ಓ ! ಬರಿಮೈಯಿನ ಆತ್ಮ ಶಕ್ತಿಯೇ, ಓ ಲೋಕ ಗುರುವೇ ನಿನಗೆ ಜಯವಾಗಲಿ" ಎಂದು ಉದ್ಗರಿಸಿದರು.

ಉಪ್ಪಿನ ತೆರಿಗೆಯಮೇಲಿನ ಈ ಹೋರಾಟ ಏಪ್ರಿಲ್ 6 ರಿಂದ 13ರ ರಾಷ್ಟ್ರೀಯ ವಾರದಲ್ಲಿ ತೀವ್ರವಾಯಿತು. ಈ ಪವಿತ್ರವಾರದಲ್ಲಿ ಎಲ್ಲೆಲ್ಲೂ ಅಸಹಕಾರ, ಬಹಿಷ್ಕಾರ, ಶಾಸನೋಲ್ಲಂಘನೆ, ಪ್ರತಿಭಟನೆಗಳು ನಡೆಯಲು ರಾಷ್ಟ್ರೀಯ ನಾಯಕರು ಕರೆಕೊಟ್ಟರು.

ಒಂದು ವರ್ಷಕಾಲ ಭಾರತದ ಮೂಲೆ ಮೂಲೆಗಳಲ್ಲಿ ಜನ ಅತ್ಯಂತ ಸಂಘಟಿತ ಅಹಿಂಸಕ ಅಸಹಕಾರ, ಶಾಸನಭಂಗ, ವಿದೇಶಿ ವಸ್ತ್ರದಹನ ಮತ್ತು ಸರ್ಕಾರೀ ಸಂಸ್ಥೆಗಳ ಬಹಿಷ್ಕಾರ ಕೈಗೊಂಡರು. ಸಾಮೂಹಿಕ ಸತ್ಯಾಗ್ರಹದ ಬೃಹತ್ ಸ್ವರೂಪ ಬ್ರಿಟಿಷ್ ಸಾಮ್ರಾಜ್ಯದ ಪ್ರತಿಷ್ಠೆಯನ್ನು ನುಚ್ಚುನೂರು ಮಾಡಿತು. ಎದ್ದುನಿಂತು ಸ್ವಾತಂತ್ರ್ಯಕ್ಕಾಗಿ ಸಮಸ್ತ ಬಲಿದಾನಕ್ಕೂ ಸಿದ್ಧವಾದ ಜಾಗೃತ ಭಾರತಕ್ಕೆ ಆಕ್ರಮಣಕಾರರು ಮಣಿಯಬೇಕಾಯಿತು.

ಬೊಂಬಾಯಿ ನಗರದಲ್ಲಿ ನಲವತ್ತು ಸಾವಿರ ಸ್ವಯಂಸೇವಕರು, ಗಂಡಸರು, ಹೆಂಗಸರು, ಪ್ರಚಂಡ ಹರತಾಳ ನಡೆಸಿದರು. 30 ಕೋಟಿ ರೂಪಾಯಿಗಳ ವಿದೇಶೀ ವಸ್ತು ದಾಸ್ತಾನನ್ನು ಬಹಿಷ್ಕಾರಮಾಡಿ ಬೀಗ ಮುದ್ರೆ ಹಾಕಿದರು. ಗುಜರಾತಿನ ಹಳ್ಳಿಹಳ್ಳಿಗಳಲ್ಲಿ ಗ್ರಾಮಾಧಿಕಾರಿಗಳು ರಾಜಿನಾಮೆಯಿತ್ತು ಸತ್ಯಾಗ್ರಹ ಚಳುವಳಿ ಸೇರಿದರು. ಸಮುದ್ರ ತೀರದುದ್ದಕ್ಕೂ ಉಪ್ಪು ತಯಾರಿಸಿದ ಐದಾರು ಸಾವಿರ ಜನರನ್ನು ಹೊಡೆದು ಬಡಿದು ದಸ್ತಗಿರಿಮಾಡಿದರು. ಜನ ಯಾವುದಕ್ಕೂ ಜಗ್ಗಲಿಲ್ಲ. ಕಾಂಗ್ರೆಸ್ ಅಧ್ಯಕ್ಷ ಜವಹರಲಾಲರನ್ನು ಬಂಧಿಸಿ ಸೆರೆಮನೆಗೆ ಹಾಕಲಾಯಿತು.

ಮೇ 5 ರಂದು ಮಧ್ಯರಾತ್ರಿ ಧರಸನಾ ಉಪ್ಪಿನಕೋಠಿಯ ಬಳಿ ಗಾಂಧೀಜಿಯನ್ನು ದಸ್ತಗಿರಿ ಮಾಡಿದರು. ಸತ್ಯಾಗ್ರಹಿಗಳ ಶಿಬಿರಕ್ಕೆ ರಾತ್ರಿ 1 ಗಂಟೆಗೆ ಪೋಲೀಸು ಅಧಿಕಾರಿ ಬಂದರು. ಗಾಂಧೀಜಿ ಶಾಂತರಾಗಿ ಎದ್ದು ಮುಖತೊಳೆದು ಪ್ರಾರ್ಥನೆ ನಡೆಸಿ ಸೆರೆಮನೆಗೆ ತೆರಳಿದರು. ಮಾರನೇ ದಿನ ಬೆಳಿಗ್ಗೆ ಉಪ್ಪಿನ ಸತ್ಯಾಗ್ರಹ ಇನ್ನೂ ನೂರ್ಮಡಿ ಬಿರುಸಾಯಿತು. ಅಬ್ಬಾಸ್ ತಯಾಬ್ಜಿ, ಸರೋಜಿನಿನಾಯ್ಡು, ಮಣಿಲಾಲ ಗಾಂಧಿ ಇವರುಗಳು ಧರಸನಾ

ಕೋರಿಗೆ ಸಾವಿರಾರು ಸತ್ಯಾಗ್ರಹಿಗಳೊಡನೆ ಧಾಳಿಯಿಟ್ಟರು, ಅವರನ್ನೆಲ್ಲ ದಸ್ತಗಿರಿ ಮಾಡಿದರು. ದೊಡ್ಡ ಸಶಸ್ತ್ರ ಪೋಲೀಸು ಪಡೆ ಧಾವಿಸಿಬಂದು ಅಮಾನುಷವಾಗಿ ಲಾಠಿಗಳಿಂದ ಜನರನ್ನು ಚಚ್ಚಿದರು. ಗುಂಡು ಹಾರಿಸಿದರು. ಕುದುರೆಗಳನ್ನು ನುಗ್ಗಿಸಿದರು. ಆದರೂ ಎಲ್ಲವನ್ನೂ ಎದೆ ಚಾಚಿ ಎದುರಿಸಿ ನಿಂತು ಮುನ್ನುಗ್ಗುತ್ತಿದ್ದ ಸತ್ಯಾಗ್ರಹಿಗಳ ಸಾಲುಗಳು ಬರುತ್ತಲೇ ಇದ್ದವು. ವಿದೇಶೀ ಪತ್ರಿಕಾ ಪ್ರತಿನಿಧಿಗಳು ಈ ಅಸದೃಶ ಅಹಿಂಸಾತ್ಮಕ ಹೋರಾಟ ಕಂಡು ವಿಸ್ಮಿತರಾದರು. ರೋಮಾಂಚಕಾರೀ ಘಟನೆಗಳು ಪ್ರಪಂಚದ ಪತ್ರಿಕೆಗಳಲ್ಲಿ ಪ್ರಕಟವಾದವು. ಒಂದು ಅಪೂರ್ವ ಅಪ್ರತಿಹತ ಸಾತ್ವಿಕ ಶಕ್ತಿ ಹಿಮಾಲಯದಂತೆ ಅಚಲವಾಗಿ ಎದ್ದುನಿಂತಿತ್ತು. ಆ ವೇಳೆಗಾಗಲೇ 30 ಸಾವಿರ ರಾಷ್ಟ್ರೀಯ ಮುಖಂಡರನ್ನು ಸೆರೆಮನೆಗಳಲ್ಲಿ ತುಂಬಿದ್ಧರು. ಒಂದು ಲಕ್ಷಕ್ಕೂ ಮೀರಿ ಸತ್ಯಾಗ್ರಹಿಗಳ ದಸ್ತಗಿರಿಯಾಯಿತು. ಪಂಡಿತ ಮೋತಿಲಾಲ್ ನೆಹರು, ರಾಜೇಂದ್ರ ಪ್ರಸಾದ್, ಸರ್ದಾರ್ ಪಟೇಲ್, ಪಟ್ಟಾಭಿ ಸೀತಾರಾಮಯ್ಯ. ಸಿ. ರಾಜಗೋಪಾಲಾಚಾರಿ. ಜವಹರಲಾಲ್, ಸುಭಾಸ ಚಂದ್ರಬೋಸ್, ನಾರಿಮನ್, ಕೃಪಲಾನಿ, ಶಾಸನೋಲ್ಲಂಘನೆಮಾಡಿ ಶಿಕ್ಷೆಗಳಿಗೊಳಗಾದರು,

ಗಡಿನಾಡಿನಲ್ಲಿ ಖಾನ್ ಅಬ್ದುಲ್ ಗಫಾರ್ ಖಾನ್ ರೂಪಿಸಿದ್ದ "ಖುದಾಯಿ ಕಿದ್‌ಮತ್ ಗಾರ್" (ದೇವರ ಸೇವಕರು) ಎಂಬ ಅಹಿಂಸಾತ್ಮಕ ಪಠಾಣರ ಪಡೆ ದಿಟ್ಟತನದಿಂದ ಹೋರಾಟಕ್ಕೆ ನಿಂತು ಸ್ವಾತಂತ್ರ್ಯ ಘೋಷಿಸಿದರು. ಅವರ ಮೇಲೆ ಗುಂಡುಹಾರಿಸಲು ಬ್ರಿಟಿಷ್ ಸೈನ್ಯದ ಘೂರ್ಕ ಪಡೆಯವರು ನಿರಾಕರಿಸಿಬಿಟ್ಟರು. ಸರ್ಕಾರಕ್ಕೆ ದಿಗ್ಭ್ರಮೆಯಾಯಿತು, ಬಾರ್ದೋಲಿಯಲ್ಲಿ ಸರ್ದಾರ್ ಪಟೇಲರು ನಡೆಸಿದ ಮತ್ತು ಕರ್ನಾಟಕದ ಅಂಕೋಲ ಸಿದ್ದಾಪುರಗಳಲ್ಲಿ ಡಾ॥ ಹರ್ಡಿಕರ್, ಸರ್ದಾರ್ ವೀರಣ್ಣಗೌಡ ಪಾಟೀಲ, ಸರ್ದಾರ್ ವೆಂಕಟರಾಮಯ್ಯ ಮುಂತಾದವರು ನಡೆಸಿದ ಪ್ರಸಿದ್ಧ ಕರನಿರಾಕರಣೆ, ಅರಣ್ಯ ಸತ್ಯಾಗ್ರಹ, ಮದ್ಯಂಗಡಿಗಳ ನಾಶ ಮುಂತಾದ ಸಾಮೂಹಿಕ ಚಳುವಳಿಗಳು ಸಾಮ್ರಾಜ್ಯಶಾಹಿಯನ್ನು ನಡುಗಿಸಿಬಿಟ್ಟವು.

ಸಾಮ್ರಾಜ್ಯವಾದೀ ಕನ್ಸರ್ವೇಟಿವ್ ಪಕ್ಷದ ಪ್ರಮುಖ ಚರ್ಚಿಲ್ ಈ "ಅರೆನಗ್ನ ರಾಜದ್ರೋಹಿ ಫಕೀರ ಸರಿಸಮಾನನಂತೆ ಮಹಾಸಾಮ್ರಾಜ್ಯದ ಪ್ರತಿನಿಧಿ ವೈಸರಾಯರೊಡನೆ ಭಾರತದ ಪ್ರತಿನಿಧಿಯಾಗಿ ಸಂಧಾನ ಮಾಡುವುದು ಬ್ರಿಟನ್ನಿಗೆ ಅವಮಾನಕರ" ಎಂದರು. ಆ ಹೇಳಿಕೆ ಗಾಂಧೀಜಿಯ ಔನ್ನತ್ಯವನ್ನು ಎಳ್ಳಷ್ಟೂ ಕಡಿಮೆಮಾಡಲಿಲ್ಲ. ಚರ್ಚಿಲ್‌ನ ಉದ್ಧಟತನಕ್ಕೆ ಕನ್ನಡಿಯಾಯಿತು. ಮುಂದೆ ಲೇಬರ್ ಪಕ್ಷದ ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್ಡೊನಾಲ್ಡ್ ಗಾಂಧೀಜಿಯನ್ನು ಕಾಂಗ್ರೆಸ್‌ನ ಏಕೈಕ ಪ್ರತಿನಿಧಿಯಾಗಿ ಎರಡನೇ ದುಂಡುಮೇಜಿನ ಪರಿಷತ್ತಿಗೆ ಅಹ್ವಾನಿಸಿದರು. 1931ರ ಆಗಸ್ಟ್‌ನಲ್ಲಿ ಸರೋಜಿನಿನಾಯ್ಡು, ಮಹದೇವ ದೇಸಾಯಿ, ಮೀರಾಬಹೆನ್, ಪಂಡಿತ ಮದನಮೋಹನ ಮಾಳವೀಯ. ಪ್ಯಾರಿಲಾಲ್, ಮಗ ದೇವದಾಸ್ ಗಾಂಧಿ ಮುಂತಾದವರೊಡನೆ ಹಡಗಿನಲ್ಲಿ ಲಂಡನ್‌ಗೆ ಹೊರಟರು. ಅತ್ಯಂತ ಕಡಮೆ ದರ್ಜೆಯ ತರಗತಿಯಲ್ಲೇ ಅವರ ಪ್ರಯಾಣ. ಅತ್ಯಂತ ಕಡಮೆ ಸಾಮಾನುಗಳು, ಉಡಲು ಹೊದೆಯಲು ಕೇವಲ ನಾಲ್ಕು ಖಾದಿ ಮತ್ತು ಒಂದೆರಡು ಉಣ್ಣೆ ವಸ್ತ್ರಗಳು, ಕಾಲಿಗೆ ಚಪ್ಪಲಿ, ನೂಲಲು ಚರಕ: ಈ ಮಹಾತ್ಮನೆನಿಸಿದ್ದ ಭಾರತೀಯ ರಾಜನೀತಿ ನಿಪುಣನನ್ನು, ಪ್ರತಿಷ್ಠಿತ ಲಂಡನ್ ಅತ್ಯಂತ ಗೌರವ ವಿಶ್ವಾಸಗಳಿಂದ ಬರಮಾಡಿಕೊಂಡಿತು. ಲಂಡನ್ನಿನ ಬಡವರ ನಿವಾಸವಾದ 'ವೆಸ್ಟ್‌ವಿಂಡ್' ಬಡಾವಣೆಯಲ್ಲಿ ಸಮಾಜಸೇವಾನಿಷ್ಠೆ ಮ್ಯೂರಿಯಲ್‌ಲೆಸ್ಟರ್ ಅವರ ಸಂಸ್ಥೆಯ ಅತಿಥಿಯಾಗಿ ಬಿಡಾರಮಾಡಿದರು ಗಾಂಧೀಜಿ. ರಾಜಕೀಯ ಧುರೀಣರೆಲ್ಲ ಈ ನೈತಿಕ ನಿಷ್ಠೆಗೆ ಮಾರುಹೋದರು.

(iii) ಅಂಕಲ್ ಗಾಂಧಿ

12ನೇ ಸೆಪ್ಟೆಂಬರ್ 1931 ರಿಂದ ಡಿಸೆಂಬರ್ 5ರವರೆಗೆ ಗಾಂಧೀಜಿ ಲಂಡನ್‌ನಲ್ಲಿದ್ದರು. ಅವರು ತಂಗಿದ್ದ 'ಕಿಂಗ್ಸ್ಲೆ ಹಾಲ್' ಎಂಬ ಸಮಾಜ ಸೇವಾ ಭವನ ಯಾವಾಗಲೂ ಅತಿಥಿಗಳಿಂದ ಕಿಕ್ಕಿರಿದಿರುತ್ತಿತ್ತು. ಉದಾರವಾದಿ ಕ್ರೈಸ್ತಪಂಥವಾದ 'ಕ್ವೇಕರ್' ಎಂಬ ಚಿಕ್ಕಗುಂಪು ಗಾಂಧೀಜಿಯ

ಅಹಿಂಸಾವಾದ, ಯುದ್ಧವಿರೋಧ, ವಿಶ್ವಭ್ರಾತೃತ್ವ ಮತ್ತು ನಿಃಸ್ವಾರ್ಥ ಸಮಾಜಸೇವೆಗಳನ್ನು ಮನಸಾರೆ ಮೆಚ್ಚಿತ್ತು. ಕಿಂಗ್ಸ್ಲಿ ಹಾಲ್ ಕ್ವೇಕರ್ ಗುಂಪಿನ ಕೇಂದ್ರ ಸಂಸ್ಥೆ. ಇಂಗ್ಲೆಂಡಿನ ಗಣ್ಯರನೇಕರು ಬಂದು ಗಾಂಧೀಜಿ ಯನ್ನು ಭೇಟಿಯಾದರು. ವಿಖ್ಯಾತಸಾಹಿತಿ ಬರ್ನಾರ್ಡ್‌ಷಾ, ಪ್ರಸಿದ್ಧ ನಟ ಚಾರ್ಲಿಚಾಪ್ಲಿನ್, ರಾಜಕಾರಣಿ ಲಾಯಿಡ್‌ಜಾರ್ಜ್, ಡಾ॥ ಗಿಲ್ಬರ್ಟ್‌ಮುರ್ರೆ, ಪ್ರೊ॥ ಹೆರಾಲ್ಡ್ ಲಾಸ್ಕಿ ಮುಂತಾದವರೊಡನೆ ಸೌಹಾರ್ದ ಭೇಟಿ ಉನ್ನತ ಮಟ್ಟದ ಚರ್ಚೆಗಳು ನಡೆದವು. ಈ ಮಹಾತ್ಮನ ಶ್ರೇಷ್ಠ ವಿಚಾರಗಳಿಗೆ ಅವರು ಮಾರುಹೋದರು. ಪತ್ರಿಕೆಗಳು ದುಂಡುಮೇಜಿನ ಪರಿಷತ್ತಿನ ಚರ್ಚೆಗಳಿಗಿಂತ ಹೆಚ್ಚಾಗಿ ಮಹಾತ್ಮಗಾಂಧಿಯ ಉನ್ನತವ್ಯಕ್ತಿತ್ವವನ್ನೇ ಬಣ್ಣಿಸಿ ಪ್ರಕಟಿಸುತ್ತಿದ್ದವು,

ದುಂಡುಮೇಜಿನ ಪರಿಷತ್ತು ಸಾಗಿತ್ತು. ಬ್ರಿಟಿಷ್ ಸರ್ಕಾರದ ಸಲಹೆ ಗಳು ಭಾರತವನ್ನು ಜಾತಿಗಳ ಆಧಾರದಮೇಲೆ ಒಳಜಗಳಗಳನ್ನು ಉಲ್ಬಣಿಸು ವಂತೆ ಇದ್ದವು. ಪ್ರತ್ಯೇಕ ಚುನಾವಣಾ ಕ್ಷೇತ್ರಗಳು, ಇಂಗ್ಲೆಂಡಿನೊಡನೆ ಬೇರೆ ಬೇರೆ ರಾಜಕೀಯ ಒಪ್ಪಂದಮಾಡಿಕೊಂಡು ಒಡೆದು ಹೋಗುವ ಭಾರತ, ಪ್ರಜೆಗಳ ನೇರಪ್ರಭುತ್ವಕ್ಕೆ ಅಡ್ಡಿಗಳು ಇವೇ ಮುಂತಾದ ಅಡಚಣೆಗ ಳಿಂದ ಸಂಧಾನ ಪ್ರಯತ್ನಗಳೆಲ್ಲ ವಿಫಲವಾದವು.

> "ಕಾಂಗ್ರೆಸ್ಸು ಆಂದೋಲನದ ಪ್ರತಿನಿಧಿ. ನಿಜವಾದ ಸ್ವಾತಂತ್ರ್ಯ ಪಡೆಯುವುದು ಅದರ ಗುರಿ. ಅದರ ನಕಲನ್ನಲ್ಲ. ಗುಲಾಮ ಗಿರಿಯ ಸೆರೆಗಳನ್ನು ಬಲಪಡಿಸಬಾರದು. ಬ್ರಿಟಿಷರ ಬಗ್ಗೆ ದ್ವೇಷವಿಲ್ಲ, ಅದು ನನ್ನ ಜೀವನತತ್ವಕ್ಕೆ ವಿರೋಧ. 35 ಕೋಟಿ ಭಾರತೀಯರ ನನ್ನ ರಾಷ್ಟ್ರ ಉದಾರವಾದಿ ರಾಷ್ಟ್ರ. ಅದಕ್ಕೆ ಪ್ರತೀಕಾರದ ಹಿಂಸೆ ಬೇಕಿಲ್ಲ. ಕೊಲೆಗಾರನ ಮದ್ದು ಗುಂಡು ಬೇಕಿಲ್ಲ. ತನ್ನನ್ನು ದಾಸ್ಯದಲ್ಲಿಟ್ಟು ತುಳಿಯುವ

ಪ್ರಭುತ್ವದ ಆಜ್ಞೆಗೆ 'ತಲೆಬಾಗುವುದಿಲ್ಲ' ಎನ್ನುವ ದಿಟ್ಟ ಸ್ವಭಾವವನ್ನು ಬೆಳೆಸಿಕೊಳ್ಳಲು ಕಲಿಯುತ್ತಿದೆ. ವಿದೇಶೀ ಸರ್ಕಾರ ಹೋದೊಡನೆ ಜಾತೀಯ ಸಮಸ್ಯೆ ಪರಿಹಾರವಾದೀತು. ಇಡೀ ಭಾರತಕ್ಕೆ ಅನ್ವಯವಾಗುವ ಮೂಲಭೂತ ಹಕ್ಕುಗಳನ್ನು ಅಂಗೀಕರಿಸಿ" ಎಂದು ಗಾಂಧೀಜಿ ಬಿನ್ನವಿಸಿದರು.

"ಸಹಸ್ರ ಸಹಸ್ರ ಇಂಗ್ಲೀಷ್ ಜನರ ಸ್ನೇಹವನ್ನು ನಾನು ಒಯ್ಯುತ್ತಿದ್ದೇನೆ. ಅವರೆಲ್ಲ ನನಗೆ ಹೊಸಬರು. ಆದರೆ ಪ್ರತಿದಿನ ಅವರೊಡನೆ ಬೆರೆತು ಸಂವಾದಿಸಿದಾಗ ಅವರ ಕಣ್ಣುಗಳಲ್ಲಿ ಪ್ರೀತಿ ತುಳುಕುವುದನ್ನು ಕಂಡಿದ್ದೇನೆ, ಅವರ ಸ್ನೇಹ ಪೂರ್ಣ ಆತಿಥ್ಯ ನನ್ನ ಹೃದಯ ತುಂಬಿದೆ" ಎಂದರು.

ಚಕ್ರವರ್ತಿ ಐದನೇ ಜಾರ್ಜ್ ಭಾರತೀಯ ಪ್ರತಿನಿಧಿಗಳನ್ನು ಔಪಚಾರಿಕವಾಗಿ ಔತಣಕ್ಕೆ ಕರೆದರು. ಗಾಂಧೀಜಿಯೂ ಬರಲೊಪ್ಪಿದರು. ಎಲ್ಲರಿಗೂ ಕೌತುಕ. "ಇದೇ ಉಡುಪಿನಲ್ಲಿ ಹೋಗುತ್ತೀರಾ ?" ಎಂದು ಕೇಳಿದರು. "ನಾನು ಭಾರತದ ಕಡೆಯ ಪ್ರಜೆಯ ಪ್ರತಿನಿಧಿ. ನನಗಿದೇ ಭೂಷಣ" ಎಂದು ತಮ್ಮ ಎಂದಿನ ಖಾದಿ ತುಂಡುಪಂಚೆ, ಚಪ್ಪಲಿ, ಶಾಲುಗಳಲ್ಲೇ ಚಕ್ರವರ್ತಿಯನ್ನು ಭೇಟಿಯಾದರು. ಆ ದೃಶ್ಯ ಅವರ್ಣನೀಯ, ಆ ಆತ್ಮವಿಶ್ವಾಸ, ಆ ಸತ್ಯನಿಷ್ಠೆ, ಆ ವಿನಯ, ಜಾರ್ಜರನ್ನೂ ವಿಸ್ಮಯಗೊಳಿಸಿತು. ಹಿಂದಿನ ನೆನಪಿನಿಂದ 'ನನ್ನ ಮಗ ವೇಲ್ಸನ ರಾಜಕುಮಾರನಿಗೆ ಏಕೆ ಬಹಿಷ್ಕಾರ ಹಾಕಿದಿರಿ' ಎಂದು

ದೊರೆ ಜಾರ್ಜ್ ಕೇಳಿದರು. ಥಟ್ಟನೆ ಗಾಂಧೀಜಿಯ ಉತ್ತರ ಬಂತು "ಅವರು ನಿಮ್ಮ ಮಗ ಎಂಬ ಕಾರಣಕ್ಕಲ್ಲ : ಬ್ರಿಟಿಷ್ ಚಕ್ರಾಧಿಪತ್ಯದ ಅಧಿಕೃತ ಪ್ರತಿನಿಧಿ ಎಂದು." ಎಲ್ಲರೂ ಆವಾಕ್ಕಾದರು.

ಹೊರಗೆ ಬಂದಾಗ ಯಾರೋ ಕೇಳಿದರು. "ಸಾಕಷ್ಟು ಬಟ್ಟೆ ಹಾಕಿಕೊಳ್ಳದೆ ದೊರೆಯ ಬಳಿ ಹೇಗೆ ಹೋದಿರಿ ? " ಮತ್ತೆ ಹಾಸ್ಯದ ಉತ್ತರ ಗಾಂಧೀಜಿಯಿಂದ "ದೊರೆ ನಮ್ಮಿಬ್ಬರಿಗೂ ಆಗಿ ಮಿಗುವಷ್ಟು ಬಟ್ಟೆ ಉಟ್ಟಿದ್ದರಲ್ಲ !" ಸುತ್ತಲೂ ನಗೆ ಬುಗ್ಗೆ ಹರಡಿತು,

ಲಂಡನ್ನಿನಲ್ಲಿದ್ದಾಗ ಗಾಂಧೀಜಿ ಲ್ಯಾಂಕಷೈರಿನ ಬಟ್ಟೆ ಗಿರಣಿ ಕಾರ್ಖಾನೆಗಳಿಗೆ ಭೇಟಿಯಿತ್ತರು. ಇಲ್ಲಿ ನೀವು ಹಿಡಿಯಷ್ಟು ಜನ ಬೇರೆ ಉದ್ಯೋಗಗಳನ್ನು ಬೆಳೆಸಬಹುದು. ಭಾರತದ ಕಡುಬಡವರಿಗೆ ಚರಕವೇ ಕಾಮಧೇನು. ಒಂದು ತುತ್ತು ಅನ್ನಕೊಡುವ ಉದ್ಯೋಗ. ಮಕ್ಕಳನ್ನು ಸಾವಿನಿಂದ ಉಳಿಸುವ ದೇವತೆ. ನೀವೂ ಈ ಕರುಣೆಯ ದೃಷ್ಟಿಯಿಂದ ನೋಡಿ ಎಂದು ಹೇಳಿದಾಗ ಅಲ್ಲಿನ ಕಾರ್ಮಿಕರು ಕಣ್ಣೀರಿಟ್ಟರು. ಗಾಂಧಿಯ ದೃಷ್ಟಿಯನ್ನು ಅರ್ಥ ಮಾಡಿಕೊಂಡರು. ಹೃತ್ಪೂರ್ವಕವಾಗಿ 'ಮಹಾತ್ಮಾ ಗಾಂಧೀಕಿ ಜೈ' ಎಂದು ಘೋಷಿಸಿದರು. ಉತ್ಸಾಹದಿಂದ ತಮ್ಮ ಮನೆಗಳಿಗೆ ಕರೆದೊಯ್ದು ಸತ್ಕರಿಸಿದರು.

ಎಲ್ಲಕ್ಕಿಂತ ಹೆಚ್ಚಾಗಿ ಇಂಗ್ಲೆಂಡಿನ ಮಕ್ಕಳು ಮಹಾತ್ಮ ಗಾಂಧಿಯನ್ನು ಅತ್ಯಂತ ಪ್ರೀತಿಯಿಂದ "ಅಂಕಲ್ ಗಾಂಧೀ" ಎಂದು ನಗುಮುಖದಿಂದ ಕಂಡು ಕುಣಿದು ಸ್ವಾಗತಿಸಿದರು. ಆವರ ಸುತ್ತಲೂ ಸದಾ ಮಕ್ಕಳ ಗುಂಪು, ಬೆಳಗಿನ ಚಳಿಯ ವಾಯುಸಂಚಾರಕ್ಕೂ ಕೇಕೆ ಹಾಕಿಕೊಂಡು ಓಡಿ ಬರುತ್ತಿದ್ದರು,

ಆ ಬಡವರ ವಸತಿಯ ಮಕ್ಕಳೊಡನಿರಲು ಗಾಂಧೀಜಿಗೂ ಸಂತೋಷ. ತಮ್ಮ ನೆನಪುಗಳಲ್ಲಿ ಇದೊಂದು ಆನಂದದ ಚಿಲುಮೆ ಎಂದಿದ್ದಾರೆ.

1931ರಲ್ಲಿ ಅಕ್ಟೋಬರ್ 2 ರಂದು ಗಾಂಧೀಜಿಯ 62ನೇ ಹುಟ್ಟು ಹಬ್ಬ. ಕಿಂಗ್ಸ್ಲೀಹಾಲಿನಲ್ಲಿ ಗಂಭೀರ ಪ್ರಾರ್ಥನಾ ಸಭೆ. ಸರಳವಾದ ಸಂತೋಷ ಕೂಟ. ಎಲ್ಲರೂ ನೆಲದಮೇಲೆ ಕುಳಿತರು. ಚಿಕ್ಕ ಹುಡುಗಿ ಯೊಬ್ಬಳು ಒಂದು ಪ್ರಬಂಧ ಬರೆದು ಓದಿದಳು. ಪ್ರಸಿದ್ಧ ಕ್ರೈಸ್ತಸಂತ ಅಸ್ಸಿಸ್ಸಿಯ ಫ್ರಾನ್ಸಿಸ್‌ರೊಡನೆ ಗಾಂಧೀಜಿಯನ್ನು ಹೋಲಿಸಿದ್ದಳು. ಶ್ರೀಮಂತ ಫ್ರಾನ್ಸಿಸ್ ಇಟಲಿಯ ಬಡವರಿಗಾಗಿ ಎಲ್ಲವನ್ನೂ ತ್ಯಾಗಮಾಡಿ ಚಿಂದಿ ಬಟ್ಟೆಧರಿಸಿ ಸರಳಜೀವನ ನಡೆಸಿದ. ಗಾಂಧಿಯವರೂ ಅದೇ ಸಂತ ವೃತ್ತಿಗೆ ಒಲಿದು ಭಾರತದ ಬಡಜನರೊಡನೆ ಏಕರೂಪವಾಗಿ ಅವರಲ್ಲಿ ದೇವ ರನ್ನು ಕಂಡರು ಎಂದು ಆ ಪುಟ್ಟಹುಡುಗಿ ಭಾವಪೂರ್ಣವಾಗಿ ಹೇಳಿದಾಗ ಎಲ್ಲರ ಕಣ್ಣುಗಳಲ್ಲೂ ಆನಂದಬಾಷ್ಪಗಳು ತುಂಬಿದವು.

ಲಂಡನ್ನಿನಲ್ಲಿ ಕೆಲವು ಕಹಿ ಅನುಭವಗಳೂ ಆದವು. ಕೆಲವು ಪತ್ರಿಕೆ ಗಳು ಗಾಂಧಿಯವರದು ಕೃತ್ರಿಮನಟನೆ ಎಂದು ಮೂದಲಿಸಿದವು. ಅವರು ದಂಗೆಕೋರರು ಮಾತಿನಲ್ಲಿ ಅಹಿಂಸೆ ಅನ್ನುತ್ತಾರೆ ಎಂದರು. ಚರ್ಚಿಲ್ಲರಂತೂ ಅವರ ಭೇಟಿಯನ್ನೇ ನಿರಾಕರಿಸಿದರು. ಎಲ್ಲವನ್ನೂ ಗಾಂಧೀಜಿ ಸಮದೃಷ್ಟಿ ಯಿಂದ ಸ್ವೀಕರಿಸಿದರು. ಸಾರ್ವಭೌಮ ಸರ್ಕಾರ ಭಾರತೀಯ ಸ್ವಾತಂತ್ರ್ಯ ಬೇಡಿಕೆಯನ್ನು ಅಡ್ಡದಾರಿಗೆಳೆದುದರಿಂದ ಸಂಧಾನಗಳು ವಿಫಲವಾದವು.

ಲಂಡನ್ನಿನಿಂದ ಹಿಂತಿರುಗುವಾಗ ಗಾಂಧೀಜಿ ಸ್ವಿಟ್ಜರ್ಲೆಂಡಿಗೆ ಹೋಗಿ ಪ್ರಖ್ಯಾತ ನೋಬಲ್ ಪಾರಿತೋಷಕ ವಿಜೇತ ಫ್ರೆಂಚ್ ಸಾಹಿತಿ ರೊಮೆನ್ ರೋಲಾ ಅವರೊಡನೆ ನಾಲ್ಕುದಿನ ಇದ್ದರು. ಆ ವಿಭೂತಿದ್ವಯರ ಸಮಾ ಗಮ ಹೃದಯಸ್ಪರ್ಶಿ ಸಂದರ್ಭವಾಯಿತು. ಅದಕ್ಕೆ ಕಾರಣರಾದ ಮೀರಾ ಬಹೆನ್ ಅತ್ಯಂತ ಆನಂದದಿಂದ ದುಭಾಷಿಯಾದರು. ಹಲವಾರು ಗಂಟೆಗಳ ಆತ್ಮೀಯ ವಿಚಾರವಿನಿಮಯ ನಡೆಯಿತು. ರೋಲಾ ಅವರು ಗಾಂಧೀಜಿ

ಯನ್ನು ಏಸುಕ್ರಿಸ್ತನ ನಿಜವಾದ ಅನುಯಾಯಿ ಎಂದೇ ಗೌರವಿಸುತ್ತಿದ್ದರು. "ದೇವರು ಒಬ್ಬ ವ್ಯಕ್ತಿಯಲ್ಲ, ಒಂದು ಚಿರಂತನ ತತ್ವ. ಆದ್ದರಿಂದಲೇ ನಾನು ಸತ್ಯವೇ ದೇವರು ಎನ್ನುತ್ತೇನೆ. ದೇವರನ್ನು ನಿರಾಕರಿಸಿದರೂ ಯಾರೂ ಸತ್ಯವನ್ನು ನಿರಾಕರಿಸಲಾರರು" ಎಂದರು ಗಾಂಧೀಜಿ.

ಮ್ಯಾಡಮ್ ಮಾಂಟಸೊರಿ ವಿಶ್ವವಿಖ್ಯಾತ ಶಿಕ್ಷಣ ತಜ್ಞೆ, ಆಕೆಯೂ ಗಾಂಧೀಜಿಯನ್ನು ಲಂಡನ್ನಿನಲ್ಲಿ ಬರಮಾಡಿಕೊಂಡರು. ಶಾಂತಿಯ ನೆಲಗಟ್ಟೇ ಉತ್ತಮ ಶಿಕ್ಷಣ ಎಂದು ನಂಬಿದ್ದ ಈ ಇಬ್ಬರು ಮಹಮಾನ್ವಿತರು ಮಕ್ಕಳನ್ನು ದೈವ ಸ್ವರೂಪರೆಂದೇ ತಿಳಿದಿದ್ದರು.

ಈ ಅಮೂಲ್ಯ ಅನುಭವಗಳನ್ನು ಶೇಖರಿಸಿ ಭಾರತದ ವಿಮೋಚನೆಗಾಗಿ ಅನೇಕ ಜನಾಂಗಗಳ ನೈತಿಕ ಬೆಂಬಲಗಳಿಸಿಕೊಂಡು ಗಾಂಧೀಜಿ 1931ರ ಡಿಸೆಂಬರ್ 28ರಂದು ಬೊಂಬಾಯಿಗೆ ಹಿಂತಿರುಗಿದರು. ದುಂಡು ಮೇಜಿನ ಸಂಧಾನ ಮಾತ್ರ ಮುರಿದುಬಿದ್ದಿತ್ತು, ದೇಶದಲ್ಲಿ ಅಶಾಂತಿ ಹರಡಿತ್ತು. ಬ್ರಿಟಿಷರು ತಮ್ಮ ಅಧಿಕಾರ ಮುಷ್ಟಿಯನ್ನು ಮತ್ತೆಬಿಗಿಪಡಿಸಿದರು ಸುಗ್ರೀವಾಜ್ಞೆಗಳು ಹೊರಟವು.

ಕಾಂಗ್ರೆಸ್ ಮತ್ತೆ ಅಸಹಕಾರ ಚಳುವಳಿ ಘೋಷಿಸಿತು. ಜನವರಿ 4 ರಂದು ಗಾಂಧೀಜಿಯ ದಸ್ತಗಿರಿಯಾಯಿತು. ಜವಹಲಾಲರಿಗೆ ಎರಡು ವರ್ಷ ಕಠಿಣಶಿಕ್ಷೆ ವಿಧಿಸಿದರು. ಸರ್ದಾರ್ ಪಟೇಲ್, ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಪ್ರಸಾದ್, ಡಾ॥ ಅನ್ಸಾರಿ ಸೆರೆಮನೆಗೆ ಹೋದರು. ವೈಸ್‌ರಾಯ್ ವಿಲ್ಲಿಂಗ್‌ಡನ್ ಭಾರತ ರಾಷ್ಟ್ರೀಯ ಚಳುವಳಿಯ ಮೇಲೆ ಯುದ್ಧವನ್ನೇ ಘೋಷಿಸಿದ. ಕಾಂಗ್ರೆಸ್ ನ್ಯಾಯಬಾಹಿರ ಸಂಸ್ಥೆ ಎಂದು ಘೋಷಿಸಿದರು.

ಯರವಾಡಾ ಸೆರೆಮನೆಯಲ್ಲಿ ಗಾಂಧೀಜಿ, ಪಟೇಲ್, ಮಹದೇವ ದೇಸಾಯಿ ಇದ್ದರು. ಗಾಂಧೀಜಿ ತಮಗೆ ಯಾವ ವಿಶೇಷವಾದ ಖರ್ಚನ್ನೂ

ಒಪ್ಪಲಿಲ್ಲ. ಬ್ರಿಟಿಷ್ ಅಧಿಕಾರಿಗೆ "ನನ್ನ ದೇಶದ ಹಣ ಪೋಲುಮಾಡಬೇಡಿ. ನನಗೆ ಒದಗಿಸಿರುವ ಮುನ್ನೂರು ರೂಪಾಯಿಗಳ ಬದಲು ತಿಂಗಳಿಗೆ ಮೂವತ್ತೈದು ರೂಪಾಯಿ ವೆಚ್ಚ ಸಾಕು. ಇತರರಿಗಿಂತ ನಾನೇನೂ ಬೇರೆಯಲ್ಲ" ಎಂದು ಖಂಡಿತವಾಣಿಯಲ್ಲಿ ತಿಳಿಸಿಬಿಟ್ಟರು.

(iv) ಮಹೋಪವಾಸ

1932ರ ಆಗಸ್ಟಿನಲ್ಲಿ ಬ್ರಿಟಿಷ್ ಪ್ರಧಾನಿ ರ್‍ಯಾಮ್ಸೆ ಮ್ಯಾಕ್ಡೊನಾಲ್ಡ್ ಭಾರತದ ಅಲ್ಪಸಂಖ್ಯಾತರ ಪ್ರಾತಿನಿಧ್ಯಕ್ಕಾಗಿ ಒಂದು ತಾತ್ಕಾಲಿಕ ಜಾತಿ ವಿಂಗಡಣಾ ಆಜ್ಞೆ (ಕಮ್ಯೂನಲ್ ಅವಾರ್ಡ್) ಪ್ರಕಟಿಸಿದರು. ಅದರಲ್ಲಿ ಹಿಂದೂ ಸಮಾಜವನ್ನು ಒಡೆದು ನಿಮ್ನವರ್ಗಕ್ಕೆ ಪ್ರತ್ಯೇಕ ಚುನಾವಣಾ ಪದ್ಧತಿ ಸೇರಿಸಿದ್ದರು. ಲಂಡನ್ನಿನಲ್ಲಿ ಗಾಂಧೀಜಿ ಮಾಡಿಕೊಂಡ ಮನವಿಗಳೆಲ್ಲ ಗಾಳಿಪಾಲಾದವು, ಅವರಿಗೆ ತೀವ್ರ ವೇದನೆಯಾಯಿತು. ಭಾರತದ ರಾಷ್ಟ್ರೀಯತೆಗೆ ಇದೊಂದು ಮಾರಕ ಆಘಾತ ಎಂದರಿತು ಸೆಪ್ಟೆಂಬರ್ 20 ರಿಂದ ಈ ಆಜ್ಞೆಯ ವಿರುದ್ಧವಾಗಿ ಜೈಲಿನಲ್ಲೇ ಆಮರಣಾಂತ ಉಪವಾಸ ಕೈಗೊಳ್ಳಲು ನಿರ್ಧರಿಸಿ ಪ್ರಕಟಿಸಿಬಿಟ್ಟರು. ಎಲ್ಲೆಲ್ಲೂ ಚಿಂತೆ ಆವರಿಸಿನಿಂತಿತು. ದೇಶಕ್ಕೆ ದೇಶವೇ ಆತಂಕಗೊಂಡು ಪರಿಹಾರ ಹುಡುಕಲು ಧಾವಿಸಿತು. ಅಸ್ಪೃಶ್ಯರ ನಾಯಕ ಎಂ. ಸಿ. ರಾಜ, ಸರ್ ತೇಜಬಹದೂರ್ ಸಪ್ರೂ, ಮದರಾಸಿನ ಯಾಕೂಬ್ ಹಸನ್, ರಾಜೇಂದ್ರ ಪ್ರಸಾದ್, ರವೀಂದ್ರನಾಥ ಠಾಕೂರರೇ ಮುಂತಾದವರು ಈ ಅನಿಷ್ಟ ಆಜ್ಞೆಯನ್ನು ಹಿಂತೆಗೆದುಕೊಳ್ಳಿ ಎಂದು ಕೋರಿದರು. ಪಂಡಿತ ಮಾಳವೀಯರು ಸರ್ವಧರ್ಮೀಯ ನಾಯಕರ ಸಭೆ ಏರ್ಪಡಿಸಿದರು. ರಾಜಿಗೆ ಪ್ರಯತ್ನಗಳು ನಡೆದವು.

ಗಾಂಧೀಜಿ ಕವಿ ರವೀಂದ್ರರ ಆಶೀರ್ವಾದ ಬೇಡಿ ಪತ್ರ ಬರೆದರು. ಒಡನೆಯೇ ಅವರ ತಂತಿಬಂತು. "ಭಾರತದ ಐಕ್ಯತೆ, ಸಾಮಾಜಿಕ ಸಮಗ್ರತೆಗಳ ರಕ್ಷಣೆಗೆ ಎಂಥ ಬಲಿದಾನವೂ ಸಾಧುವಾದುದೇ. ದುಃಖತಪ್ತ ಹೃದಯಗಳಿಂದ

ನಿಮ್ಮ ತಪಸ್ಸನ್ನು ಅತ್ಯಂತ ಗೌರವದಿಂದ ಪ್ರೇಮದಿಂದ ನಿರೀಕ್ಷಿಸುತ್ತಿರುತ್ತೇವೆ."

> "ಅಸ್ಪೃಶ್ಯತೆ ನಿಜವಾಗಿ ಬೇರು ಸಹಿತನಾಶವಾದರೆ ಹಿಂದೂ ಧರ್ಮದ ಭಯಂಕರ ಕಳಂಕ ಅಳಿಸಿಹೋಗುತ್ತದೆ. ಅದರಿಂದ ವಿಶ್ವವ್ಯಾಪಕ ಪರಿಣಾಮವಾದೀತು, ನನ್ನ ಈ ಹೋರಾಟ ಮಾನವಕುಲದ ಮಲಿನತೆಯ ವಿರುದ್ಧದ ಸಮರ" ಎಂದರು ಗಾಂಧೀಜಿ.

ರಾಷ್ಟ್ರನಾಯಕರು ಪುಣೆಯಲ್ಲಿ ಸೇರಿದರು. ದಲಿತವರ್ಗದ ಮೇಧಾವಿ ನಾಯಕ ಡಾ॥ ಅಂಬೇಡ್ಕರ್ ಕೇಂದ್ರಬಿಂದುವಾದರು. ಅಸ್ಪೃಶ್ಯರು ಹಿಂದೂ ಸಮಾಜದಿಂದ ಪ್ರತ್ಯೇಕವಾಗಿ ತಮ್ಮ ಭವಿಷ್ಯ ರೂಪಿಸಿಕೊಳ್ಳುವುದೇ ಸರಿ ಎಂದು ಅಂಬೇಡ್ಕರ್ ವಾದಿಸಿದರು. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್, ಬಿರ್ಲಾ, ಸಪ್ರು ಮತ್ತು ಅಂಬೇಡ್ಕರ್ ಯರವಾಡಾ ಸೆರೆಮನೆಯಲ್ಲೇ ಸಭೆ ಸೇರಿದರು. ಗಾಂಧೀಜಿಯೊಡನೆ ಚರ್ಚಿಸಿದರು. ನಿಶ್ಯಕ್ತರಾಗಿದ್ದ ಮಹಾತ್ಮರ ಜೀವಉಳಿಸಲು ಎಲ್ಲರೂ ಕಾತುರರಾಗಿದ್ದರು. ರಾಜಕೀಯ ಹಕ್ಕುಗಳಿಗಿಂತ ಭಾರತ ಸಮಾಜದ ಸಮಗ್ರತೆಗೆ, ಹಿಂದೂಧರ್ಮದ ಸುಧಾರಣೆಗೆ ಹೆಚ್ಚು ಮಹತ್ವಕೊಟ್ಟು ಒಂದು ಒಪ್ಪಂದಕ್ಕೆ ಬಂದರು. ಕೆಲವುಕಾಲ ನಿಮ್ನವರ್ಗಗಳಿಗೆ ಮೀಸಲು ಸ್ಥಾನಗಳಿರಬೇಕು ಎನ್ನುವ ಬಗ್ಗೆ ಸಹಮತವಿತ್ತು. ಎರಡು ದಿನಗಳ ದೀರ್ಘವಾದ ವಿವಾದಗಳನಂತರ ಅಂಬೇಡ್ಕರ್ 'ಯರವಾಡ ಒಪ್ಪಂದ'ಕ್ಕೆ ಸಹಿ ಹಾಕಿದರು. ಉಪವಾಸದ ಐದನೇ ದಿನದ ಬೆಳಗಿನಜಾವವಾಗಿತ್ತು. ಗಾಂಧೀಜಿ ತೀರಸಿತ್ರಾಣರಾಗಿದ್ದರು. ಬ್ರಿಟಿಷ್ ಸರ್ಕಾರಕ್ಕೂ ತುಂಬ ಆತಂಕವಿತ್ತು, ಹಿಂದೂ ಮಹಾಸಭೆಯ ನಾಯಕರೂ, ಕಾಂಗ್ರೆಸ್ ನಾಯಕರೂ, ಎಂ. ಸಿ. ರಾಜಾ ಮುಂತಾದ ನಿಮ್ನವರ್ಗದವರೂ ಸೇರಿದಂತೆ ಆದ ಒಪ್ಪಂದಕ್ಕೆ ಡಾ॥ ಅಂಬೇಡ್ಕರರ ಸಮ್ಮತಿದೊರೆತು ರಾಮ್ಸೆಮ್ಯಾಕ್ಡೊನಾಲ್ಡರು ಅನಿವಾರ್ಯವಾಗಿ ತಮ್ಮ ಆಜ್ಞೆಯನ್ನು ಹಿಂತೆಗೆದುಕೊಂಡರು. ಕವಿ ರವೀಂದ್ರರು ಕಲ್ಕತ್ತೆಯಿಂದ ಧಾವಿಸಿಬಂದರು, ಅಂಬೇಡ್ಕರರು ಮಾತನಾಡುತ್ತ "ದುಂಡುಮೇಜಿನ ಪರಿಷತ್ತಿನಲ್ಲಿ ನನ್ನ ವಾದವನ್ನು ಖಂಡಿಸಿದ್ದ

ಗಾಂಧೀಜಿಯೊಡನೆ ಈಗ ಚರ್ಚಿಸಿದಾಗ ಅನೇಕ ವಿಷಯಗಳಲ್ಲಿ ನಮ್ಮಿಬ್ಬರ ವಿಚಾರ ಒಂದೇ ಎಂದು ಅರಿವಾಯಿತು. ನಿಮ್ನವರ್ಗದ ಪರವಾಗಿಯೇ ಗಾಂಧಿಜಿ ತಮ್ಮ ಜೀವದಹಂಗು ತೊರೆದು ವಾದಿಸಿದರು" ಎಂದರು.

ಸೆಪ್ಟೆಂಬರ್ 26ನೇ ಸೋಮವಾರ ಸಂಜೆ ಪ್ರಮುಖರು ಸೆರೆಮನೆಯೊಳಗೆ ಪ್ರಾರ್ಥನಾ ಸಭೆಯಲ್ಲಿ ಸೇರಿದರು, ಠಾಕೂರರು ಹೃದಯತುಂಬಿ ಗೀತಾಂಜಲಿಯಿಂದ ಒಂದು ಗೀತೆಹಾಡಿದರು. ಕಸ್ತೂರಿಬಾ ಕೊಟ್ಟ ಹಣ್ಣಿನ ರಸ ಕುಡಿದು ಗಾಂಧೀಜಿ ಉಪವಾಸ ಮುಕ್ತಾಯಮಾಡಿದರು. ಲೋಕ ಸಮಾಧಾನದ ನಿಟ್ಟುಸಿರುಬಿಟ್ಟಿತು, ಅಂದೇ ಹಿಂದೂ ಪಂಚಾಂಗದ ಪ್ರಕಾರ ಗಾಂಧೀಜಿಯ ಹುಟ್ಟುಹಬ್ಬ. ಪ್ರಚಂಡ ಸಭೆ ಪುಣೆಯಲ್ಲಿ ಸೇರಿತ್ತು. ರವೀಂದ್ರರು ಭಾವಪೂರ್ಣವಾಗಿ ನುಡಿದರು. "ನಮ್ಮ ಸ್ವಾರ್ಥದ ಎಲ್ಲೆಗಳನ್ನು ಮೀರಿ ಪಸರಿಸಿರುವ ಸತ್ಯವೊಂದಕ್ಕೆ ಈ ಮಹಾತ್ಮ ನಮ್ಮ ಚೇತನಗಳನ್ನು ಜಾಗೃತಗೊಳಿಸಿದ್ದಾರೆ, ದಾಸ್ಯವಿಮೋಚನೆಗಾಗಿ ಆತ್ಮಸಮರ್ಪಣೆ ಮಾಡಲು ಅವರ ಜೀವನ ನಮ್ಮನ್ನು ಕೈಬೀಸಿ ಕರೆಯುತ್ತಿದೆ. ಓ ಗೊಟ್ಟು ಧನ್ಯರಾಗೋಣ" ಎಂದರು. ಆ ಜನಸ್ತೋಮ ಆತ್ಮವಿಶ್ವಾಸದಿಂದ ಅಸ್ಪೃಶ್ಯತೆಯ ಕಳಂಕ ತೊಡೆಯಲು ದೀಕ್ಷೆ ತೊಟ್ಟಿತು. ಗಾಂಧೀಜಿ ಅಸ್ಪೃಶ್ಯರನ್ನು ಅಂದಿನಿಂದಲೇ "ಹರಿಜನ" ಅಥವ ದೇವರ ಮಕ್ಕಳು ಎಂದು ಸಂಭೋಧಿಸಿದರು. ಅಖಿಲ ಭಾರತ ಅಸ್ಪೃಶ್ಯತಾ ವಿರೋಧ ಸಂಘ ಅಮೃತಲಾಲ್ ಥಕ್ಕರ್ (ಥಕ್ಕರ್ ಬಾಪಾ) ಅವರ ನೇತೃತ್ವದಲ್ಲಿ ಪ್ರಾರಂಭವಾಯಿತು.

ಗಾಂಧೀಜಿಯ ಬಿಡುಗಡೆಗಾಗಿ ದೇಶ ಮೊರೆಯಿಟ್ಟಿತು. ಸರ್ಕಾರ ಕಿವಿಗೊಡಲಿಲ್ಲ. ಹರಿಜನ ಸೇವಾಕಾರ್ಯಕ್ಕೂ ಸೌಲಭ್ಯಗಳನ್ನು ನಿರಾಕರಿಸಿತು. ಕೇರಳದಲ್ಲಿ ಗುರುವಾಯೂರು ದೇವಸ್ಥಾನಕ್ಕೆ ಹರಿಜನ ಪ್ರವೇಶಮಾಡಿಸಲು ಶ್ರೀ ಕೇಳಪ್ಪನ್ ಉಪವಾಸಮಾಡಿದ್ದರು. ಗಾಂಧೀಜಿ ಅದನ್ನು ಹರಸಿದರು ಮುಂದೆ ತಾವೇ ನಿಂತು ಪ್ರಚಂಡ ಚಳುವಳಿ ನಡೆಸಿದರು. ಆಗಿನ ತಿರುವಾಂಕೂರು ರಾಜರು ಎಲ್ಲ ದೇವಸ್ಥಾನಗಳ ಬಾಗಿಲುಗಳೂ ಹರಿಜನರಿಗೆ ಮುಕ್ತವಾಗಿ ತೆರೆಯಲಿ ಎಂದು ಆಜ್ಞೆಮಾಡಿದರು. "ಮಾನವನೊಬ್ಬನನ್ನು

ಅಸ್ಪೃಶ್ಯ ಎಂದು ಸಮಾಜಬಾಹಿರನನ್ನಾಗಿ ಮಾಡುವ ಯಾವುದೇ ಮತ ನನಗೆ ಧರ್ಮ ಎನಿಸಲಾರದು. ಈ ಬಹಿಷ್ಕೃತ ಸೋದರರನ್ನು ಮತ್ತೆ ಆತ್ಮೀಯ ಬಂಧುಗಳಂತೆ ಸ್ವೀಕರಿಸುವವರೆಗೂ ಸನಾತನ ಧರ್ಮ ಪವಿತ್ರವಾಗ ಲಾರದು" ಎಂದರು ಗಾಂಧೀಜಿ. ಆದರೆ ಬಲಾತ್ಕಾರದಿಂದ, ಘರ್ಷಣೆಯಿಂದ ಸಮಸ್ಯೆ ಹೆಚ್ಚು ಉಲ್ಬಣವಾದೀತು ಎಂದು ಎಚ್ಚರಿಸಿದರು.

"ನನ್ನ ಆತ್ಮದ ದಾರುಣವೇದನೆ" ಎಂದು ಲೇಖನಗಳ ಸರಣಿಯನ್ನೇ ಪ್ರಕಟಿಸಿದರು ಗಾಂಧೀಜಿ, 1933ರ ಫೆಬ್ರುವರಿಯಲ್ಲಿ 'ಹರಿಜನ' ಎಂಬ ಪತ್ರಿಕೆ ಪ್ರಾರಂಭಿಸಿದರು, ಅದರಲ್ಲಿ ರವೀಂದ್ರರ ಕವನ "ಗುಡಿಸುವವನು" ಪ್ರಕಟವಾಯಿತು. ಡಾ॥ ಆಂಬೇಡ್ಕರರು "ನನ್ನ ಮಾತುಗಳನ್ನು ಸವರ್ಣೀಯರು ತುಚ್ಛವಾಗಿಯೇ ಕಾಣುತ್ತಾರೆ. ಆದ್ದರಿಂದ ನಾನು ಯಾವ ಸಂದೇಶವನ್ನೂ ಬರೆದು ಕಳುಹಿಸುವುದಿಲ್ಲ' ಎಂದು ಕಟುವಾಗಿ ಗಾಂಧೀಜಿಗೆ ತಿಳಿಸಿದರು, ಹರಿಜನ ಪತ್ರಿಕೆಯಲ್ಲಿ ಈ ಪತ್ರವನ್ನೂ ಪ್ರಕಟಿಸಿ ಗಾಂಧೀಜಿ ಶ್ರೀ ಅಂಬೇಡ್ಕರರಂಥಹ ಶ್ರೇಷ್ಠ ಮೇಧಾವಿಗೆ ವಿದೇಶೀ ಸಮಾಜಗಳಲ್ಲಿ ಉನ್ನತ ಗೌರವ ದೊರಕಿದೆ, ಆದರೆ ಅವರ ಜಾತಿಯ ಕಾರಣದಿಂದ ನಮ್ಮ ಸಮಾಜ ಅವರನ್ನು ಕೀಳಾಗಿ ನೋಡುತ್ತಾರೆಂಬ ನೋವು, ಕ್ರೋಧ ಅವರಿಗಿರುವುದು ನನಗೆ ಅರ್ಥವಾಗುತ್ತದೆ. ಅಂಥವರಿಗೇ ಹೀಗಾದರೆ ಉಳಿದ ಹರಿಜನರ ಪಾಡೇನು ? ಸವರ್ಣೀಯರು ಈ ಘೋರಪಾತಕದಿಂದ ಮುಕ್ತರಾಗಲು ಪ್ರಾಯಶ್ಚಿತ್ತ ರೂಪದಲ್ಲಿ ಅವರ ಸೇವೆ ಕೈಗೊಳ್ಳಬೇಕು. ತಾಳ್ಮೆಯಿಂದ ಅವರ ದಾರುಣ ನೋವನ್ನು ಅರ್ಥಮಾಡಿಕೊಳ್ಳಬೇಕು ಎಂದು ಉಪದೇಶಿಸಿದರು.

ದೇಶದಲ್ಲೆಲ್ಲ ಒಂದು ಅದ್ಭುತ ಜಾಗೃತಿ ಉಂಟಾಯಿತು. ಸಾವಿರಾರು ವರ್ಷಗಳ ಒಂದು ರೂಢಮೂಲ ಸಾಮಾಜಿಕ ಅನ್ಯಾಯದ ವಿರುದ್ಧ ಪ್ರಚಂಡ ಧಾಳಿ ಎದ್ದಿತು. ಅಸ್ಪೃಶ್ಯತೆಯ ಘೋರಪಾತಕ ತೊಡೆಯಲು ಎಲ್ಲರೂ ಸಿದ್ಧರಾದರು. ಮುಂದೆ ಸ್ವತಂತ್ರ ಭಾರತದಲ್ಲಿ ಅಸ್ಪೃಶ್ಯತೆ ಕಾನೂನು ಬಾಹಿರ ಎಂದು ಘೋಷಿಸಲಾಯಿತು,

ಇದೊಂದು ಆತ್ಮಶುದ್ಧಿಯ ರಾಷ್ಟ್ರೀಯ ಚಳುವಳಿ ಎಂದರು ಗಾಂಧೀಜಿ. ರಾಷ್ಟ್ರದ ಪುನರ್ರಚನೆಯಲ್ಲಿ ಅಸ್ಪೃಶ್ಯತಾ ನಿವಾರಣೆ ಪ್ರಮುಖ ಕಾರ್ಯಕ್ರಮ ವಾಯಿತು. ಹರಿಜನೋದ್ಧಾರ ಕಾರ್ಯದಲ್ಲಿ ತಮ್ಮನ್ನು ತಾವು ಸಮರ್ಪಿಸಿ ಕೊಳ್ಳುವ ವ್ರತಕೈಗೊಳ್ಳಲು ಗಾಂಧೀಜಿ ಇಪ್ಪತ್ತೊಂದು ದಿನಗಳ ಉಪವಾಸ ಕೈಗೊಂಡರು. ಆಗ ಇನ್ನೂ ಸೆರೆಮನೆಯಲ್ಲೇ ಇದ್ದರು. ತಮ್ಮ ಅಂತ ರಾಳದ ಅಳಲುಗಳನ್ನೆಲ್ಲ ವಾರವಾರವೂ ಹರಿಜನ ಪತ್ರಿಕೆಯಲ್ಲಿ ತೋಡಿಕೊಳ್ಳು ತ್ತಿದ್ದರು, ಉಪವಾಸ ಸಂಕಲ್ಪದ ಬಗ್ಗೆ ಹೀಗೆ ಬರದಿದ್ದಾರೆ :–

> "ಹಿಂದಿನ ರಾತ್ರಿ ನಿದ್ದೆ ಹೋದಾಗ ನನಗೆ ಉಪವಾಸದ ಕಲ್ಪನೆಯೇ ಇರಲಿಲ್ಲ. ಮಧ್ಯ ರಾತ್ರಿ. ಏನೋ ಒಂದು ದೃಢವಾದ ವಾಣಿ ನನ್ನನ್ನೆಚ್ಚರಿಸಿತು. "ನೀನು ಉಪವಾಸ ಕೈಗೊಳ್ಳಬೇಕು." 'ಎಷ್ಟು ದಿನ' ಎಂದು ಕೇಳಿದೆ, ಉತ್ತರ ಬಂತು 'ಇಪ್ಪ ತ್ತೊಂದು ದಿನ' "ಎಂದು ಪ್ರಾರಂಭ ?" "ನಾಳೆಯೇ ಪ್ರಾರಂಭಿಸು ?"

> "ನನ್ನೊಳಗೆ ಬಿರುಗಾಳಿ ಎದ್ದಿತ್ತು. ಅನೇಕ ಪವಿತ್ರಕಾರಣಗಳು ಈ ನನ್ನ ಉಪವಾಸಕ್ಕೆ ಪ್ರೇರಣೆ. ಯಾರೊಬ್ಬರ ವಿರೋ ಧವಾಗಿಯೂ ಅಲ್ಲ. ಇದು ನನ್ನ ಆತ್ಮದ ಪ್ರಬಲ ಒತ್ತಡ, ನಿರ್ಧರಿಸಿ ಬಿಟ್ಟಿದ್ದೇನೆ. ಯಾರೂ ತಡೆಯಬೇಡಿ. ಭಗವಂತನ ಆಶೀರ್ವಾದ, ಈ ಅಗ್ನಿಪರೀಕ್ಷೆಯಲ್ಲಿ ಗೆಲ್ಲುತ್ತೇನೆ."

ಮತ್ತೆ ದೇಶಕ್ಕೆ ದೇಶವೇ ಗಾಂಧೀಜಿಯ ಉಳಿವಿಗಾಗಿ ಪ್ರಾರ್ಥಿಸಿತು. ಅಸ್ಪೃಶ್ಯತೆಯ ನಿವಾರಣೆಗೆ ಲಕ್ಷಾಂತರ ಜನ ದೀಕ್ಷೆತೊಟ್ಟರು. ಒಂದು ಅಸಾಧಾರಣ ಸಾಮಾಜಿಕ ಆಂದೋಲನಕ್ಕೆ ನಾಂದಿಯಾಯಿತು. 1933ರ ಮೇ 8 ರಂದು ಪ್ರಾರಂಭಿಸಿದ ಉಪವಾಸವನ್ನು 29ನೇ ತಾರೀಕು ಮುಕ್ತಾ

ಯಗೊಳಿಸಿದರು. ಈ ಅವಧಿಯಲ್ಲಿ ಸಾಮೂಹಿಕ ಶಾಸನಭಂಗ ಚಳುವಳಿಯನ್ನು ಗಾಂಧೀಜಿ ಸಂಪೂರ್ಣವಾಗಿ ನಿಲ್ಲಿಸಲು ಘೋಷಣೆಮಾಡಿದ್ದರು. ಮುಕ್ತಾಯದಿನ ಹರಿಜನ ಬಾಲಕನೊಬ್ಬನಿಂದ ಹಣ್ಣಿನರಸ ತೆಗೆದುಕೊಂಡರು. ಧನ್ಯತೆಯು ಪ್ರಶಾಂತತೆ ಇಡೀ ಆವರಣವನ್ನು ಪಸರಿಸಿತ್ತು. "ನನ್ನ ಅದಮ್ಯ ಶ್ರದ್ಧೆ ಎಳ್ಳಷ್ಟೂ ಕುಂದಿಲ್ಲ. ದೈವಾನುಗ್ರಹದ ಮಹಾಭಾಗ್ಯ ಇದು. ಭಗವಂತ ನನ್ನಿಂದ ಯಾವ ಕಾರ್ಯಕೈಗೊಳ್ಳುವನೋ ನಾನರಿಯೆ. ಯಾವುದೇ ಕಾರ್ಯ ನಿಯೋಜಿತವಾದರೂ ಅದಕ್ಕೆ ಬೇಕಾದ ಶಕ್ತಿಯನ್ನು ಅವನೇ ದಯಪಾಲಿಸುತ್ತಾನೆ ಎಂದು ಬಲ್ಲೆ" ಎಂದರು. ಮೇ 9 ರಂದೇ ಸರ್ಕಾರ ಗಾಂಧೀಜಿಯನ್ನು ಬಿಡುಗಡೆಮಾಡಿತು. ಪೂನಾದಲ್ಲಿ ಲೇಡಿ ಥ್ಯಾಕರ್ಸೆ ಅವರ ಮನೆ "ಪರ್ಣಕುಟಿ"ಯಲ್ಲಿ ಬಿಡಾರಮಾಡಿದರು,

ನಂತರ ಕೆಲವು ದಿನಗಳಲ್ಲೇ ಮತ್ತೆ ಗಾಂಧೀಜಿಯನ್ನು ಬಂಧಿಸಲಾಯಿತು. ರಾಜಕೀಯ ಚಟುವಟಿಕೆಗಳು ಪ್ರಾರಂಭವಾಗಿದ್ದವು. ವಿಧ್ವಂಸಕ ಕೃತ್ಯಗಳಲ್ಲಾಗಲೀ ರಹಸ್ಯ ಪಿತೂರಿಗಳಲ್ಲಾಗಲಿ ಯಾರೂ ತೊಡಗಬಾರದು, ಅದು ಸತ್ಯಾಗ್ರಹದ ನೀತಿಯಲ್ಲ ಎಂದು ಎಚ್ಚರಿಸಿದರು ಗಾಂಧೀಜಿ. ತಲೆಮರಸಿಕೊಂಡವರು ಕೂಡಲೇ ಶರಣಾಗತರಾಗಬೇಕು ಎಂದರು. ಹಲವು ಜನ ಬಹಿರಂಗವಾಗಿ ಮುಂದೆ ಬಂದು ಸೆರೆಮನೆ ಸೇರಿದರು. ಜೈಲಿನಲ್ಲಿ ಗಾಂಧೀಜಿ ತಮ್ಮ ಹರಿಜನ ಸೇವಾ ಕಾರ್ಯಕ್ಕೆ ಅಡ್ಡಿಬಂದುದರಿಂದ ಆಗಸ್ಟ್ 16 ರಂದು ಆಮರಣಾಂತ ಉಪವಾಸ ಘೋಷಿಸಿದರು. ಯರವಾಡಾ ಒಪ್ಪಂದವನ್ನು ಸರ್ಕಾರ ಮಾನ್ಯಮಾಡಲಿಲ್ಲ ಎಂದು ಆಪಾದಿಸಿದರು ಉಪವಾಸದಿಂದ ಒಂದು ವಾರದಲ್ಲೇ ದೇಹಸ್ಥಿತಿ ವಿಷಮವಾಯಿತು, ಸರ್ಕಾರ ಅವರನ್ನು ಬಂಧನದಿಂದ ವಿಮುಕ್ತಿಗೊಳಿಸಿತು, ಆಗಸ್ಟ್ 23 ರಂದು ಉಪವಾಸ ಮುಕ್ತಾಯಮಾಡಿದರು. ಶಿಕ್ಷೆಯ ಅವಧಿ ಇನ್ನೂ ಎರಡು ವರ್ಷ ಇತ್ತು. ತಾವೇ ಸ್ವಯಂಪ್ರೇರಿತರಾಗಿ ಈ ಅವಧಿಯನ್ನು ಹರಿಜನ ಸೇವೆಗೆ ಮುಡಿಪಾಗಿಟ್ಟರು, ಶಾಸನಭಂಗ ಚಳುವಳಿಗಳನ್ನು ಸ್ವಲ್ಪಕಾಲ ನಿಲ್ಲಿಸಿದರು.

ಇದಕ್ಕೆ ಮುಂಚೆ ಜುಲೈ 26 ರಂದು ತಮ್ಮ ಸಬರ್ಮತಿ ಆಶ್ರಮವನ್ನು ವಿಸರ್ಜಿಸಲು ತೀರ್ಮಾನಿಸಿದರು ಗಾಂಧೀಜಿ. ಆಗಸ್ಟ್ 1 ರಂದು ಮೂವತ್ತು ಆಶ್ರಮವಾಸಿಗಳೊಂದಿಗೆ ಹಳ್ಳಿಯಿಂದ ಹಳ್ಳಿಗೆ ಪಾದಯಾತ್ರೆ ಹೊರಟರು. ರಚನಾತ್ಮಕ ಕೆಲಸ ಕೈಗೊಂಡರು. ಜೈಲಿನಿಂದ ಬಿಡುಗಡೆಯಾದನಂತರ ದೇಶಾದ್ಯಂತ ಎರಡು ವರ್ಷ ಹರಿಜನಯಾತ್ರೆ ಕೈಗೊಂಡರು.

—o—

ಅಧ್ಯಾಯ ೭ : ಸ್ವಾತಂತ್ರ್ಯ ವಿಜಯ

(i) ಸೇವಾ ಗ್ರಾಮ

1933ರಲ್ಲಿ ಗಾಂಧೀಜಿ ವಾರ್ಧಾದ ಸತ್ಯಾಗ್ರಹ ಆಶ್ರಮಕ್ಕೆ ಬಂದರು. ಆಚಾರ್ಯ ವಿನೋಬ ಭಾವೆ ಮತ್ತು ಶ್ರೀ ಜಮ್ನಲಾಲ್ ಬಜಾಜರು ಅಲ್ಲಿ ನೆಲೆಸಿದ್ದರು. ಅಹಿಂಸಾತ್ಮಕವಾದ ಸರ್ವೋದಯ ಸಮಾಜ ನಿರ್ಮಾಣವಾಗಲು ಭಾರತದ ಗ್ರಾಮಗಳಿಂದ ಪುನರ್ರಚನೆ ಮಾಡಬೇಕು ಎಂದು ಈ ಗಾಂಧೀಬಳಗ ನಿರ್ಣಯಿಸಿತ್ತು. ವಿನೋಬಾ ಅವರಂತೂ ಸಂಪೂರ್ಣವಾಗಿ ಗ್ರಾಮ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡಿದ್ದರು. ಭೌಗೋಳಿಕವಾಗಿ ವಾರ್ಧಾ ಭಾರತ ದೇಶದ ಕೇಂದ್ರ ಬಿಂದು. ಅಲ್ಲಿಂದಲೇ ಗಾಂಧೀಜಿಯ ಹರಿಜನ ಯಾತ್ರೆ ಪ್ರಾರಂಭವಾಯಿತು. ಗಾಂಧೀಜಿಯ ದೃಷ್ಟಿಯಲ್ಲಿ ಹಳ್ಳಿಗಳ ಏಳಿಗೆಯೇ ಉತ್ತಮ ರಾಜಕೀಯ ; ಹರಿಜನರ ನೆಮ್ಮದಿಯೇ ಸ್ವಾತಂತ್ರ್ಯಕ್ಕೆ ರಾಜ ಮಾರ್ಗ.

1934ರಲ್ಲಿ ಬಿಹಾರದಲ್ಲಿ ಭೀಕರ ಭೂಕಂಪ ಉಂಟಾಯಿತು, ಗಾಂಧೀಜಿ ಅಲ್ಲಿಗೆ ಧಾವಿಸಿ ರಾಜೇಂದ್ರ ಪ್ರಸಾದರೊಡನೆ ಸ್ವಯಂಪ್ರೇರಿತ ಪರಿಹಾರ ಕಾರ್ಯಕೈಗೊಂಡರು. ನಮ್ಮ ಪಾಪಗಳಿಗೆ ಇದು ಪ್ರಕೃತಿಯ ಪ್ರಕೋಪ ಎಂದು ಸಮರ್ಪಣ ಬುದ್ಧಿಯಿಂದ ಅಗಾಧ ಸೇವಾಕಾರ್ಯ ನಡೆಸಿದರು. ದೇಶಕ್ಕೆ ದೇಶವೇ ಸ್ಪಂದಿಸಿ ಸಹಾಯ ಧನ, ಅಹಾರ, ಬಟ್ಟೆ. ಔಷಧಿಗಳು ಹೊಳೆಯಾಗಿ ಹರಿಯಿತು, ಸರ್ಕಾರ ಮೂಕವಾಗಿ ನೋಡುತ್ತಿತ್ತು.

ಹರಿಜನರ ದೇವಾಲಯ ಪ್ರವೇಶ ಎಲ್ಲೆಲ್ಲೂ ಹರಡಿತ್ತು, ಸನಾತನಿಗಳು ಕುಪಿತರಾದರು. ಸುಧಾರಕರ ಮೇಲೆ ಕೈಮಾಡಿದರು. ಒದ್ದುನೂಕಿ

ದೊಣ್ಣೆಗಳಿಂದ ಹೊಡೆದರು. ಗಾಂಧೀಜಿಯ ಕಾರಿನ ಮೇಲೂ ಒಮ್ಮೆ ಬಾಂಬ್ ಎಸೆದಿದ್ದರು. ಈ ಎಲ್ಲಾ ಹಿಂಸಾತ್ಮಕ ಘಟನೆಗಳಿಂದ ನೊಂದು ಪ್ರಾಯಶ್ಚಿತ್ತ ರೂಪವಾಗಿ 1934ರ ಜುಲೈನಲ್ಲಿ ಗಾಂಧೀಜಿ ಒಂದು ವಾರದ ಉಪವಾಸ ಕೈಗೊಂಡರು. ಅಸ್ಪೃಶ್ಯತೆಯ ನಿರ್ಮೂಲನ ಕಾರ್ಯ ಅಪ್ರತಿಹತಕವಾಗಿ ನಡೆಯಿತು. ಸಮಾಜ ಸುಧಾರಕರ ಪಡೆಗಳೇ ನಿರ್ಮಾಣ ವಾದವು. ಹರಿಜನರಲ್ಲಿ ಅದ್ಭುತ ಜಾಗೃತಿ ಉಂಟಾಯಿತು. ಉತ್ತಮ ಜೀವನದ ಮಹತ್ವಾಕಾಂಕ್ಷೆ ಅವರಲ್ಲಿ ಬೇರೂರಿ ನಿಂತಿತು. ಮುನ್ನಡೆಗೆ ಯಾವುದೂ ಅಡ್ಡಿ ಬರಲಿಲ್ಲ. ಈ ಚಳುವಳಿಯ ಅಂಗವಾಗಿಯೇ ಗಾಂಧೀಜಿ ಮದ್ಯಪಾನ ನಿಷೇಧ ಚಳುವಳಿಯನ್ನು ಪ್ರಬಲಗೊಳಿಸಿದರು. ಸಾವಿರಾರು ಹೆಂಡದಂಗಡಿಗಳು ಮುಚ್ಚಿದವು. ಬಡವರ ಹಣದ ಸುಲಿಗೆ ಕಡಿಮೆ ಯಾಯಿತು. ಕುಡಿದು ಹಾಳಾಗುತ್ತಿದ್ದ ಸಹಸ್ರಾರು ಕಾರ್ಮಿಕ ಸಂಸಾರಗಳು ಉಳಿದು ಬೆಳೆದವು. ಮುಂದೆ 1937ರಲ್ಲಿ ಬಂದ ಪ್ರಾಂತೀಯ ಕಾಂಗ್ರೆಸ್ ಸರ್ಕಾರಗಳು ಏಳು ರಾಜ್ಯಗಳಲ್ಲಿ ಸಂಪೂರ್ಣ ಪಾನ ನಿಷೇಧ ಕಾನೂನುಗಳನ್ನು ಜಾರಿಗೆ ತಂದವು. ರಾಜಾಜಿ, ಬಿ. ಜಿ. ಖೇರ್, ಬಿ. ಸಿ. ರಾಯ್, ಗೋವಿಂದ ವಲ್ಲಭಪಂತ್ ಮುಂತಾದ ಪ್ರಸಿದ್ಧ ಮುಖ್ಯ ಮಂತ್ರಿಗಳು ತಮ್ಮ ರಾಜ್ಯಗಳಲ್ಲಿ ಕುಡಿತದ ಪಿಡುಗನ್ನು ತೊಡೆದುಹಾಕಿದ್ದರು.

1934 ರಲ್ಲಿ ಗಾಂಧೀಜಿ ಅಖಿಲ ಭಾರತ ಗ್ರಾಮೋದ್ಯೋಗ ಸಂಘವನ್ನು ಪ್ರಸಿದ್ಧ ಅರ್ಥಶಾಸ್ತ್ರಜ್ಞ ಪ್ರೊ॥ ಜೆ. ಸಿ. ಕುಮಾರಪ್ಪನವರ ನೇತೃತ್ವದಲ್ಲಿ ಪ್ರಾರಂಭಮಾಡಿದರು. ಆದರ್ಶ ಗ್ರಾಮಸಮಾಜದ ಅರ್ಥ ವ್ಯವಸ್ಥೆ ಹೇಗೆ ರೂಪಗೊಳ್ಳಬೇಕು ಎಂದು ಅವರು ಪ್ರಯೋಗಗಳಿಂದ ಸಿದ್ಧ ಮಾಡಿಕೊಟ್ಟರು. ಕಾಂಗ್ರೆಸ್ ಸಂಸ್ಥೆ ಈ ಎಲ್ಲ ರಚನಾತ್ಮಕ ಕಾರ್ಯಗಳಲ್ಲಿ ತೊಡಗುವುದನ್ನು ತನ್ನ ಸದಸ್ಯರಿಗೆ ಒಂದು ಕಡ್ಡಾಯ ನಿಯಮ ಮಾಡಿತು. ಕೇವಲ ರಾಜ್ಯಾಧಿಕಾರಕ್ಕಾಗಿ ಹೋರಾಟ ಅಷ್ಟೇ ಅಲ್ಲ, ರಾಷ್ಟ್ರಜೀವನದ ಪುನರುಜ್ಜೀವನಕ್ಕಾಗಿ ಆರ್ಥಿಕ ಸಾಮಾಜಿಕ ಮತ್ತು ಶೈಕ್ಷಣಿಕಕ್ರಾಂತಿ ಸ್ವಾತಂತ್ರ್ಯ ಸಮರದ ಗುರಿ ಎಂದು ಸಾರಲಾಯಿತು. ಅದೇ ವರ್ಷ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ಮೊದಲ ಬಾರಿಗೆ ಫೈಜ್‌ಪುರ ಎಂಬ ಹಳ್ಳಿಯಲ್ಲಿ

ಸೇರಿತು. ಜವಹರಲಾಲರು ಅಧ್ಯಕ್ಷರಾದರು. ಭಾರತದ ಮುಕ್ಕಾಲು ಭಾಗದ ಪ್ರಜೆಗಳು ವಾಸಿಸುವ ಗ್ರಾಮಸಮಾಜದ ಸಮಗ್ರ ಪರಿವರ್ತನೆಗೆ ರಾಷ್ಟ್ರನಾಯಕರೆಲ್ಲರೂ ಸನ್ನದ್ಧರಾದರು. ಸಮಾಜವಾದವನ್ನು ಭಾರತಕ್ಕೆ ಅನ್ವಯಿಸಿ ಅಹಿಂಸಾತ್ಮಕ ಕ್ರಾಂತಿ ಸಾಧಿಸಲು ಗಾಂಧೀಮಾರ್ಗವೇ ಶ್ರೇಷ್ಠ ಎಂದು ಒಪ್ಪಿದರು, ಆನಂತರ ಹರಿಪುರ ಅಧಿವೇಶನಕ್ಕೆ ಅಧ್ಯಕ್ಷರಾದ ಬಾಬು ಸುಭಾಸ ಚಂದ್ರಬೋಸರು ಈ ದಿಸೆಯಲ್ಲಿ ಅಮೋಘ ಸ್ಫೂರ್ತಿಯಿಂದ ಕೆಲಸಮಾಡಿದರು. ಲಕ್ಷಾಂತರ ಯುವಜನರು ಸ್ವಯಂಸೇವಕರಾಗಿ ಗ್ರಾಮಸೇವಕರಾಗಿ ಗ್ರಾಮ ಪುನರ್ರಚನೆಗೆ ನಿಂತರು. ಜನಕೋಟಿಯಲ್ಲಿ ಸ್ವಾತುಂತ್ರ್ಯದ ಜಾಗೃತಿ ಪ್ರಬಲವಾಗಿ ಬೀಸತೊಡಗಿತು.

ಕೇವಲ ಪ್ರಚಾರ ಭಾಷಣಗಳಾದರೆ ಸಾಲದು ತಾವೇ ಒಂದು ಸಣ್ಣ ಗ್ರಾಮದಲ್ಲಿ ನೆಲೆಸಿ ಹಳ್ಳಿಗರಲ್ಲಿ ಹಳ್ಳಿಗರಾಗಿ ಅತ್ಯಂತ ಆದರ್ಶರೈತರಂತೆ ಜೀವಿಸಬೇಕು ಎಂದು ಗಾಂಧೀಜಿ ಸಂಕಲ್ಪಿಸಿದರು. ಮೀರಾಬಹೆನ್ ಅವರನ್ನು ವರ್ಧಾದಿಂದ ನಾಲ್ಕು ಮೈಲಿ ದೂರದ 'ಸೆಗಾವ್' ಎಂಬ ಕುಗ್ರಾಮದಲ್ಲಿ ಶಮ್ಮ ಕುಟೀರ ಕಟ್ಟಲು ಕೇಳಿಕೊಂಡರು. ನಾಲ್ಕು ಗುಡಿಸಲುಗಳು ಸಿದ್ಧವಾದವು. ಕಸ್ತೂರಿಬಾ, ಮಹದೇವ ದೇಸಾಯಿ, ಮೀರಾಬಹೆನ್ ಮತ್ತು ನಾಲ್ಕು ಜನರ ಸಣ್ಣಸಿಬ್ಬಂದಿಯೊಡನೆ 1936ರ ಏಪ್ರಿಲ್ 30 ರಂದು ಗಾಂಧೀಜಿ ಅಲ್ಲಿ ಬಂದು ನೆಲೆಸಿದರು. ಹಳ್ಳಿಯ ಹೆಸರು ಬದಲಿಸಿ 'ಸೇವಾಗ್ರಾಮ' ಎಂದು ಕರೆದರು. ಅಲ್ಲಿಂದಾಚೆ ಅವರ ಜೀವನದ ಕೊನೆಯವರೆಗೆ ಜಗತ್ತಿನ ಮೇಧಾವಿಗಳನ್ನೆಲ್ಲ ಆಕರ್ಷಿಸಿದ ಅತ್ಯಂತ ಪ್ರಸಿದ್ಧ ಯಾತ್ರಾಸ್ಥಳವಾಯಿತು ಭಾರತ ಮಧ್ಯಬಿಂದುವಾದ ಸೇವಾಗ್ರಾಮ.

ಗಾಂಧೀಜಿ ಭಾರತದ ಭವಿಷ್ಯಸಮಾಜ ರಚಿಸಲು ಹದಿನೆಂಟು ವಿವಿಧ ನಿರ್ಮಾಣ ಕಾರ್ಯಗಳನ್ನು ಹಾಕಿಕೊಟ್ಟರು. ಯುದ್ಧಭಯ ತೊಲಗಿ ಸರ್ವರೂ ವಿಶ್ವಪ್ರಜೆಗಳಾಗಿ ಸಮಾನತೆ, ಸೌಹಾರ್ದ ಮತ್ತು ಪ್ರಗತಿಗಳನ್ನು ಅಹಿಂಸಾಧರ್ಮದಿಂದ ಸಾಧಿಸಲು ಈ ರಚನಾತ್ಮಕ ಕಾರ್ಯಕ್ರಮಗಳೇ ಮಾರ್ಗದರ್ಶಕ ತತ್ವಗಳು.



ಸೇವಾಗ್ರಾಮದಲ್ಲಿ ಗಾಂಧೀಜಿಯ ಕುಟೀರ [1936]

ಜಾತೀಯ ಐಕ್ಯತೆ, ಖಾದಿ, ಗ್ರಾಮೋದ್ಯೋಗಗಳು, ಹರಿಜನಸೇವೆ, ಮದ್ಯಪಾನ ನಿಷೇಧ, ಗ್ರಾಮ ನೈರ್ಮಲ್ಯ, ಆರ್ಥಿಕ ಸಮತೆ, ಜೀವನ ಶಿಕ್ಷಣ, ಗೋಸೇವೆ, ರಾಷ್ಟ್ರಭಾಷಾ ಪ್ರಚಾರ, ಪ್ರಾಂತಭಾಷೆಗಳ ಅಭಿವೃದ್ಧಿ, ಮಹಿಳೆಯರ ಜಾಗೃತಿ, ಕಾರ್ಮಿಕರ ಏಳಿಗೆ, ರೈತರ ಮೇಲ್ಮೆ, ವಿದ್ಯಾರ್ಥಿಗಳ ಉನ್ನತಿ ವಯಸ್ಕರ ಶಿಕ್ಷಣ, ನಿಸರ್ಗಚಿಕಿತ್ಸೆ ಮತ್ತು ಕುಷ್ಠರೋಗಿಗಳ ಶುಶ್ರೂಷೆ – ಈ ಸಮಗ್ರ ಸಾಮಾಜಿಕ ಪುನರ್ನಿರ್ಮಾಣ ಕಾರ್ಯಕ್ಕಾಗಿಯೇ ಗಾಂಧೀಜಿ ಸಂಪೂರ್ಣ ಸ್ವರಾಜ್ಯ ಬಯಸಿದರು, ಸ್ವತಂತ್ರಭಾರತ ನಿಷ್ಠೆಯಿಂದ ಈ ಅಹಿಂಸಕ ಕ್ರಾಂತಿ ಪಥವನ್ನಂಗೀಕರಿಸಿ ಜಗತ್ತಿಗೆ ಶಾಂತಿ ಸಾಧನೆಯಮಾರ್ಗ ತೋರಿತು ಎಂದು ಆಶಿಸಿದರು. ಗ್ರಾಮವೇ ಒಂದು ಸುವ್ಯವಸ್ಥಿತ ಗಣರಾಜ್ಯವಾಗಬೇಕು ಎಂದರು. ಗ್ರಾಮಸಭೆಯಿಂದ ಲೋಕಸಭೆಯವರೆಗೆ ಪ್ರಜಾಪ್ರಭುತ್ವ ಸಂಸ್ಥೆಗಳು ಪರಸ್ಪರ ಪೋಷಕವಾಗಿ ನಿರ್ಮಾಣವಾಗಬೇಕು. ಮಾನವ ವ್ಯಕ್ತಿ ಎಲ್ಲ ರಚನೆಗಳ ಕೇಂದ್ರ. ಸರ್ವಾಂಗೀಣ ಜೀವನ ವಿಕಾಸವೇ ಸ್ವರಾಜ್ಯದ ಗುರಿ. ಇದು ಗಾಂಧೀ ಪ್ರಣೀತ ಕ್ರಾಂತಿ ಪಥ. ಇದರ ಸಾಧನೆಗಾಗಿಯೇ ಗಾಂಧೀಜಿ ತಮ್ಮ ಜೀವನವನ್ನೇ ಪಣವಾಗಿಟ್ಟು ಭಾರತ ಸ್ವಾತಂತ್ರ್ಯ ಸಂಗ್ರಾಮವನ್ನು ರೂಪಿಸುತ್ತಾ ಮುನ್ನಡೆದರು.

(ii) ಯುದ್ಧದ ಪ್ರಚಂಡ ಜ್ವಾಲೆ

ಎರಡನೆಯ ಮಹಾಯುದ್ಧ ಮಾನವ ಇತಿಹಾಸದಲ್ಲಿ ನಡೆದ ಅತ್ಯಂತ ಘೋರ ಯುದ್ಧ. ಸೈನಿಕ ಸರ್ವಾಧಿಕಾರದ ಜರ್ಮನಿ, ಇಟಲಿ, ಸ್ಪೈನ್ ಮತ್ತು ಜಪಾನುಗಳು ಪ್ರಚಂಡ ಯುದ್ಧ ಜ್ವಾಲೆಯನ್ನು ಕೆರಳಿಸಿದವು. ಇಂಗ್ಲೆಂಡಿನ ನೂರು ವರ್ಷಗಳ ಸಾಮ್ರಾಜ್ಯಶಾಹಿಯೊಡನೆ ಸ್ಪರ್ಧಿಸಿ ಸೋತಿದ್ದ ಜರ್ಮನಿ ಸೇಡಿನ ಕಿಡಿಕಾರುತ್ತಿತ್ತು, ಹಿಟ್ಲರ್ ಜರ್ಮನಿಯ ಇಡೀ ಯುವ ಸ್ತೋಮವನ್ನು ಸೈನ್ಯಕ್ಕೆ ಸೇರಿಸಿ, ವಿಜ್ಞಾನಿಗಳ ನೆರವಿನಿಂದ ಘೋರಮಾರಕ ಶಸ್ತ್ರಸಜ್ಜಿತನಾಗಿ ಪ್ರಪಂಚವನ್ನೇ ನಡುಗಿಸಿದ ಧಾಳಿಯಿಟ್ಟ. ಯೂರೋಪಿನ ಸಣ್ಣ ರಾಷ್ಟ್ರಗಳೆಲ್ಲ ಹಿಟ್ಲರನ 'ನಾಜಿ' ಸೈನ್ಯಕ್ಕೆ ಬಲಿಯಾದವು. ಇಂಗ್ಲಿಷ್ ಸಾಮ್ರಾಜ್ಯದ ಭಾಗವಾಗಿ ಭಾರತವನ್ನೂ ಈ ಸಮರಕ್ಕೆ ಬಲಾತ್ಕಾರವಾಗಿ

ನೂಕಲಾಗಿತ್ತು. 1939ರ ಸೆಪ್ಟೆಂಬರ್‌ನಲ್ಲಿ ಯುದ್ಧಘೋಷಣೆಯಾಗಿ 1945 ರವರೆವಿಗೂ ನಡೆಯಿತು. ಗಾಂಧೀಜಿ ಈ ಮಾರಣಹೋಮ ಕಂಡು ಅತ್ಯಂತ ವ್ಯಾಕುಲರಾದರು. ಹಿಂದ್ ಸ್ವರಾಜ್ಯದಲ್ಲಿ ಭವಿಷ್ಯ ನುಡಿದಂತೆ ಯಂತ್ರ ಯುಗ ಮಾನವನನ್ನು ಭಯಂಕರ ಬರ್ಬರತೆಗೆ ತಳ್ಳಿ ನಾಗರಿಕತೆಯನ್ನೇ ನಾಶ ಮಾಡಲು ಹೊರಟಿದೆ ಎಂದು ಮರುಗಿದರು, ಭಯಂಕರ ಸರ್ವಾಧಿಕಾರಿಗಳ ಕ್ರೂರದಮನದ ದಾಸ್ಯ ಅವರಿಗೆ ಅಸಹನೀಯವೆನಿಸಿತು. ಮಿತ್ರರಾಷ್ಟ್ರಗಳಿಗೇ ತಮ್ಮ ನೈತಿಕ ಬೆಂಬಲವಿದೆಯೆಂದರು. "ಬ್ರಿಟಿಷ್ ಸಾಮ್ರಾಜ್ಯವಾದಿಗಳು ಈಗ ವಿವೇಕಿಗಳಾಗಿ ತಮ್ಮ ಅಧೀನ ರಾಷ್ಟ್ರಗಳಿಗೆ ಸ್ವಾತಂತ್ರ್ಯ ಘೋಷಿಸಲಿ. ಸ್ವತಂತ್ರ ಭಾರತ ಸಹಜವಾಗಿಯೇ ಅವರ ಮಿತ್ರರಾಷ್ಟ್ರವಾಗಿ ಪ್ರಜಾಪ್ರಭು ತ್ವದ ಉಳಿವಿಗಾಗಿ ಹೋರಾಡುತ್ತದೆ" ಎಂದರು. ಹಿಟ್ಲರನಿಗೂ ಬಹಿರಂಗ ಪತ್ರಬರೆದು ಅವನ ರಾಕ್ಷಸತನವನ್ನು ಖಂಡಿಸಿದರು. ಸಣ್ಣ ರಾಷ್ಟ್ರ ಪೋಲೆಂಡಿನ ಜನ ಹಿಟ್ಲರನ ದೈತ್ಯಧಾಳಿಗೆ ಮೈಯೊಡ್ಡಿ ಲಕ್ಷಗಟ್ಟಲೆಯಲ್ಲಿ ಅಸುನೀಗಿದರೂ ಮಣಿಯದೆ ನಿಂತುದನ್ನು ಶ್ಲಾಘಿಸಿದರು. ದೇಹವನ್ನುಳಿಸಲು ಎಂದೂ ಆತ್ಮವನ್ನು ಬಲಿಕೊಡದೆ ಸೋಲು ಖಚಿತವಾದರೂ ಪ್ರತಿಭಟಿಸಿ ನಿಲ್ಲುವ ಯೋಧನ ವೀರಸಂಕಲ್ಪ ಅಮರಶಕ್ತಿ ಒಂದು ಆದರೆ ವೀರರ ಅಹಿಂಸೆಗೆ ಅಗತ್ಯವಾದ ಪೂರ್ವಸಿದ್ಧತೆಯಿಲ್ಲದೆ ಯಾವ ದೇಶವೂ ಬಲಿದಾನಕ್ಕೆ ಸಿದ್ಧವಾಗಲಾರದು ಎಂಬ ಕಟುಸತ್ಯದ ಅರಿವು ನನಗಿದೆ ಎಂದೂ ಒಪ್ಪಿಕೊಂಡರು.

1937ರಲ್ಲಿ ಕಾಂಗ್ರೆಸ್ ಏಳು ಪ್ರಾಂತಗಳಲ್ಲಿ ಸೀಮಿತ ಸ್ವಾಯತ್ತ ಸರ್ಕಾರಗಳನ್ನು ಸ್ಥಾಪಿಸಿತ್ತು. ಮಂತ್ರಿಗಳ ಸ್ವಚ್ಛ ಜೀವನದಿಂದ ಹಿಡಿದು ರಾಷ್ಟ್ರದ ಕೊನೆಯ ಪ್ರಜೆಗಾಗಿ ಅವರು ಕೈಗೊಳ್ಳಬೇಕಾದ ಪುನರ್‌ರಚನೆಯ ಕಾರ್ಯಗಳನ್ನು ಗಾಂಧೀಜಿ ರೂಪಿಸುತ್ತಿದ್ದರು. ಖಾದಿ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹ, ಮದ್ಯಪಾನದ ಸಂಪೂರ್ಣ ನಿಷೇಧ, ಜೈಲುಗಳ ಸುಧಾರಣೆ, ವ್ಯವಸಾಯಾಭಿವೃದ್ಧಿ, ಗ್ರಾಮನೈರ್ಮಲ್ಯ ಗ್ರಾಮಕೇಂದ್ರಿತ ಜೀವನ ಶಿಕ್ಷಣ ಇವೇ ಮುಂತಾದ ಅಭಿವೃದ್ಧಿ ಕಾರ್ಯಗಳನ್ನು ಉತ್ಸಾಹದಿಂದ ಜನತೆಯೂ ಬೆಂಬಲಿಸಿತು. ಭಾರತದ ಪುನರುಜ್ಜೀವನದ ಮಹಾಉದ್ಯಮ ಭರದಿಂದ ಸಾಗುತ್ತಿತ್ತು.

ಚುನಾವಣೆಗಳು, ಅಧಿಕಾರ ಪ್ರಯೋಗ, ಮಂತ್ರಿ ಪದವಿಗಳು, ರಾಜಕೀಯ ಪಕ್ಷಗಳ ತಿಕ್ಕಾಟ ಎಲ್ಲವೂ ದೇಶದ ಜಾತೀಯ ಐಕ್ಯತೆಯನ್ನು ಛಿದ್ರ ಮಾಡುತ್ತಿತ್ತು. ಗುಜರಾತ್, ಬಂಗಾಳ, ಮಹಾರಾಷ್ಟ್ರ, ಪಂಜಾಬು, ಬಿಹಾರಗಳಲ್ಲಿ ಹಿಂದು ಮುಸ್ಲಿಮ್ ಗಲಭೆಗಳು ಕಾಡ್ಗಿಚ್ಚಿನಂತೆ ಹಬ್ಬಿದವು. ಮುಸ್ಲಿಮ್‌ಲೀಗ್ ಮತ್ತು ಕ್ಯಾಂಗ್ರೆಸ್ಸಿನ ಭಿನ್ನಾಭಿಪ್ರಾಯಗಳು ಹೆಚ್ಚಾಗಿ ಪರಸ್ಪರ ದ್ವೇಷ ಉಲ್ಬಣಿಸಿತು, ಗಾಂಧೀಜಿ ಈ ಬೆಳವಣಿಗೆಯ ದಾರುಣ ಪರಿಣಾಮಗಳನ್ನು ಮನಗಂಡರು. 1938ರ ಏಪ್ರಿಲ್‌ನಲ್ಲಿ ತಾವೇ ಮಹಮದಾಲಿ ಜಿನ್ನಾ ಅವರ ಬಾಗಿಲಬಳಿ ಹೋಗಿ ಹಿಂದೂ ಮುಸಲ್ಮಾನ್ ಐಕ್ಯತೆಗಾಗಿ ಸಂಧಾನದ ಪ್ರಯತ್ನಮಾಡಿದರು. ಎಲ್ಲವೂ ವಿಫಲವಾಯಿತು.

ಯುದ್ಧದ ಕಾರ್ಮೋಡಗಳು ನಿಬಿಡವಾದವು, 1941ರಲ್ಲಿ ರಷ್ಯದೇಶ ಜರ್ಮನಿಯ ಮೇಲೆ ಯುದ್ಧಸಾರಿತು. ಜಪಾನ್ ಜರ್ಮನಿಯ ಕಡೆ ಸೇರಿತು. ಭಾರತದ ಅನೇಕ ರಾಜಕೀಯ ಪಕ್ಷಗಳು ತಮ್ಮ ನೀತಿ ಬದಲಿಸಿದವು. ಕಮ್ಯೂನಿಸ್ಟ್ ಪಕ್ಷ ರಷ್ಯದ ನಿಕಟವರ್ತಿಯಾಗಿ ಈ ಯುದ್ಧದಲ್ಲಿ ಭಾರತೀಯರು ಇಂಗ್ಲೆಂಡಿನೊಡನೆ ಸೇರಿ ಜರ್ಮನಿಯನ್ನು ಸೋಲಿಸಬೇಕು ಎಂದು ಹೇಳಿತು. ಹಠಾತ್ತನೆ ಕಾಂಗ್ರೆಸ್ ಮತ್ತು ಗಾಂಧೀಜಿಯನ್ನು ಟೀಕಿಸಿ ಆಳುವ ಬ್ರಿಟಿಷರೊಡನೆ ಸೇರಿಕೊಂಡಿತು. ಹಿಂದೂ ಮಹಾಸಭೆ ಮತ್ತು ಮುಸ್ಲಿಮ್ ಲೀಗ್‌ಗಳು ಬೇರೆ ಬೇರೆ ದೃಷ್ಟಿಗಳಿಂದ ವೈಸರಾಯರಿಗೆ ಬೆಂಬಲ ಕೊಟ್ಟವು. ಅಗಾಧ ಬಹುಸಂಖ್ಯಾತರ ಬೆಂಬಲವಿದ್ದ ಜಾತ್ಯಾತೀತ ಸಂಸ್ಥೆ ಕಾಂಗ್ರೆಸ್ ಭಾರತಕ್ಕೆ ಸ್ವಾತಂತ್ರ್ಯಕೊಟ್ಟ ಹೊರತು ಯುದ್ಧೋದ್ಯಮಕ್ಕೆ ಸಹಾಯಮಾಡಲಾರೆವು ಎಂದಿತು. ಕಾಂಗ್ರೆಸ್ ಸರ್ಕಾರಗಳು ರಾಜಿನಾಮೆ ನೀಡಿದವು. ದೇಶದಲ್ಲೆಲ್ಲ ಸೈನಿಕ ಶಿಬಿರಗಳು, ಯುದ್ಧ ಖೈದಿಗಳ ಬಯಲು ಜೈಲುಗಳು, ಸೈನಿಕರ ಜಮಾವಣೆ, ಯುದ್ಧೋದ್ಯಮಕ್ಕೆ ಅಗಾಧ ವಸ್ತು ಸಂಗ್ರಹಣೆ, ಗ್ರಾಮಗಳಲ್ಲಿ ಬಲಾತ್ಕಾರದ ದಬ್ಬಾಳಿಕೆ, ವಿಪರೀತ ತೆರಿಗೆಗಳು ಹಬ್ಬಿಹರಡಿದವು. ಬಂಗಾಳದಲ್ಲಂತೂ ಕೃತಕ ಕ್ಷಾಮವೇ ತಲೆದೋರಿ ಲಕ್ಷಾಂತರ ಬಡವರು ಹಸಿವಿನಿಂದ ಸತ್ತರು.

1940ರಲ್ಲಿ ಮತ್ತೆ ಬ್ರಿಟಿಷ್ ಸರ್ಕಾರ ಭಾರತೀಯ ರಾಷ್ಟ್ರೀಯ ನಾಯಕರನ್ನು ಸಂಧಾನಕ್ಕೆ ಕರೆಯಿತು. ಗಾಂಧೀಜಿ ವೈಸ್‌ರಾಯರನ್ನು ಭೇಟಿಯಾದರು, ಯುದ್ಧೋದ್ಯಮಕ್ಕೆ ಭಾರತ ಸಹಾಯಮಾಡಲು ಒಂದು ಗೌರವಯುತ ಸ್ವಯಮಾಡಳಿತ ತಕ್ಷಣ ನಿರ್ಮಾಣವಾಗಲಿ ಎಂದು ಹೇಳಿದರು. ಅವರೊಪ್ಪಲಿಲ್ಲ. ಯುದ್ಧಾನಂತರ ಸ್ವಾತಂತ್ರ್ಯ ಘೋಷಿಸುತ್ತಾರೆಂಬ ಭರವಸೆಯೂ ಇರಲಿಲ್ಲ. ಕಾಂಗ್ರೆಸ್ ಪರವಾಗಿ ಗಾಂಧೀಜಿ ಸಾಂಕೇತಿಕ ಅಸಹಕಾರ ಚಳುವಳಿ ಪ್ರಾರಂಭಿಸಿದರು. ಯುದ್ಧದ ವಿರುದ್ಧ ಪ್ರಚಾರಮಾಡಲು ವಾಕ್ ಸ್ವಾತಂತ್ರ್ಯ ಘೋಷಿಸಿ ವಯಕ್ತಿಕ ಸತ್ಯಾಗ್ರಹ ಪ್ರಾರಂಭವಾಯಿತು. ಗಾಂಧೀಜಿಯೇ ಆರಿಸಿದ ಆದರ್ಶಸತ್ಯಾಗ್ರಹಿಗಳು ಮಾತ್ರ ಭಾಗವಹಿಸಬೇಕಾಗಿತ್ತು. ಸರ್ಕಾರಕ್ಕೆ ಈ ಯುದ್ಧ ಸಮಯದಲ್ಲಿ ತೊಂದರೆಯಾಗಬಾರದು ಎನ್ನುವುದೇ ಉದ್ದೇಶ. ಆದರೆ ಬ್ರಿಟಿಷರು ಇದನ್ನು ತಮ್ಮ ವಿರೋಧಿ ಪ್ರತಿಭಟನೆ ಎಂದೇ ತಿಳಿದರು. ಆಚಾರ್ಯ ವಿನೋಬಭಾವೆ ಪ್ರಪ್ರಥಮ ಸತ್ಯಾಗ್ರಹಿಯಾಗಿ ಸೆರೆಮನೆ ಸೇರಿದರು. ನಂತರ ಜವಹರಲಾಲರಿಗೆ ನಾಲ್ಕು ವರ್ಷ ಶಿಕ್ಷೆಯಾಯಿತು. ವಲ್ಲಭಭಾಯಿಯವರು ದಸ್ತಗಿರಿಯಾದರು ದೇಶದ ನಾನಾ ಕಡೆ ಇಪ್ಪತ್ತು ಸಾವಿರಕ್ಕೂ ಹೆಚ್ಚು ಚುನಾಯಿತ ಸತ್ಯಾಗ್ರಹಿಗಳು ಯುದ್ಧೋದ್ಯಮವನ್ನು ಪ್ರತಿಭಟಿಸಿನಿಂತು ದಸ್ತಗಿರಿಯಾದರು. ಪತ್ರಿಕೆಗಳಿಗೆ ದಿಗ್ಬಂಧನ ವಿಧಿಸಿದ್ದರು. ಹರಿಜನ ಪತ್ರಿಕೆಯನ್ನು ಗಾಂಧೀಜಿ ತಾವೇ ನಿಲ್ಲಿಸಿಬಿಟ್ಟರು. ಈ ಸೌಮ್ಯ ಸತ್ಯಾಗ್ರಹ ಕಾಂಗ್ರೆಸ್ಸಿನವರಿಗೆ ಸಮಾಧಾನ ತರಲಿಲ್ಲ. ಗಾಂಧೀಜಿಯೇ ಅದನ್ನು ನಿಲ್ಲಿಸಿದರು.

ಯುದ್ಧರಂಗದಲ್ಲಿ ಭಯಂಕರ ಕಾದಾಟ ನಡೆದಿತ್ತು, ಫ್ರಾನ್ಸ್ ಹಿಟ್ಲರನಿಗೆ ಶರಣಾಗತವಾಯಿತು. ಕೊನೆಯ ಪರಿಣಾಮ ಹೇಗೋ ಎಂದು ಜಗತ್ತೇ ಆತಂಕಗೊಂಡಿತ್ತು. ಜಪಾನ್ ಭಾರತದ ಗಡಿಯವರಿವಿಗೂ ಧಾಳಿಯಿಟ್ಟಿತು. ಈಶಾನ್ಯ ಏಷ್ಯದ ಹಲವಾರು ದೇಶಗಳು ಅವರ ಕೈವಶವಾದವು. ಬರ್ಮ, ಮಲಯ, ಸಿಂಗಪುರಗಳು ಬ್ರಿಟನ್ನಿನ ಕೈಬಿಟ್ಟುಹೋದವು. ಬಾಬು ಸುಭಾಸ ಚಂದ್ರಬೋಸರು ಭಾರತ ರಾಷ್ಟ್ರೀಯ ಸೈನ್ಯ (ಐ.ಎನ್.ಎ.) ಕಟ್ಟಿ ಜಪಾನ್ ಸಹಾಯ ಪಡೆದು ಬ್ರಿಟಿಷರ ಮೇಲೆ ಧಾಳಿಯಿಟ್ಟರು. ಭಾರತದಲ್ಲೂ

ಯುವಶಕ್ತಿ ಜಾಗೃತವಾಗಿ ಹೋರಾಟಕ್ಕೆ ತವಕಗೊಂಡು ತುಡಿಯುತ್ತಿತ್ತು. ಚೀಣಾದ ಅಧ್ಯಕ್ಷ ಚಿಯಾಂಗ್‌ಕೈಷಕ್ ಮತ್ತು ಮೆಡಾಮ್ ಚಿಯಾಂಗ್ ಭಾರತಕ್ಕೆ ಬಂದು ಸಂಧಾನಕ್ಕೆ ಪ್ರಯತ್ನಿಸಿದರು. ಗಾಂಧೀಜಿಯನ್ನು ಭೇಟಿಯಾದರು. ಜಪಾನೀಯರನ್ನು ತಡೆಗಟ್ಟಲು ಮನವಿಮಾಡಿದರು,

ಚರ್ಚಿಲ್ ಸರ್ಕಾರ ಸರ್‌ಸ್ಟಾಫರ್ಡ್ ಕ್ರಿಪ್ಸರನ್ನು ಸಂಧಾನಕ್ಕಾಗಿ ಕಳುಹಿಸಿತು. ಅವರ ಬಿಗಿಮುಷ್ಟಿ ಸಡಿಲಲಿಲ್ಲ. ಮತ್ತೆ ಮತ್ತೆ ಜಾತೀಯ ವೈಷಮ್ಯ, ಮುಸ್ಲಿಮರ ಪ್ರತ್ಯೇಕ ಹಕ್ಕುಗಳು, ರಾಜಮಹಾರಾಜರ ಅಸ್ತಿತ್ವ ಇವುಗಳನ್ನೇ ಎತ್ತಿಹಿಡಿದರು. ಇವೆಲ್ಲ ಸರಿಯಾದಮೇಲೆ ನಿಮಗೆ ಸ್ವಾತಂತ್ರ್ಯ ಎಂದರು. ಗಾಂಧೀಜಿ ಈ ಮರೀಚಿಕೆಯ ಭರವಸೆಗಳು ನಮಗಿನ್ನು ಬೇಡ ಎಂದರು. ಕ್ರಿಪ್ಸ್ ವಾಪಸಾದರು.

ಜಪಾನಿಗೆ ಇಲ್ಲಿ ಕಾಲಿಡಲು ನಾವೆಂದೂ ಬಿಡಲಾರೆವು ಎಂದು ಗಾಂಧೀಜಿ ದೃಢವಾಗಿ ನುಡಿದರು. ಅಸಹಕಾರ, ಸಾಮೂಹಿಕ ಪ್ರತಿಭಟನೆ, ಹಳ್ಳಿಹಳ್ಳಿಗಳಲ್ಲಿ ಕಾವಲು ಶಾಂತಿ ಸೇನೆ, ಶತ್ರುವಿಗೆ ತೃಣವೂ ಸಿಗದಂತೆ "ಬೆಂದಭೂಮಿ ಧೋರಣೆ" ಇಂಥ ಕ್ರಮಗಳಿಗಾಗಿ ಗಡಿ ಪ್ರದೇಶದ ಜನ ಸಿದ್ಧರಾದರು, "ನಾವು ಹೋರಾಡುತ್ತಿರುವುದು ಎಲ್ಲ ಸಾಮ್ರಾಜ್ಯ ಶಾಹಿಗಳ, ಎಲ್ಲ ಯುದ್ಧಕೋರ ರಾಷ್ಟ್ರಗಳ ವಿರುದ್ಧವಾಗಿ; ಬ್ರಿಟನ್ನನ್ನು ಓಡಿಸಿ ಜಪಾನಿಗೆ ದಾಸರಾಗುವುದನ್ನು ನಿರಾಕರಿಸುತ್ತೇವೆ. ನಮ್ಮದು ಶುದ್ಧವಾದ ಧರ್ಮಸಮರ. ನ್ಯಾಯವಾದುದನ್ನು ಮಾಡಿ ಎಂದು ಬ್ರಿಟನ್ನಿಗೆ ಮನವಿ ಮಾಡುತ್ತೇನೆ. ಮಾನವೀಯತೆಯಿಂದ ನಡೆದುಕೊಳ್ಳಿ ಎಂದು ಜಪಾನನ್ನು ಬೇಡುತ್ತೇನೆ" ಎಂದರು ಗಾಂಧೀಜಿ. ಸುತ್ತಲಿನ ವಿಧ್ವಂಸಕ ಮಾರಣ ಹೋಮದ ಮಧ್ಯೆ ಈ ಪ್ರಶಾಂತ, ಸತ್ಯನಿಷ್ಠ ಅದಮ್ಯ ಮಹಾತ್ಮ ಜಗತ್ತಿನ ಅಂತಃಸಾಕ್ಷಿಯಾಗಿ ಪ್ರಜ್ವಲಿಸುತ್ತಲೇ ಇದ್ದರು. ಕಟ್ಟಕಡೆಯ ಮಹಾಯಜ್ಞಕ್ಕೆ ದೇಶವನ್ನು ಸಿದ್ಧಮಾಡುತ್ತ ಸಾಗಿದರು,

(iii) ಭಾರತ ಬಿಟ್ಟು ಹೊರಡಿ ; 1942

ಆಗಸ್ಟ್ ಒಂಭತ್ತು 1942. ರಾಷ್ಟ್ರದ ಇತಿಹಾಸದಲ್ಲಿ ಮಹಾದಿನ. ಬಿಡುಗಡೆಗಾಗಿ ರಾಷ್ಟ್ರ ಸಂಕಲ್ಪ ದೃಢವಾಗಿ ನೆಲೆಯೂರಿದ ದಿನ. ಗಾಂಧೀಜಿ ಕೊಟ್ಟ "ಮಾಡು ಅಥವ ಮಡಿ" ಎಂಬ ದೀಕ್ಷೆ ಕೋಟಿ ಹೃದಯಗಳಲ್ಲಿ ಚಿಮ್ಮಿದ ದಿನ. ಬ್ರಿಟಿಷ್ ಸರ್ಕಾರದ ದಾಸ್ಯದಿಂದ ದೇಶವನ್ನು ಬಿಡುಗಡೆ ಮಾಡುತ್ತೇವೆ ಅಥವ ಆ ಪ್ರಯತ್ನದಲ್ಲಿ ಕೊನೆಯ ಬಲಿದಾನಕ್ಕೆ ಸಿದ್ಧವಾಗುತ್ತೇವೆ ಎಂದು ಆ ದಿನ ಬೊಂಬಾಯಿನ ಗವಾಲಿಯ ಕೆರೆ ಮೈದಾನದಲ್ಲಿ ಸೇರಿದ್ದ ಲಕ್ಷಾಂತರ ದೇಶಸೇವಕರು ಗಾಂಧೀಜಿಯ ನೇತೃತ್ವದಲ್ಲಿ ಹೋರಾಟದ ದೀಕ್ಷೆ ತೊಟ್ಟರು.

ಎರಡು ಗಂಟೆಗಳ ಅವರ ದೀರ್ಘಭಾಷಣ ಒಂದು ಸುವರ್ಣಾಕ್ಷರಗಳ ದಾಖಲೆಯಾಯಿತು. ಜಗತ್ತಿನ ರಾಜಕೀಯ ಇತಿಹಾಸದಲ್ಲಿ ಗಾಂಧೀಜಿಯ ಈ ವಿಶಿಷ್ಟ ಮಾನವೀಯ ಮೌಲ್ಯಗಳ ನಿಶ್ಶಸ್ತ್ರ ಸಮರನೀತಿ ಅಭೂತಪೂರ್ವ. ಗಾಂಧೀಜಿ ಹೀಗೆಂದರು.

> "ಅಹಿಂಸೆಯ ಆಯುಧ ನನಗೆ ಭಗವಂತನ ಅಮೂಲ್ಯ ಕೊಡುಗೆ. ಈಗ ಅದರ ಅಂತ್ಯಪರೀಕ್ಷೆ. ಹಿಂಸೆಯ ಜ್ವಾಲೆಯಿಂದ ಸುಟ್ಟು ಬೂದಿಯಾಗುತ್ತಿರುವ ಜಗತ್ತು ವಿಮುಕ್ತಿಗಾಗಿ ಆರ್ತನಾದದಿಂದ ಕೂಗುತ್ತಿದೆ. ಈಗ ನಾನು ಅಹಿಂಸೆಯ ಸಾಮರ್ಥ್ಯವನ್ನು ಪಯೋಗಿಸಿ ಕಾರ್ಯೋನ್ಮುಖನಾಗದಿದ್ದರೆ ದೇವರು ನನ್ನನ್ನು ಕ್ಷಮಿಸಲಾರ...ನಮ್ಮದು ಅಧಿಕಾರಕ್ಕಾಗಿ ಹೂಡಿದ ಯುದ್ಧವಲ್ಲ ಸರ್ವಾಧಿಕಾರಿಗಳ ಅಕ್ರಮದ ಧಾಳಿಯೂ ಅಲ್ಲ. ಪ್ರಜಾತಂತ್ರಕ್ಕಾಗಿ ಶುದ್ಧ ಅಹಿಂಸಾತ್ಮಕ ಸಮರ. ಸೈನ್ಯ ವಿಮುಕ್ತ ಜನತಾ ಚಳುವಳಿ ... ಬ್ರಿಟಿಷರ ಮೇಲೆ ನನಗಾವ ದ್ವೇಷವೂ ಇಲ್ಲ, ಜನತೆ ಬೇರೆ, ಸಾಮ್ರಾಜ್ಯಶಾಹಿ ಬೇರೆ. ಇಂಗ್ಲೆಂಡಿನ ಒಳಿತೂ ಭಾರತದ ಬಿಡುಗಡೆಯಿಂದ ಸಾಧ್ಯವಾದೀತು ... ಜಪಾನೀಯ

ರಿಗೂ ನಾನಿದನ್ನೇ ಹೇಳುತ್ತೇನೆ...ಬ್ರಿಟನ್ನಿನ ವಿರೋಧಿಗಳು ನಮ್ಮ ಮಿತ್ರರು ಎಂಬ ಮನೋಧರ್ಮ ಅಪಾಯಕಾರಿ. ಈ ಭೂಮಿಯ ಅಂಗುಲದಷ್ಟು ಪ್ರದೇಶವೂ ಆಕ್ರಮಣಕಾರರ ವಶವಾಗದಂತೆ ಹೋರಾಡ ಬಯಸುತ್ತೇವೆ...ಈ ಮಾತು ಬ್ರಿಟಿಷರಿಗೆ ಪಥ್ಯವಾಗದಿರಬಹುದು. ಸ್ನೇಹಹಸ್ತವನ್ನು ಅವರು ನಿರಾಕರಿಸಬಹುದು...ಯುದ್ಧಕೋರರ ತರ್ಕಕ್ಕೆ ಇದು ಅಸಂಗತ ಎನಿಸೀತು. ಆದರೂ ಇದು ನನ್ನ ಬಾಳಿನ ಮಹತ್ತರ ಸನ್ನಿವೇಶ. ನನ್ನೆದೆಯಲ್ಲಿ ಯಾವ ದ್ವೇಷಕ್ಕೂ ಎಡೆಕೊಡಲಾರೆ."


ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ಸಿನ ಆ ಮಹಾಸಭೆ ಒಮ್ಮತದಿಂದ ಈ ಕರೆಗೆ ಉತ್ಸಾಹದ ಬೆಂಬಲ ನೀಡಿತು, ಗಾಂಧೀಜಿ 'ಕ್ವಿಟ್ ಇಂಡಿಯಾ' ಚಳುವಳಿಯ ಮಹಾಸೇನಾನಿಯಾದರು. ಆ ಕೂಡಲೇ ಅಸಹಕಾರ ಮತ್ತು ಶಾಸನಭಂಗ ಕಾರ್ಯಕ್ರಮವನ್ನು ಗಾಂಧೀಜಿ ಘೋಷಿಸಿರಲಿಲ್ಲ. ವೈಸ್‌ರಾಯರ ಭೇಟಿ ಮಾಡಿ ರಾಷ್ಟ್ರದ ಒಕ್ಕೊರಲಿನ ಬೇಡಿಕೆಗಳನ್ನು ಮನದಟ್ಟುಮಾಡಿಕೊಟ್ಟು ಸಂಧಾನದ ಒಪ್ಪಂದಕ್ಕೆ ಬರಲು ಬಯಸಿದ್ದರು. ನಿರೀಕ್ಷಿಸಿದಂತೆಯೇ ವೈಸ್‌ರಾಯ್ ಅದನ್ನು ನಿರಾಕರಿಸಿ ಆಗಸ್ಟ್ 9ರ ಬೆಳಗಿನ ಝಾವವೇ ಗಾಂಧೀಜಿಯನ್ನು ದಸ್ತಗಿರಿಮಾಡಿದರು. ಎರಡೇ ದಿನಗಳಲ್ಲಿ ಸಾವಿರಾರು ಪ್ರಮುಖ ಕಾಂಗ್ರೆಸ್ ಪದಾಧಿಕಾರಿಗಳು ಸೆರೆಸೇರಿದರು. ಗಾಂಧೀಜಿ, ಕಸ್ತೂರಿಬಾ, ಮಹದೇವ ದೇಸಾಯಿ, ಮೀರಾಬೆನ್ ಅವರುಗಳನ್ನು ಪುಣೆಯ ಆಗಾಖಾನ್ ಅರಮನೆಯಲ್ಲಿ ಬಂಧಿಸಿಟ್ಟರು.

ಆಗಸ್ಟ್ 15 ರಂದು ಗಾಂಧೀಜಿಯ ಬಲಭುಜವೆನಿಸಿದ್ದ ಮಹದೇವ ದೇಸಾಯಿ ಜೈಲಿನಲ್ಲೇ ಹೃದಯಾಘಾತದಿಂದ ಮರಣ ಹೊಂದಿದರು, ಈ ಆಘಾತ ಗಾಂಧೀಜಿಗೆ ಅತ್ಯಂತ ದುಃಖದಾಯಕವಾಯಿತು. ದೇಶದಲ್ಲೆಲ್ಲ ಕಾಳ್ಗಿಚ್ಚಿನಂತೆ ಹರಡಿತು ಈ 'ಛಲೆಜಾವ್' ಚಳುವಳಿ.

ಜೈಲಿನಿಂದ ತಪ್ಪಿಸಿಕೊಂಡು ಹೊರಬಂದ ಯುವನಾಯಕರಾದ ಜೈಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯು, ಅಚ್ಯುತ ಪಟವರ್ಧನ್ ಮತ್ತು ಶ್ರೀಮತಿ ಅರುಣ ಅಸಫ್‌ಆಲಿ ಭೂಗತರಾಗಿ ದೇಶದಲ್ಲೆಲ್ಲ ಪಾದರಸದಂತೆ ಓಡಾಡುತ್ತ ಈ ಜನತಾ ಚಳುವಳಿಯ ಮಹಾಪೂರವನ್ನು ನಿಯಂತ್ರಿಸಲು ಪ್ರಯತ್ನಮಾಡುತ್ತಿದ್ದರು. ಅಸಹಕಾರ, ಶಾಸನಭಂಗ, ಗ್ರಾಮಗ್ರಾಮಗಳಲ್ಲಿ ಸ್ವಾತಂತ್ರ್ಯ ಘೋಷಣೆ, ಯುದ್ಧೋದ್ಯಮಗಳ ಬಹಿಷ್ಕಾರ, ಹೆಂಡದಂಗಡಿಗಳ ಪಿಕೆಟಿಂಗ್, ವಿದೇಶೀ ವಸ್ತುತಿರಸ್ಕಾರ, ಇವುಗಳಲ್ಲಿ ಲಕ್ಷಾಂತರ ಜನ ಭಾಗವಹಿಸಿದರು. ಕಾರ್ಮಿಕರು, ವ್ಯಾಪಾರಿಗಳು, ರೈತರು. ವಿದ್ಯಾರ್ಥಿಗಳು ಮುಂಚೂಣಿಯಲ್ಲಿದ್ಧರು, ಜೊತೆಗೆ ಬ್ರಿಟಿಷ್ ಸೈನ್ಯಕ್ಕೆ ಸೇರಿದ್ದ ಭಾರತೀಯ ಸೈನಿಕರಲ್ಲೂ ಅಶಾಂತಿ ತಲೆದೋರಿತು. ಬೊಂಬಾಯಿನ ನೌಕಾಪಡೆಯ 'ರೇಟಿಂಗ್'ಗಳು ದಂಗೆಯೆದ್ದರು. ಗಡಿನಾಡಿನಲ್ಲಿ ಸೈನಿಕರು ಪ್ರತಿಭಟಿಸಿ ನಿಂತರು. ಯುದ್ಧರಂಗವಾಗಿದ್ದ ಬರ್ಮದಲ್ಲಿ ಸಾವಿರಾರು ಸೈನಿಕರು ಬ್ರಿಟಿಷರನ್ನು ತೊರೆದು ಸುಭಾಸ್‌ಬೋಸರೊಡನೆ ಸೇರಿ ಪ್ರತಿಯುದ್ಧ ಘೋಷಿಸಿದರು.

ಎಲ್ಲ ವಿಧ್ವಂಸಕ ಘಟನೆಗಳಿಗೂ ನೀವೇ ಕಾರಣ ಎಂದು ಗಾಂಧೀಜಿಯ ಮೇಲೆ ಆರೋಪಣೆಮಾಡಿ ಬ್ರಿಟಿಷ್ ವೈಸ್‌ರಾಯ್ ಪ್ರಕಟಿಸಿದರು. ಗಾಂಧೀಜಿಯ ಮನಸ್ಸು ವಿಹ್ವಲಗೊಂಡಿತ್ತು. ಆತ್ಮಶುದ್ಧಿಗಾಗಿ 1943ರ ಫೆಬ್ರವರಿ 10 ರಿಂದ ಇಪ್ಪತ್ತೊಂದು ದಿನಗಳ ಉಪವಾಸ ಕೈಗೊಂಡರು. ಮಧ್ಯೆ ಅವರ ದೇಹಸ್ಥಿತಿ ಅಪಾಯದ ಅಂಚಿನಲ್ಲಿ ತೂಗಾಡುತ್ತಿತ್ತು. ಸರ್ಕಾರ ಬಿಡುಗಡೆಮಾಡದೆ ಎಲ್ಲವನ್ನೂ ಮರೆಮಾಚಿತು. ದೈವಕೃಪೆಯಿಂದ ಉಪವಾಸ ವ್ರತ ಮಾರ್ಚಿ 3 ರಂದು ಕೊನೆಗೊಂಡಿತು. ದೇಶದಲ್ಲೆಲ್ಲ ಕೃತಜ್ಞತೆಯ ಪ್ರಾರ್ಥನಾ ಸಭೆಗಳಾದವು. ಕ್ರಮೇಣ ಗಾಂಧೀಜಿ ಚೇತರಿಸಿಕೊಂಡರು.

1944 ಫೆಬ್ರವರಿ 22 ಆಗಾಖಾನ್ ಅರಮನೆಯಲ್ಲಿ ಸತಿ ಕಸ್ತೂರಿಬಾ ಸಾವನ್ನಪ್ಪಿದರು. ಗಾಂಧೀಜಿಗೆ ಎರಡನೆಯ ಊರುಗೋಲೊಂದು ಕುಸಿದು ಬಿದ್ದಿತು, 14ನೇ ವರ್ಷದಲ್ಲೇ ಮದುವೆಯಾಗಿ ಅರವತ್ತು ವರ್ಷಗಳಕಾಲ



ರಾಷ್ಟ್ರಪಿತ — 1947

ನೆರಳಿನಂತೆ ಪತಿಯ ಸರ್ವಕಾರ್ಯಗಳಲ್ಲೂ ಸಹಧರ್ಮಚಾರಿಣಿಯಾಗಿದ್ದ ಸಾಧ್ವಿ ದೇಶಕಾರ್ಯದಲ್ಲೇ ಹುತಾತ್ಮರಾದರು. ಮಹದೇವ ದೇಸಾಯಿ ಮತ್ತು ಕಸ್ತೂರಿಬಾ ಅವರ ನೆನಪಿನ ಸಮಾಧಿಗಳು ಪುಣೆಯ ಆಗಾಖಾನ್ ಅರಮನೆ ಯನ್ನು ಈಗ ಯಾತ್ರಾಸ್ಥಳವನ್ನಾಗಿಸಿವೆ.

ಸಾಮ್ರಾಜ್ಯಶಾಹಿ ಸರ್ಕಾರ ಯಾವ ವಿಧದಲ್ಲೂ ತನ್ನನ್ನು ತಾನು ಸಮ ರ್ಥಿಸಿಕೊಳ್ಳಲಾರದೆ ಕುಸಿಯುತ್ತಿತ್ತು. ಇಂಗ್ಲೆಂಡಿನಲ್ಲೂ ಪ್ರಬಲವಾದ ಟೀಕೆಗಳಿಗೆ ಗುರಿಯಾಯಿತು. ಉನ್ನತ ಸೈನ್ಯಾಧಿಕಾರಿಯಾಗಿದ್ದ ಲಾರ್ಡ್ ವೇವಲ್ ವೈಸರಾಯರಾದರು. 1944ರ ಮೇ 5 ರಂದು ಗಾಂಧೀಜಿಯನ್ನು ಬಿಡುಗಡೆಮಾಡಿದರು. ಅಲ್ಲದೆ ಕಾಂಗ್ರೆಸ್ ಧುರೀಣರೆಲ್ಲರನ್ನೂ ಸೆರೆಯಿಂದ ಬಿಡಿಸಿ ಸಂಧಾನದ ಮಾತುಕತೆಗಳಿಗಾಗಿ ಆಹ್ವಾನಿಸಿದರು.

ಯುದ್ಧದ ಜಯಾಪಜಯಗಳು ಇನ್ನೂ ಡೋಲಾಯಮಾನವಾಗಿ ತೂಗುತ್ತಿದ್ದವು. ಕೊನೆಗೊಮ್ಮೆ ಅಮೆರಿಕದ ಅಣುಬಾಂಬು ಜಪಾನಿನ ಮೇಲೆ ಸಿಡಿದು ಶತ್ರುರಾಷ್ಟ್ರಗಳು ಶರಣಾಗತವಾದವು. ಹೆಚ್ಚು ಪ್ರಬಲ ಅಸ್ತ್ರಕರಗತವಾಗಿ ಹಠಾತ್ತನೆ ಈ ದಾರುಣ ಕುರುಕ್ಷೇತ್ರ ಎಂಟುವರ್ಷ ದ್ವೇಷದ ವಿಷಜ್ವಾಲೆಗಳಿಂದ ಜಗತ್ತನ್ನು ತಲ್ಲಣಿಸಿ ಕೊನೆಗೊಂಡಿತು. 1945ರಲ್ಲಿ ಮುಗಿದ ಜಗದ್ವ್ಯಾಪಕ ಹಿಂಸಾಮಯ ಹೋರಾಟದಲ್ಲಿ ಮೂರು ಕೋಟಿ ಜನ ಸತ್ತರು, ನಿರಪರಾಧಿಗಳಾದ ಹೆಂಗಸರು, ಮಕ್ಕಳು, ಶ್ರೀಸಾಮಾನ್ಯರು ಬಾಂಬ್‌ಗಳಿಗೆ ತುತ್ತಾದರು, ಮರೆಯಲ್ಲಿದ್ದು ನಿರಪರಾಧಿಗಳನ್ನು ಕೊಲ್ಲುವ ಹೇಡಿತನದ ಯುದ್ಧ ರೀತಿಯೊಂದು ನಿರ್ಮಾಣವಾಯಿತು, ಹತ್ತುಕೋಟಿ ಜನ ಅಂಗವಿಕಲರಾದರು. ನಾಲ್ಕುನೂರು ಸಣ್ಣ ದೊಡ್ಡ ಊರುಗಳು ನಾಶವಾದವು, ಭಸ್ಮವಾದ ಜಪಾನಿನ ನಾಗಸಾಕಿ ಮತ್ತು ಹಿರೋಷಿಮಾ ಮಾನವನ ರಾಕ್ಷಸಶಕ್ತಿಯ ಸಂಕೇತವಾಗಿ ಅಣುಯುಗದ ಭಯಂಕರ ಭವಿಷ್ಯಕ್ಕೆ ಸಾಕ್ಷಿಯಾಗಿ ನಿಂತಿತು. ಅದೇ ಸಮಯಕ್ಕೆ ಭಾರತದ ಶಾಂತಿಸಮರದಲ್ಲಿ ವಿನೂ ತನ ಮಾನವೀಯ ಶಕ್ತಿಗಳ ದಿಗ್ವಿಜಯ ಎನಿಸಿದ ಗಾಂಧೀ ಪ್ರಣೀತ ಸತ್ಯಾ ಗ್ರಹ ಶಾಸ್ತ್ರ ಜಗತ್ತಿನ ಆಶಾಕಿರಣವಾಗಿ ಉದಯಿಸಿತ್ತು.

ಕೊನೆಯ ವೈಸ್‌ರಾಯರಾಗಿ ಲಾರ್ಡ್ ಮೌಂಟ್ ಬೇಟನ್ ಅಧಿಕಾರ ವಹಿಸಿಕೊಂಡರು. ಉತ್ತರ ಭಾರತ ಹಿಂದೂ ಮುಸ್ಲಿಮ್ ಗಲಭೆಗಳಲ್ಲಿ ನುಚ್ಚು ನೂರಾಗುತ್ತಿತ್ತು. ಎಲ್ಲೆಲ್ಲೂ ರಕ್ತದಕೋಡಿ ಹರಿಯಿತು. ನಲವತ್ತು ವರ್ಷಗಳಿಂದ ಏಕಪ್ರಕಾರವಾಗಿ ಅಹಿಂಸೆಯ ಶಿಕ್ಷಣ ಪಡೆದ ದೇಶ ವಿಜಯದ ಹೊಸ್ತಿಲಿನಲ್ಲಿ ನಿಂತಾಗ ಮತಾಂಧತೆಯ ದಳ್ಳುರಿಗೆ ತುತ್ತಾಗಿ ತನ್ನನ್ನು ತಾನೇ ಇರಿದುಕೊಂಡಿತು. ಪಂಜಾಬ್ ಮತ್ತು ಬಂಗಾಳ ಹೋಳಾದವು. ಭಾರತ ದಲ್ಲಿ ಒಂಭತ್ತು ಕೋಟಿ ಮುಸ್ಲಿಮರು ಹರಡಿಹೋಗಿದ್ದರು. ಒಂದು ಭಾಗದ ಮುಸ್ಲಿಮರಿಗೆ ಮಾತ್ರ ಸ್ವತಂತ್ರ ಪಾಕಿಸ್ತಾನ ಲಭಿಸಿತು. ಜಾತೀಯ ದ್ವೇಷ ಅಗಾಧವಾಗಿ ಬೆಳೆಯಿತು. ಗಾಂಧೀಜಿ ವಿಷಣ್ಣಹೃದಯರಾಗಿ ಶಾಂತಿಯಾತ್ರೆ ಕೈಗೊಂಡರು.

(v) ನೌಖಾಲಿಯ ಶಾಂತಿಯಾತ್ರೆ

ರಕ್ತದ ಮಡುವಿನಲ್ಲಿ ಬಿದ್ದ ಸಾಮಾನ್ಯ ಜನ ಹಿಂದೂಗಳು, ಮುಸ್ಲಿಮರು, ಸಿಕ್ಕರು, ಕಂಗೆಟ್ಟು ಕಂಗಾಲಾಗಿ ದಿಕ್ಕುಗೆಟ್ಟು ಗುಂಪು ಗುಂಪಾಗಿ ತಾಯಿನೆಲೆಗಳಿಂದ ಓಡುತ್ತಿದ್ದರು. ಜಗತ್ತು ಕಂಡರಿಯದಷ್ಟು ನಿರಾಶ್ರಿತ ಜನರ ವಲಸೆ ಸುರಕ್ಷಿತ ಸ್ಥಳಗಳಡೆಗೆ ಧಾವಿಸುತ್ತಿತ್ತು. ಭಾರವಾದ ಹೃದಯ ದಿಂದ ಗಾಂಧೀಜಿ ಸೇವಾಗ್ರಾಮದಿಂದ 1946ರ ಸೆಪ್ಟೆಂಬರಿನಲ್ಲಿ ಹೊರಟು ದೆಹಲಿಯಲ್ಲಿ ಹರಿಜನ ಕೇರಿಯಲ್ಲಿ ಬಿಡಾರಮಾಡಿದ್ದರು.

> "ಯಾವ ದ್ವೇಷ ಭಾವನೆಯೂ ಇಲ್ಲದೆ ನಾವು ಬಲಿದಾನಕ್ಕೆ ಸಿದ್ಧರಾಗಬೇಕು. ಶುದ್ಧಾತ್ಮರೂ ನಿರ್ಭಯರೂ ಆಗಿ ಅಹಿಂಸೆಯಿಂದ ಈ ಭೀಕರ ಪರಿಸ್ಥಿತಿಯನ್ನೆದುರಿಸೋಣ. ರಕ್ತಕ್ಕೆ ರಕ್ತ ಕೊಲೆಗೆ ಪ್ರತಿಕೊಲೆ ಎನ್ನುವುದು ಮಾನವ ಧರ್ಮವಲ್ಲ. ಆತ್ಮ ರಕ್ಷಣೆಗೂ ಪ್ರತಿದ್ವೇಷದ ಕ್ರೌರ್ಯ ಒಂದು ಸಾಧನವಾಗದು. ಈ ಅನಿರೀಕ್ಷಿತ ಅಗ್ನಿಜ್ವಾಲೆ ಶಮನವಾಗಲು ನನ್ನನ್ನೇ ಹವಿಸ್ಸನ್ನಾಗಿ ಅರ್ಪಿಸಲು ಸಿದ್ಧನಾಗಿದ್ದೇನೆ."

ಗಾಂಧೀಜಿಯ ಈ ಉದ್ಗಾರ ಸಹಸ್ರಾರು ವೀರಸತ್ಯಾಗ್ರಹಿಗಳನ್ನು ಕಲಕಿತು. ಅನೇಕರು ಶಾಂತಿ ಪ್ರಯತ್ನದಲ್ಲಿ ತೊಡಗಿದರು. ನಿರಾಶ್ರಿತರ ಆರ್ತನಾದಕ್ಕೆ ಓಗೊಟ್ಟು ಅವರ ಸೇವೆಯಲ್ಲಿ ಲೀನವಾದರು. ಅವರ ಕೋಪದ ಬಡಬಾಗ್ನಿಯನ್ನು ಶಮನಗೊಳಿಸುತ್ತಿದ್ದರು.

ಕಲ್ಕತ್ತೆ ರಣರಂಗವಾಗಿತ್ತು. ಹಿಂಸೆ, ಕೊಲೆ, ಮಹಿಳೆಯರ ಮಾನ ಭಂಗ, ಬಲಾತ್ಕಾರದ ಮತಾಂತರ, ಲೂಟಿ, ಬೆಂಕಿ ಎಲ್ಲೆಲ್ಲೂ ಹರಡಿ ಹಾಹಾ ಕಾರ ವೆದ್ದಿತ್ತು. ಗಾಂಧೀಜಿ ಅಲ್ಲಿಗೆ ಧಾವಿಸಿದರು. ಬೆಂಕಿಯ ಮಧ್ಯಕ್ಕೆ ಧುಮಿಕಿ ಜಾತಿದ್ವೇಷದ ವಿಷಜ್ವಾಲೆ ಆರಿಸಲು ಏಕಾಂಗಿಯಾಗಿ ನಿಂತರು. ಮುಸ್ಲಿಮರ ಮನೆಗಳಲ್ಲಿ ಅತಿಥಿಗಳಾದರು, ಮೇಲೇರಿ ಬಂದವರನ್ನು ತಡೆದರು. ಯಾವ ಕ್ಷಣ ಯಾರದೋ ಕತ್ತಿ ಅವರಮೇಲೆ ಹಠಾತ್ತನೆ ಬಿದ್ದು ಕೊಲೆಯಾಗುವ ಅಪಾಯಕ್ಕೆ ತಲೆಯೊಡ್ಡಿ ನಿಂತರು. ಮುಖಂಡರನ್ನು ಕರೆಸಿ ಬುದ್ಧಿ ಹೇಳಿದರು. ನೆಹರು, ಸುಹ್ರವರ್ದಿ, ಲಿಯಾಖತ್ ಆಲಿಖಾನ್ ಪಟೇಲ್ ಎಲ್ಲರೂ ಕಲ್ಕತ್ತೆಯ ಬೆಂಕಿ ಆರಿಸಲು ಧಾವಿಸಿ ಬಂದರು. "ಗಲಭೆಗಳ ಕಡೆಯ ಕಿಡಿ ಆರುವವರೆಗೂ ನಾನು ಬಂಗಾಳವನ್ನು ಬಿಟ್ಟು ಹೋಗುವುದಿಲ್ಲ. ದುಃಖತಪ್ತಜನಕ್ಕೆ ನಾನಾವರೀತಿಯಲ್ಲೂ ಸಹಾಯಮಾಡಲಾಗದಿದ್ದರೆ ಸಾಯುವುದೇ ಮೇಲು...ಉಪವಾಸ ವ್ರತಕೈಗೊಳ್ಳದೆ ವಿಧಿಯಿಲ್ಲ" ಎಂದುಕೊಂಡರು ಗಾಂಧೀಜಿ, ಜನರ ಹೃದಯಗಳು ಕರಗಿ ನೀರಾದವು. ಮುಸ್ಲಿಮ್ ಮತ್ತು ಹಿಂದೂ ನಾಯಕರು ಒಗ್ಗೂಡಿ ಶಾಂತಿಗಾಗಿ ದುಡಿದರು. ಕೊಲೆಗಳು ನಿಂತವು, ಮೌಂಟ್ ಬೇಟನ್ ಈ ಪವಾಡ ನೋಡಿ ವಿಸ್ಮಿತರಾದರು. "ಪಂಜಾಬಿನಲ್ಲಿ ದೊಡ್ಡ ಸೈನ್ಯಪಡೆ ಸಾಧಿಸಲಾಗದಿದ್ದುದನ್ನು ಈ ಏಕಾಕಿ ಮಹಾತ್ಮ ಗಡಿರಕ್ಷಣಾ ಪಡೆಯಂತೆ ನಿಂತು ರಕ್ತಪಾತ ನಿಲ್ಲಿಸಿದರು" ಎಂದು ಬರೆದರು.

ಪೂರ್ವ ಬಂಗಾಳದ ನೌಖಾಲಿ ಜಿಲ್ಲೆಯ ಹಳ್ಳಿಗಳಲ್ಲಿ ಮೀತಿಮೀರಿ ದೌರ್ಜನ್ಯಗಳು ನಡೆದು ಅಲ್ಪಸಂಖ್ಯಾತ ಹಿಂದುಗಳು ದಿಕ್ಕಾಪಾಲಾಗಿ ಓಡಿದರು. ಮಹಿಳೆಯರ ಆರ್ತನಾದ, ಮಕ್ಕಳ ಚೀತ್ಕಾರ, ಬಡರೈತರ ಆಸ್ತಿ

ಧ್ವಂಸ ಗಾಂಧೀಜಿಯನ್ನು ಕಲಕಿತು ಆ ಕೂಡಲೇ ನಿರ್ಧರಿಸಿ ನೌಖಾಲಿಗೆ ಪ್ರಯಾಣಮಾಡಿದರು. ಯಾವ ಸಂಚಾರಿ ವಾಹನಗಳಿಗೂ ದುರ್ಗಮವಾಗಿದ್ದ ಆ ಬೆಟ್ಟಗಾಡುಗಳಲ್ಲಿ ಹಳ್ಳಿಹಳ್ಳಿಗೆ ಪಾದಯಾತ್ರೆ ಮಾಡಿದರು. ಏಕಾಕಿಯಾಗಿ ಕೋಲುಹಿಡಿದು ಬರಿಗಾಲಿನಲ್ಲಿ ನಡೆದು, ಬೆಂದ ಮನೆಗಳ ಮುರಿದ ಗುಡಿಸಲುಗಳ ಸೂರಿನೆಡೆಯಲ್ಲಿ ಮಲಗಿ, ಹೃದಯಗಳನ್ನು ಜೋಡಿಸುತ್ತಿದ್ದ ಈ ವಿಶ್ವಪ್ರೇಮಿ ಯಾತ್ರಿಕನ ಶಾಂತಿಯಾತ್ರೆ ಮಾನವಲೋಕದ ಆತ್ಮಸಾಕ್ಷಿಯನ್ನು ಕಲಕಿತು. 'ಅಕ್ರೋಧದಿಂದ ಕ್ರೋಧವನ್ನು ಗೆಲ್ಲು' ಎಂದು ಉಪದೇಶಿಸುತ್ತಾ ನಡೆದ ಅಹಿಂಸಾಮೂರ್ತಿ ಬುದ್ಧ, 'ನಿನ್ನಂತೆ ನಿನ್ನ ನೆರೆಹೊರೆಯನ್ನು ಪ್ರೀತಿಸು' ಎಂದು ಸಾರುತ್ತ ಹೊರಟು ಶಿಲುಬೆಗೇರಿದ ಏಸುಕ್ರಿಸ್ತ ಇಂಥ ಪ್ರವಾದಿಗಳ ನೆನಪನ್ನು ತಂದು ಕೊಟ್ಟಿತು. ನವಖಾಲಿಯ ಶ್ರೀರಾಮಪುರಕ್ಕೆ ಪ್ರಧಾನಿ ನೆಹರು ಧಾವಿಸಿಬಂದರು. ಎಪ್ಪತ್ತೇಳು ವಯಸ್ಸಿನ ಕೃಶದೇಹಿ 'ಸತ್ಯಮೇವ ಜಯತೆ' ಎಂಬ ಮೇರುಸದೃಶ ವಿಶ್ವಾಸದಿಂದ ಕ್ರೂರಿಗಳಲ್ಲೂ ಪ್ರೇಮವನ್ನು ಚಿಮ್ಮಿಸುವ ಈ ಸಾಹಸ ಕಂಡು ಬೆರಗಾದರು. ಗಾಂಧೀಜಿ ಜೊತೆಗೆ ನಿರ್ಭಯವಾಗಿ ಈ ಶಾಂತಿ ಯಾತ್ರೆಯಲ್ಲಿ ಪಾಲ್ಗೊಂಡ ಮಹಿಳೆಯರ ಸಾಹಸ ಅದ್ಭುತವಾದುದು. ಡಾ॥ ಸುಶೀಲಾ ನಯ್ಯರ್, ಶ್ರೀಮತಿ ಸುಚೇತಾಕೃಪಲಾನಿ, ಗಾಂಧೀಜಿಯ ಮೊಮ್ಮಕ್ಕಳಾದ ಮನುಗಾಂಧಿ ಮತ್ತು ಅಭಾಗಾಂಧಿ ಅವರು ಎಲ್ಲೆಲ್ಲೂ ಸ್ತ್ರೀಶಕ್ತಿ ಜಾಗೃತಿಗೊಳಿಸಿದರು. ಪ್ರೊ॥ ನಿರ್ಮಲ ಕುಮಾರ್ ಬೋಸ್ ದುಭಾಷಿಯಾಗಿ ಕೆಲಸಮಾಡುತ್ತ ಎಡಬಿಡದೆ ನಡೆದರು, ನೌಖಾಲಿಯ ಈ ಯಜ್ಞದೀಕ್ಷೆ ಗಾಂಧೀಜಿಯ ಜೀವನದ ಮೇರುಘಟನೆ ಎನಿಸಿತು. ಕಾಂಗ್ರೆಸ್ ಅಧ್ಯಕ್ಷ ಆಚಾರ್ಯ ಕೃಪಲಾನಿ ಹೃದಯತುಂಬಿ ನುಡಿದರು.

> "ಮತೀಯ ದಂಗೆಗಳಿಂದ ನಾವೆಲ್ಲ ದುಃಖಿತಪ್ತರಾಗಿದ್ದೇವೆ. ನಮ್ಮಲ್ಲಿ ಶ್ರೇಷ್ಠರೆನಿಸಿಕೊಂಡವರೂ ಅಹಿಂಸೆಯಲ್ಲಿ ಶ್ರದ್ಧೆ ಕಳೆದುಕೊಂಡಂತೆ ಕಾಣುತ್ತದೆ. ಅದರೆ ಆ ದಿವ್ಯಜ್ಯೋತಿ (ಗಾಂಧಿ) ನೋಡಿ ! ಅದೇ ನಮಗೆ ಇಂದಲ್ಲ ನಾಳೆ ದಾರಿದೀಪ, ಎಲ್ಲ ಧರ್ಮಪ್ರವರ್ತಕರ ಅನುಯಾಯಿಗಳೂ ಅವರವರ ಗುರುಗಳಿಗೆ

ದ್ರೋಹ ಬಗೆದರು. ಆದರೆ ಯಾವ ಧರ್ಮವೂ ಅಳಿಸಿ ಹೋಗಲಿಲ್ಲ. ಕ್ರೈಸ್ತ, ಬುದ್ಧ, ಜೈನ, ಹಿಂದೂ ಧರ್ಮಗಳೆಲ್ಲ ಬದುಕಿವೆ. ಹಾಗೆಯೇ ನಮ್ಮೆಲ್ಲರ ಗುರು ಗಾಂಧೀಜಿ. ನಾವು ಅವರ ಮಾತಿಗೆ ವಿಮುಖರಾಗಬಹುದು. ಆದರೆ ಅವರ ಸಿದ್ಧಾಂತಗಳು ಎಂದೆಂದಿಗೂ ಜೀವಂತವಾಗಿ ಉಳಿಯುತ್ತವೆ."

ಗಾಂಧೀಜಿಗೆ ಈ ಪರಿಸರದಲ್ಲಿ ಹೆಚ್ಚು ಕಾಲ ಬದುಕಲಾರೆ ಎನಿಸುತ್ತಿತ್ತು. ಭಗವಂತನಲ್ಲೂ ಮಾನವ ಪ್ರೇಮದಲ್ಲೂ ಅಚಲವಾದ ನಂಬಿಕೆಯಿಂದ ನಡೆದರು, ಬೆಳಗಿನಜಾವ 4 ಗಂಟೆಗೇ ಏಳುತ್ತಿದ್ದರು, ಪ್ರಾರ್ಥನೆ, ಜೇನು ಬೆರೆಸಿದ ಬಿಸಿನೀರು, ಒಂದು ಲಾಂದ್ರದ ಬಳಿ ಕುಳಿತು ಓದು ಬರಹ, ಬಂಗಾಳೀ ಭಾಷೆಯ ಕಲಿಕೆ, ಸೂರ್ಯೋದಯಕ್ಕೆ ಹಳ್ಳಿಯ ಮನೆಮನೆಗೆ ಭೇಟಿ, ಹಿಂತಿರುಗಿ ಬಂದು ಮೈಗೆ ಮರ್ದನಮಾಡಿಸಿಕೊಳ್ಳುವುದು ಬಿಸಿಲಿಗೆ ಮೈಯೊಡ್ಡಿ ಮಲಗುವುದು ಮತ್ತು ಬಿಸಿನೀರಿನ ಸ್ನಾನ – ಇದು ಬೆಳಗಿನ ದಿನಚರಿ. ಊಟಕ್ಕೆ ಆಡಿನ ಹಾಲು, ಬೇಯಿಸಿದ ತರಕಾರಿ ಒಂದೆರಡು ಚಪಾತಿ– ಪತ್ರ ವ್ಯವಹಾರ, ವಿಶ್ರಾಂತಿ; ಮಧ್ಯಾಹ್ನ ಎಳನೀರು. ಹೊಟ್ಟೆಯ ಮೇಲೆ ಮಣ್ಣಿನ ಪೊಲ್ಟೀಸು ಅರ್ಧ ಗಂಟೆನಂತರ ನೂಲುವುದು, ಪತ್ರಿಕೆಗಳನ್ನು ನೋಡುವುದು 3-30ಕ್ಕೆ ಅಲ್ಪಾಹಾರ ; 4ಕ್ಕೆ ಸಂಜೆಯ ಪ್ರಾರ್ಥನಾ ಸಭೆ ಪ್ರವಚನ;ಗಾಳಿ ಸಂಚಾರ. ರಾತ್ರಿ 8-30ಕ್ಕೆ ಮಲಗುವುದು. ಹೀಗೆ ದಿನ ಕಳೆಯುತ್ತಿದ್ದರು, ಏಳು ವಾರಗಳಲ್ಲಿ 116 ಮೈಲಿಗಳ ಪಾದಯಾತ್ರೆ 42 ಹಳ್ಳಿಗಳಿಗೆ ಭೇಟಿ, ಫೆಬ್ರುವರಿ ಮೂರರಂದು ಮುಗಿದಿತ್ತು. ಇದು ಧೀರರ ಅಹಿಂಸೆಯ ಪ್ರಯೋಗ ಮಾಡುವ ಮೊದಲ ಹೆಜ್ಜೆ ಅಂದರು ಗಾಂಧೀಜಿ. ಹದಿನಾರು ಸಹಕಾರ್ಯಕರ್ತರ ಹತ್ತು ತಂಡಗಳು ದಿನವೂ ವ್ಯಾಪಕವಾಗಿ ಸಂಚರಿಸುತ್ತಾ ಹಿಂಸಾಕಾಂಡದ ದಮನದಲ್ಲಿ ತೊಡಗಿದ್ದರು. ಅದೇ ಸಮಯಕ್ಕೆ ಬಿಹಾರಿನಲ್ಲಿ ಅಲ್ಪಸಂಖ್ಯಾತ ಮುಸ್ಲಿಮರ ಮೇಲೆ ಹಿಂದುಗಳು ರಾಕ್ಷಸೀ ಧಾಳಿ ನಡೆಸಿದ ಸುದ್ದಿ ಬಂತು. ಗಾಂಧೀಜಿ ಒಂದು ನಿಮಿಷವೂ ತಡಮಾಡದೆ ಬಿಹಾರಿಗೆ ಧಾವಿಸಿ ಮುಸ್ಲಿಮ್ ಬಾಂಧವರ ರಕ್ಷಣೆಗೆ ನಿಂತರು. ಖಾನ್

ಅಬ್ದುಲ್ ಗಫಾರ್‌ಖಾನ್ ಜೊತೆಗೂಡಿದರು. ಮತ್ತೆ ಅದೇ ತಾಳ್ಮೆ, ಆತ್ಮ ವಿಶ್ವಾಸ, ನಿರಂತರ ಸಂಚಾರಗಳಿಂದ ಶಾಂತಿ ನೆಲೆಸುವ ಯಜ್ಞದಲ್ಲಿ ಯಶಸ್ವಿ ಯಾದರು. ಒಡೆದ ಮನೆಗಳನ್ನು ಒಡೆದವರಿಂದಲೇ ಕಟ್ಟಿಸಿದರು. ಒಡೆದ ಮನಸ್ಸುಗಳನ್ನು ಒಂದುಗೂಡಿಸಿದರು. ಪಂಜಾಬ್ ಅವರ ಮುಂದಿನ ಕ್ಷೇತ್ರ ವಾಗಿತ್ತು. ಅಲ್ಲಿಗೆ ಹೋಗಲು ದೆಹಲಿಯ ಕಡೆ ಹೊರಟರು.

(vi) ತ್ರಿವರ್ಣ ಧ್ವಜದ ವಿಜಯ

1947ರ ಏಪ್ರಿಲ್‌ನಲ್ಲಿ ಜವಹರಲಾಲರು ಏಷ್ಯ ರಾಷ್ಟ್ರಗಳ ಒಂದು ಸೌಹಾರ್ದ ಸಮ್ಮೇಳನ ನಡೆಸಿದರು. ಇನ್ನೂ ಭಾರತ ಸ್ವತಂತ್ರವಾಗಿರಲಿಲ್ಲ. ಯೂರೋಪ್ ಮತ್ತು ಜಪಾನ್‌ಗಳ ಸಾಮ್ರಾಜ್ಯಶಾಹಿಯ ಬಂಧನದಲ್ಲಿ ತೊಳಲಿದ ಅನೇಕ ರಾಷ್ಟ್ರಗಳ ಪ್ರತಿನಿಧಿಗಳು ಬಂದರು. ಗಾಂಧೀಜಿ ಸಮ್ಮೇ ಳನವನ್ನು ಕುರಿತು ಅಮೋಘ ಭಾಷಣ ಮಾಡಿದರು. "ಭಾರತದ ಸ್ವಾತಂತ್ರ್ಯ ದೊಡನೆಯೇ ಮಿಕ್ಕೆಲ್ಲ ವಸಾಹತು ರಾಷ್ಟ್ರಗಳೂ ಸ್ವತಂತ್ರವಾಗಿಯೇ ತೀರು ತ್ತವೆ. ಯಾವ ದೇಶವೂ ಇನ್ನೊಂದು ದೇಶದಮೇಲೆ ಗುಲಾಮಗಿರಿಯನ್ನು ಹೇರಿ ತಾನು ನೈತಿಕ ನಿಷ್ಠೆಯಿಂದ ಬದುಕಲಾರದು. ಈಗ ಮುಗಿದ ಯುದ್ಧ ಈ ಪಾಠ ಕಲಿಸಬೇಕು. ಅಹಿಂಸಾತ್ಮಕ ಪ್ರತಿಭಟನೆಯೊಂದೇ ಜನತೆಗಿರುವ ಪ್ರಬಲಸಾಧನ. ಈ ಹಿಂಸಾಮಯ ಜಗತ್ತು ಎಷ್ಟು ಬೇಗ ಇದನ್ನರಿತರೆ ಅಷ್ಟು ಒಳ್ಳೆಯದು. ಭಾರತ ಜೀವಂತವಾಗಿರುವುದು ಅದರ ಹಳ್ಳಿಗಳಲ್ಲಿ. ಪಟ್ಟಣಗಳು ಪಾಶ್ಚಾತ್ಯ ಶೋಷಕರ ಅಸಹ್ಯ ಬೀಡುಗಳು. ನಿಜವಾದ ಭಾರತ ಎದ್ದು ನಿಂತಾಗ ಏಷ್ಯದ ಮಹಾಸಂದೇಶ ಮತ್ತೆ ಮೊಳಗುತ್ತದೆ. ಏಸು, ಮಹಮ್ಮದ್, ಬುದ್ಧ, ಮಹಾವೀರ ಕನ್ಫೂಷಿಯಸ್ ಈ ಎಲ್ಲ ಮಹಾಪ್ರವಾದಿಗಳೂ ಏಷ್ಯದವರೇ ಎಂದು ಮರೆಯಬೇಡಿ" ಎಂದರು ಗಾಂಧೀಜಿ. ಸರೋಜಿನಿ ನಾಯ್ಡು ಅಧ್ಯಕ್ಷತೆ ವಹಿಸಿದ್ದರು.

ದೆಹಲಿಯಲ್ಲಿ ಜಿನ್ನಾರವರನ್ನು ಗಾಂಧೀಜಿ ತಮ್ಮೊಡನೆ ಸೇರಿ ಹಿಂಸಾಚಾರ ನಿಲ್ಲಿಸಿ ಎಂಬ ಮನವಿಯನ್ನು ಸಹಿ ಮಾಡಲು ಆಹ್ವಾನಿಸಿದರು. ಜಿನ್ನಾ ಸಹಿ ಹಾಕಿದರು. ಆದರೂ ಹಿಂಸೆಯಜ್ವಾಲೆ ಕಿಡಿಕಾರುತ್ತಲೇ ಇತ್ತು. ಪಂಜಾಬಿನಿಂದ ಬಂದ ಸಿಕ್ಕರು ಮತ್ತು ಹಿಂದೂಗಳು ಹೃದಯವಿದ್ರಾವಕ ಘಟನೆಗಳನ್ನು ವಿವರಿಸಿದರು. ನಿರಾಶ್ರಿತರ ಶಿಬಿರಗಳಿಗೆ ದಿನ ದಿನವೂ ಸಾವಿರಾರು ಸಂಸಾರಗಳು ಬರುತ್ತಿದ್ದರು. ನರಕಯಾತನೆಯನ್ನನುಭವಿಸಿದ್ದ ಅವರಿಗೆ ಗಾಂಧೀ ಏಕೈಕ ಸಾಂತ್ವನದ ಚಿಲುಮೆಯಾಗಿದ್ದರು, ಸರ್ಕಾರಕ್ಕೂ ಶಾಂತಿ ಪಾಲನೆಗೆ ಅವರೇ ಆಸರೆ. ಅವರ ಪ್ರಾರ್ಥನಾ ಪ್ರವಚನಗಳು ಹೃದಯದಾಳದಿಂದ ಪ್ರವಹಿಸಿ ಕಗ್ಗತ್ತಲೆಯಲ್ಲೂ ಕೈಹಿಡಿದು ಸೌಹಾರ್ದದೆಡೆಗೆ ನಡೆಸುತ್ತಿದ್ದವು.

1947ರ ಜೂನ್ 3 ರಂದು ಭಾರತ ಸ್ವಾತಂತ್ರ್ಯ ಮಸೂದೆಯನ್ನು ಬ್ರಿಟನ್ನಿನ ಪಾರ್ಲಿಮೆಂಟ್ ಅಂಗೀಕರಿಸಿ ಒಂದು ವರ್ಷದೊಳಗೆ ಅಧಿಕಾರವನ್ನು ರಾಷ್ಟ್ರೀಯ ಸರ್ಕಾರಕ್ಕೆ ಒಪ್ಪಿಸುವುದಾಗಿ ಘೋಷಿಸಿತು. ಪಾಕಿಸ್ತಾನ ರಚನೆಯ ಘೋಷಣೆಯೂ ಜೊತೆಯಲ್ಲಿಯೇ ಬಂತು. ಸ್ವತಂತ್ರ ಭಾರತ ಹಿಂದೂ ಮುಸ್ಲಿಮ್, ಸಿಕ್, ಕ್ರಿಶ್ಚಿಯನ್ನರೆಲ್ಲರೂ ಸಮಾನ ಹಕ್ಕುಗಳನ್ನು ಪಡೆಯುವ ಜಾತ್ಯಾತೀತ ಗಣರಾಜ್ಯವಾಗಬೇಕು ಎಂದರು ಗಾಂಧೀಜಿ. ಪಾಕಿಸ್ತಾನಕ್ಕಿಂತ ಹೆಚ್ಚು ಮುಸ್ಲಿಮರು ಭಾರತದಲ್ಲೇ ಉಳಿಯುವಂತಾಯಿತು. ಜಿನ್ನಾ ಪಾಕಿಸ್ತಾನದ ಗೌರ್ನರ್ ಜನರಲ್ಲಾದರು. ಅಲ್ಲಿ ಮುಸ್ಲಿಮೇತರರಿಗೆ ಯಾವ ಹಕ್ಕೂ ಉಳಿಯಲಿಲ್ಲ, ಮೌಂಟ್ ಬೇಟನ್ ಸ್ವಾತಂತ್ರ್ಯ ದಿನದ ತಾರೀಕನ್ನು ಬದಲಿಸಿ ಆಗಸ್ಟ್ 15, 1947 ರಂದೇ ಭಾರತ ಸ್ವತಂತ್ರ ದೇಶವಾಗುತ್ತದೆ ಎಂದು ತಿಳಿಸಿದರು. ಆ ವೇಳೆಗೆ ಗಾಂಧೀಜಿ ಕಲ್ಕತ್ತೆಯ ಗಲಭೆಗಳನ್ನಾರಿಸಲು ಅಲ್ಲಿಗೆ ಹೋಗಿದ್ದರು.

ಆಗಸ್ಟ್ 15, 1947. ಮಾನವ ಇತಿಹಾಸದಲ್ಲೇ ಸುವರ್ಣ ದಿನ. ಶಾಂತಿ ಸೌಹಾರ್ದಗಳ ಸಂಕೇತವಾಗಿ ಅಹಿಂಸಾ ಧರ್ಮವನ್ನೆತ್ತಿಹಿಡಿವ ಹಸಿರು ಬಿಳಿ ಕೇಸರಿಗಳ ತ್ರಿವರ್ಣ ಪತಾಕೆ ದೆಹಲಿಯ ಕೆಂಪುಕೋಟೆಯಮೇಲೆ ಹಾರಿತು

ರಾತ್ರಿ ಹನ್ನೆರಡು ಹೊಡೆದಂತೆ ಮೌಂಟ್ ಬೇಟನ್ ಬ್ರಿಟಿಷ್ ಚಕ್ರವರ್ತಿಯ ಕೊನೆಯ ಮಹಾ ಘೋಷಣೆಯಿಂದ ಭಾರತ ಸ್ವತಂತ್ರ ಪ್ರಜಾರಾಜ್ಯ ಎಂದು ಸಾರಿದರು. ಆ ಘಳಿಗೆಗಾಗಿ ಒಂದು ಶತಮಾನ ಹೋರಾಡಿದ ಕೋಟಿ ಕೋಟಿ ಜನತೆ ಆನಂದದಿಂದ ಕುಣಿದರು. ಜವಹರಲಾಲರ ಹೃದಯ ತುಂಬಿ ಬಂತು. ದೇಶ ಒಡೆದು ಎರಡಾದ ನೋವು ಒಂದುಕಡೆ ; ಭಾರತ ಭಾಗ್ಯವಿಧಾತ ಗಾಂಧೀಜಿ ಆ ಸಂತಸ ಸಮಯದಲ್ಲಿ ದೆಹಲಿಯಲ್ಲಿಲ್ಲದೇ ಹೋದುದು ಮತ್ತೊಂದು ಕಡೆ ಸಂವೇದನಾ ಶೀಲರನ್ನೆಲ್ಲ ಬಾಧಿಸಿತು, ಮೌಂಟ್ ಬೇಟನ್ ಅವರೇ ಮೊದಲ ಗೌರ್ನರ್ ಜನರಲ್ಲಾದರು. ಪ್ರಪಂಚ ವಿಸ್ಮಯದಿಂದ ಈ ಅಭೂತಪೂರ್ವ ಅಹಿಂಸಾ ಸಮರದ ವಿಜಯೋತ್ಸವ ಕಂಡು ಬೆರಗಾಯಿತು.

ಯಾವ ಚರಿತ್ರೆಯಲ್ಲೂ ಕಾಣಸಿಗದ ಘಟನೆ ಅದು. ಅಗಾಧ ತ್ಯಾಗ ಸಂಕಟ ಬಲಿದಾನಗಳಿಂದ ಹೋರಾಡಿ ಯಾವ ಸಾಮ್ರಾಜ್ಯಶಾಹಿಯನ್ನು ಕಟ್ಟಕಡೆಗೆ ಸೋಲಿಸಿದರೋ ಆ ರಾಷ್ಟ್ರ ಇನ್ನೂರು ವರ್ಷಗಳು ಗುಲಾಮಗಿರಿಯಲ್ಲಿ ತಮ್ಮನ್ನಿಟ್ಟಿದ್ದರೆಂದು ವಿಷಕಾರದೆ ಬ್ರಿಟಿಷ್ ಚಕ್ರಾಧಿಪತ್ಯದ ಕೊನೆಯ ಕಿರೀಟಧಾರಿ ಮೌಂಟ್ ಬೇಟನ್ ಅವರನ್ನೇ ಭಾರತೀಯರು ಆಹ್ವಾನಿಸಿ ಸ್ವತಂತ್ರದೇಶದ ಅತ್ಯುನ್ನತ ಸ್ಥಾನದಲ್ಲಿ ಕೂರಿಸಿದುದು ಜಗತ್ತಿನ ಹೃದಯವನ್ನೇ ಸೂರೆಗೊಂಡಿತು. ಈ ಅಸಾಧಾರಣ ಸಮರದ ಸೇನಾನಿ ಮಹಾತ್ಮ ಗಾಂಧಿ ವಿಜಯದ ಘಳಿಗೆಯಲ್ಲಿ ಸಿಂಹಾಸನವನ್ನು ನಿರಾಕರಿಸಿ ದುಃಖತಪ್ತ ದೇಶಬಾಂಧವರ ಕಣ್ಣೊರೆಸಿ ಸಾಂತ್ವನಗೊಳಿಸುತ್ತಾ ಸೇವಾದೀಕ್ಷೆಯ ಅಖಂಡ ವ್ರತಧಾರಿಯಾಗಿ ಜನತೆಯೊಡನೆ ಬೆರೆತು ಹೋದುದು ಒಂದು ಅಪೂರ್ವ ಐತಿಹಾಸಿಕ ದಾಖಲೆಯಾಯಿತು, ಕೊನೆಗೆ ಐದೇ ತಿಂಗಳಾಚೆ ಗುಂಡಿಗೆ ಬಲಿಯಾಗಿ ಈ ಶಾಂತಿದೂತ ಸಾವನ್ನಪ್ಪಿದಾಗ ವಿಶ್ವರಾಷ್ಟ್ರ ಸಂಘದ ಸಮಸ್ತರಾಷ್ಟ್ರಗಳೂ 1948ರ ಜನವರಿ 30 ರಂದು ಸರ್ವಾನುಮತದ ಶ್ರದ್ಧಾಂಜಲಿಯನ್ನು ಹೃದಯತುಂಬಿ ಅರ್ಪಿಸಿ, ಯಾವ ಅಧಿಕಾರ ಸ್ಥಾನವನ್ನೂ ಅಲಂಕರಿಸದಿದ್ದ ಒಬ್ಬ ಪರಿವ್ರಾಜಕ ಮಹಾತ್ಮನನ್ನು ಗೌರವಿಸಿ ಬಾವುಟಗಳನ್ನೆಲ್ಲ ಅರ್ಧಮಟ್ಟಕ್ಕೆ ಇಳಿಸಿತು. ವಿಶ್ವಸಂಸ್ಥೆಯ ಇತಿಹಾಸದಲ್ಲಿ ಈ ಅಪೂರ್ವಘಟನೆ ಇದೊಂದೇ.

—o—

ಅಧ್ಯಾಯ ೮ : 'ಹೇ ರಾಮ್'

ಸ್ವಾತಂತ್ರ್ಯ ಬಂದದಿನ ಗಾಂಧೀಜಿ ಕಲ್ಕತ್ತೆಯ ಜಾತೀಯ ಗಲಭೆಗಳಿಗೆ ತುತ್ತಾಗಿದ್ದ ದುರ್ಭಾಗ್ಯ ಜನರ ವಸತಿಯೊಂದರಲ್ಲಿ ತಂಗಿ ಪ್ರಾರ್ಥನೆ ಉಪವಾಸಗಳಲ್ಲಿ ಮಗ್ನರಾಗಿದ್ದರು. ಅವರ ಹೃದಯ ಕೊರಗಿ ಮೊರೆಯುತ್ತಿತ್ತು. "ಹಿಂದೂ ಮುಸ್ಲಿಮ್ ಏಕಹೋ ! ಸಬಕೋ ಸನ್ಮತಿದೇಭಗವಾನ್" ಸೋದರ ಹತ್ಯದ ರಕ್ತ ಪ್ರವಾಹ ತಡೆಗಟ್ಟುವ ಮಹಾಯಜ್ಞದಲ್ಲಿ ಲೀನವಾದರು. ಆ ದಿನ ಯಾರನ್ನೂ ಭೇಟಿಯಾಗಲಿಲ್ಲ. ಕಾಡಿ ಬೇಡಿದ ಪತ್ರಕರ್ತರಿಗೆ "ನನ್ನ ಸಂದೇಶ ಬೇರಾವುದೂ ಇಲ್ಲ. ನನ್ನ ಜೀವನವೇ ನನ್ನ ಸಂದೇಶ" ಎಂದರು.

ಲಕ್ಷಾಂತರ ನಿರಾಶ್ರಿತರು ಸರ್ವವನ್ನೂ ಕಳೆದುಕೊಂಡು ದೆಹಲಿಗೆ ವಲಸೆ ಬಂದರು. ರಾಜಧಾನಿಯಲ್ಲಿ ಪ್ರತೀಕಾರದ ವಿಷಜ್ವಾಲೆ ಭುಗಿಲ್ಲೆಂದು ಹೊತ್ತಿಕೊಂಡಿತು, ಸ್ಥಳೀಯರಾದ ನಿರಪರಾಧಿ ಮುಸ್ಲಿಮರು ಬಹುಸಂಖ್ಯಾತರ ಆಕ್ರೋಶಕ್ಕೆ ಗುರಿಯಾಗಿ ಹುಳುಗಳಂತೆ ಸತ್ತರು. ಗಾಂಧೀಜಿ ಮತ್ತೆ ದೆಹಲಿಗೆ ಧಾವಿಸಿಬಂದರು. ಅವರು ಇಳಿದು ಕೊಳ್ಳುತ್ತಿದ್ದ ಹರಿಜನ ವಸತಿ ನಿರಾಶ್ರಿತರಿಂದ ತುಂಬಿ ಹೋಗಿತ್ತು. ಬಿರ್ಲಾ ಭವನದಲ್ಲಿ ಬಿಡಾರಮಾಡಿದರು. ದಿನದಿನವೂ ಪ್ರಾರ್ಥನಾ ಪ್ರವಚನಗಳಲ್ಲಿ ಹಿಂದೂ ಮುಸಲ್ಮಾನ ಐಕ್ಯತೆಗಾಗಿ ಮೊರೆಯಿಟ್ಟರು. ಮತಾಂಧ ಹಿಂದೂಗಳನೇಕರಿಗೆ ಇದು ಸಹಿಸಲಿಲ್ಲ, ಮುಸಲ್ಮಾನರ ರಕ್ತಕ್ಕಾಗಿ ಕತ್ತಿಹಿರಿದು ನಿಂತುಬಿಟ್ಟಿದ್ದರು, ಪರಿಸರ ಭಯಂಕರವಾಯಿತು, ಮುಸಲ್ಮಾನ ಬಂಧುಗಳಿಗೆ ಗಾಂಧಿಯೊಬ್ಬರೇ ಭರವಸೆಯ ಆಸರೆ ಎನಿಸಿತು. ಮತ್ತೆ ಮತ್ತೆ ಅವರಿಗೆ ಹೇಳಿದರು "ಮಾನವತೆಯಲ್ಲಿ ನಂಬಿಕೆ ಕಳೆದುಕೊಳ್ಳಬೇಡಿ, ತಾತ್ಕಾಲಿಕ ದ್ವೇಷದ ಆವೇಶ ದೇಶವನ್ನೇ ನಾಶಮಾಡದಂತೆ ಎಚ್ಚರಗೊಳ್ಳಿ."

ಬ್ರಿಟಿಷರು ಪೋಷಿಸುತ್ತಿದ್ದ 565 ದೇಶೀಯ ಸಂಸ್ಥಾನಗಳಲ್ಲಿ 550 ಭಾರತಕ್ಕೆ ಸೇರಿದವು. ಮೂರು ಪಾಕಿಸ್ತಾನ ಸೇರಿದವು. ಕಾಶ್ಮೀರ, ಹೈದರಾಬಾದು, ಜುನಗಡ ಮತ್ತು ತಿರುವಾಂಕೂರುಗಳು ತಾವೇ ಸ್ವತಂತ್ರವಾಗುತ್ತೇವೆಂದು ಭ್ರಮಿಸಿ ಸಮಸ್ಯೆಗಳಾದವು. ಸರ್ದಾರ್ ಪಟೇಲರ ಚಾಣಾಕ್ಷ ದಿಟ್ಟತನದಿಂದ ಭಾರತ ಸಮಗ್ರ ದೇಶವಾಯಿತು. ಕಾಶ್ಮೀರದಲ್ಲಿ ಮುಸಲ್ಮಾನರೇ ಬಹುಸಂಖ್ಯೆಯಲ್ಲಿದ್ದು ಹಿಂದೂ ಮಹಾರಾಜ ಇದ್ದರು. ಹೈದರಾಬಾದಿನಲ್ಲಿ ಆದಕ್ಕೆ ವಿರುದ್ಧ ಸ್ಥಿತಿ. ಕಾಶ್ಮೀರದ ಮಹಾನಾಯಕ ಶೇಕ್ ಅಬ್ದುಲ್ಲ ಭಾರತದ ನಿಸ್ಸೀಮ ರಾಷ್ಟ್ರೀಯವಾದಿ. ಪಾಕಿಸ್ತಾನವನ್ನು ವಿರೋಧಿಸಿದವರು. ಹಠಾತ್ತನೆ ಶಸ್ತ್ರಸಜ್ಜಿತ ದರೋಡೆಕೋರರ ದೊಡ್ಡ ಪಡೆ ಕಾಶ್ಮೀರವನ್ನಾಕ್ರಮಿಸಲು ಪಾಕಿಸ್ತಾನದ ಬೆಂಬಲಪಡೆದು ಧಾಳಿಮಾಡಿತು. ಭಾರತ ಸರ್ಕಾರ ಕೂಡಲೇ ಸೈನ್ಯವನ್ನು ಕಳುಹಿಸಿ ತಡೆಗಟ್ಟಿತು, ಕಾಶ್ಮೀರದ ಮಹಾರಾಜರು ಪ್ರಜಾರಾಜ್ಯ ಘೋಷಿಸಿ ಶೇಕ್‌ಅಬ್ದುಲ್ಲ ಮುಖ್ಯ ಮಂತ್ರಿಯಾದರು. ಗಡಿಯಲ್ಲಿ ದೊಡ್ಡ ಸಮರವೇ ಆಗಿ ನೂರಾರು ಜನ ಸತ್ತರು. ಧಾಳಿ ಹಿಮ್ಮೆಟ್ಟಿತು. ಈ ಸಶಸ್ತ್ರ ಪ್ರತಿಭಟನೆಯನ್ನು ಗಾಂಧೀಜಿ ಒಂದು ಅನಿವಾರ್ಯ ಹಿಂಸಾಕಾಂಡ ಎಂದು ಬೆಂಬಲಿಸಿದರು. ಅಹಿಂಸಾತ್ಮಕ ರಕ್ಷಣಾ ಪಡೆಯ ರಚನೆ ಇನ್ನೂ ಬಹುದೂರದ ಕನಸು ಎಂದರು. ಆದರೂ ಪಾಕಿಸ್ತಾನದೊಡನೆ ದ್ವೇಷಬೇಡ, ಪರಸ್ಪರ ಸೋದರಭಾವದಿಂದ ಎಲ್ಲ ವಿವಾದಗಳನ್ನೂ ನಿವಾರಿಸಿಕೊಳ್ಳೋಣ ಎಂದು ದೃಢವಾಗಿ ಹೇಳಿದರು.

ಹದಿನೈದು ಲಕ್ಷ ನಿರಾಶ್ರಿತರು ಭಾರತಕ್ಕೆ ವಲಸೆ ಬಂದಿದ್ದರು. ತಮ್ಮ ತಾಯಿನೆಲದಿಂದ ಬಲಾತ್ಕಾರವಾಗಿ ಅವರನ್ನು ಬುಡಮೇಲುಮಾಡಿ ಕಿತ್ತೆಸೆಯಲಾಗಿತ್ತು. ಅಪಾರ ಸಹಾನುಭೂತಿಯಿಂದ ಗಾಂಧೀಜಿ ಅವರ ಆಕ್ರೋಶದ ಮಾತುಗಳನ್ನೆಲ್ಲ ಸಹಿಸಿ ಅವರ ಸೇವೆಯಲ್ಲೇ ತಲ್ಲೀನರಾದರು. ಆಗಾಗ್ಗೆ ತೀವ್ರ ವೇದನೆಯಿಂದ ಹುಚ್ಚೇಳುತ್ತಿದ್ದ ಈ ನಿರ್ಭಾಗ್ಯರು ಗಾಂಧೀಜಿ ಮುಸಲ್ಮಾನರ ಪಕ್ಷಪಾತಿ ಎಂದು ತಿಳಿದು ಅವರನ್ನು ನಿರ್ನಾಮಮಾಡಲು ಹವಣಿಸುತ್ತಿದ್ದರು. ಪ್ರಾರ್ಥನಾ ಸಭೆಯಲ್ಲಿ ಬಾಂಬೆಸೆದರು. ಶಿಬಿರಗಳಲ್ಲಿ ಮೇಲೇರಿ ಬಂದರು. ಪತ್ರಿಕೆಗಳಲ್ಲಿ ವಿಷಕಾರಿದರು, ಅಹಿಂಸಾಮೂರ್ತಿ ಈ ಅತಿಕಠಿಣ

ಪರೀಕ್ಷಾ ದಿನಗಳಲ್ಲಿ ಆಖಂಡತಾಳ್ಮೆ ಶಾಂತಿಗಳಿಂದ, ಕರುಣೆ ಸೌಹಾರ್ದಗಳ ಮಹಾಸಾಗರದಂತೆ ಅಚಲವಾಗಿ ನಿಂತರು.

1947ರ ಅಕ್ಟೋಬರ್ 2 ಗಾಂಧೀಜಿಯ 78ನೆಯ ಜಯಂತಿ. ಸರೋಜಿನಿ ನಾಯ್ಡು ಹೃದಯತುಂಬಿ ನುಡಿದರು.

> "ನಮ್ಮ ಉನ್ನತೋನ್ನತ ಗೌರವಕ್ಕೆ ಪಾತ್ರರಾಗಿರುವ ಈ ಕೃಶದೇಹಿ ಜಗತ್ತಿನ ನೈತಿಕ ಆತ್ಮಸಾಕ್ಷಿ. ಮಾನವಲೋಕದ ಮಹಾಪ್ರವಾದಿಗಳ ಪಂಕ್ತಿಯಲ್ಲಿ ನಿಲ್ಲುವ ಅಮರ ಜ್ಯೋತಿ. ಅತ್ಯಂತ ಶಾಂತನಾಗಿ ವಿನಯಪೂರ್ಣ ಅಹಿಂಸಾ ಯೋಧನಾಗಿ ಈ ಮಹಾತ್ಮ ಸಾಮ್ರಾಜ್ಯಗಳನ್ನೇ ಬುಡಮೇಲು ಮಾಡಿದ್ದಾರೆ. ಸತ್ಯಂ, ಶಿವಂ, ಸುಂದರಮ್ ಎಂಬ ಮಹಾಸೂತ್ರದ ಜೀವಂತ ನಿದರ್ಶನ ಈತ. ಏಸುವಿನಂತೆ ಪ್ರೇಮವೇ ಜೀವನದ ಏಕೈಕ ಶಾಸನ ಎಂದರು. ಪೈಗಂಬರ್ ಮಹಮ್ಮದರೊಡನೆ ದನಿಗೂಡಿಸಿ ಮಾನವ ಭ್ರಾತೃತ್ವವನ್ನೆತ್ತಿ ಹಿಡಿದರು, ಬುದ್ಧನಂತೆ ಕರುಣಾಮೂರ್ತಿಯಾಗಿ ದುರಾಶೆಯ ಬೇರುಗಳನ್ನು ಕಿತ್ತೆಸೆದರು ಅಧಿಕಾರ ಸ್ಥಾನವಿಲ್ಲ, ಧನವಂತನಲ್ಲ; ಪೈಲ್ವಾನನಲ್ಲ; ಶಸ್ತ್ರವನ್ನೇ ಹಿಡಿಯಲಿಲ್ಲ, ಆದರೂ ಈ ಅಪ್ರತಿಹತಶಕ್ತಿ ಹೇಗೆ ಬಂತು? ನಿರ್ಭಯ ಶೌರ್ಯ, ಸತ್ಯ ಅಹಿಂಸೆಗಳಲ್ಲಿ ಅಚಲವಾದ ನಿಷ್ಠೆ, ವಿಶ್ವ ವ್ಯಾಪಿಯಾಗುವ ಮಾನವಪ್ರೇಮ; ಈ ದಿವ್ಯಾಸ್ತ್ರಗಳ ಪವಾಡ ಇದು. ಸರಳ ಮಗುವಾಗಿ ಹುಟ್ಟಿದ ಮೋಹನದಾಸ ಮೇರು ಸದೃಶನಾದ ಮಹಾತ್ಮನಾಗಿದ್ದಾನೆ. ಈತನ ಚರಣತಲದಲ್ಲಿ ನಮ್ಮೆಲ್ಲರ ನಮನ ಸಮರ್ಪಿತವಾಗಿದೆ."

ಸ್ವತಂತ್ರ ಭಾರತ ಗಾಂಧೀಜಿಯ ಜೀವಿತ ಕಾಲದಲ್ಲಿ ಆಚರಿಸಿದ ಕಡೆಯ ಜಯಂತಿ ಇದು. ಅವರ ಹೃದಯ ಆರ್ತರಿಗಾಗಿ ಮಿಡಿಯುತ್ತಿತ್ತು, ಶಾಂತಿ ಸಮರದಲ್ಲಿ ಆತ್ಮಾಹುತಿಗಾಗಿ ತವಕಿಸುತ್ತಿತ್ತು.

ವಿಭಜನೆಯ ಒಪ್ಪಂದದಂತೆ ಪಾಕಿಸ್ತಾನಕ್ಕೆ ಕೊಡಬೇಕಾದ 55 ಕೋಟಿ ರೂಪಾಯಿಗಳ ಮೂಲ ಬಂಡವಾಳವನ್ನು ಕೂಡಲೇ ಕೊಟ್ಟುಬಿಡಿ ಎಂದು ಗಾಂಧೀಜಿ ಭಾರತ ಸರ್ಕಾರವನ್ನು ಒತ್ತಾಯಿಸಿದರು. ಕಾಶ್ಮೀರ ಯುದ್ಧದ ಕಾರಣದಿಂದ ಈ ಗೌರವಯುತ ಒಪ್ಪಂದ ಮುರಿಯುವುದು ಸರ್ವಥಾ ಯೋಗ್ಯವಲ್ಲ. ಸತ್ಯನಿಷ್ಠೆಯಾವಾಗಲೂ ಏಕಮುಖವಾಗಿರಬೇಕು. ಇನ್ನೊಬ್ಬರ ವರ್ತನೆ ಅದಕ್ಕೆ ಅಸಂಗತ ಎಂದರು. ನೆಹರೂ–ಪಟೇಲ್–ಮೌಂಟ್‌ಬೇಟನ್ ಅವರು ಈ ಬೇಡಿಕೆಗೆ ಮಣಿದು ಕೂಡಲೇ ಹಣ ಕೊಟ್ಟರು. ಮುಸಲ್ಮಾನ ವಿರೋಧಿಗಳಿಗೆ ಇದು ಸಹಿಸಲಾಗದ ವರ್ತನೆಎನಿಸಿತು. ಗಾಂಧೀಜಿಯ ಮೇಲೆ ಆಕ್ರೋಶ ಪ್ರಬಲವಾಗಿ ಬೆಳೆಯಿತು.

1948ರ ಜನವರಿ 13. ಗಾಂಧೀಜಿ ತಮ್ಮ ಕೊನೆಯ ಪ್ರಾಯೋಪವೇಶ ನಿರ್ಧರಿಸಿದರು. “ಎಲ್ಲರ ಅಂತಃಕರಣವನ್ನೂ ಮುಟ್ಟಿ ದ್ವೇಷದ ಕಿಚ್ಚನ್ನು ಆರಿಸಿ, ಸಕಲ ಧರ್ಮೀಯರೂ ಸೋದರರಂತೆ ಭಾರತದ ಸ್ವತಂತ್ರ ಪ್ರಜೆಗಳಾಗಬೇಕು. ಪಾಕಿಸ್ತಾನದ ಮುಸ್ಲಿಮರೂ ಇದನ್ನು ಮನಗಾಣಬೇಕು. ಒಡೆದದೇಶ ಸತತವಾಗಿ ಅಂತರ್ಯುದ್ಧಕ್ಕೆ ಬಲಿಯಾಗಿ ನಾಶವಾಗಬಾರದು. ನನ್ನ ಹೃದಯದಲ್ಲಿ ಬಿರುಗಾಳಿ ಎದ್ದಿದೆ. ಮಾನವತೆಯ ಶಾಶ್ವತ ಪುನರುತ್ಥಾನಕ್ಕಾಗಿ ನಾನು ಆಹುತಿಯಾದರೆ ಅದೇ ನನಗೆ ಮೋಕ್ಷ. ನನ್ನ ದೇಶಬಾಂಧವರು ಸಂಪೂರ್ಣ ಸೌಹಾರ್ದಸಾಧಿಸಿ ಅಸಂಖ್ಯಾತ ನಿರಪರಾಧಿ ಜೀವಿಗಳನ್ನು ರಕ್ಷಿಸುವಂತಾಗಲಿ” ಎಂದು ಮೊರೆಯಿಟ್ಟು ಉಪವಾಸ ಪ್ರಾರಂಭಿಸಿದರು, ಅದೆಂತಹ ಪ್ರಚಂಡ ಆತ್ಮನಿರೀಕ್ಷಣೆ! ಅಂದಿನ ಅಗ್ನಿಕುಂಡವಾಗಿದ್ದ ದೆಹಲಿಯ ಲಕ್ಷೋಪಲಕ್ಷ ಹೃದಯಗಳಲ್ಲಿ ಅದು ಮಾರ್ದನಿಸಿ ಇಡೀ ವಾತಾವರಣವೇ ಪರಿವರ್ತಿತವಾಯಿತು. ಜಗತ್ತು ಮೂಕ ವಿಸ್ಮಯದಿಂದ ವೀಕ್ಷಿಸಿತು. ಎಲ್ಲೆಲ್ಲೂ ದ್ವೇಷ ಶಮನವಾಗಿ ಹಿಂದೂ ಮುಸ್ಲಿಮ್ ಸಿಕ್ ನಾಯಕರೆಲ್ಲ ಏಕಕಂಠದಿಂದ ಪರಸ್ಪರ ವಿಶ್ವಾಸವಿಟ್ಟು ಒಟ್ಟಿಗೆ ಬಾಳಲು ಪ್ರತಿಜ್ಞೆ ಮಾಡಿದರು. ಆರನೇ ದಿನ ಗಾಂಧೀಜಿ ತಮ್ಮ ಉಪವಾಸ ಮುಕ್ತಾಯಮಾಡಿದರು.

ತಾ॥ 30—1—1948 ಶುಕ್ರವಾರ. ಗಾಂಧೀಜಿ ಭಾರತದ ಭವಿಷ್ಯ ರೂಪ ಕುರಿತು ಗಂಭೀರವಾಗಿ ಅಲೋಚಿಸಿದರು. ಸ್ವಾತಂತ್ರ್ಯ ಸಮರಕ್ಕಾಗಿ ಸರ್ವರೀತಿಯ ಸದಸ್ಯರನ್ನೂ ಒಳಗೊಂಡಿದ್ದ ರಾಷ್ಟ್ರೀಯ ಕಾಂಗ್ರೆಸ್ಸನ್ನು ವಿಸರ್ಜಿಸಿ ಭಾರತದ ಸಂಪೂರ್ಣ ಆರ್ಥಿಕ ಸಾಮಾಜಿಕ ಪರಿವರ್ತನೆಯನ್ನು ಅಹಿಂಸಾತ್ಮಕ ಕ್ರಾಂತಿಯಿಂದಲೇ ಸಾಧಿಸಲು ನಿಷ್ಠಾವಂತ ಸತ್ಯಾಗ್ರಹಿಗಳನ್ನಾರಿಸಿ "ಲೋಕ ಸೇವಕ ಸಂಘ"ರಚಿಸಲು ಒಂದು ಕರಡು ಸಂವಿಧಾನ ಸಿದ್ಧಮಾಡಿದರು. ಅಧಿಕಾರ ಸ್ಪರ್ಧೆಯಿಂದ ದೂರನಿಂತು ಹಳ್ಳಿಗಳಲ್ಲಿ ನೆಲೆನಿಲ್ಲುವ ನಿಃಸ್ವಾರ್ಥ ಸೇವಕರ ಮಹಾಸಂಘವೊಂದನ್ನು ತಾವೇ ನಿಂತು ಸಂಘಟಿಸುವ ವಿಚಾರಮಾಡುತ್ತಿದ್ದರು. ಗಾಂಧೀ ಮಾರ್ಗದಲ್ಲಿ ಸಂಪೂರ್ಣ ನಿಷ್ಠೆಯಿರುವ ಸಹಕಾರ್ಯಕಾರ್ತರನ್ನೆಲ್ಲ ಸೇವಾಗ್ರಾಮದಲ್ಲಿ ಫೆಬ್ರುವರಿ 12ಕ್ಕೆ ಸೇರಲು ಆಹ್ವಾನಿಸಿದ್ದರು. ಆದರೆ ವಿಧಿಯ ಆಣತಿಯೇ ಬೇರೆಯಾಗಿತ್ತು.

ಆ ದಿನ ಸಂಜೆ 5-30ಕ್ಕೆ ಬಿರ್ಲಾಭವನದ ಪ್ರಾರ್ಥನಾಸಭೆಗೆ ಗಾಂಧೀಜಿ ನಡೆದುಬಂದರು. ಅಭಾ ಮತ್ತು ಮನುಬಹನ್ ಗಾಂಧಿ ಇಕ್ಕೆಲಗಳಲ್ಲಿದ್ದರು. ವೇದಿಕೆಯ ಬಳಿ ಬರುತ್ತಿರುವಂತೆ ಆವೇಶಪೂರಿತ ಹಿಂದೂ ಯುವಕ, ನಾಥುರಾಮ ಗೋಡ್ಸೆ, ಎದುರಾಗಿ ನಮಸ್ಕರಿಸಿದ. ಮರುಕ್ಷಣವೇ ಅತ್ಯಂತ ಸಮೀಪದಿಂದ ಗಾಂಧೀಜಿಯ ವಿಶಾಲ ವಕ್ಷಸ್ಥಲಕ್ಕೆ ಗುರಿಯಿಟ್ಟು 'ಢಂ, ಢಂ, ಢಂ' ಎಂದು ಗುಂಡು ಹಾರಿಸಿಬಿಟ್ಟ ಆ ಭವ್ಯ ಕರುಣಾಮೂರ್ತಿ 'ಹೇರಾಮ್' ಎಂದು ಉದ್ಗರಿಸಿ ಕುಸಿದು ಬಿದ್ದುಬಿಟ್ಟರು. ಆ ಪವಿತ್ರ ಪಂಜರದಲ್ಲಿ ಚೈತನ್ಯಪೂರ್ಣ ದಿವ್ಯಜ್ಯೋತಿಯಾಗಿ ಎಪ್ಪತ್ತೆಂಟು ವರ್ಷ ಬೆಳಗಿದ ಪ್ರಾಣಪಕ್ಷಿ ಹಾರಿಹೋಯಿತು. ಲೋಕ ಹಠಾತ್ತನೆ ದುಃಖಸಾಗರದಲ್ಲಿ ಮುಳುಗಿ ಹೋಯಿತು.

ದೆಹಲಿಯ ರಾಜಘಾಟಿನೆಡೆಗೆ ಸಾಗಿದ ಕೊನೆಯ ಯಾತ್ರೆಗಾಗಿ ಕಿಕ್ಕಿರಿದು ನೆರೆದ ಭಾರತೀಯರು ಕಂಬನಿದುಂಬಿ ನಡೆದರು. ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಆ ದಿನ ಶೋಕದಲ್ಲಿ ಮುಳುಗಿ ದೇಶ ಶ್ರದ್ಧಾಂಜಲಿಯನ್ನರ್ಪಿಸಿತು, ವಿಶ್ವಸಂಸ್ಥೆ ಈ ಮಹಾತ್ಮನ ಉತ್ತುಂಗ ಮಾನವತೆಗೆ

ತಲೆಬಾಗಿ ನಮಿಸಿ, ಸರ್ವರಾಷ್ಟ್ರಗಳ ಧ್ವಜಗಳನ್ನೂ ಅರ್ಧಕ್ಕಿಳಿಸಿ ಅಪೂರ್ವ ಗೌರವ ಸೂಚಿಸಿತು. ಜವಹರಲಾಲರು ಅಶ್ರುಪೂರ್ಣರಾಗಿ ನುಡಿದರು.

ಈ ಅಸಾಧಾರಣ ಬೆಳಕು ಸಾವಿರಾರು ವರ್ಷಗಳಾಚೆಯೂ ಶಾಶ್ವತ ಮಾರ್ಗದರ್ಶಕ ದಾರಿದೀಪವಾಗಿ ನಿಂತು ಜಗತ್ತಿಗೆ ಅಮೃತ ಧಾರೆಯಾಗುತ್ತದೆ. ಸತ್ಯ ಅಹಿಂಸೆಗಳ ಅಮರ ಮೌಲ್ಯಗಳಿಗೆ ಚಿರಂತನ ಸಾಕ್ಷಿಯಾಗಿ ಉಳಿದಿರುತ್ತದೆ.

—o—

